ಸೊರಬ ತಾಲೂಕು
ಒಂದು ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಆಂಶಿಕ ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ

ಸಂಶೋಧಕರು
ಹಿತೇಶ್ವರ ಜಿ.ಹೆಚ್

ಮಾರ್ಗದರ್ಶಕರು
ಸಿ. ವೆಂಕಟೇಶ
ಮುಖ್ಯಸ್ಥರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

319

ಸೊರಬ ತಾಲೂಕು
ಒಂದು ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಆಂಶಿಕ ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ

ಸಂಶೋಧಕರು
ಹಿತೇಶ್ವರ ಜಿ.ಹೆಚ್

ಮಾರ್ಗದರ್ಶಕರು
ಸಿ.ವೆಂಕಟೇಶ
ಮುಖ್ಯಸ್ಥರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ಸೊರಬ ತಾಲ್ಲೂಕು : ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ಹಿತೇಶ್ವರ ಜಿ.ಹೆಚ್** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸಿ.ವೆಂಕಟೇಶ್ 13/11/05
ಮುಖ್ಯಸ್ಥರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ :

ಮಾರ್ಗದರ್ಶಕರ ದೃಢೀಕರಣ ಪತ್ರ

ಸೊರಬ ತಾಲ್ಲೂಕು : ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ಹಿತೇಶ್ವರ ಜಿ.ಹೆಚ್** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸಿ.ವೆಂಕಟೇಶ್
ಮುಖ್ಯಸ್ಥರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ :

ಸಂಶೋಧಕರ ಪ್ರಮಾಣ ಪತ್ರ

ಸೊರಬ ತಾಲೂಕು : ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ನಿಂಬಧವನ್ನು ಸಿ.ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಹಿತೇಶ್ವರ ಜಿ.ಹೆಚ್
ಸಂಶೋಧಕ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 15/10/2008.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧೮-೧೯ ಮತ್ತು ೨೦ನೇ ಶತಮಾನದಲ್ಲಿಯ ಪಾಶ್ಚಿಮಾತ್ಯರು ಹಾಕಿಕೊಟ್ಟ ಅಧ್ಯಯನ ಶಿಸ್ತುಗಳಲ್ಲಿ ಸಂಸ್ಕೃತಿ ಪರಂಪರೆಯು ಒಂದು. ಅನೇಕ ಶಿಸ್ತುಗಳನ್ನು ಹುಟ್ಟು ಹಾಕಿದ ಹಿರಿಮೆ ವಸಾಹತು ಕಾಲಘಟ್ಟದ್ದು. ಸಾಂಸ್ಕೃತಿಕ ಪರಂಪರೆಯ ಬಗೆಗೆ ಬೆಳಕು ಚೆಲ್ಲಲು ನಮ್ಮಲ್ಲಿದ್ದ ಆಕರಗಳು ಚೆಲ್ಲಾಪಿಲ್ಲಿಯಾಗುತ್ತಿದ್ದ ಸಂದರ್ಭದಲ್ಲಿ ವಸಾಹತು ಕಾಲಘಟ್ಟದಲ್ಲಿನ ಬ್ರಿಟೀಷ್ ಅಧಿಕಾರಿಗಳು ಮತ್ತು ಕ್ರೈಸ್ತ ಮಿಶನರಿಗಳು ಅವುಗಳ ಕ್ರೋಢಿಕರಣಕ್ಕೆ ನಾಂದಿ ಹಾಡಿದರು. ಅಂದರೆ ಭಾರತೀಯರಿಗೊಂದು ಸಾಂಸ್ಕೃತಿಕ ಪರಂಪರೆಯಿದೆ, ಅಲ್ಲಿ ಸಾಹಿತ್ಯ ವಿಪುಲವಾಗಿ ಬೆಳೆದಿದೆ ಹಾಗೂ ವಾಸ್ತುಕಲೆ ಮತ್ತು ಲಲಿತಕಲೆಗಳು ಹುಲುಸಾಗಿ ಬೆಳೆದಿದೆ ಎನ್ನುವ ಸಂಗತಿಯನ್ನು ತೋರಿಸಿಕೊಟ್ಟವರು ಅವರಾಗಿದ್ದಾರೆ. ಧರ್ಮಕಾರಣಕ್ಕಾಗಿ ಇಡೀ ರಾಷ್ಟ್ರವನ್ನು ಅಲೆದು ಅವರು ಮಾಹಿತಿಗಳನ್ನು ಸಂಗ್ರಹಿಸಿದರು. ಅವರು ಸಂಗ್ರಹಿಸಿಕೊಟ್ಟ ಅದೆಷ್ಟೋ ಆಕರಗಳು ನಮಗೆ ಸಾಂಸ್ಕೃತಿಕ ಪರಂಪರೆಯ ಬಗೆಗಿನ ಪ್ರಾಥಮಿಕ ಹೊಳಹುಗಳಾಗಿವೆ. ಸಂಸ್ಕೃತಿಯ ಪಾರಂಪರಿಕ ಕಾಲಾನುಕ್ರಮಣಿಕೆಯ ನಿರ್ಧಾರ ಅವರ ಮುಂದಿದ್ದ ಏಕ ಮೇವ ಉದ್ದೇಶ. ಜೊತೆಗೆ ಸಾಹಿತ್ಯ ಪರಂಪರೆಯ ಶಿಸ್ತು ಬದ್ಧ ಅಧ್ಯಯನಗಳು ನಮಗಿಂದು ಕೊಡುಗೆಗಳಾಗಿವೆ.

ಇಂದು ನವ ವಸಾಹತೀಕರಣದ ಹಿನ್ನೆಲೆಯಲ್ಲಿ ಜಾಗತೀಕರಣ ಪ್ರಕ್ರಿಯೆ ಇದೆ. ಮತ್ತು ಹೊಸ ಶತಮಾನದ ಮಾನವಿಕ ವಿಜ್ಞಾನಗಳ ಸಂಶೋಧನೆಯು ನಿರಂತರವಾಗಿ ಇದೆ. ಇಂದು ಇದರ ವಿವೇಚನೆಯ ಅಗತ್ಯ ನಮ್ಮ ಮುಂದೆ ಇದೆ. ಪ್ರತಿಯೊಂದು ರಾಷ್ಟ್ರ ಜಾಗತೀಕರಣ ವ್ಯವಸ್ಥೆಯನ್ನು ರೂಪಿಸಿಕೊಳ್ಳುತ್ತಿವೆ. ಭಾರತವು ಸಾಂಸ್ಕೃತಿಕ ಪರಂಪರೆಯಲ್ಲಿ ಜಾಗತೀಕರಣವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ. ಇದಕ್ಕೆ ಕರ್ನಾಟಕವು ಹೊರತಾಗಿಲ್ಲ. ಇಲ್ಲೂ ಜಾಗತೀಕರಣದ ಗಾಳಿ ಬೀಸಿದೆ. ಆದರೂ ಸಾಂಸ್ಕೃತಿಕ ಪರಂಪರೆಯು ಉಳಿದುಕೊಂಡಿರುವುದು ಹೆಮ್ಮೆಯ ಸಂಗತಿ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ಪ್ರದೇಶದ ಸಾಂಸ್ಕೃತಿಕ ನೆಲೆಯನ್ನು ನೋಡುವುದರ ಮೂಲಕ ಆಧುನಿಕತೆ ಹೇಗೆ ಹೊಂದಿಕೆಯಾಗಿದೆ ಎಂಬುದರ ಚರ್ಚೆ ಅವಶ್ಯವಿದೆ. ನಾವು ಯಾವುದನ್ನು ನಮ್ಮ ಸಂಸ್ಕೃತಿ ಎಂದು ಕರೆದುಕೊಳ್ಳುತ್ತಿದ್ದೇವೆಯೋ.

ಅವು ನಮ್ಮಿಂದ ದಿನೇ ದಿನೇ ದೂರವಾಗುತ್ತಿದೆ ಎಂಬ ಮಾತು ಅಲ್ಲಲ್ಲಿ ಕೇಳಿಬರುತ್ತಿದೆ. ಹಾಗಾದರೆ ಈ ದಂಡಾವತಿ ನದಿಯ ನಾಡಲ್ಲಿ ಸಾಂಸ್ಕೃತಿಕ ಕುರುಹುಗಳು ಯಾವ ನೆಲೆಯಲ್ಲಿ ನಿಂತಿವೆ ಎಂಬುದರ ವಿವೇಚನೆ ಮಾಡಬೇಕಾಗಿದೆ. ಸಂಸ್ಕೃತಿ ಮತ್ತು ಪರಂಪರೆಯನ್ನು ರಕ್ಷಣೆ ಮಾಡಿಕೊಳ್ಳಬೇಕೆ? ಎಂಬ ಪ್ರಶ್ನೆ ನಮ್ಮ ಮುಂದಿದೆ. ಹೀಗಿದ್ದಾಗ ಅವುಗಳು ದಿನನಿತ್ಯದ ಬದುಕಿಗೆ ಎಷ್ಟೊಂದು ಪೂರಕವಾಗುತ್ತಿವೆ ಎಂಬುದರ ಚರ್ಚೆ ನಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ಹೊಸದೊಂದು ಶಿಕ್ಷಣ ಮಾಧ್ಯಮದ ಕ್ರಮದ ತುರ್ತು ಅಗತ್ಯ ನಮಗಿದೆ. ಅದೇನೇ ಇದ್ದರು ನಾವು ನಮ್ಮ ಸಂಸ್ಕೃತಿಗೆ ವಿಮುಖರಾಗುತ್ತಾ ಹೋಗುತ್ತಿದ್ದೇವೆ. ಹಲವಾರು ದೂರದರ್ಶನ ವಾಹಿನಿಗಳಿಂದ ಸಂಸ್ಕೃತಿ ನಿಧಾನಗತಿಯಲ್ಲಿ ಏಕಘಟಕ ಸ್ವರೂಪಕ್ಕೆ ಒಳಗಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಸಂಸ್ಕೃತಿಯ ನೆಲೆ-ಬೆಲೆಗಳನ್ನು ಚರ್ಚಿಸಬೇಕಾದ ಅಗತ್ಯ ನಮ್ಮ ಮುಂದಿದೆ.

ಸೊರಬದ ಸಾಂಸ್ಕೃತಿಕ ಅಧ್ಯಯನ ಹಿನ್ನಲೆ ಎಂದರೆ ಪ್ರಾದೇಶಿಕ ಸಂಸ್ಕೃತಿಗಳು ನಾಶವಾಗುತ್ತಿರುವ ಸಂದರ್ಭದಲ್ಲಿ ಇದು ಒಂದು ಅಧ್ಯಯನದ ವಸ್ತುವಾಗಿದೆ. ಅದೀಗ ಹಳೆಯ ಜೀವನ ಕ್ರಮವನ್ನು ಮರೆತು ಆಧುನಿಕತೆಯೆಂಬ ಸೋಗನ್ನು ಹಾಕಿಕೊಳ್ಳುತ್ತಿದೆಯೇ? ಈ ಸನ್ನಿವೇಶದಲ್ಲಿ ಅದು ಹೊಸ ಸಂಸ್ಕೃತಿಯೊಂದರೊಡನೆ ಹೇಗೆ ಸಮನ್ವಯಗೊಳ್ಳುತ್ತಿದೆ? ಮೊದಲಾದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವನ್ನು ಈ ಕಿರುಪ್ರಬಂಧದಲ್ಲಿ ಮಾಡಲಾಗಿದೆ. ಪ್ರಸ್ತುತ ಬದಲಾಗುತ್ತಿರುವ ಸಂದರ್ಭದ ಸಂಸ್ಕೃತಿಯನ್ನು ಗಮನಿಸಿ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುವ ಪ್ರಯತ್ನವು ಇಲ್ಲಿಯದಾಗಿದೆ. ಈ ಎಲ್ಲಾ ಆಲೋಚನೆಗಳನ್ನು ಇಟ್ಟು ನೋಡುವಂತ ಪ್ರೇರಣೆಯಿಂದ ಅಧ್ಯಯನದ ಉದ್ದೇಶವನ್ನು ಕಂಡುಕೊಂಡಿದೆ.

ಉದ್ದೇಶ

ಶಿವಮೊಗ್ಗ ಜಿಲ್ಲೆಯ ಪಶ್ಚಿಮಕ್ಕಿರುವ ಸೊರಬ ತಾಲ್ಲೂಕು ಮಲೆನಾಡು ಮತ್ತು ಅರೆಮಲೆನಾಡಿನಿಂದ ಕೂಡಿ ಅಂದ ಚೆಂದ ಶ್ರೀಮಂತಿಕೆಯನ್ನು ಹೊಂದಿರುವ ಪ್ರದೇಶ ಮತ್ತು ತುಂಬಾ ಕುತೂಹಲಕರವಾದ ಸಾಂಸ್ಕೃತಿಕ ಪರಂಪರೆಯನ್ನು ಒಳಗೊಂಡಿದೆ. ಈ ಕುತೂಹಲಕ್ಕೆ ಕಾರಣವಾದ ಅಂಶಗಳು ಹಲವು. ಅವುಗಳಲ್ಲಿ ಪ್ರಾಗೈತಿಹಾಸಿಕ ಕಾಲಘಟ್ಟದಿಂದ ಜನವಸತಿ ಪ್ರದೇಶವಾಗಿ ನಮ್ಮ ಸಂದರ್ಭದವರೆಗೆ ಮುಂದುವರೆದು. ಏಕಘನಾಕೃತ ಪರಂಪರೆಯನ್ನು ನಿರೂಪಿಸಿಕೊಂಡು ಬಂದಿದೆ. ಇದಕ್ಕೆ ಕಾರಣವಾದ ಅಂಶಗಳನ್ನು ಕಂಡುಕೊಳ್ಳುವುದು ಮತ್ತು ಅವುಗಳ ಬಗ್ಗೆ ಆದರ್ಶವಾದಿ ಆಲೋಚನೆಗಳ ಜೊತೆಗೆ ಮುಖಾಮುಖಿಯಾಗುವುದು. ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಸೊರಬದ ಭೌಗೋಳಿಕ ಪ್ರದೇಶ ಯಾವ ರೀತಿ ನೆಲೆಯಿಂದ ಕೂಡಿ ತನ್ನ ವೈವಿಧ್ಯತೆಯನ್ನು ತೋರಿಸುವುದು ಎಂಬುದರ ಚರ್ಚೆ ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ. ಇದರ ಅಡಿಯಲ್ಲಿರುವ ಕಾಡು, ಮಳೆ, ನದಿಗಳು,

ಫವತ್ತಾದ ಭೂಮಿ ಮೊದಲಾದ ಅಂಶಗಳು ಹಾಗೂ ಸೊರಬ ಪ್ರದೇಶದ ಜನರ ಬದುಕು ಬವಣೆಗಳು ಸಾಂಸ್ಕೃತಿಕ ಪರಂಪರೆಯಲ್ಲಿ ಹೇಗೆ ನಿರೂಪಿತವಾಗಿವೆ ಎಂಬುದನ್ನು ಕಂಡುಕೊಳ್ಳುವುದು ಮತ್ತು ಮುಂದೆ ಬದುಕು ಬವಣೆಗಳು ಪಡೆದುಕೊಳ್ಳಬಹುದಾದಂತಹ ತಿರುವುಗಳನ್ನು ಕುರಿತು ಅಧ್ಯಯನವು ಆಲೋಚಿಸುತ್ತಾ ಹೊರಡುತ್ತದೆ. ಐತಿಹಾಸಿಕ ಹಿನ್ನಲೆಯಲ್ಲಿ ಯಾವ ಅರಸರು ಮತ್ತು ಸಾಮಂತರು ಸೊರಬ ಪ್ರದೇಶದಲ್ಲಿ ನೆಲೆ ನಿಂತು ತಮ್ಮ ಇತಿಹಾಸವನ್ನು ನಿರ್ಮಿಸಿದ್ದಾರೆ ಮತ್ತು ಅವರ ವಂಶಪರಂಪರೆಯು ಹೇಗಿದೆ ಎಂಬುದನ್ನು ಚರ್ಚಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಸೇರಿದೆ.

ಸಾಮಾಜಿಕ ಜೀವನದಲ್ಲಿ ಊರಿನ ಪರಿಕಲ್ಪನೆ ವಿಶಿಷ್ಟವಾದುದು. ಊರಿನೊಂದಿಗೆ ಜನರು ಅವಿನಾಭಾವ ಸಂಬಂಧವನ್ನು ಹೊಂದಿರುತ್ತಾರೆ. ಊರುಗಳಲ್ಲಿಯ ಮನೆ ಪರಿಸರ, ಪ್ರದರ್ಶನ ಕಲೆಗಳು, ಜನಪದರ ಕಲೆಗಳು, ಇತರ ಕಲೆಗಳು ಹಾಗೂ ಹಬ್ಬ-ಜಾತ್ರೆಯಂತಹ ಆಚರಣೆಗಳು ಬದುಕಿನ ಅಂಗಗಳಾಗಿ ಎಷ್ಟೊಂದು ಮುಖ್ಯವಾಗಿವೆ ಎಂಬುದನ್ನು ವಿಶ್ಲೇಷಿಸುವ ಉದ್ದೇಶವೂ ಈ ಅಧ್ಯಯನದಲ್ಲಿದೆ.

ಒಂದು ತಾಲೂಕು ಪ್ರದೇಶ ಅಂದರೆ ಅದು ತನ್ನದೇ ಆದ ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ, ಧಾರ್ಮಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಒಳಗೊಂಡಿರುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಅಂದಿನ ಪರಂಪರೆ ಇಂದಿನ ಆಧುನಿಕತೆಯಲ್ಲಿ ಹೇಗೆ ಸಮನ್ವಯಗೊಂಡಿದೆ. ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗಿ ವಿಭಕ್ತ ಕುಟುಂಬಗಳು ಬಹುಸಂಖ್ಯೆಯಲ್ಲಿ ಬೆಳೆದು ಬದಲಾವಣೆ ವ್ಯವಸ್ಥೆ ರೂಪುಗೊಂಡಿದೆ. ಆರ್ಥಿಕ ಸ್ಥಿತಿ ತಾಲೂಕಿನಲ್ಲಿ ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ಎಂಬುದು ಮುಖ್ಯ. ಇದರ ಹಿನ್ನೆಲೆಯಲ್ಲಿ ಪ್ರಧಾನ ಸ್ಥಾನದ ಕೃಷಿ-ನೀರಾವರಿ ಅಂದು ಹೇಗಿತ್ತು. ಇಂದು ಹೇಗೆ ಬದಲಾಗಿದೆ. ಜೊತೆಗೆ ಪಶುಸಂಗೋಪನೆ, ಕೈಗಾರಿಕೆ, ಮಾರುಕಟ್ಟೆ, ಸಾರಿಗೆ, ವ್ಯಾಪಾರ ಇತ್ಯಾದಿ ಅಂಶಗಳು ಆರ್ಥಿಕ ಸ್ಥಿತಿಯನ್ನು ಹೇಗೆ ನಿರ್ಧರಿಸುತ್ತವೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಮತ್ತು ತಾಲೂಕಿನ ಆಡಳಿತ ವ್ಯವಸ್ಥೆಯಲ್ಲಿ ತಹಸೀಲ್ದಾರರ ಅಡಿಯಲ್ಲಿಯ ಆಡಳಿತ ವ್ಯವಸ್ಥೆ, ಗ್ರಾಮ, ತಾಲ್ಲೂಕು ಪಂಚಾಯಿತಿ ಅಡಿಯಲ್ಲಿಯ ಆಡಳಿತ ವ್ಯವಸ್ಥೆ ಪ್ರಸ್ತುತ ದಿನದಲ್ಲಿ ಹೇಗಿದೆ ಎಂಬುದನ್ನು ಪರಾಮರ್ಶಿಸಲಾಗಿದೆ. ಸೊರಬ ಪ್ರದೇಶದ ಜನತೆ ನಿರಂತರವಾಗಿ, ಧಾರ್ಮಿಕ ವಿಷಯವಾಗಿ ಹಲವು ಬದಲಾವಣೆಗಳನ್ನು ಕಂಡುಕೊಂಡವರಾಗಿದ್ದಾರೆ. ಅಲ್ಲಿ ನಡೆದ ಧಾರ್ಮಿಕ ಆಗು-ಹೋಗುಗಳ ಬಗೆಗೆ ಮುಖಾಮುಖಿಯಾಗುವುದನ್ನು ಪ್ರಸ್ತುತ ಅಧ್ಯಯನ ಒಳಗೊಂಡಿದೆ. ಈ ತಾಲೂಕಿನಲ್ಲಿ ಶಿಕ್ಷಣ ಅಂದು ಅಗ್ರಹಾರಗಳ ಮೂಲಕ ಬೆಳೆದಿತ್ತು. ಇಂದು ಶಾಲೆ ಕಾಲೇಜುಗಳ ಮುಖಾಂತರ ಶಿಕ್ಷಣ ಕಂಡುಬರುತ್ತಿದೆ. ಇಂದಿನ ಶಿಕ್ಷಣ ವ್ಯವಸ್ಥೆಯ ಪ್ರಗತಿ-ಕೊರತೆಗಳನ್ನು ಚರ್ಚಿಸುವ ಪ್ರಯತ್ನ ಮಾಡಿವೆ. ಈ ಹಿನ್ನಲೆಯಲ್ಲಿ ತಾಲೂಕಿನ ಸಾಮಾಜಿಕ, ಆಡಳಿತಾತ್ಮಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸ್ಥಿತಿ-ಗತಿಗಳನ್ನು ಚರ್ಚಿಸುವುದು ಪ್ರಸ್ತುತ ಅಧ್ಯಯನದಲ್ಲಿ ಮಹತ್ವದ ಸಂಗತಿಯಾಗಿದೆ.

ಈ ಸೊರಬ ಪ್ರದೇಶ ಹಲವು ಪ್ರೇಕ್ಷಣೀಯ ಸ್ಥಳಗಳ ಬೀಡಾಗಿದೆ. ಇಲ್ಲಿಯ ಮಹತ್ವದ ಐತಿಹಾಸಿಕ ನೆಲೆಗಳು ಏನನ್ನು ಪ್ರತಿಬಿಂಬಿಸುತ್ತವೆ ಮತ್ತು ಧಾರ್ಮಿಕ ಕೇಂದ್ರಗಳು, ಸ್ಮಾರಕಗಳು ಎಷ್ಟರಮಟ್ಟಿಗೆ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಪ್ರತೀಕಗಳಾಗಿವೆ ಎಂಬುದನ್ನು ಮತ್ತು ಪ್ರವಾಸಿ ತಾಣದಂತ ಪ್ರಕೃತಿ ರಮ್ಯ ತಾಣಗಳು ಹೇಗೆ ಜನತೆಯನ್ನು ಆಕರ್ಷಿಸುತ್ತವೆ ಎಂಬುದನ್ನು ತಿಳಿಯುವ ಉದ್ದೇಶವನ್ನು ಪ್ರಸ್ತುತ ಅಧ್ಯಯನ ಒಳಗೊಂಡಿದೆ.

ತಾಲೂಕಿನ ಸಾಹಿತ್ಯ ಪರಂಪರೆಯನ್ನು ಕಾಲಾನುಕ್ರಮವಾಗಿ ಪ್ರಸ್ತುತ ಅಧ್ಯಯನದಲ್ಲಿ ನಿರೂಪಿಸಲಾಗುವುದು. ಶಾಸನ ಕಾಲದಿಂದಾರಂಭಿಸಿ ವರ್ತಮಾನದವರೆಗಿನ ಸಾಹಿತ್ಯಕೃತಿಗಳನ್ನು ದಾಖಲಿಸುವುದಷ್ಟೆ ಇಲ್ಲಿಯ ಉದ್ದೇಶ: ಶಾಸನ ಸಾಹಿತ್ಯ ಗ್ರಂಥಸ್ಥ ಸಾಹಿತ್ಯಕ್ಕಿಂತ ಭಿನ್ನವಾದುದು. ಪ್ರಾಸಂಗಿಕವಾಗಿ ಸಾಹಿತ್ಯರಚನೆ ಇಲ್ಲಿಯ ಉದ್ದೇಶ. ಶಾಸನ ಸಾಹಿತ್ಯಗಳು ಗ್ರಂಥಸ್ಥ ಸಾಹಿತ್ಯಕ್ಕಿಂತ ಪೂರ್ವದಲ್ಲಿಯೇ ರಚನೆಯಾಗಿರುವುದು. ಜಾನಪದ ಸಾಹಿತ್ಯ ಗ್ರಾಮೀಣ ಜನರ ಬಾಯಲ್ಲಿ ಉಳಿದಿರುವಂತಹದ್ದು. ಇಲ್ಲಿಯ ಜನಪದ ಸಾಹಿತ್ಯ ಛಂದಸ್ಸು ಶೈಲಿಯಲ್ಲಿಯೇ ಬಳಕೆ ಇದೆ. ಇದರ ಸಂಗ್ರಹವನ್ನು ಇಲ್ಲಿ ನಿರೂಪಿಸಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಪರಂಪರೆಯನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ಕೊನೆಯಲ್ಲಿ ತಾಲೂಕಿನ ಸಮಗ್ರ ಅಧ್ಯಯನ ಎಷ್ಟರ ಮಟ್ಟಿಗೆ ನಡೆದಿದೆ. ಮತ್ತು ಚರ್ಚಿಸಲಾದ ವಿಷಯಗಳು ಎಷ್ಟು ಪ್ರಾಮುಖ್ಯತೆ ಪಡೆದಿವೆ. ಅಧ್ಯಯನದಿಂದ ಕಂಡುಕೊಂಡ ಅಂಶಗಳು ತಾಲೂಕಿನ ಸಾಂಸ್ಕೃತಿಕ ನೆಲೆಗೆ ಯಾವ ಪ್ರಮಾಣದಲ್ಲಿ ಪೂರಕವಾಗಿವೆ ಹಾಗೂ ಹಲವು ಸಮಸ್ಯೆಗಳಿಗೆ ಸಲಹೆಗಳೇನು ಎಂಬುದನ್ನು ವಿಶ್ಲೇಷಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿಗೆ ಸೀಮಿತವಾಗಿದೆ. ಸೊರಬವು ಪುರಾಣ ಕಾಲದಿಂದ ಇಂದಿನವರೆಗೂ ಹಲವು ಉಲ್ಲೇಖಾರ್ಹ ವೈಶಿಷ್ಟ್ಯಗಳನ್ನು ಹೊಂದಿದೆ ಮತ್ತು ವಿಭಿನ್ನ ಸಂಸ್ಕೃತಿ ವೈವಿಧ್ಯಮಯ ಕಲಾ ಸಿರಿವಂತಿಕೆಯನ್ನು ಹೊಂದಿದ ಸುಂದರ ಪ್ರದೇಶ. ಇಲ್ಲಿ ಸಂಸ್ಕೃತಿಯನ್ನು ನಿರ್ಧರಿಸುವ ಭೌಗೋಳಿಕ ಲಕ್ಷಣಗಳ ವೈಶಿಷ್ಟ್ಯತೆಗೂ ಮತ್ತು ಇತಿಹಾಸದ ಜೊತೆಗೆ ತಾಲೂಕಿನ ವರ್ತಮಾನದ ಸ್ಥಿತಿಗತಿಗಳಿಗೂ ಆಧ್ಯತೆಯನ್ನು ನೀಡಲಾಗಿದೆ. ನಗರ ಪ್ರದೇಶಕ್ಕಿಂತಲೂ ಗ್ರಾಮಾಂತರ ಪ್ರದೇಶಗಳ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಗ್ರಾಮಸಂಸ್ಕೃತಿ, ಜನಸಮುದಾಯ, ಕಲೆಗಳು, ಆಚರಣೆಗಳು, ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ, ಧಾರ್ಮಿಕ, ಶೈಕ್ಷಣಿಕ ಸ್ಥಿತಿಗತಿಗಳು ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರಿಂದ ಇತ್ಯಾದಿಗಳನ್ನು ವಿವೇಚನೆಗೆ ಒಳಪಡಿಸಲಾಗಿದೆ. ಐತಿಹಾಸಿಕ ನೆಲೆಗಳು,

ಧಾರ್ಮಿಕ ಕೇಂದ್ರಗಳು, ಪ್ರಾಕೃತಿಕ ಕೇಂದ್ರಗಳು, ಭಾಷೆ ಮತ್ತು ಸಾಹಿತ್ಯ ಇವೆಲ್ಲವೂ ಸಂಸ್ಕೃತಿ ಪರಂಪರೆಯನ್ನು ಉಳಿಸಿಬೆಳೆಸಿರುವುದರಿಂದ ಇವುಗಳ ಅಧ್ಯಯನ ವೈಶಿಷ್ಟ್ಯಪೂರ್ಣವಾಗಿದೆ.

ತಾಲೂಕಿನ ಸಂಸ್ಕೃತಿ ನಾಗರೀಕತೆಯನ್ನು ಪ್ರತಿಬಿಂಬಿಸುವ ಕೆಲವು ಛಾಯಾ ಚಿತ್ರಗಳನ್ನು ಸುಧೀರ್ಘವಾದ ಗ್ರಂಥಸೂಚಿಯನ್ನು ಮಾಹಿತಿ ಸಂಗ್ರಹಕ್ಕೆ ಸಹಾಯಕವಾದ ವಕ್ತೃಮಾಹಿತಿ ಪಟ್ಟಿಯನ್ನು ಈ ಅಧ್ಯಯನ ನಿರೂಪಿಸುತ್ತದೆ. ಪ್ರಸ್ತುತ ಶಿವಮೊಗ್ಗ ಜಿಲ್ಲೆಯಲ್ಲಿರುವ ಸೊರಬ ಪ್ರಮುಖ ತಾಲ್ಲೂಕು ಕೇಂದ್ರ, ಜಿಲ್ಲೆಯ ಪಶ್ಚಿಮಕ್ಕಿರುವ ಸೊರಬ ಮಲೆನಾಡು ಅರೆಮಲೆನಾಡು ಪ್ರದೇಶ ಸೊರಬ ತಾಲೂಕಿನ ಪೂರ್ವದಲ್ಲಿ ಶಿಕಾರಿಪುರ, ದಕ್ಷಿಣದಲ್ಲಿ ಸಾಗರ, ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ, ಶಿರಸಿ, ಉತ್ತರದಲ್ಲಿ ಹಾವೇರಿ ಜಿಲ್ಲೆ ಹಾನಗಲ್ಲು ಹಿರೇಕೆರೂರು ತಾಲ್ಲೂಕುಗಳಿವೆ.

ಇಲ್ಲಿ ಹರಿಯುವ ನದಿಗಳು ವರದಾ ಮತ್ತು ದಂಡಾವತಿ, ಮುಖ್ಯ ಬೆಳೆ ಭತ್ತ. ಕೃಷಿಕರೆ ಹೆಚ್ಚು, ಕೆರೆ ಮತ್ತು ಬಾವಿಗಳಿವೆ. ದೀವರ ಜನಾಂಗ ಹೆಚ್ಚುಕಂಡು ಬರುತ್ತದೆ. ಜನಸಾಂದ್ರತೆ ಪ್ರತಿಕಿಲೋಮೀಟರ್ ಗೆ ೧೨೩ರಷ್ಟು ಇದೆ. ಅರಣ್ಯ ಪ್ರದೇಶ ೨೬.೨೮೨ ಹೆಕ್ಟೇರಿನಷ್ಟು ಇದೆ. ತಾಲೂಕಿನಲ್ಲಿ ಎತ್ತರವಾದ ಬೆಟ್ಟಗಳಿವೆ. ಮರಳು ಮಿಶ್ರಿತ ಮಣ್ಣು ಈ ಭೂಭಾಗದಲ್ಲಿ ಇರುವುದನ್ನು ಕಾಣುತ್ತೇವೆ.

ಇತಿಹಾಸದ ಕಾಲಕ್ಕೆ ಈ ಭಾಗ ಬನವಾಸಿ ಪನ್ನಿರ್ಚ್ಛಾಸಿರ ವಿಭಾಗದಲ್ಲಿತ್ತು. ನಂದಿವರ್ಮ ಆಳಿದ ನಾಡು ಈ ಕನ್ನಡ ನಾಡು. ಇಲ್ಲಿ ಸಾಕಷ್ಟು ಶಾಸನಗಳು ಪತ್ತೆಯಾಗಿವೆ. ಸು.೮ನೇ ಶತಮಾನದ ತನಕವೂ ಶಾಸನಗಳ ಬೆಳವಣಿಗೆ ಗುರುತಿಸಿಬಹುದು.

ಸೊರಬ ತಾಲೂಕು ಹಳ್ಳಿಗಳ ನಾಡು. ಅವರದೆ ಆದ ಜೀವನ ವಿಧಾನ ಇಲ್ಲಿ ಇದೆ. ಗ್ರಾಮಗಳು ಸಂಸ್ಕೃತಿಯ ಕೇಂದ್ರಗಳು, ಹಳೆ ಊರು ಮತ್ತು ಹೊಸ ಊರುಗಳೆಂಬ ನುಡುಗಟ್ಟುಗಳು ವಿಶಿಷ್ಟವಾಗಿವೆ. ಸಾಮಾಜಿಕ ಜೀವನ, ಗೃಹಜೀವನ, ಆಚಾರ, ಸಂಪ್ರದಾಯಗಳು, ವಿವಾಹಗಳು, ಉಡುಗೆ, ಜನ ಸಮುದಾಯಗಳು ಮತ್ತು ಭಾಷೆ, ಪ್ರದರ್ಶನ ಕಲೆಗಳು, ಜನಪದ ಕಲಾವಿದರು, ಸಂತೆ, ಜಾತ್ರೆ, ಹಬ್ಬಹರಿದಿನಗಳು ಇತ್ಯಾದಿಗಳ ವೈಶಿಷ್ಟ್ಯತೆಯನ್ನು ಅಧ್ಯಯನ ಮಾಡಲಾಗಿದೆ.

ಸೊರಬದ ಸಾಮಾಜಿಕ ವ್ಯವಸ್ಥೆ. ಆಡಳಿತ, ಕೃಷಿ, ನೀರಾವರಿ, ಸಾರಿಗೆ, ಶೈಕ್ಷಣಿಕ, ಧಾರ್ಮಿಕ, ಇತ್ಯಾದಿಗಳ ಸ್ಥಿತಿಗತಿಗಳನ್ನು ಗುರುತಿಸಬಹುದು ಮತ್ತು ಐತಿಹಾಸಿಕ, ಧಾರ್ಮಿಕ, ಪ್ರಾಕೃತಿಕ ನೆಲೆಗಳ ವಿವರಣೆಯನ್ನು ಈ ಅಧ್ಯಯನ ಒಳಗೊಂಡಿದೆ. ಜೊತೆಗೆ ಜಾನಪದ ಸಾಹಿತ್ಯ, ಶಾಸನ ಸಾಹಿತ್ಯ, ಶಿಷ್ಟ ಸಾಹಿತ್ಯದ ಬೆಳವಣಿಗೆಯನ್ನು ಈ ಅಧ್ಯಯನದಲ್ಲಿ ಕಾಣಬಹುದು. ಈ ಪ್ರದೇಶವು ಪ್ರಾಕೃತಿಕ ಸಂಪತ್ತಿನಂತೆ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಶ್ರೀಮಂತವಾಗಿದ್ದು ಈ ನಾಡನ್ನು ಕರ್ನಾಟಕ ಜನತೆಗೆ ಪರಿಚಯಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾದ ಅಧ್ಯಯನ ಮಾಡಲಾಗಿದೆ. ಹಾಗೂ ಪ್ರಮುಖ ವಲಯಗಳ ಚಿಂತನೆಯನ್ನು ಇಲ್ಲಿ ಗಂಭೀರವಾಗಿ ನಡೆಸಲಾಗಿದೆ.

ಅಧ್ಯಯನದ ವಿಧಿ ವಿಧಾನ

ಪ್ರಸ್ತುತ ಅಧ್ಯಯನ ಸರ್ವೇಕ್ಷಣೆಯದಾಗಿದ್ದು ಸೊರಬ ಕ್ಷೇತ್ರದ ಸಂಸ್ಕೃತಿಯನ್ನು ಒಳಗೊಂಡಿರುತ್ತದೆ. ಆಯ್ಕೆ ವಿಷಯವು "ಸೊರಬ ತಾಲೂಕು : ಒಂದು ಸಾಂಸ್ಕೃತಿಕ ಅಧ್ಯಯನ" ಎಂಬುದಾಗಿರುತ್ತದೆ.

೧. ವಿಷಯದ ವ್ಯಾಪ್ತಿಗೆ ಬರುವ ಕ್ಷೇತ್ರದ ಕಾರ್ಯಕ್ಕೆ ಪ್ರಶ್ನಾವಳಿ ಸಂದರ್ಶನ ಒಳಗೊಂಡಿರುತ್ತದೆ.

೨. ಕ್ಷೇತ್ರಕಾರ್ಯದ ಮೂಲಕ ಮತ್ತು ಗ್ರಂಥಗಳ ಆಧಾರದ ಮೂಲಕ ಸೊರಬದ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನಲೆಯನ್ನು ಸಮೀಕ್ಷೆ ಮಾಡಲಾಗಿದೆ.

೩. ಕ್ಷೇತ್ರಕಾರ್ಯದ ಮೂಲಕ ಗ್ರಾಮೀಣ ಸಮಾಜ ಸಂಸ್ಕೃತಿ ಸಮೀಕ್ಷೆ.

೪. ಸಮುದಾಯಗಳೊಂದಿಗೆ ಪಾಲ್ಗೊಂಡು ವಿವಿಧ ಸಮುದಾಯಗಳ ವ್ಯತ್ಯಾಸ ಕಂಡುಕೊಳ್ಳುವುದು.

೫. ಮೌಖಿಕ ಮತ್ತು ನೇರ ಸಂದರ್ಶನ ಮೂಲಕ ಸಂಪರ್ಕ ಹೊಂದಲಾಗಿದೆ.

೬. ಪ್ರಾಯೋಗಿಕವಾಗಿಯೇ ತಾಲೂಕಿನ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಲಾಗಿದೆ.

೭. ಅಧ್ಯಯನಕ್ಕೆ ಪೂರಕವಾದ ಪ್ರಾಥಮಿಕ, ಅನುಷಂಗಿಕ ಆಧಾರಗಳನ್ನು ಸೂಕ್ಷ್ಮವಾಗಿ ಸಂಶೋಧನೆಗೆ ಅನ್ವಯಿಸಿಕೊಳ್ಳಲಾಗಿದೆ.

೮. ವೈಜ್ಞಾನಿಕವಾಗಿ ಸತ್ಯ ಸತ್ಯತೆಯನ್ನು ಕಂಡುಕೊಂಡು ಯಾವುದೇ ಒತ್ತಡಕ್ಕೆ ಒಳಗಾಗದೆ. ಈ ಕಿರುಪ್ರಬಂಧದ ತಯಾರಿ ನಡೆಸಲಾಗಿದೆ.

ಅಧ್ಯಾಯ ೨

ಪ್ರಸ್ತಾವನೆ

೨.೧. ಭೌಗೋಳಿಕ ಪರಿಸರ

೨.೨. ಐತಿಹಾಸಿಕ ಹಿನ್ನೆಲೆ

೨

ಪ್ರಸ್ತಾವನೆ

ಸಂಸ್ಕೃತಿ

ದಿನನಿತ್ಯ ನಾವು ಹೆಚ್ಚಾಗಿ ಬಳಸುತ್ತಿರುವ ಪದಗಳಲ್ಲಿ 'ಸಂಸ್ಕೃತಿ'ಯೂ ಒಂದಾಗಿದೆ. ದಿನನಿತ್ಯದ ನಡೆ-ನುಡಿಗಳನ್ನು, ಉಡುಗೆ-ತೊಡುಗೆಗಳನ್ನು, ಸಮಾಜದ ಕಟ್ಟುಪಾಡುಗಳನ್ನು, ನಿಯಮ ನಿಬಂಧನೆಗಳನ್ನು ಅಳೆಯುವ ಮಾಪಕವಾಗಿ ಸಂಸ್ಕೃತಿ ಕೆಲಸ ಮಾಡುತ್ತಿರುತ್ತದೆ. ಸಂಸ್ಕೃತಿ ಎಂಬ ಪದ ಪಡೆದುಕೊಂಡ ಅರ್ಥದ ತಿರುವುಗಳು ಅಪರಿಮಿತ. ಇದರಿಂದಾಗಿ ಹೊಸ ಚಿಂತನೆಯ ಅಂಶಗಳು ಬೆಳಕುಕಂಡಿವೆ. ಜ್ಞಾನದ ಯಾವ ಶಾಖೆಯಾದರೂ ಹೊಸ ಆವಿಷ್ಕಾರಗಳಿಗೆ ತೊಡಗಿದಾಗ ಸಂಸ್ಕೃತಿಯ ನೆರವು ಬೇಕಾಗುತ್ತದೆ. ಮತ್ತು ಅವಿಷ್ಕಾರದ ಪ್ರಭಾವ ಸಂಸ್ಕೃತಿಯ ಮೇಲೆ ಆಗುತ್ತದೆ. ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಸಂಸ್ಕೃತಿಯು ಇಡೀ ಸಮಾಜವನ್ನು ನಿಯಂತ್ರಿಸುತ್ತದೆ. ಮಾನವ ಜೀವನದ ಪ್ರತಿಯೊಂದು ಹಂತಕ್ಕೂ ಸಂಸ್ಕೃತಿ ಕೊಂಡಿಯಾಗಿ ತನ್ನ ಕಾರ್ಯನಿರ್ವಹಿಸುತ್ತದೆ.

೧. ೧೮ನೇ ಶತಮಾನದಲ್ಲಿ A culture ಸ್ವತಂತ್ರ ಮತ್ತು ಅಮೂರ್ತ ನಾಮಪದವಾಗಿ, ಮಾನವನ ಬೌದ್ಧಿಕ, ಆಧ್ಯಾತ್ಮಿಕ ಮತ್ತು ಸೌಂದರ್ಯಾತ್ಮಕವಾಗಿ ಬಳಸಿದರು. ಈ ರೀತಿ ಪದವು ಬಳಕೆ ಆಗುವುದಕ್ಕೆ ಕೈಗಾರಿಕಾ ಕ್ರಾಂತಿಯೂ ಕಾರಣವಾಗಿತ್ತು.

೨. ಒಂದು ವ್ಯವಸ್ಥಿತ ಜನರ ಜೀವನವನ್ನು ಒಂದು ಕಾಲಕ್ಕೆ ಬದ್ಧವಾಗಿ ಅಥವಾ ಒಂದು ಗುಂಪಿಗೆ ಅನ್ವಯಿಸಿ ನಂತರ ಇಡೀ ಮಾನವ ಜೀವನವನ್ನೇ ಮುಖ್ಯವಾಗಿ ಪರಿಗಣಿಸಿ ಸಂಸ್ಕೃತಿ ಪದವನ್ನು ಅರ್ಥೈಸಿದ್ದನ್ನು ಕಾಣಬಹುದು.

೩. ಕಲಾತ್ಮಕ ಅಭಿವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಬಹು ವಿಶಾಲಾರ್ಥದಲ್ಲಿ 'ಸಂಸ್ಕೃತಿ'ಯ ಪದ ಬಳಕೆ ಇದೆ. ಸಂಸ್ಕೃತಿಯು ಸಂಗೀತ, ಸಾಹಿತ್ಯ, ಕಲೆ, ಶಿಲ್ಪ, ರಂಗಭೂಮಿ ಮತ್ತು ಸಿನಿಮಾ ಮಾಧ್ಯಮಕ್ಕೂ ಅನ್ವಯಿಸುತ್ತದೆ. ಇದರೊಂದಿಗೆ ತತ್ವಜ್ಞಾನವನ್ನು ಕುರಿತಂತೆ, ಇತಿಹಾಸವನ್ನು ಕುರಿತಂತೆಯೂ, ಸಹ ಸಂಸ್ಕೃತಿಯ ಅರ್ಥದ ವ್ಯಾಖ್ಯಾನ ವಿಸ್ತರಿಸಿದೆ.

ಈ ಆಧಾರದ ಮೇಲೆಯೇ ಸಂಸ್ಕೃತಿಯನ್ನು ವ್ಯಾಖ್ಯಾನಿಸಲು ತೊಡಗಿರುವುದನ್ನು ಗಮನಿಸಬಹುದಾಗಿದೆ.

ನಾಮ ಪದವಾಗಿಯೂ ಅಮೂರ್ತಪದವಾಗಿಯೂ, ಬಳಕೆ ಆಗುತ್ತಿದ್ದ ಸಂಸ್ಕೃತಿ ಎಂಬ ಪದವು ವಿವಿಧ ಜ್ಞಾನ ಶಾಖೆಗಳೊಂದಿಗೆ ಸಂಬಂಧ ಕಲ್ಪಿಸುತ್ತಾ ಅರ್ಥದಲ್ಲಿ ಬೆಳೆಯುತ್ತಾ ಬಂತು. culture ಗೂ ಹಾಗೂ Agriculture ಗೂ ಕೊಂಡಿಯಾಗಿ ಜೀವನ ಕ್ರಮ ಸೇರಿಕೊಂಡಿದ್ದನ್ನು ಸಂಶೋಧಕರು ಪ್ರಮಾಣ ಬದ್ದವಾಗಿ ತೋರಿಸಿದ್ದಾರೆ.

ಪ್ರಾಚೀನ ಸಂಸ್ಕೃತಿಯನ್ನು ಪರಿಚಯ ಮಾಡಿಕೊಳ್ಳಲು ತೊಡಗಿದಾಗ ಜ್ಞಾನದ ವಿವಿಧ ಶಾಖೆಗಳ ಅವಶ್ಯಕತೆ ಎಷ್ಟೆಂದು ಅರಿವಾಗುತ್ತದೆ. ಮಾನವಶಾಸ್ತ್ರ, ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಪ್ರಾಚ್ಯವಸ್ತು ಸಂಶೋಧನಾ ಶಾಸ್ತ್ರ. ಹೀಗೆ ಪ್ರತಿಯೊಂದು ಶಾಖೆಗಳು ಸಂಸ್ಕೃತಿಯೊಂದಿಗೆ ಹೆಣೆದುಕೊಂಡಿವೆ. ಭೌಗೋಳಿಕ ಅಂಶಗಳು ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಗುತ್ತವೆ. ಒಂದು ಪ್ರದೇಶದ ಜನಾಂಗದ ಜೀವನ ವಿಧಾನವನ್ನು ಭೌಗೋಳಿಕ ಲಕ್ಷಣಗಳು ರೂಪಿಸುತ್ತವೆ. ಈ ಜೀವನ ವಿಧಾನದಲ್ಲಿ ಒಂದು ಸಾಮಾಜಿಕ ವ್ಯವಸ್ಥೆ ಇರುವುದು ಸಹಜವಾಗಿದೆ. ಸಾಮಾಜಿಕ ವ್ಯವಸ್ಥೆ ಸುಧಾರಣೆ ಆದಂತೆಲ್ಲಾ ನಾಗರಿಕತೆಯು ರೂಪುಗೊಳ್ಳುತ್ತದೆ.

ಸಂಸ್ಕೃತಿಯನ್ನು ನಾವು ವಿಶ್ಲೇಷಣೆಗೆ ಒಳಪಡಿಸಿದಾಗಲೆಲ್ಲಾ ನಾಗರಿಕತೆಯು ಅಡ್ಡಬರುತ್ತದೆ. ಜೀವನ ವಿಧಾನವು ವಿಜ್ಞಾನದ ಬೆಳವಣಿಗೆಯ ಮೂಲಕ ಬದಲಾದಂತೆ, ನಾಗರಿಕತೆಯನ್ನು ತನಗೆ ಅರಿವಿಲ್ಲದೆಯೇ ಬೆಳೆಸಿಕೊಳ್ಳುತ್ತದೆ. ಇದರಿಂದಾಗಿ ಒಂದು ಪ್ರದೇಶದಲ್ಲಿ ಸುಧಾರಣೆಗೊಂಡ ಜೀವನ ವಿಧಾನವನ್ನು ಇನ್ನೊಂದು ಪ್ರದೇಶದಲ್ಲಿ ಅನುಸರಿಸಲು ಸಾಧ್ಯವಿರುತ್ತದೆ. ಅಂದರೆ ನಾಗರಿಕತೆಯನ್ನು ಅನುಸರಿಸಿದಂತೆಯೇ ಆಗುತ್ತದೆ. ನಾಗರಿಕತೆಯಲ್ಲಿ ಸಮಷ್ಠಿಯ ರೂಪವಿದೆ. ಆದರೆ ಸಂಸ್ಕೃತಿಯು ವೈಶಿಷ್ಟ್ಯದಿಂದ ಕೂಡಿದ್ದಾಗಿರುತ್ತದೆ. ಅದಕ್ಕೆ ಕೆಲವು ಜನಾಂಗದತ್ತವಾದ ಗುಣಗಳು ಆವರಿಸಿಕೊಂಡಿರುತ್ತವೆ.

ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೇ ಸಂಸ್ಕೃತಿ. ಈ ಸಂಸ್ಕೃತಿ ಅವರ ಕಲೆಗಳಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ, ಅವರ ಆಚಾರ ವ್ಯವಹಾರಗಳಲ್ಲಿ, ಧರ್ಮದಲ್ಲಿ ವ್ಯಕ್ತವಾಗುತ್ತದೆ. ಇವು ಒಂದರ ಮೇಲೊಂದು ಪ್ರಭಾವವನ್ನು ಬೀರುತ್ತವೆ. ಒಂದನ್ನು ಅರಿಯಲು ಎಲ್ಲವನ್ನೂ ಅರಿಯಬೇಕು. ಒಬ್ಬ ಕಲಾವಿದನ ಸಂಸ್ಕೃತಿಯು ಒಬ್ಬ ರೈತನ ಸಂಸ್ಕೃತಿಯಿಂದ ಸ್ವಲ್ಪ ಭಿನ್ನವಾಗಿರುತ್ತದೆ. ಆದರೆ ಒಂದು ಆರೋಗ್ಯಕರವಾದ ಸಮಾಜದಲ್ಲಿ ಇವೆಲ್ಲವೂ ಒಂದೇ ಸಂಸ್ಕೃತಿಯ ಅಂಗಗಳು. ಕಲಾವಿದ, ಕವಿ, ತತ್ವಜ್ಞಾನಿ, ರಾಜಕಾರಣಿ ಮತ್ತು ಶ್ರಮ ಜೀವಿ, ಇವರೆಲ್ಲರಿಗೂ ಒಂದು ಸಮಾನವಾದ ಸಂಸ್ಕೃತಿ ಇರುತ್ತದೆ. ಸಮಾನ ಅಂಶವೆಂಬುದು ಅಮೂರ್ತವಾದದ್ದು ಗುರುತಿಸಲು ಅಸಾಧ್ಯವಾಗಿರುತ್ತದೆ. ಆದ್ದರಿಂದಲೇ ಸಂಸ್ಕೃತಿಯು ಸಹ. ಅಮೂರ್ತ ಕಲ್ಪನೆಯಿಂದ ಕೂಡಿದೆ.

ಸಂಸ್ಕೃತಿಯನ್ನು ವಿವರಿಸುವಾಗಲೆಲ್ಲ ಜೀವನ ವಿಧಾನದ ಸಾಮಾಜಿಕ ನೆಲೆಯನ್ನು ಪ್ರಮುಖ ಅಂಶವಾಗಿ ವಿವರಿಸಲು ತೊಡಗುತ್ತಾರೆ.

ವ್ಯಕ್ತಿಯ ವಿನ್ಯಾಸ ಕೇವಲ ವ್ಯಕ್ತಿಯದು ಮಾತ್ರವಾಗಿರದೇ ತಾನು ಬದುಕುತ್ತಿರುವ ಸಮಾಜ ಮತ್ತು ಸಂಸ್ಕೃತಿಯಿಂದ ಪ್ರೇರಿತವಾಗಿರುತ್ತದೆ. ಯಾಕೆಂದರೆ ವ್ಯಕ್ತಿ, ಸಮಾಜ ಮತ್ತು ಸಂಸ್ಕೃತಿಯ ಸಂಬಂಧ ತುಂಬಾ ಗಾಢವಾದದ್ದು. ವ್ಯಕ್ತಿಯ ಜೀವನ ವಿಧಾನವನ್ನು ಸಮಾಜ ರೂಪಿಸುತ್ತದೆಯೇ? ವೈಯಕ್ತಿಕವಾದದ್ದೇ? ಎಂಬ ಪ್ರಶ್ನೆ ನಮ್ಮ ಕಣ್ಮುಂದೆ ಬಂದು ನಿಲ್ಲುತ್ತದೆ ಆಗ ಪ್ರತ್ಯೇಕವಾಗಿ ಗ್ರಹಿಸಬಹುದು.

ಸಂಸ್ಕೃತಿ ಜೀವನದ ಎಲ್ಲಾ ವಿಷಯಗಳನ್ನು ತನ್ನಲ್ಲಿ ಕರಗಿಸಿಕೊಳ್ಳತೊಡಗುತ್ತದೆ. ಸಂಸ್ಕೃತಿಯನ್ನು ಬಿಡಿಯಾಗಿ ನೋಡದೆ ಇಡೀಯಾಗಿ ಸ್ವೀಕಾರ ಮಾಡಿ ಅಧ್ಯಯನ ನಡೆಸಬೇಕು. ಅನೇಕ ವಿಚಾರಗಳು ಒಂದರಲ್ಲಿ ಒಂದು ಅರ್ಥಪೂರ್ಣವಾಗಿ ಬೆಸೆದುಕೊಂಡಿವೆ. ಸಂಸ್ಕೃತಿಯಲ್ಲಿ ಧರ್ಮವಿದೆ, ವಿಜ್ಞಾನವಿದೆ, ಸಂಗೀತ, ಸಾಹಿತ್ಯ, ಕಲೆ, ಸಮಾಜ ಕೈಗೊಂಡ ನಿಯಮಗಳು, ಬಹಿಷ್ಕಾರಗೊಂಡ ಆಚರಣೆಗಳು, ರಾಜಕೀಯ, ಅಧಿಕಾರದ ದಾಹ, ಸ್ವಾತಂತ್ರ್ಯದ ಹಂಬಲ, ಸಮಾಜ ಸೇವೆಯ ತುಡಿತ, ಸಮಾಜದಲ್ಲಿನ ತಾರತಮ್ಯ, ತನ್ನದೇ ಆದ ಹಣಕಾಸಿನ ವ್ಯವಸ್ಥೆ. ಇದಕ್ಕೆ ಹಿನ್ನೆಲೆಯಾಗಿ ಭೌಗೋಳಿಕ ಲಕ್ಷಣಗಳು. ಇದಕ್ಕೆ ಬದ್ಧವಾದ ಆಹಾರ, ಉಡುಪು, ವಸತಿಯಂತಹ ಜೀವನ ಅವಶ್ಯಕವಾದ ವಸ್ತುಗಳು, ಇದರೊಂದಿಗೆ ಮಾನವನ ವಿಕಾಸಶೀಲ ಬುದ್ಧಿವಂತಿಕೆ, ಆಲೋಚನಾ ವಿಧಾನಗಳು, ನಾಗರೀಕತೆಯ ಹೊಸ ಹೊಸದಾದ ಮೆಟ್ಟಿಲುಗಳು ಒಂದರಲ್ಲಿ ಒಂದು ಬೆರತು ಹೋಗಿವೆ.

ಸಂಸ್ಕೃತಿಯ ಚಿಂತನೆಯ ನೆಲೆಗಳು ವಿಸ್ತಾರವಾಗುತ್ತಾ ಬಂದಿವೆ. ಹಿಂದೂ ಸಂಸ್ಕೃತಿ, ಮುಸ್ಲಿಂ ಸಂಸ್ಕೃತಿ, ಕ್ರಿಶ್ಚಿಯನ್ ಸಂಸ್ಕೃತಿ ಹೀಗೆ ಧರ್ಮಗಳ ಆಧಾರದ ಮೇಲೆ, ಭಾಷೆಯ ಆಧಾರದ ಮೇಲೆ ಸಂಸ್ಕೃತಿಯನ್ನು ವಿಶ್ಲೇಷಣೆ ಮಾಡಹೊರಟಿದ್ದಾರೆ. ಸಂಸ್ಕೃತಿಯನ್ನು ಸಮಾಜ-ವಿಜ್ಞಾನಗಳ ಜೊತೆಗಿಟ್ಟು ಚಿಂತಿಸಿದ್ದಾರೆ. ಸಂಸ್ಕೃತಿ ಮತ್ತು ಸಂಗೀತ, ಹೀಗೆ ಅನೇಕ ಜ್ಞಾನ ಶಾಖೆಗಳೊಂದಿಗೆ ಸಂಸ್ಕೃತಿಯನ್ನು ಚಿಂತಿಸಿದ್ದಾರೆ. ಸಮಾಜದಲ್ಲಿನ ಪ್ರತಿಯೊಂದು ಘಟಕದ 'ಸ್ವಾತಂತ್ರ್ಯ' ಜೀವನ ವಿಧಾನವನ್ನು ಗುರುತಿಸುತ್ತಾ ಸಂಸ್ಕೃತಿಯ ಪರಧಿಯಲ್ಲಿ ಸೇರಿಸಿದ್ದಾರೆ. ಕನ್ನಡ ಚಿಂತನೆಯ ಮಟ್ಟಿಗೆ ಹೇಳುವುದಾದರೆ, ಶಿಷ್ಟ ಸಂಸ್ಕೃತಿ, ಪ್ರತಿಸಂಸ್ಕೃತಿ, ಜನಪದ ಸಂಸ್ಕೃತಿ ಹೀಗೆ ಹೆಸರಿಸಬಹುದಾಗಿದೆ. ಸಂಸ್ಕೃತಿ ಅನೇಕ ಅರ್ಥಗಳ ಅಮೂರ್ತಸ್ವರೂಪ, ಇದಕ್ಕೆ ಹಲವಾರು ದೃಷ್ಟಿಕೋನಗಳಿವೆ. ಪ್ರತಿಯೊಂದು ಕೋನದಿಂದಲೂ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಬಹುದಾಗಿದೆ. ಸಂಸ್ಕೃತಿಯ ಅರ್ಥ ಪರಿಪೂರ್ಣ ಪ್ರಶ್ನಾತೀತವಾಗಿದೆ.

ಸಂಸ್ಕೃತಿ ಎಂಬುದು ದಿನ ನಿತ್ಯದ ಬದುಕಿನ ಎಲ್ಲಾ ಕ್ರಮಗಳನ್ನು ಒಳಗೊಂಡಿರುತ್ತದೆ. ಮನುಷ್ಯ ತನ್ನ ಬದುಕನ್ನು ರೂಪಿಸಿಕೊಳ್ಳಲು ಅಗತ್ಯವಾದವುಗಳನ್ನು ಒದಗಿಸುವುದೇ ಸಂಸ್ಕೃತಿ. ಪ್ರಸ್ತುತ

ಅಧ್ಯಯನವು ಸಂಸ್ಕೃತಿಗೆ ಸಂಬಂಧಿಸಿದ್ದು ಒಂದು ಸೀಮಿತ ಕ್ಷೇತ್ರವನ್ನು ಒಳಗೊಂಡಿದೆ. ಅಸ್ತಿತ್ವದಲ್ಲಿರುವ ಸುತ್ತಣ ಪರಿಸರವನ್ನು ಕೂಲಂಕುಷವಾಗಿ ಅರಿತುಕೊಳ್ಳಬೇಕೆಂಬ ಸದುದ್ದೇಶ ಈ ಯೋಜನೆಯ ಹಿನ್ನಲೆಯಾಗಿದೆ. ಜೊತೆಗೆ ಒಂದು ಮಾದರಿ ಅಧ್ಯಯನವಾಗಿಯೂ ಇದು ಮಹತ್ವವನ್ನು ಪಡೆದುಕೊಳ್ಳುವಂತೆ ಮಾಡುವ ಪ್ರಯತ್ನವಿದೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕು ಪುರಾಣ ಕಾಲದಿಂದ ಇಂದಿನವರೆಗೂ ಹಲವು ಉಲ್ಲೇಖಾರ್ಹ ವೈಶಿಷ್ಟ್ಯಗಳನ್ನು ಹೊಂದಿದೆ. ಮತ್ತು ವಿಭಿನ್ನ ಸಂಸ್ಕೃತಿ, ವೈವಿಧ್ಯಮಯ ಕಲಾ ಸಿರಿವಂತಿಕೆಯನ್ನು ಹೊಂದಿದ ಸುಂದರ ಪ್ರದೇಶ. ಈ ಕ್ಷೇತ್ರದ ಸಂಸ್ಕೃತಿ ಅಧ್ಯಯನ ಪ್ರಶ್ನಾವಳಿ ಸಿದ್ಧತೆ, ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹ, ಮಾಹಿತಿ ಜೋಡಣೆ, ಪರಿಶೀಲನೆ, ಆಕರ ಗ್ರಂಥಗಳ ಪರಾಮರ್ಶೆ, ವರದಿ ತಯಾರಿ, ಬರವಣಿಗೆ ಹೀಗೆ ವಿವಿಧ ಹಂತಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ. ಯೋಜನೆಯ ರೂಪಣೆಯಲ್ಲಿ ಸಾಕಷ್ಟು ಸ್ವಾತಂತ್ರ್ಯ ವಹಿಸಲಾಗಿದೆ. ಸೊರಬ ತಾಲೂಕಿಗೆ ಸಂಬಂಧಿಸಿದಂತೆ ಈಗಾಗಲೇ ಹಲವು ಅಧ್ಯಯನಗಳು ನಡೆದಿವೆ. ಆದರೆ ಬಹುಪಾಲು ಅಧ್ಯಯನಗಳು ರೇಣುಕಾಂಬೆಯ ಚಂದ್ರಗುತ್ತಿ ಮತ್ತು ಶಾಸನಗಳ ಅಧ್ಯಯನಕ್ಕೆ ಸೀಮಿತಿವಾಗಿವೆ. ಇತಿಹಾಸಕ್ಕೆ ಹೆಚ್ಚಿನ ಒತ್ತು ಕೊಟ್ಟವುಗಳು, ಉಳಿದ ಆಯಾಮಗಳತ್ತ ಗಮನಹರಿಸಿದ ಅಧ್ಯಯನಗಳು ಕಡಿಮೆ ಎನ್ನಬಹುದು. ನಾ. ಡಿಸೋಜರವರು ಹೊರತಂದಿರುವ 'ಸೊರಬ ತಾಲೂಕು ದರ್ಶನ'ವೆಂಬ ಚಿಕ್ಕ ಪುಸ್ತಕವೊಂದು ಈ ಪ್ರದೇಶದ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುತ್ತದೆ. ಬೇರೆ ಬೇರೆ ಸ್ಥಳೀಯ ಸಂಘ-ಸಂಸ್ಥೆಗಳು ವಿವಿಧ ಸಂದರ್ಭಗಳಲ್ಲಿ ಪ್ರಕಟಿಸಿರುವ ಸ್ಮರಣ ಸಂಚಿಕೆ ವಿಶೇಷ ಸಂಚಿಕೆಗಳಲ್ಲಿ ತಾಲೂಕಿಗೆ ಸಂಬಂಧಿಸಿದ ಅಷ್ಟಿಷ್ಟು ವಿವರಗಳನ್ನು ಶ್ರೀಪಾದ ಬಿಚ್ಚುಗತ್ತಿಯವರ ಲೇಖನಗಳು ನೀಡುತ್ತವೆ.

ಪ್ರಸ್ತುತ "ಸೊರಬ ತಾಲೂಕು : ಒಂದು ಸಾಂಸ್ಕೃತಿಕ ಅಧ್ಯಯನ"ವು ಇವೆಲ್ಲವುಗಳಿಗಿಂತ ವಿಭಿನ್ನವಾದ ಆಯಾಮವನ್ನು ಪಡೆದುಕೊಂಡಿದೆ. ಸಂಸ್ಕೃತಿಯನ್ನು ನಿರ್ಧರಿಸುವ ಭೌಗೋಳಿಕ ಲಕ್ಷಣಗಳು ವೈಶಿಷ್ಟ್ಯತೆಗೂ ಮತ್ತು ಇತಿಹಾಸದ ಜೊತೆಗೆ ತಾಲೂಕಿನ ವರ್ತಮಾನದ ಸ್ಥಿತಿ-ಗತಿಗಳಿಗೂ ಆದ್ಯತೆಯನ್ನು ನೀಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ನಗರ ಪ್ರದೇಶಕ್ಕಿಂತಲೂ ಗ್ರಾಮಾಂತರ ಪ್ರದೇಶಗಳ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಗ್ರಾಮ ಸಂಸ್ಕೃತಿ, ಜನಸಮುದಾಯ, ಕಲೆಗಳು, ಆಚರಣೆಗಳು, ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ, ಧಾರ್ಮಿಕ, ಶೈಕ್ಷಣಿಕ, ಸ್ಥಿತಿಗತಿಗಳು ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರಿಂದ ಇತ್ಯಾದಿಗಳನ್ನು ವಿಮೋಚನೆಗೆ ಒಳಪಡಿಸಲಾಗಿದೆ. ಐತಿಹಾಸಿಕ ನೆಲೆಗಳು, ಧಾರ್ಮಿಕ ಕೇಂದ್ರಗಳು, ಪ್ರಾಕೃತಿಕ ಕೇಂದ್ರಗಳು, ಭಾಷೆ ಮತ್ತು ಸಾಹಿತ್ಯ ಇವೆಲ್ಲವೂ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸಿರುವುದರಿಂದ ಇವುಗಳ ಅಧ್ಯಯನ ವೈಶಿಷ್ಟ್ಯಪೂರ್ಣವಾಗಿದೆ.

ತಾಲೂಕಿನ ಸಂಸ್ಕೃತಿ ನಾಗರಿಕತೆಯನ್ನು ಪ್ರತಿಬಿಂಬಿಸುವ ಕೆಲವು ಛಾಯಾಚಿತ್ರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಸುದೀರ್ಘವಾದ ಗ್ರಂಥಸೂಚಿಯನ್ನು ನೀಡಲಾಗಿದೆ. ಮತ್ತು ಮಾಹಿತಿ ಸಂಗ್ರಹಣಕ್ಕೆ ಸಹಾಯಕರಾದ ವಕ್ತೃ ಮಾಹಿತಿಪಟ್ಟಿ ಕೊಡಲಾಗಿದೆ. ಹೀಗೆ ಪ್ರಸ್ತುತ ಅಧ್ಯಯನವು ಒಂದು ಮಾದರಿ ಪ್ರಯತ್ನವಾಗಿದೆ.

೨.೧ ಭೌಗೋಳಿಕ ಪರಿಸರ

ಶಿವಮೊಗ್ಗ ಜಿಲ್ಲೆ ಎಲ್ಲಾ ರಂಗಗಳಲ್ಲಿ ಸಿಹಿಮೊಗೆಯನ್ನು ತೋರುತ್ತಿದೆ. ಸಹ್ಯಾದ್ರಿ ಉತ್ತುಂಗ ಪರ್ವತದಿಂದ ಕೂಡಿದ ಶಿವಮೊಗ್ಗ ಪಶ್ಚಿಮದಿಂದ ಪೂರ್ವಕ್ಕೆ ಮಲೆನಾಡು. ಅರೆ ಮಲೆನಾಡಾಗಿ ಪರಿವರ್ತಿತವಾಗಿದ್ದು, ಮಲೆನಾಡು ಪ್ರದೇಶದಲ್ಲಿ ಸೊರಬ ತಾಲೂಕು ಒಂದಾಗಿದೆ. ಆದರೆ ಈ ತಾಲೂಕಿನಲ್ಲೂ ಸೊರಬ, ಚಂದ್ರಗುತ್ತಿ ಮತ್ತು ಉಳುವಿ ಹೋಬಳಿ ಭಾಗಗಳು ಮಲೆನಾಡು ಪ್ರದೇಶವಾಗಿದ್ದರೆ, ಕುಪ್ಪಗಡ್ಡೆ, ಜಡೆ ಮತ್ತು ಆನವಟ್ಟಿ ಹೋಬಳಿ ಭಾಗಗಳು ಅರೆಮಲೆನಾಡು ಹೊಂದಿರುವ ಪ್ರದೇಶಗಳಾಗಿವೆ. ಈ ಲಕ್ಷಣ ಹೊಂದಿದ ಸೊರಬ ತಾಲ್ಲೂಕು ಈ ಜಿಲ್ಲೆಯ ಪಶ್ಚಿಮಕ್ಕೆ ಬರುತ್ತದೆ. ಭೌಗೋಳಿಕವಾಗಿ ೧೬ ಉತ್ತರ ಅಕ್ಷಾಂಶ, ೭೬ ಪೂರ್ವ ರೇಖಾಂಶದಲ್ಲಿದ್ದು, ಸಮುದ್ರ ಮಟ್ಟದಿಂದ ೫೮೦-೬೪೦ ಮೀಟರ್ ಎತ್ತರದಲ್ಲಿದೆ.

ಈ ತಾಲೂಕಿನ ಉತ್ತರಕ್ಕೆ ಹಾವೇರಿ ಜಿಲ್ಲೆಯ ಹಾನಗಲ್ಲು ಮತ್ತು ಹಿರೇಕೆರೂರು ತಾಲ್ಲೂಕುಗಳಿವೆ. ದಕ್ಷಿಣದಲ್ಲಿ ಸಾಗರ, ಪೂರ್ವದಲ್ಲಿ ಶಿಕಾರಿಪುರ ತಾಲ್ಲೂಕು, ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಶಿರಸಿ ತಾಲೂಕುಗಳಿವೆ. ಆರು ಹೋಬಳಿಗಳನ್ನು ಹೊಂದಿರುವ ಈ ತಾಲೂಕಿನ ಒಟ್ಟು ಗ್ರಾಮಗಳ ಸಂಖ್ಯೆ ಸು.೩೧೫. ಹೊಸ ಊರುಗಳು ಮತ್ತು ಬೆಳೆಯುತ್ತಿರುವ ಊರುಗಳ ಸಂಖ್ಯೆ ಸೇರ್ಪಡೆಯಾದರೆ ಈ ಸಂಖ್ಯೆ ಹೆಚ್ಚಾಗುತ್ತದೆ. ಇಲ್ಲಿಯ ಹಳ್ಳಿಗಳು ತುಂಬಾ ಆಕರ್ಷಕ. ಹರೀಶಿ, ಹುಂಬಗಳಲೆ, ಬೆನ್ನೂರು, ಪುರ, ನಾಡಹಳ್ಳಿ, ಹೊಸಬಾಳೆ, ನಿಸ್ರಾಣಿ, ದೊಡ್ಡೇರಿ, ಅಂಡಿಗೆ, ಮೂಡಿ, ದೊಡ್ಡಿ, ಕೊಪ್ಪ, ಬಾರಂಗಿ, ಹಂಚಿ, ಎಣ್ಣೆಕೊಪ್ಪ, ತವನಂದಿ, ಉದ್ರಿ ಹೀಗೆ ಎಲ್ಲ ಹೆಸರುಗಳೂ ಆಕರ್ಷಕ. ಪ್ರತಿ ಹಳ್ಳಿಗಳ ಹೆಸರುಗಳ ಹಿಂದೆ ಒಂದೊಂದು ಕತೆ ಇದೆಯೆಂದು ಹೇಳಬಹುದು.

ಸುಮಾರು ೧೧೪೭೬೭ ಹೆ. ಪ್ರದೇಶ ಹೊಂದಿರುವ ಮಲೆನಾಡು, ಅರಮಲೆನಾಡಿನ ಇಲ್ಲಿ ಮರಳು ಮಿಶ್ರಿತ ಎರೆಮಣ್ಣು ಮರಳು ಮಿಶ್ರಿತ ಜಂಬಿಟ್ಟಿಗೆ, ಕೆಂಪು ಮಸ್ಸೂರಿ ಮಣ್ಣನ್ನು ಗ್ರಾನೈಡ್ ಶಿಲಾಪದರವನ್ನು ಒಳಗೊಂಡಿದೆ. ಇಲ್ಲಿ ಅರಣ್ಯ ಪ್ರದೇಶ ೨೬.೨೬೨ ಹೆಕ್ಟೇರು, ತಾಲೂಕಿನಲ್ಲಿ ವಲಯವಾರು ಅರಣ್ಯ ಪ್ರದೇಶ ನೋಡಿದಾಗ ಆನವಟ್ಟಿ ವಲಯದಲ್ಲಿ ೧೮ ಹೆಕ್ಟೇರು ಪ್ರದೇಶ ಸಾಗುವಳಿಗೆ ಲಭ್ಯವಾಗಿಲ್ಲ. ೨೪.೩೩೮ ಹೆಕ್ಟೇರಿನಷ್ಟು ಜಮೀನು ಸಾಗುವಳಿ ಮಾಡದೆ ಇರುವ ಪ್ರದೇಶ.

೨೩.೬೮೯ ಹೆಕ್ಟರೇ ಬೀಳು ಜಮೀನು ಈ ತಾಲೂಕಿನಲ್ಲಿದೆ. ೨೦೦೧-೨೦೦೨ರ ಅಂಕಿ ಅಂಶಗಳ ಪ್ರಕಾರ ೨೩,೭೧೪ ಹೆಕ್ಟೇರುಗಳಷ್ಟು ಜಮೀನನ್ನು ಈ ತಾಲೂಕಿನಲ್ಲಿ ಕೆರೆ, ಬಾವಿ(ಪಂಪಸೆಟ್) ಇತರ ಜಲಮೂಲಗಳಿಂದ ಸಾಗುವಳಿ ಸಾಗಿದೆ. ಫಲವತ್ತಾದ ಮಣ್ಣು ಹೊಂದಿರುವ ಇಲ್ಲಿನ ವಾಡಿಕೆ ಮಳೆ ವರ್ಷಕ್ಕೆ ಸರಾಸರಿ ಸು.೧೬೭೫ ಮೀಟರುಗಳಷ್ಟು. ಮುಖ್ಯ ಬೆಳೆ ಭತ್ತ ನಂತರ ರಾಗಿ, ಹತ್ತಿ, ಕಡಲೆ, ತೊಗರಿ, ಕಬ್ಬು, ಸೂರ್ಯಕಾಂತಿ, ಸಾಂಬಾರ ಪದಾರ್ಥಗಳು, ಅನಾನಸ್ ಹಣ್ಣು, ಮಾವು, ತರಕಾರಿಗಳು, ದ್ವಿದಳ ಧಾನ್ಯಗಳು, ಅಡಿಕೆ, ತೆಂಗು ಬಾಳೆಗಳನ್ನು ಬೆಳೆಯುತ್ತಾರೆ. ಅಡಿಕೆ ಪ್ರಮಾಣ ಇತ್ತೀಚೆಗೆ ಗಣನೀಯವಾಗಿದೆ. ಕೃಷಿಕನಿಗೆ ಬೆನ್ನೆಲುಬಾಗಿರುವ ತಾಲೂಕಿನ ಕೆರೆಗಳ ಸಂಖ್ಯೆ ಸುಮಾರು ೧೧೯೦. ೭ನೇ ಶತಮಾನದಿಂದ ೧೮ನೇ ಶತಮಾನದವಧಿಯ ಈ ಕೆರೆಗಳು ಕೃಷ್ಣಾ ಹಾಗೂ ವೆಸ್ಟ್ ಕೋಸ್ಟ್ ಪಾತ್ರಕ್ಕೆ ಸೇರಿವೆ. ೧೨೦ಕ್ಕೂ ಹೆಚ್ಚು ಕೆರೆಗಳು ೪೦ ಹೆ.ಗಿಂತ ಹೆಚ್ಚಿನ ಆಯಕಟ್ಟಿಗೆ ಸೇರಿವೆ.

ಸೊರಬ ತಾಲೂಕಿನ ವಿಸ್ತೀರ್ಣ ೧೧೧೩.೭.೬ ಚದುರ ಕಿಲೋಮೀಟರ್. ಈ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಸಂಖ್ಯೆ ೨೦೦೧ರ ಪ್ರಕಾರ ಜನಗಣತಿಯ ಪ್ರಕಾರ ೧,೭೮,೨೪೩ ಇದು ೧೯೮೧ರಲ್ಲಿ ೧,೪೦,೩೧೦ ಇತ್ತು. ೧೯೨೧ರಲ್ಲಿ ಸೊರಬ ತಾಲೂಕಿನ ಆರು ಹೋಬಳಿಗಳಲ್ಲಿ ಇರುವ ಒಟ್ಟು ಜನ ೫೮,೯೦೨ ಮೈಸೂರು ಗೆಜೆಟಿಯರ ಪ್ರಕಾರ ಇದನ್ನು ಗುರುತಿಸಿದೆ. ೮೦ ವರ್ಷಗಳಲ್ಲಿ ಹೀಗೆ ಹೆಚ್ಚಿದೆ ಎಂಬುದು ಕುತೂಹಲದ ವಿಷಯ.

ಸೊರಬ ತಾಲೂಕಿನ ಜನಸಾಂದ್ರತೆ ಪ್ರತಿ ಚದುರ ಕಿಲೋಮೀಟರ್‌ಗೆ ೧೨೩ರಷ್ಟು ಇದ್ದು, ಹಿಂದೂಗಳನ್ನು, ಮುಸ್ಲಿಮರನ್ನು, ಕ್ರೈಸ್ತರನ್ನು ಒಳಗೊಂಡಿದೆ. ಹಿಂದೂಗಳಲ್ಲಿ ಎಲ್ಲಾ ಪಂಗಡದವರೂ ಕಂಡುಬರುತ್ತಾರೆ. ರೈತಾಪಿ ಜನರಾದ ದೀವರು (ಈಡಿಗರು) ಅಧಿಕ ಸಂಖ್ಯೆಯಲ್ಲಿ ಇದ್ದಾರೆ, ಉಡುಗೆ ತೊಡುಗೆ ಮಾತು ಪ್ರತಿಯೊಂದರಲ್ಲೂ ವೈಶಿಷ್ಟ್ಯ ಉಳ್ಳವರು ಈ ಜನ. ಅಡಿಕೆ ತೋಟಗಳ ಮಾಲೀಕರಾದ ಹವೀಕರದ್ದು ಕೂಡ ಇನ್ನೊಂದು ವೈಶಿಷ್ಟ್ಯಪೂರ್ಣಗುಂಪು. ಈ ಅಡಕೆ ತೋಟಗಳಲ್ಲಿ ಕೆಲಸ ಮಾಡುವ ಹಸಲರುಗಳದ್ದು ಒಂದು ಗುಡ್ಡಗಾಡು ಜನಾಂಗ. ಇವರನ್ನು ಒಂದು ಕಾಲದಲ್ಲಿ ಹುಟ್ಟಾಳುಗಳು, ಜೀತದಾಳುಗಳು ಎಂದು ಕರೆಯುತ್ತಿದ್ದರು. ಈಗ ಇವರೆಲ್ಲ ಜೀತಮುಕ್ತರು. ಇನ್ನು ಹರಿಜನರು, ಬೆಸ್ತರು, ಗಂಗಾಮತಸ್ತರು, ಭೋವಿ, ಉಪ್ಪಾರ, ಮ್ಯಾದರು, ಗುಡಿಗಾರರು, ಲಂಬಾಣಿಗಳು, ಈ ತಾಲೂಕಿನಲ್ಲಿದ್ದಾರೆ.

ಸಹ್ಯಾದ್ರಿ ಪರ್ವತ ಶ್ರೇಣಿ ಸೊರಬ ತಾಲೂಕಿನಿಂದ ತೀರ್ಥಹಳ್ಳಿ ತಾಲೂಕಿನವರೆಗೆ ಗೋಡೆಯಂತೆ ನಿಂತಿರುವುದರಿಂದ ಇಲ್ಲಿ ಕಾಡು ಹೆಚ್ಚು. ಸೊರಬದ ವನವು ಒಂದು ಕಾಲದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಚಂದ್ರಗುತ್ತಿ ಕಾನು ದಟ್ಟವಾದದ್ದು. ಶ್ರೀಮಂತವಾದದ್ದು ಆಗಿತ್ತು. ಇಂದಿಗೂ ತಾಲೂಕಿನಲ್ಲಿ ನೇರಳೆ, ಶಿವನಿ, ಕರಿಮರ, ನಂದಿ, ಹೊನ್ನೆ, ಮತ್ತಿ, ಆಲ, ದಿಂಡಿಗಾ, ಬೀಟೆ, ಸಂಪಿಗೆ, ಹೊಂಗೆ, ಧೂಪ ಮೊದಲಾದ ಬೆಲೆಬಾಳುವ ಮರಗಳು ಬೆಳೆಯುತ್ತವೆ. ಪಲ್ಲಕ್ಕಿಗಳಿಗೆ ಬೇಕಾಗುವ ಬಿದಿರು ಚಂದ್ರಗುತ್ತಿಯಲ್ಲಿ

ದೊರೆಯುತ್ತದೆ. ಎಲೆ ಬಿದಿರನ್ನು ಬೇಕಾದ ಆಕಾರಕ್ಕೆ ಬಗ್ಗಿಸಿಟ್ಟು ಅದನ್ನು ಬೆಳೆದ ನಂತರ ಕೊಂಡೊಯ್ಯುವ ಒಂದು ವ್ಯವಸ್ಥೆ ಕೂಡ ಇಲ್ಲಿದೆ. ಇಷ್ಟೆಲ್ಲ ವನಸಂಪತ್ತು ಪಡೆದಿರುವ ಈ ತಾಲೂಕಿನಲ್ಲಿ ವರ್ಷಕ್ಕೆ ಬೀಳುವ ಮಳೆಯ ಪ್ರಮಾಣವನ್ನು ಸೊರಬ, ಆನವಟ್ಟಿ, ಕುಪ್ಪಗಡ್ಡೆ, ಚಂದ್ರಗುತ್ತಿ, ಉಳವಿ ಹಾಗೂ ಜಡೆಗಳಲ್ಲಿರುವ ಮಳೆಮಾಪಕ ಯಂತ್ರಗಳಿಂದ ಗುರುತಿಸಲಾಗುತ್ತದೆ ಚಂದ್ರಗುತ್ತಿ ಬೆಟ್ಟವು ತಾಲೂಕಿನ ಅತಿ ಎತ್ತರದ ಬೆಟ್ಟವಾಗಿದೆ. ಇದು ಸು.೮೪೪ ಮೀಟರ್ ಎತ್ತರವಿದೆ.

ವರದಾ ಮತ್ತು ದಂಡಾವತಿ ಸೊರಬ ತಾಲೂಕಿನ ಮುಖ್ಯ ನದಿಗಳು. ವರದಾ ಸಾಗರ ತಾಲ್ಲೂಕಿನ ವರದಾ ಮೂಲದಲ್ಲಿ ಹುಟ್ಟಿ, ಸೊರಬ ತಾಲೂಕಿನಿಂದ ಶಿರಸಿ ತಾಲೂಕಿಗೆ ಹರಿದು, ಮತ್ತೆ ಸೊರಬ ತಾಲೂಕನ್ನು ಪ್ರವೇಶಿಸಿ ಮುಂದೆ ಹಾವೇರಿ ಜಿಲ್ಲೆಯ ಹಾನಗಲ್ಲನ್ನು ಪ್ರವೇಶಿಸಿ ಹರಿದು ಹೋಗುತ್ತದೆ. ಕುಪ್ಪೆ ಎಂಬಲ್ಲಿ ಹುಟ್ಟಿದ ದಂಡಾವತಿ ನದಿ ಮುಂದೆ ವರದಾ ನದಿಯನ್ನು ಸೇರಿಕೊಳ್ಳುವುದು. ಅಲ್ಲದೆ ನಾಗರಹಳ್ಳ, ಗುಡ್ಡಿಹಳ್ಳ, ಕನ್ನನಮನೆಹಳ್ಳ, ಕುಪ್ಪೆಹಳ್ಳ ಮುಂತಾದ ಸಣ್ಣ-ಪುಟ್ಟ ಹಳ್ಳಗಳೂ ಈ ತಾಲೂಕಿನಲ್ಲಿವೆ. ಕೆರೆ, ಬಾವಿಗಳಿಗೂ ಅಭಾವವಿಲ್ಲ. ಸು.೧೮ ಸಾವಿರ ಹೆಕ್ಟೇರುಗಳಿಗೆ ನೀರುಣಿಸುವ ೮೦೩ ಸಣ್ಣ ಕೆರೆಗಳನ್ನು ಒಂದು ಸಾವಿರ ಹೆಕ್ಟೇರುಗಳಿಗೆ ನೀರು ಹಾಯಿಸಬಹುದಾದ ೨೧ ಅಣೆಕಟ್ಟುಗಳು, ೪೦೦ ಹೆಕ್ಟೇರುಗಳಿಗೆ ನೀರು ಸರಬರಾಜು ಮಾಡುವಂತಹ ಮೂರು ಏತ ನೀರಾವರಿ ಯೋಜನೆಗಳು ಈ ತಾಲೂಕಿನಲ್ಲಿವೆ. ಈ ರೀತಿಯ ಕಾರ್ಯರೂಪವನ್ನು ೧೯೮೫ರಲ್ಲಿ ಕಂಡುಬಂದಿತ್ತು. ವರ್ತಮಾನದ ಈ ದಿನಮಾನಗಳಲ್ಲಿ ಪಂಪಸೆಟ್‌ಗಳ ಸಂಖ್ಯೆ ಹೆಚ್ಚಾಗಿದ್ದು ಕೆರೆಗಳಲ್ಲಿ ನೀರು ಸಂಗ್ರಹಣೆ ಇಲ್ಲದಾಗಿದೆ. ಅಣೆಕಟ್ಟು ಮತ್ತು ನೀರಾವರಿ ಯೋಜನೆಗಳ ಕಾರ್ಯರೂಪವು ಕುಂಠಿತವಾಗಿದೆ. ತಾಲೂಕಿನಲ್ಲಿ ಯಾವುದೇ ಲೋಹಗಳು ಸಿಗುವ ಬಗ್ಗೆ ಮಾಹಿತಿ ದೊರಕಿಲ್ಲ. ಆದರೆ ತೋಟಲಿಂಗಂದನ ಹಳ್ಳಿಯಲ್ಲಿ ಸಾಕಷ್ಟು ಕೆಮ್ಮಣ್ಣು ದೊರೆಯುತ್ತಿತ್ತು ಎಂದು ಹೇಳಲಾಗಿದೆ.

ಚಂದ್ರಗುತ್ತಿಯಲ್ಲಿ ಇರುವ ಬೆಟ್ಟದ ಮೇಲಿನಿಂದ ಕಲ್ಲನ್ನು ಯಥೇಚ್ಛವಾಗಿ ತೆಗೆಯಲಾಗುತ್ತಿದೆ. ಇಲ್ಲಿ ತೆಗೆಯಲಾಗುವ ಕುಪ್ಪಜಲ್ಲಿ ಹಾಗೂ ಬಿಳಿಕಲ್ಲು ಆನವಟ್ಟಿ ಹೋಬಳಿಗಳಲ್ಲಿ ದೊರಕುವ ಕಬ್ಬಿಣದ ಕಲ್ಲು ಕೂಡ ಪ್ರಯೋಜನಕಾರಿಯೆ, ಚಂದ್ರಗುತ್ತಿ ಮೇಲೆ ತೆಗೆಯುವ ಕಲ್ಲು ಚಂದ್ರಗುತ್ತಿ ಕಲ್ಲೆಂದು ಹೆಸರುವಾಸಿಯಾಗಿದೆ.

ಇಲ್ಲಿ ಹವಾಮಾನ ನೋಡಿದಾಗ ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಮಳೆ. ನಂತರ ಚಳಿಗಾಲ ಆರಂಭವಾಗಿ ಡಿಸೆಂಬರ್ ನಿಂದ ಫೆಬ್ರವರಿಯವರೆಗೆ ಚಳಿ ಕೊರೆಯುತ್ತದೆ. ನಂತರ ಬಿಸಿಲಿನ ಪ್ರಖರತೆ ಹೆಚ್ಚು. ಸೊರಬ ತಾಲೂಕಿನಲ್ಲಿಯ ಬಿಸಿಲು ಹೊಸನಗರ, ತೀರ್ಥಹಳ್ಳಿ, ಸಾಗರಗಳಲ್ಲಿಗಿಂತ ಹೆಚ್ಚು ಎಂದು ಹೇಳಬಹುದು. ಏಕೆಂದರೆ ಸೊರಬದ ಪೂರ್ವಕ್ಕೆ ಹಾಗು ಉತ್ತರಕ್ಕೆ ಅರೆಮಲೆನಾಡು, ಮೈದಾನ ಪ್ರದೇಶಗಳು ಬರುತ್ತವೆ. ಬಿಸಿಲು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹೆಚ್ಚು ಇರುವುದನ್ನು

ಕಾಣುತ್ತೇವೆ. ಒಣ ಹವೆಯು ಸಾಮಾನ್ಯವಾಗಿ ಅಹಿತಕರಣವಾಗಿರುತ್ತದೆ. ಜೂನ್ ತಿಂಗಳಿನಲ್ಲಿ ಹೆಚ್ಚಿನ ತೇವಾಂಶ ಮತ್ತು ಉಷ್ಣಾಂಶದಿಂದ ಹವೆಯೂ ಕೂಡಿರುತ್ತದೆ. ಮುಂದಿನ ಮೂರು ತಿಂಗಳುಗಳು ಜುಲೈ ಅಗಸ್ಟ್ ಮತ್ತು ಸೆಪ್ಟೆಂಬರ್‌ದಂದು ತೇವಾಂಶವು ಹೆಚ್ಚಾಗಿರುವುದು. ಮುಂದುವರಿದರೂ ದಿನದ ಉಷ್ಣಾಂಶ ಕಡಿಮೆಯಾಗುವುದರಿಂದ ಸ್ವಲ್ಪ ಮಟ್ಟಿಗೆ ನೆಮ್ಮದಿ ತರುತ್ತದೆ.

ಸೊರಬ ತಾಲೂಕಿನ ಭೂಮಿಯ ಮೇಲ್ಮೆಯು ಸಮತಟ್ಟಾಗಿಲ್ಲ. ಭೂಮಿಯ ಇಳಿಜಾರಿನ ಪ್ರಮಾಣವು ಸ್ಥಳದಿಂದ ಸ್ಥಳಕ್ಕೆ ಬದಲಾಗಿದ್ದನ್ನು ಕಾಣಬಹುದು. ಆನವಟ್ಟಿ-ಚಂದ್ರಗುತ್ತಿ-ಉಳವಿ ಮೊದಲಾದ ಪ್ರದೇಶಗಳ ಭೂಮೇಲ್ಮೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಸೊರಬದಲ್ಲಿ ಕೆಲವು ಭಾಗಗಳ ಪ್ರದೇಶಗಳು ನೈಸರ್ಗಿಕ ಸಂಪತ್ತನ್ನು ಹೆಚ್ಚು ಹೊಂದಿ ಮಲೆನಾಡು ಎನಿಸಿದರೆ ಕೆಲವು ಭಾಗದ ಪ್ರದೇಶಗಳು ನೈಸರ್ಗಿಕ ಸಂಪತ್ತನ್ನು ಕಡಿಮೆ ಹೊಂದಿ ಅರಮಲೆನಾಡು ಎನಿಸಿವೆ. ಈ ವಿಭಿನ್ನತೆ ಜನರ ಸಾಮಾಜಿಕ ವ್ಯವಸ್ಥೆಯಲ್ಲೂ ಬೇರೆಯಾಗಿಸಿರುವುದನ್ನು ಗುರುತಿಸಬಹುದು. ಶ್ರೀಮಂತ ಸಾಂಸ್ಕೃತಿಕ ಪರಂಪರೆಯಿಂದ ಕೂಡಿದ ಈ ಪ್ರದೇಶ ಸಾಹಿತ್ಯ, ಲಲಿತಕಲೆ, ಧರ್ಮ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿಯು ಅಷ್ಟೇ ಮುಖ್ಯವೆನಿಸಿಕೊಂಡಿದೆ.

೨.೨. ಐತಿಹಾಸಿಕ ಹಿನ್ನಲೆ

ಈ ತಾಲೂಕಿನಲ್ಲಿ ಪ್ರಾಗೈತಿಹಾಸದ ಹಿನ್ನಲೆಯನ್ನು ಗಮನಿಸಿದಾಗ ಕ್ರಿ.ಪೂ.೨೦೦೦ದಷ್ಟು ಹಳೆಯದಾದ ನವಶಿಲಾಯುಗದ ಅವಶೇಷಗಳು ವಿರಳವಾಗಿ ಜೇಡಿಗೆರೆ, ಕಿರುಗುಣಿಸೆ, ತಾವರೇಹಳ್ಳಿ, ಯಲಗಿ ಭಾಗಗಳಲ್ಲಿ ಕಂಡುಬಂದಿದೆ. ಈ ಪ್ರದೇಶದಲ್ಲಿ ಹೊಸಶಿಲಾಯುಗ ನೆಲೆಗಳು ೫೦ ಹಾಗೂ ಹಳೆಶಿಲಾಯುಗ ನೆಲೆಗಳು ೫೦ ಇರುವುದು ಕಂಡುಬಂದಿದೆ. ಸಮುದ್ರ ಮಟ್ಟದಿಂದ ೫೮೦ ಮೀಟರ್ ಎತ್ತರದಲ್ಲಿರುವ ಈ ತಾಲ್ಲೂಕು ಸು.೮೦೦ ಶಾಸನಗಳನ್ನು ಒಳಗೊಂಡಿದೆ. ಇದರ ಹಿನ್ನಲೆಯಲ್ಲಿ ಐತಿಹಾಸಿಕ ಹಿನ್ನಲೆ ತಿಳಿಯಲು ಸಾಧ್ಯವಾಗಿದೆ. ದೇಗುಲಗಳು, ಬಸದಿಗಳು, ಅಗ್ರಹಾರಗಳು, ಐತಿಹಾಸಿಕ ಮಹತ್ವವನ್ನು ಪಡೆದಿವೆ. ಹೀಗಿರುವ ಈ ಪ್ರದೇಶ ಪ್ರೇಕ್ಷಣೆಯ ನಾಡಾಗಿ ಗುರುತಿಸಿಕೊಂಡಿದೆ. ಯಾವ ಅರಸರ ಕಾಲದ ಆಡಳಿತ ಇಲ್ಲಿ ನೆಲೆಯೂರಿ ಇತಿಹಾಸವನ್ನು ನಿರ್ಮಿಸಿದೆ ಎಂಬುದರ ಚರ್ಚೆ ಅಗತ್ಯವಿದೆ.

ಇತಿಹಾಸದ ಕಾಲಕ್ಕೆ ಈ ಭಾಗ ಬನವಾಸಿ ಪನ್ನಿಚ್ಛಾಸಿರ ವಿಭಾಗದಲ್ಲಿತ್ತು. ಅದರ ವಿಭಾಗಗಳು ಒಟ್ಟು ಐದು. ಅವು ಎಡೆನಾಡು-೭೦, ಜಿಡ್ಡುಗಳಿಗೆ-೭೦, ನಾಗರಖಂಡ-೭೦, ಗುತ್ತಿ-೧೮, ಗೆದೆಯ-೧೨ ಇನ್ನುವಾಡಿಕೆಯಲ್ಲಿ ಸೀಮೆ ಹೆಸರಿನಿಂದ ಗುರುತಿಸುವ ಪದ್ಧತಿಯೂ ಇತ್ತು. ಇನ್ನು ಇತಿಹಾಸ ಕಾಲದ ಆಧಾರ ಸಹಿತ ಸಂಪನ್ಮೂಲವೆಂದರೆ ಇದುವರೆಗೂ ಲಭ್ಯವಾದ ೮೦೦ಕ್ಕೂ ಮಿಕ್ಕ ಶಾಸನ ಬರಹಗಳು. ತಾಲೂಕಿನ ಮೊದಲ ಶಾಸನ ಮೃಗೇಶವರ್ಮನ ಹಿರೇಶಕುನದ ಶಾಸನ. ಅಂದರೆ ಸುಮಾರು ೪ನೇ

ಶತಮಾನದ ತನಕವೂ ಶಾಸನಗಳ ಬೆಳವಣಿಗೆ ಗುರುತಿಸಬಹುದು. ಕುಬಟೂರಿನ ಶಾಸನವೊಂದು ಮೌರ್ಯ, ಶಾತವಾಹನರು ಇಲ್ಲಿ ಆಳ್ವಿಕೆ ನಡೆಸಿದ್ದರು ಎಂದು ಹೇಳುತ್ತಿದೆಯಾದರೂ ಪ್ರಬಲ ಆಧಾರದ ಕೊರತೆ ಇದೆ.

ಈ ಪ್ರದೇಶದಿಂದ ಸುಮಾರು ೧೦ನೇ ಶತಮಾನದ ಆರಂಭದಲ್ಲಿ ಹೆಚ್ಚೆ(ಆಗಿನ ಹೆದ್ದೆಸೆ) ಅರಸರು ಸುಮಾರು ೨೦೦ ವರ್ಷ ಆಳ್ವಿಕೆ ನಡೆಸಿದ್ದಾರೆ. ಹೆಚ್ಚೆ ಅರಸರದು ಮೂಲತಃ ಸಾಮಂತ ಮನೆತನ. ಶಾಸನಗಳು ಇವರನ್ನು ಸಾಮಂತಾಧಿಪತಿಗಳೆಂದೇ ಕರೆದಿವೆ. ಇವರು ಮಾಟೂರ ವಂಶಕ್ಕೆ ಸೇರಿದವರು.

ಹೆಚ್ಚೆ ಅರಸರ ವಂಶಾವಳಿ ವಿವರ

ದೋಸಿ-ಸಿನ್ದ-ಪ್ರಿಯಾಗರ-ಮಾಚಿ-ಶಾಂತಿವರ್ಮ

|

ಪಯ್ಯರ

|

ಸಿರಿಯಾಗರ

|

ಸಾಂತಯ್ಯ

|

ಆಲಯ್ಯ-ಜಯಸಿಂಘು

|

ಸತ್ಯಾಶ್ರಯ

|

ವಿಜಯಾದಿತ್ಯ

ಹಲವಾರು ಮೂಲಗಳಿಂದ ಈ ವಂಶಾವಳಿಯನ್ನು ಗುರುತಿಸಲಾಗಿದ್ದು ಕ್ರಿ.ಶ.೧೦೧೭ರ ಒಂದು ಶಾಸನ ಸೂಚಿಸಿದ ಈ ವಂಶದ ದೋಸಿ ಹಾಗೂ ಸಿನ್ದನನ್ನು ಶಾಸನಧಾರದ ಕೊರತೆಯಿಂದ ಇಲ್ಲಿ ಪ್ರಸ್ತಾಪಿಸುತ್ತಿಲ್ಲ. ಕ್ರಿ.ಶ.೯೦೩ರ ಕೆರೆಹಳ್ಳಿ ಶಾಸನವೇ ಮೊದಲಿಗೆ ಈ ವಂಶದ ಪ್ರಿಯಾಗರನನ್ನು ಹೆಸರಿಸಿದೆ.[೨]

ಪ್ರಿಯಾಗರ : ಕ್ರಿ.ಶ.೯೦೩ರ ಶಾಸನದನ್ವಯ ಈತ ಎಡೆನಾಡನ್ನಾಳುತ್ತಿದ್ದುದು ಸ್ಪಷ್ಟವಾಗಿದೆ. ಈ ಸಮಯದಲ್ಲಿ ಇದೇ ಗ್ರಾಮದ ಬೀರನೆಂಬುವವನು ಈ ಶಾಸನವನ್ನು ಇರಿಸಿದಂತಿದೆ. ಈತನ ತಂದೆ ಇಲ್ಲಿಯೇ ಒಂದು ಕೆರೆ ಹಾಗೂ ದೇಗುಲ ನಿರ್ಮಿಸಿದ್ದನು. ಇದನ್ನು ಶಾಸನದ ಮಾಹಿತಿಯೆಂದು ಪರಿಗಣಿಸಬೇಕಾಗಿದೆ. ಪ್ರಸ್ತುತ ಇದೊಂದು ವೀರಗಲ್ಲು. ತನ್ನ ತಂದೆ ಗುಲಗಣ್ಣಕನ ನೆನಪಿಗಾಗಿ ಮಗ ಬೀರ ಈ ಶಾಸನ ಬರೆಸಿದಂತಿದೆ.[೩]

ಮಾಚಿ ಅರಸ : ಕ್ರಿ.ಶ.೯೦೪ರವರೆಗೆ ಮಾಟೂರ ಅರಸರ ಕುರಿತು ಯಾವುದೇ ಶಾಸನಗಳು ಕಂಡುಬರುವುದಿಲ್ಲ. ಕ್ರಿ.ಶ.೯೩೧ರಲ್ಲಿ ಅರಳೀಕಟ್ಟೆಯ ತೃಚಿತ, ರಾಷ್ಟ್ರಕೂಟ, ನಾಲ್ಕನೆಯ ಗೋವಿಂದನ ಕಾಲದ ಶಾಸನವೊಂದು ಈ ವಂಶದ ಮಾಚಿಯನ್ನು ಹೆಸರಿಸಿದೆ.[೪]

ಶಾಂತಿವರ್ಮ : ಮಾಚಿಗನ ಕಾಲಕ್ಕೇ ಈತ ಎಡೆನಾಡ ಭಾಗದ ಮುಖ್ಯ ಆಡಳಿತಗಾರನಾಗಿ ಅಧಿಕಾರ ವಹಿಸಿಕೊಂಡಂತೆ ಕಂಡುಬರುತ್ತದೆ. ಇವನ ಕುರಿತು ಮೊದಲ ಶಾಸನ ದೇವಗೇರಿ ಗ್ರಾಮದ್ದು[೫] ಶಾಂತಿವರ್ಮನು ಕ್ರಿ.ಶ.೯೫೮ರಲ್ಲಿ ಆಳ್ವಿಕೆ ನಡೆಸುತ್ತಿದ್ದುದು ಸ್ಪಷ್ಟವಾಗಿದೆ. ಎಡೆನಾಡ ಭಾಗದ ಹೆಚ್ಚೆಯ ಕ್ರಿ.ಶ.೯೭೨ರ ಶಾಸನವೊಂದು ದೇವ ಶಾಸನದಂತೆ ವಿಶಿಷ್ಟ ವಿಷಯವನ್ನು ಉಲ್ಲೇಖಿಸಿದೆ.[೬] ಇದು ರಾಷ್ಟ್ರಕೂಟರ ಕಾಲದ ಕೊನೆಯ ಅರಸನಾದ ಕರ್ಕನ ಕೊನೆಕಾಲದ ಶಾಸನ 'ಆಕಟೆ' ಎಂಬಾತ ಶಾಂತಿವರ್ಮನಿಗೆ ಪುತ್ರ ಸಂತಾನವಾದರೆ ತನ್ನ ಶಿರವನ್ನು ಕುಂದದಬ್ಬೆ ಉದರದಲ್ಲಿ ಒಪ್ಪಿಸುತ್ತೇನೆಂದು, ನಂತರ ಶಾಂತಿವರ್ಮನಿಗೆ ಪುತ್ರ ಸಂತಾನವಾಗಿ ಅದೇ ರೀತಿ ವರ್ತಿಸುತ್ತಾನೆ. ಅದಕ್ಕೆ ಮೆಚ್ಚಿದ ಶಾಂತಿವರ್ಮ ಎಲಸಿಯ ಮಹಾಜನರ ಸಮ್ಮುಖದಲ್ಲಿ ಆತನ ವಂಶಕ್ಕೆ ಭೂದಾನ ನೀಡುತ್ತಾನೆ. ಶಾಂತಿವರ್ಮ ಕ್ರಿ.ಶ.೯೫೮ರ ಹೊತ್ತಿಗೆ ಈ ಬೆಳ್ಳುಗೆ ಭಾಗಕ್ಕೆ ಪ್ರವೇಶಿಸಿದ್ದ ಆದಾಗ್ಯೂ ಈ ಹೊತ್ತಿಗೆ ಅವನ ಆಳ್ವಿಕೆ ಆ ಭಾಗದಲ್ಲಿ ಇದ್ದುದ್ದಕ್ಕೆ ಆಧಾರವಿಲ್ಲ.

ಈ ಎಲ್ಲ ಶಾಸನಗಳನ್ವಯ ಶಾಂತಿವರ್ಮ ಮಾಟೂರ ಅರಸರುಗಳಲ್ಲಿಯೇ ಬಲಿಷ್ಠನೆನಿಸುತ್ತಾನೆ. ಈತ ಸುದೀರ್ಘ ೨೬ ವರ್ಷಗಳಷ್ಟು ಕಾಲ ರಾಜ್ಯಭಾರ ಮಾಡಿದಂತೆ ಕಂಡುಬರುತ್ತದೆ. ಶಾಸನಗಳು ಈತನನ್ನು ವೈರಿ ಮಾರ್ತಾಂಡ, ವಿಕ್ರಮ ಸಿಂಘ, ಸುಭಟ ಚೂಡಾಮಣಿ, ತೇಜಾಗರ, ಸತ್ಯರತ್ನಾಗರ ಎಂದೆಲ್ಲ ಹೊಗಳಿವೆ. ಈತ ತನ್ನ ಎಡೆನಾಡ ವ್ಯಾಪ್ತಿಯ ಅಳ್ವಿಕೆಯ ಕೇಂದ್ರವನ್ನು ಹೆಚ್ಚಾಗಿ ಈ ಹೆದ್ದಸೆ(ಹೆಚ್ಚೆ)ಯಲ್ಲೇ ಮಾಡಿಕೊಂಡಿದ್ದ ಎನಿಸುತ್ತದೆ.

ಜಯಸಿಂಘದೇವ : ಕ್ರಿ.ಶ.೧೦೩೨ರ ಒಂದು ಶಾಸನವನ್ನು ಬಿ.ಎಲ್.ರೈಸರು ಆಲಯ್ಯನ ಶಾಸನ ಎಂದಿದ್ದಾರೆ.[೭] ಈ ಶಾಸನದಲ್ಲಿಯೇ ಆತನ ಮಗ ಜಯಸಿಂಘನ ಉಲ್ಲೇಖವಿದೆ. ಈ ಶಾಸನ ಸಮಸ್ತ ಶಾಸ್ತ್ರ ಪಾರಾವಾರ, ಗಣಿಕಾಮನೋಜ, ಅಶ್ವವಿದ್ಯಾದಿತ, ಪಾಕಶಾಸನ, ಗೀತಕಂಜಾಸನ, ವಿವಿಧ ಬುಧ ಮಾಗಧ ಚಿಂತಾಮಣಿ ಇನ್ನು ಮುಂತಾಗಿ ತದನಂತರ ಈತನ ಶೌರ್ಯವನ್ನು ಹೊಗಳುತ್ತ ಅನೇಕ ಮನ್ನೆಯ ಅರಸರನ್ನು ಸಾಮಂತ, ಮಾಂಡಳೀಕರನ್ನು, ಮಲೆ ಅರಸರನ್ನು, ಬೇಡ, ಕುರುಬರನ್ನು ಹತ್ತಿಕ್ಕಿದ್ದ ಎಂದಿದೆ. ಮುಂದೆ ತನ್ನ ಮುಂದೆ ಆಲಯ್ಯನ ನೆನಪಿಗಾಗಿ ಕುಪ್ಪಗಡ್ಡೆಯಲ್ಲಿ ಆಲೇಶ್ವರ ನಿರ್ಮಿಸಿ ಎಡೆನಾಡ ಬಳಿಯ 'ಗೆದೆಯ' ಗ್ರಾಮವನ್ನು ದೇವರ ನಿತ್ಯ ನೈಮಿತ್ಯಗಳಿಗಾಗಿ ದಾನಬಿಟ್ಟ ಉಲ್ಲೇಖ ಬರುತ್ತದೆ. ಆಲಯ್ಯನ ಜಯಸಿಂಘದೇವನೂ ತೀರಾ ಕಡಿಮೆ ಅವಧಿ ಆಡಳಿತ ನಡೆಸಿದಂತೆ ಕಂಡುಬರುತ್ತದೆ. ಕ್ರಿ.ಶ.೧೦೪೦ರ ಹೊತ್ತಿಗೆ ಮತ್ತೆ ಕದಂಬರು ಈ ಭಾಗವನ್ನು ಆಕ್ರಮಿಸಿಕೊಂಡಿರುವ ದಾಖಲೆಯಿದೆ.

ಸತ್ಯಾಶ್ರಯ : ಕ್ರಿ.ಶ.೧೦೩೩ರಲ್ಲಿ ಕಾಣಿಸಿಕೊಂಡ ಜಯಸಿಂಘದೇವನ ನಂತರ ಸುಮಾರು ಇಪ್ಪತ್ನಾಲ್ಕು ವರ್ಷಗಳ ನಂತರ ಅಂದರೆ ಕ್ರಿ.ಶ.೧೦೫೭[೮] ಶಾಸನವೊಂದರಲ್ಲಿ ಈ ವಂಶದ ಸತ್ಯಾಶ್ರಯನ ಉಲ್ಲೇಖ ಸಿಗುತ್ತದೆ.

ವಿಜಾಯದಿತ್ಯದೇವ : ಕ್ರಿ.ಶ.೧೦೮೮ರ ಉಕ್ಕುಂದ ಶಾಸನ ಈ ವಂಶದ ವಿಜಯಾದಿತ್ಯ ದೇವನನ್ನು ಹೆಸರಿಸಿದೆ.

ಒಟ್ಟಾರೆ ಈ ಎಲ್ಲ ಶಾಸನಗಳನ್ವಯ ಹೆಚ್ಚೆಯ ಅರಸರು ಕ್ರಿ.ಶ.೯೦೩ ರಿಂದ ಕ್ರಿ.ಶ.೧೧೨೭ರವರೆಗೆ ಸ್ಪಷ್ಟವಾಗಿ ಎಡೆನಾಡು ಹಾಗೂ ಬೆಳ್ಳುಗೆ ಪ್ರದೇಶವನ್ನು, ಕೇಂದ್ರ ಮನ್ನೆಯಗಳನ್ನು ನಿರಂತರವಾಗಿ ಆಳಿದ್ದು ತಿಳಿದುಬರುತ್ತದೆ. ಬೆಳ್ಳುಗೆಯ ಕನವಳ್ಳಿ, ಎಡೆನಾಡ ಹೆದ್ದಸೆ(ಹೆಚ್ಚೆ) ಇವರ ತಾತ್ಕಾಲಿಕ ಆಡಳಿತ ಕೇಂದ್ರಗಳಾಗಿರುವ ಸಾಧ್ಯತೆ ಇದೆ.

ಉದ್ರಿಯ ಅರಸರು

ಜಿಡ್ಡುಗಳಿಗೆ ೭೦ಕ್ಕೆ ರಾಜಧಾನಿಯಾಗಿ ಪ್ರಸಿದ್ಧಿ ಪಡೆದಿದ್ದ ಉದ್ರಿಯು ಸೊರಬದಿಂದ ಸುಮಾರು ೧೫ ಕಿ.ಮೀ.ದೂರದಲ್ಲಿಗೆ ಉದರಿಯನ್ನು ಆಳಿದ ಅರಸರಿಗೆ "ಕೋಳಲಾಪುರವರಾಧೀಶ್ವರ" ಎಂದು ಕರೆದಿರುವುದರಿಂದ ಇವರು ಮೂಲತಃ ಗಂಗ ವಂಶದವರೆಂದು ತಿಳಿಯುತ್ತದೆ. ಇವರು ಆರಂಭದಲ್ಲಿ ಕಲ್ಯಾಣಿ ಚಾಲುಕ್ಯರು ನಂತರ ಹೊಯ್ಸಳರ ಮಾಂಡಳೀಕರಾಗಿದ್ದರು. ಉದ್ದರಿಯಲ್ಲಿ ಜಿಡ್ಡುಗಳಿಗೆ ಇತಿಹಾಸವನ್ನು ತಿಳಿಸುವ ಇಪ್ಪತ್ತೊಂದು ಶಾಸನಗಳಿವೆ.

ಇವುಗಳಲ್ಲಿ ಉದ್ದರಿಯು ವಿದ್ವಾಂಸರಿಗೆ, ಯೋಗಿಗಳಿಗೆ ಮತ್ತು ಭೋಗಿಗಳ ನಿವಾಸ ಸ್ಥಾನವಾಗಿತ್ತೆಂದು ಹೇಳುತ್ತವೆ. ಉದ್ರಿಯ ಅರಸರ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಶಾಸನಗಳೇ ಮೂಲ ಆಕರಗಳಾಗಿವೆ. ರಾಜಧಾನಿ ಉದ್ದರಿಯನ್ನು ಶಾಸನದಲ್ಲಿ ಉದ್ದರೆ, ಉದ್ದರಿ, ಯುದ್ಧರೆ ದುರ್ಗಾರುದ್ದರೆ ಎಂದು ಕರೆದಿದೆ.[೯]

ಉದ್ರಿ ಅರಸರ ವಂಶಾವಳಿ

ಬಿಟ್ಟಿಗ
|
ಮಾರಸಿಂಗ
|
ಕೀರ್ತಿದೇವ
|
ಮಾರಸಿಂಗ II

|

ಎಕ್ಕಲ I(೧೧೩೦-೧೧೬೫)

|

ಚಟ್ಟಲದೇವಿ (ಎಕ್ಕಲದೇವನ ತಂಗಿ)

|

ಎರಗ ಕೇಶವ ನರಸಿಂಹ

|

ಎಕ್ಕಲ II (೧೧೯೩-೧೨೧೬)

ಬಿಟ್ಟಿಗ : ಶಾಸನದಂತೆ ಇವನು ೧೧೯೮ರಲ್ಲಿ ಆಳುತ್ತಿದ್ದ ಉದ್ದರಿಯ ಮೊದಲ ದೊರೆ. ಇವನು ಅಪ್ರತಿಮ ವೀರನಾಗಿದ್ದು, ವೈರಿಗಳ ಪಟ್ಟಣವನ್ನು ಸುಟ್ಟು ಹಾಕುತ್ತಿದ್ದ ಇತ್ಯಾದಿ ವರ್ಣನೆ ಇದೆ. ಇವನ ಮಗ ಮಾರಸಿಂಗನೂ ಸಹ ಮಹಾವೀರ. ಕೀರ್ತಿದೇವನು ಮಾರಸಿಂಗನ ಮಗ.

ಎಕ್ಕದೇವ : ಜಿಡ್ಡುಗಳಿಗೆಯನ್ನು ಆಳಿದ ಅರಸರಲ್ಲೆಲ್ಲಾ ಎಕ್ಕಲದೇವನು ತುಂಬಾ ಪ್ರಸಿದ್ಧಿ ಪಡೆದಿದ್ದಾನೆ. ಹೊಯ್ಸಳ ಸಾಮಂತನಾದರೂ ತನ್ನ ಅತ್ಯುತ್ತಮ ಆಡಳಿತದಿಂದ ಜಿಡ್ಡುಗಳಿಗೆ ನಾಡನ್ನು ಸಂಪತ್ತಿನ ಕಣಜವನ್ನಾಗಿ ಮಾಡಿದನು. ರಾಜ್ಯವನ್ನು ವಿಸ್ತರಿಸಲು ಎಕ್ಕಲನು ಪೊಂಬುಚದ ಮೇಲೆ ದಾಳಿ ಮಾಡಿದನು.[೧೦] ಇವನು ಹೊಯ್ಸಳರ ಅಧೀನದಲ್ಲಿ ಬನವಾಸಿಯನ್ನು ಸಹ ಆಳುತ್ತಿದ್ದನೆಂದು ತಿಳಿಯುತ್ತದೆ. ಇವನು ಜೈನ ಧರ್ಮೀಯನಾದರೂ ಉದ್ದರೆಯ ಕಲ್ಲೇಶ್ವರದೇವಾಲಯಕ್ಕೆ ದತ್ತಿ ಬಿಟ್ಟಿದ್ದಾನೆ.

ಬಾರಂಗಿ ಅರಸರು : ಬಾರಂಗಿಯು ಚಾಲುಕ್ಯ ಕಾಲದಲ್ಲಿಯೇ ಒಂದು ಸೀಮೆಯಾಗಿಯೂ ಮತ್ತು ಇದರ ಆಡಳಿತದ ಕೇಂದ್ರವಾಗಿತ್ತು. ಇಲ್ಲಿ ಕ್ರಿ.ಶ.೯೬೦ ರಿಂದ ಸಾಮಂತರು ಆಳಿದಂತೆ ತಿಳಿಯುತ್ತದೆ. ಸಾಮಂತರ ವಂಶಾವಳಿಯು ಹೀಗಿದೆ.

ಬಿಚ್ಚರ

|

ಮಲ್ಲ (ಕ್ರಿ.ಶ.೧೦೬೫)

|

ಚಟ್ಟ (ಕ್ರಿ.ಶ.೧೧೧೮) (ಪತ್ನಿ : ಚಟ್ಟವ್ವೆ)

|

ಚೌಡ (ಕ್ರಿ.ಶ.೧೦೫೮)

|

ಕೇತಗಾವುಂಡ (ಕ್ರಿ.ಶ.೧೧೫೯)

|

ಬೊಪ್ಪಗಾವುಂಡ (ಕ್ರಿ.ಶ.೧೨೧೨)

ಇವರಲ್ಲಿ ಬಿಚ್ಚರನು ಆಳುತ್ತಿದ್ದನೆಂದು ಹೇಳುವ ಒಂದು ಶಾಸನ ಬಾರಂಗಿಯಲ್ಲಿದೆ.[೧೧]

ಇವರೆಲ್ಲರ ಆಡಳಿತದ ನಂತರ ಬಾರಂಗಿ ಜೈನ ಮನೆತನದವರ ಆಡಳಿತ ಆರಂಭವಾಗಿದೆ.

ಗೋಪಗೌಡ

|

ಒಳ್ಳವ್ವ (ಪತ್ನಿ : ಮಲ್ಲಿಗಾವುಂಡಿ)

|

ಗೋಪಣ್ಣ(ಕ್ರಿ.ಶ.೧೪೧೫) ಭಾಗೀರಥಿ (ಕ್ರಿ.ಶ.೧೪೫೨)

ಗೋಪಗೌಡನಿಂದ ಈ ವಂಶದವರ ಆಡಳಿತ ಆರಂಭವಾಗಿದೆ. ಬಿಟ್ಟಯ್ಯ ಎಂಬುವನು ಚಲ್ಲಕೇತನ ವಂಶದ ಲೋಕಟೆಯರಸನಿಗೆ ಪೆರ್ಗಡೆಯಾಗಿದ್ದನು. ಇವನ ಪತ್ನಿ ಬಾರಂಗಿಯ ಗಾವುಂಡಿಯಾಗಿದ್ದಳು. ಗೋಪಗೌಡ ಮತ್ತು ನಂತರದವರು ವಿಜಯನಗರದ ಆಶ್ರಯದಲ್ಲಿ ಆಳಿದರೆಂದು ತಿಳಿಯುತ್ತದೆ.

ಹಿರೇಆವಲಿ ಅರಸರು : ಹಿರೇಆವಲಿಯು ಈಗ ಒಂದು ಗ್ರಾಮ. ಇದು ವಿಜಯನಗರದ ಕಾಲದಲ್ಲಿ ಜಿಡ್ಡುಗಳಿಗೆ ೭೦ಕ್ಕೆ ಸೇರಿದ್ದ ಒಂದು ಸೀಮೆಯಾಗಿತ್ತು. ವಿಜಯನಗರದ ಆಶ್ರಯದಲ್ಲಿ ನಾಡಗೌಡರು ಇದರ ಆಡಳಿತಗಾರರಾಗಿದ್ದರು. ಇದರನ್ನು ಮಹಾಪ್ರಭುಗಳೆಂದೂ ಶಾಸನದಲ್ಲಿ ಹೇಳಿದೆ, ಬುಕ್ಕರಾಯನ ಕಾಲದಿಂದ ಇದರ ಆಡಳಿತದ ಹಲವು ವಿವರಗಳು ದೊರೆಯುತ್ತವೆ. ಕ್ರಿ.ಶ.೧೩೫೧ರಲ್ಲಿ ಚಂದಗೌಂಡ ಎಂಬುವನು ಮೊದಲು ಇಲ್ಲಿ ಆಳುತ್ತಿದ್ದ ನಾಡಗೌಡನೆಂದು ತಿಳಿಯುತ್ತದೆ. ಇವರೆಲ್ಲರೂ ಜೈನ ಧರ್ಮೀಯರು. ಕಿರಿಯನ ಮಗ ಉಡ - ಹಿರಿಯ ಚಂದಪ್ಪ - ರಾಮಗೌಡ - ಬೇಚಿಗೌಡ - ಗೋಪಗೌಡ - ಬಯಿರಗೌಡ - ಮಡಗಗೌಡ ಕ್ರಿ.ಶ.೧೪೭೧ರಲ್ಲಿ ಹಿರೇಆವಲಿಯ ಗೌಂಡನಾಗಿದ್ದನೆಂದು ತಿಳಿಯುತ್ತದೆ.[೨]

ಶಿವಮೊಗ್ಗ ಜಿಲ್ಲೆಯು ಕಾಲಕಾಲಕ್ಕೆ ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯರ, ಕಲಚೂರಿಗಳ, ಹೊಯ್ಸಳ, ಸೇವುಣರ ವಶದಲ್ಲಿ ಇದ್ದುದರಿಂದ ಸೊರಬ ತಾಲ್ಲೂಕು ಕೂಡ ಇವರೆಲ್ಲರ ಆಡಳಿತಕ್ಕೆ ಒಳಪಟ್ಟಿತ್ತೆಂದು ಹೇಳಬಹುದು. ವಿಜಯನಗರದ ಅರಸರ ಕಾಲದಲ್ಲಿ ಚಂದ್ರಗುಪ್ತಿ (ಚಂದ್ರಗುತ್ತಿ)ಯು ಬನವಾಸಿ - ೧೨೦೦೦ದ ರಾಜಧಾನಿಯಾಗಿತ್ತು. ಚಂದ್ರಗುತ್ತಿಗೆ ಅಂದು ಹೆಚ್ಚಿನ ಸ್ಥಾನಮಾನ ಹಾಗೂ ಪ್ರಾಮುಖ್ಯತೆ ಇತ್ತು. ಒಂದನೇ ಹರಿಹರ, ಇಮ್ಮಡಿ ಹರಿಹರರ ಕಾಲದಲ್ಲಿ ಇಲ್ಲಿ ವಿಜಯನಗರದ ಓರ್ವ ಪ್ರಾಂತ್ಯಾಧಿಕಾರಿ ಇದ್ದು ಈ ಪ್ರದೇಶದ ಆಡಳಿತದವನ್ನು ನೋಡಿಕೊಳ್ಳುತ್ತಿದ್ದನು.

ಮಲೆನಾಡಿನ ಪ್ರಮುಖ ರಾಜ್ಯವಾಗಿ ೧೬ನೇ ಶತಮಾನದಲ್ಲಿ ತಲೆ ಎತ್ತಿದ ಕೆಳದಿ ರಾಜ್ಯದ ನಾಯಕರು ವಿಜಯನಗರದಿಂದ ಪಡೆದ ಎಂಟು ಮಾಗಣೆಗಳಲ್ಲಿ ಚಂದ್ರಗುತ್ತಿಯೂ ಒಂದು. ಈ ನಾಯಕರ ಕಾಲದಲ್ಲಿ ಸೊರಬ ತಾಲ್ಲೂಕು ಸಾಕಷ್ಟು ಪ್ರಗತಿಯನ್ನು ಹೊಂದಿತ್ತು. ೧೭೬೩ರಲ್ಲಿ ಹೈದರಾಲಿಯ ದಾಳಿಗೆ ತುತ್ತಾಗಿ ಕೆಳದಿ ರಾಜವಂಶ ಅಳಿಯಿತು. ನಂತರ ಸೊರಬ ತಾಲ್ಲೂಕು ಮೈಸೂರು ರಾಜ್ಯದ ಭಾಗವಾಯಿತು.

ಅಡಿ ಟಿಪ್ಪಣಿಗಳು

೧. ಜೋಗದ ಸಿರಿ (ಸ್ಮರಣ ಸಂಚಿಕೆ), ೭೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೬, ಲೇಖನ : ಸೊಬರ ತಾಲೂಕಿನ ಪಕ್ಷಿನೋಟ : ಶ್ರೀಪಾದ ಬಿಚ್ಚುಗತ್ತಿ, ಪು.೨೧೭

೨. ಇದೇ ಲೇಖನದಲ್ಲಿ ಶ್ರೀಪಾದ ಬಿಚ್ಚುಗತ್ತಿ ಉಲ್ಲೇಖಿಸಿರುವುದು ಪು.೨೧೮

೩. ಮಲೆ ಕರ್ನಾಟಕದ ಅರಸುಮನೆತನಗಳು, ಸಂ.ರಾಜಾರಾಮ ಹೆಗಡೆ, ಅಶೋಕ ಶೆಟರ್ , ಲೇಖನ : ಹೆಚ್ಚೆಯ ಅರಸರು : ಶ್ರೀಪಾದ ಬಿಚ್ಚುಗತ್ತಿ, ಪು.೨೨

೪. ಇದೇ ಹೆಚ್ಚೆಯ ಅರಸರು ಲೇಖನದಲ್ಲಿ ಉಲ್ಲೇಖಿಸಿರುವುದು, ಪು.೨೬

೫. ಸೌ.ಇಂ.೯-೧೮, ಶಾಸನ ಸಂಖ್ಯೆ ೩೦೫, ದೇವಗಿರಿ

೬. ಎ.ಕ.VIII, ನಂ.೪೭೯ ಹೆಚ್ಚೆ, ಸೊರಬ, ಶಿವಮೊಗ್ಗ, ಕ್ರಿ.ಶ.೯೭೨

೭. ಎ.ಕ.VIII, ನಂ.೧೯೧ ಸಾರೇಕೊಪ್ಪ, ಸೊರಬ, ಶಿವಮೊಗ್ಗ, ಕ್ರಿ.ಶ.೧೦೩೨

೮. ಎ.ಕ.VIII, ನಂ.೫೦೦ ಚಿಲನೂರು ಸೊರಬ, ಶಿವಮೊಗ್ಗ, ಕ್ರಿ.ಶ.೧೦೩೨

೯. ಮಲೆ ಕರ್ನಾಟಕದ ಅರಸು ಮನೆತನಗಳು, ಸಂ: ರಾಜರಾಮ ಹೆಗಡೆ, ಅಶೋಕ ಶೆಟ್ಟರ್, ಲೇಖನ: ಉದ್ದರಿ : ಒಂದು ಅಧ್ಯಯನ, ಡಾ.ಕೋಟೆ ಮಲ್ಲಿಕಾರ್ಜುನ, ಪು.೯೭

೧೦. ಎ.ಕ.VII, ಸೊರಬ ೧೫೭ ಉದ್ದರಿ ಕ್ರಿ.ಶ.೧೨೬೦

೧೧. ಎ.ಕ.VII, ಸೊರಬ ೩೨೬ ಬಾರಂಗಿ ಕ್ರಿ.ಶ.೯೫೭

೧೨. ಎ.ಕ.VII, ಸೊರಬ ೧೧೮ ಬಾರಂಗಿ ಕ್ರಿ.ಶ.೧೪೭೭

ಅಧ್ಯಾಯ ೩

ಗ್ರಾಮೀಣ ಸಮಾಜ ಮತ್ತು ಸಂಸ್ಕೃತಿ

೩.೧. ಜನಸಮುದಾಯ ಮತ್ತು ಭಾಷೆ

೩.೨. ಕಲಾರಂಗ

೩.೩ ಆಚರಣೆಗಳು

೩

ಗ್ರಾಮೀಣ ಸಮಾಜ ಮತ್ತು ಸಂಸ್ಕೃತಿ

ಭಾರತ ಹಳ್ಳಿಗಳ ದೇಶ ಅದರೊಳಗೆ ಕರ್ನಾಟಕ ಹಳ್ಳಿಗಳ ನಾಡು ಇದರೊಳಗೆ ಮಲೆನಾಡು ಎನಿಸಿದ ಶಿವಮೊಗ್ಗದ ಸೊರಬ ತಾಲ್ಲೂಕು ಸಹ ಹಳ್ಳಿಗಳ ಬಿಡಾಗಿದೆ. ಪ್ರತಿ ಹಳ್ಳಿಗಳು ವ್ಯವಸ್ಥಿತವಾಗಿ ನಿರ್ಮಾಣ ಹೊಂದಿದ್ದು. ತಮ್ಮದೇ ಆದ ಬದುಕನ್ನು ಸಂಸ್ಕೃತಿಯನ್ನು ಹೊಂದಿರುವ ಊರುಗಳು ವಿಶಿಷ್ಟವಾಗಿವೆ.

ಸಾಮಾಜಿಕ ಜೀವನ

ಗ್ರಾಮೀಣ ಜನರು ಪರಸ್ಪರ ಅವಿನಾಭಾವ ಸಂಬಂಧವನ್ನು ಹೊಂದಿರುತ್ತಾರೆ. ಒಂದು ಊರು ಅದಕ್ಕೆ ಅದರದೇ ಆದ 'ಅಗಸೆ' ಬಾಗಿಲು, ಇದು ಮನೆಗೆ ಪ್ರವೇಶದ್ವಾರ ಇದ್ದ ಹಾಗೆ. ಇಂದು ಊರೊಳಗೆ ಪ್ರವೇಶದ ಅಗಸೆಯಲ್ಲಿ ಊರ ಹೆಸರನ್ನು ಗುರುತಿಸುವ ಫಲಕ ಇರುತ್ತದೆ. ಊರೊಳಗೆ ಪ್ರತ್ಯೇಕ ಕೇರಿಗಳು ನಿರ್ಮಾಣವಾಗಿರುತ್ತವೆ. ಕೆಲವೊಂದು ಕೇರಿಗಳಲ್ಲಿ ಒಂದು ವರ್ಗಕ್ಕೆ ಸೇರಿದ ಜನ ವಾಸಿಸುತ್ತಾರೆ. ಪ್ರತಿ ಊರಿನಲ್ಲಿಯೂ ಮುಖಂಡರು ನೇಮಕವಾಗಿದ್ದು ಇವರಿಂದ ನ್ಯಾಯ-ಅನ್ಯಾಯಗಳು ತೀರ್ಮಾನವಾಗುತ್ತವೆ. ಪ್ರತ್ಯೇಕ ಪಂಚಾಯಿತಿಕಟ್ಟೆ ಇಲ್ಲವೆ ದೇವರ ಮಂದಿರಗಳಲ್ಲಿ ಊರಿನ ಸಮಸ್ಯೆಗಳು ಹೊರಗಡೆಗೆ ಹೋಗದೆ ಗ್ರಾಮದೊಳಗೆ ನಿರ್ಧಾರವಾಗುವಂತೆ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಆದರೂ ಕೆಲವು ಅಪರಾಧಗಳು ಪೋಲೀಸ್ ತನಿಖೆಗೆ ಹೋಗಿ ವಿಚಾರಣೆ ನಡೆಯುತ್ತವೆ.

ತಾಲೂಕಿನ ಪ್ರತಿ ಊರುಗಳಲ್ಲಿಯು ದೇವಸ್ಥಾನಗಳಿವೆ. ಅನೇಕ ಗ್ರಾಮಗಳಲ್ಲಿ ಗ್ರಾಮದೇವರ ಮತ್ತು ಗ್ರಾಮ ದೇವತೆಯ ಜಾತ್ರೆಗಳು ನಡೆಯುತ್ತವೆ. ಚಾಟಿಕೊಪ್ಪದ ವೀರಭದ್ರೇಶ್ವರ ಜಾತ್ರೆ, ಮಂಚಿಯ ಭೀಮಪ್ಪನ ಜಾತ್ರೆ, ತತ್ತೂರಿನಲ್ಲಿ ಸಾರೇಕೊಪ್ಪದಲ್ಲಿ ದೇವತೆಯ ಜಾತ್ರೆಗಳು ವೈಭವ ಪೂರ್ಣವಾಗಿ ನಡೆಯುತ್ತವೆ. ವಿವಿಧ ಬಗೆಯ ಆಚರಣೆಗಳು ಈ ಸಂದರ್ಭದಲ್ಲಿ ನಡೆಯುತ್ತಿರುತ್ತವೆ. ಪೂಜೆ, ಭಜನೆ, ಡೊಳ್ಳು, ವೀರಗಾಸೆ ಮೊದಲಾದ ಕಾರ್ಯಕ್ರಮಗಳನ್ನು ವಿಶಿಷ್ಟ ಆಚರಣೆಯೊಂದಿಗೆ ಕೈಗೊಂಡಿರುತ್ತಾರೆ.

ಗೃಹ ಜೀವನ

ತಾಲೂಕಿನಲ್ಲಿ ಈ ಮೊದಲು ಸಿರಿವಂತರು ಹಂಚಿನ ಮನೆ ನಿರ್ಮಿಸಿ ಕೊಂಡಿರುತ್ತಿದ್ದರು. ಬಡವರು ಹುಲ್ಲಿನ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಇಂದಿನ ದಿನದಲ್ಲಿ ಹುಲ್ಲು ಗುಡಿಸಲಿನ ಮನೆ ಕಣ್ಮರೆಯಾಗಿ ಎಲ್ಲಾ ಊರುಗಳು ಕೆಂಪು ಹಂಚಿನ ಮನೆಗಳನ್ನು ಹೊಂದಿವೆ. ಒಂದು ಸಾಮಾನ್ಯ ಮನೆಯಾದರು ಕಟ್ಟೆ, ನಡುಮನೆ, ದೇವರ ಕೋಣೆ, ಅಡುಗೆ ಮನೆ -ಹೀಗೆ ಮನೆಯ ರಚನೆಯಿರುತ್ತದೆ. ಬಾಗಿಲು ಮರದಿಂದ ನಿರ್ಮಿತವಾಗಿದ್ದು, ಸುಂದರವಾದ ಕೆತ್ತನೆಗಳನ್ನು ಹೊಂದಿರುತ್ತವೆ. ಪ್ರತಿ ಮನೆಗಳ ಮುಂದೆ ಅಂಗಳ ಇರುತ್ತದೆ. ಬೆಳಿಗ್ಗೆ ರಂಗೋಲೆ ಬರೆಯುವುದು ರೂಢಿ. ಮನೆಯಲ್ಲಿ ಗಂಡಸರು ಹೆಚ್ಚು ಯಜಮಾನಿಕೆ ಮಾಡುತ್ತಾರೆ. ಮನೆಗಳು ಸುಣ್ಣ ಬಣ್ಣದಿಂದ ಮತ್ತು ಬಾಗಲಿಗೆ ತೋರಣ ತೋಡಿಸುವುದರಿಂದ ಅಲಂಕೃತವಾಗಿರುತ್ತವೆ. ಮನೆಗಳಲ್ಲಿ ಊಟಕ್ಕೆ ಕುಳಿತುಕೊಳ್ಳಲು ಮಣೆಯ ಬಳಸುತ್ತಾರೆ. ಮರದ ಕುರ್ಚಿ, ಮಂಚದ ಪೀಠೋಪಕರಣಗಳು ಇರುತ್ತವೆ.

ಆಗ ಅವಿಭಕ್ತ ಕುಟುಂಬಗಳೇ ಹೆಚ್ಚಿನಲ್ಲಿದ್ದು ತಂದೆ, ತಾಯಿ, ಅಣ್ಣ, ತಮ್ಮ, ಮಕ್ಕಳು, ಸೊಸೆಯಂದಿರು, ಅಜ್ಜ, ಅಜ್ಜಿಯಂದಿರು ಹೀಗೆ ಹತ್ತಾರು ಜನ ಇರುತ್ತಿದ್ದರು. ಯಜಮಾನ ಹೇಳಿದಂತೆ ಮನೆಯ ಎಲ್ಲಾ ಸದಸ್ಯರು ಕೇಳುತ್ತಿದ್ದರು. ಆತಿಥ್ಯದಲ್ಲಿಯೂ ಎತ್ತಿದ ಕೈ ಮನೆಗೆ ಬಂದವರಿಗೆ ಕೈಕಾಲು, ಮುಖ ತೊಳೆಯಲು ನೀರು ಕೊಟ್ಟು ಕೂಡ್ರಿಸಿ ಉಪಚಾರ ಮಾಡುತ್ತಾರೆ. ಅತಿಥಿಗಳು ಇರುವಷ್ಟು ದಿನ ಅವರಿಗೆ ವಿಶೇಷ ಊಟದ ವ್ಯವಸ್ಥೆ ಮಾಡುವುದು. ಮಾಂಸಹಾರಿಗಳ ಮನೆಗಳಾದರೆ ಕೋಳಿ ಸಾರು ಮಾಡುವುದು, ಅಥವಾ ಮೀನು ಸಂಬಾರು ಮಾಡಿ ಬಡಿಸುವ ಮೂಲಕ ಅತಿಥಿ ಸತ್ಕಾರ ಮಾಡುವುದು. ಹೆಣ್ಣು ಮಕ್ಕಳಾಗಿದ್ದರೆ ಬೀಳ್ಕೊಡುವಾಗ ಉಡುಗೆ ಕೊಡುವುದು. ಹೀಗೆ ಪ್ರೀತಿ ವಾತ್ಸಲ್ಯದ ಬಂಧನದ ಬದುಕು ಪ್ರತಿ ಮನೆಯಲ್ಲೂ ತುಂಬಿತ್ತು. ಇಂದಿಗೂ ಇಂತಹ ಕುಟುಂಬಗಳು ತಾಲೂಕಿನಲ್ಲಿ ಸಾಕಷ್ಟು ಇದ್ದೇ ಇದೆ. ಆದರೂ ಹೆಚ್ಚು ಅವಿಭಕ್ತ ಕುಟುಂಬಗಳು ಇರುವುದರಿಂದಾಗಿ ಈ ಸಂತಸದ ಗೃಹ ಜೀವನ ಗುರುತಿಸುವುದು ಕಷ್ಟ ಸಾಧ್ಯ.

ಕೃಷಿ ಜೀವನ

ತಾಲೂಕಿನ ಎಲ್ಲಾ ಹಳ್ಳಿಗಳ ಬದುಕು ಕೃಷಿಯನ್ನೇ ಅವಲಂಬಿಸಿದೆ. ಊರುಗಳಲ್ಲಿ ತಮ್ಮ ಭೂಮಿಯನ್ನು ಸಾಗುವಳಿ ಮಾಡಿ ಬದುಕುವರು ಇದ್ದಾರೆ ಕೂಲಿಕಾರರು ಇದ್ದಾರೆ. ರೈತಾಪಿ ವೃತ್ತಿ ಹೊಂದಿದವರು ಎತ್ತುಗಳಿಂದ ಸಾಗುವಳೀ ಮಾಡುತ್ತಾರೆ. ಇಂದಿನ ದಿನ ಟ್ಯಾಕ್ಟರ್ ಮತ್ತು ಟಿಲ್ಲರ್ ಗಳ ಬಳಕೆಯು ಇದೆ. ರೈತ ಕುಟುಂಬದ ಮನೆಯಲ್ಲಿ ದನಕರುಗಳು ಇವೆ. ಹೊಲಗಳಿಗೆ ಸಗಣಿ ಗೊಬ್ಬರ ಬಳಸುತ್ತಾರೆ. ಜೊತೆಗೆ ರಾಸಾಯನಿಕಗೊಬ್ಬರ ಹಾಗೂ ಕೀಟನಾಶಗಳ ಬಳಕೆ ಇದೆ. ಭತ್ತ, ಹೆಚ್ಚು ಬೆಳೆಯುತ್ತಾರೆ. ಕಬ್ಬು, ಅಡಿಕೆ, ತರಕಾರಿ, ಮೆಣಸು ಮೊದಲಾದ ಬೆಳೆ ಬೆಳೆಯುತ್ತಾರೆ.

ಅಂದಿನ ದಿನದಲ್ಲಿ ಹಾಲು, ಮೊಸರು ರೈತಾಪಿ ಜನರಲ್ಲಿ ಇರುತ್ತಿತ್ತು. ತಮಗೆ ಬೇಕಾದಷ್ಟು ಭತ್ತ ಬೆಳೆದು ಸಂತೃಪ್ತರಾಗಿರುತ್ತಿದ್ದರು. ಈಗ ಹಳ್ಳಿಯಲ್ಲಿಯ ರೈತರ ಮನೆಯಲ್ಲೂ ಸಾಕಾಗುವಷ್ಟು ಹಾಲು ಹೈನು ದೊರೆಯುತ್ತಿಲ್ಲ. ಬೆಳೆದ ಭತ್ತಕ್ಕೆ ರೋಗ ತಗುಲಿ ಬೆಳೆಹಾನಿ ಆಗುತ್ತಿರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ರೈತಾಪಿ ಜನರ ಬದುಕಿನ ಉತ್ಸುಕತೆ ಮಾಯವಾಗುತ್ತಲಿದೆ. ಜೀವನ ನಿರ್ವಹಣೆ ದುಸ್ತರವಾಗುತ್ತಲಿದೆ. ಇಂತಹ ಸಂದರ್ಭದಲ್ಲಿಯೂ ಕೆಲವರು ಸಂಕೀರ್ಣತೆಯಿಂದ ಬುದ್ಧಿವಂತಿಕೆಯಿಂದ ಕೃಷಿರಂಗದಲ್ಲಿ ಯಶಸ್ಸು ಕಂಡವರೂ ಇದ್ದಾರೆ.

ನೀರಾವರಿ ಲಭ್ಯತೆಯಿಂದ ಹಣ ತೊಡಗಿಸುವ ಮೂಲಕ ಬುದ್ಧಿವಂತಿಕೆಯಿಂದ ತನ್ನ ಹೊಲದಲ್ಲಿ ತಾನೇ ತಜ್ಞನಾಗಿ ಬೆಳೆ ಅವಧಿಯಲ್ಲಿ ಕಾಲ ಕಾಲಕ್ಕೆ ಗಮನಕೊಟ್ಟು ಕೃಷಿಯನ್ನು ನಡೆಸಬೇಕಾಗಿದೆ. ಇಂದು ಪ್ರಭುತ್ವದಿಂದ ಸಾಕಷ್ಟು ರಿಯಾಯಿತಿ ಸವಲತ್ತುಗಳಿಂದ, ಬ್ಯಾಂಕ್ ನಿಂದ ಸಾಲ ಪಡೆದು ತೋಟಗಾರಿಕೆ ಬೆಳೆ ಮತ್ತು ಉತ್ತಮ ತಳಿಗಳ ಬಗ್ಗೆ ಮಾಹಿತಿ ಪಡೆದು ಕೃಷಿಯನ್ನು ಅನುಸರಿಸುವುದು ಅಗತ್ಯವಿದೆ.

ಹಬ್ಬಗಳು

ತಾಲೂಕಿನಲ್ಲಿ ಹಲವಾರು ಹಬ್ಬಗಳ ಆಚರಣೆ ರೂಢಿಯಲ್ಲಿದೆ. ನಾಗರ ಪಂಚಮಿಯಿಂದ ಹಿಡಿದು, ಯುಗಾದಿಯವರೆಗೂ ಹಬ್ಬಗಳನ್ನು ಆಚರಿಸುತ್ತಾರೆ. ಇವರಿಗೆ ಪ್ರಮುಖ ಹಬ್ಬಗಳೆಂದರೆ ಗೌರಿಹಬ್ಬ, ಭೂಮಿ ಹುಣ್ಣಿಮೆ, ದೀಪಾವಳಿ, ಯುಗಾದಿ ಮತ್ತು ಶಿವರಾತ್ರಿ ಮೊದಲಾದವುಗಳಾಗಿವೆ.

ಜನಾಂಗ

ತಾಲೂಕಿನಲ್ಲಿ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಇದ್ದಾರೆ, ಹಿಂದೂಗಳಲ್ಲಿ ಎಲ್ಲ ಪಂಗಡದವರೂ ಇದ್ದಾರೆ. ದೀವರು (ಈಡಿಗರು) ಅಧಿಕ ಸಂಖ್ಯಾತರಾಗಿದ್ದಾರೆ. ಹವೀಕರು, (ಅಡಕೆ ತೋಟಗಳ ಮಾಲೀಕರು), ಹಸಲರು (ಅಡಕೆ ತೋಟಗಳಲ್ಲಿ ಕೆಲಸ ಮಾಡುವವರು) ಇನ್ನು ಹರಿಜನರು, ಬೆಸ್ತರು, ಗಂಗಾಮತಸ್ಥರು, ಭೋವಿ, ಉಪ್ಪಾರ, ಮ್ಯಾದರು, ಗುಡಿಗಾರರು, ಲಂಬಾಣಿಗಳು, ಇರುವುದನ್ನು ಗುರುತಿಸಲಾಗಿದೆ. ಹೀಗೆ ಬಹುಜನಾಂಗಗಳು ಬೆಳೆದು ಬಂದಿವೆ. ಬಹುತೇಕ ಜನಾಂಗಗಳು ಕನ್ನಡ ಭಾಷೆಯನ್ನು ಬಲ್ಲವರಾಗಿದ್ದಾರೆ ಎನ್ನಬಹುದು.

ವಿವಾಹ

ತಾಲೂಕಿನಲ್ಲಿ ಆಯಾ ಜನಾಂಗದ ನಡುವೆ ಮಾತ್ರ ವಿವಾಹ ನಡೆಯಬೇಕು. ಕೆಲವೊಂದು ಅಂತರ್‌ಜಾತಿ ವಿವಾಹ ನಡೆದು ಬಂದಿರುವುದು ಗಮನಕ್ಕೆ ಬರುತ್ತದೆ. ಅಂಥವುಗಳು ಸಮಾಜದ ಮಾನ್ಯತೆ ಪಡೆದಿರುವುದಿಲ್ಲ. ಪಾರಂಪರಿಕವಾಗಿ ಸಾಮೂಹಿಕ ವಿವಾಹ ನಡೆದು ಬಂದಿರುವುದನ್ನು ಕಾಣುತ್ತೇವೆ.

ಸಮಾಜದಲ್ಲಿ ವಿವಾಹಕ್ಕೆ ಮಹತ್ವದ ಸ್ಥಾನಮಾನವಿದೆ. ವಿವಾಹವು ವ್ಯಕ್ತಿಗೆ ಸಾಮಾಜಿಕ ಸ್ಥಾನಮಾನವನ್ನು ಕೊಡುತ್ತದೆ. ವಿವಾಹ ಆಚರಣೆಯ ಮೂಲಕ ಗಂಡು-ಹೆಣ್ಣು ದಂಪತಿಗಳಾಗಿ ಸಂಸಾರಸ್ಥರಾಗುತ್ತಾರೆ. ತಾಲೂಕಿನಲ್ಲಿ ಬಹುಪತ್ನಿತ್ವ ಅಷ್ಟಾಗಿ ಇಲ್ಲ. ಅತಿ ಕಡಿಮೆ ಸಂಖ್ಯೆಯಲ್ಲಿ ಕೆಲ ಪುರುಷರು ದ್ವಿಪತ್ನಿತ್ವ ಹೊಂದಿರುವುದನ್ನು ಕಾಣುತ್ತೇವೆ. ಏಕಪತ್ನಿತ್ವವೇ ಹೆಚ್ಚು. ಆದರೆ ಮದುವೆಯಾಗಿ ಹೆಂಡತಿ ತೀರಿ ಹೋದರೆ ಮತ್ತೆ ಮದುವೆ ಆಗುವುದಿದೆ. ಹೀಗೆ ಮರುವಿವಾಹವಾದರೂ ಅಂದರೆ ಅದಕ್ಕೆ ಸಾಂಪ್ರದಾಯಿಕ ವಿವಾಹದ ರೀತಿನೀತಿಗಳನ್ನು ಅನುಸರಿಸಲಾಗುತ್ತದೆ. ಇದಕ್ಕೆ ಸಾಮಾಜಿಕ ಸ್ಥಾನಮಾನ ಇದೆ. ವಿದುರನಾದವನು ವಿಧವೆಯನ್ನೇ ಮದುವೆಯಾಗಬೇಕೆಂದಿಲ್ಲ. ಆತ ಕನ್ಯಾ ವಿವಾಹವೂ ಆಗುವುದಿದೆ. ಆದರೆ ವಿಧವೆಯ ಮರುವಿವಾಹಕ್ಕೆ ಸಾಮಾಜಿಕ ಸ್ಥಾನಮಾನವಿಲ್ಲ.

ಹಿಂದೂಗಳ ಮತ್ತು ಕ್ರಿಶ್ಚಿಯನರ ಮತ್ತು ಮುಸ್ಲಿಂರ ವಿವಾಹಗಳ ಆಚರಣೆಗಳು ಭಿನ್ನ ರೀತಿ ಯಲ್ಲಿವೆ. ಹಿಂದೂಗಳ ಬೇರೆ ಬೇರೆ ಜಾತಿಗಳಲ್ಲಿ ವಿವಾಹದ ಆಚರಣೆಗಳ ಸ್ವರೂಪವೂ ವ್ಯತ್ಯಾಸ ಇರುವುದನ್ನು ಕಾಣುತ್ತೇವೆ.

ಹೀಗೆ ವಿವಾಹ ಪದ್ಧತಿ ಸಂಸ್ಕೃತಿ ಪಾರಂಪರಿಕವಾಗಿ ಬೆಳೆದು ಬರುತ್ತಿದೆ. ಇಂದು ಸಾಂಪ್ರದಾಯ ಆಚರಣೆ ಕಡಿಮೆಯಾಗಿ ವೈಭವಯುತವಾದ ಆಚರಣೆಯೊಂದಿಗೆ ಮದುವೆಗಳು ನೆರವೇರುವುದನ್ನು ಕಾಣಬಹುದು.

ಜನಪದ ಕಲೆ

ಸೊರಬದ ಊರುಗಳಲ್ಲಿ ಪ್ರದರ್ಶನ ಕಲೆಗಾರರನ್ನು, ವೃತ್ತಿಗಾಯಕರನ್ನು ನೋಡಬಹುದು. ಹವೀಕ, ದೀವರ, ಹಸಲರ ಜನಾಂಗದವರು ಮದುವೆ ಹಾಡುಗಳ ಮೂಲಕ, ಹಬ್ಬದ ಹಾಡುಗಳ ಮೂಲಕ, ಕೋಲಾಟ, ಡೊಳ್ಳು ಕುಣಿತಗಳ ಮೂಲಕ ಈ ಕಲೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಯಕ್ಷಗಾನ ಸೊರಬದ ಹೊಸಬಾಳೆ ದೊಡ್ಡೇರಿ, ನಿಸ್ರಾಣಿಗಳಲ್ಲಿ ಇಂದಿಗೂ ಇದೆ. ಚಿತ್ತಾರ ಬರೆಯುವವರು, ಗುಡಿಗಾರರು, ಸಂಗೀತಗಾರ, ಸಿತಾರವಾದಕ, ಕೊಳಲುವಾದಕ, ಗಮಕವಾಚಕ, ನಾಟಕಕಾರ ಮೊದಲಾದವರು ಗ್ರಾಮದ ಸಂಸ್ಕೃತಿಯನ್ನು ಊಳಿಸಿದ್ದಾರೆ. ಜನಪದರ ಕ್ರಿಡೆಗಳು ಮತ್ತು ಮಕ್ಕಳ ಆಟಗಳು ಸಂಸ್ಕೃತಿಯನ್ನು ಬಿಂಬಿಸುತ್ತವೆ. ಈ ಸಂಸ್ಕೃತಿ ಪ್ರತೀಕವಾದ ಜಾನಪದ ಕಲೆ ಇನ್ನು ಜನಪ್ರಿಯಗೊಳ್ಳಬೇಕಾಗಿದೆ.

ಹೀಗೆ ಗ್ರಾಮೀಣರ ಸಮಾಜ ಮತ್ತು ಸಂಸ್ಕೃತಿ ವೈಶಿಷ್ಟ್ಯದಿಂದ ಕೂಡಿದ್ದು ಸೊರಬ ಕನ್ನಡ ನಾಡಿಗೆ ಹೆಮ್ಮೆಯ ಗೋಪುರವಾಗಿದೆ. ಇತ್ತೀಚಿಗೆ ಆಧುನಿಕತೆಯಿಂದ ಸಾಂಪ್ರದಾಯಿಕ ಸಂಸ್ಕೃತಿ ದೂರ ಉಳಿಯುವ ಹಾದಿಯನ್ನು ನೋಡಬಹುದು. ಆಧುನಿಕ ಸಂಸ್ಕೃತಿ ತಾಲೂಕಿನಲ್ಲಿ ಸಾಕಷ್ಟು ರೀತಿಯಲ್ಲಿ ನೆಲೆಯೂರಿ ನಿಂತಿದೆ. ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಸಾಮಾಜಿಕ ಜೀವನ, ಗೃಹ ಜೀವನ, ಕೃಷಿ ಜೀವನ,

ಹಬ್ಬ ಹರಿದಿನಗಳು, ಜನಾಂಗ, ಮದುವೆ, ಜನಪದ ಕಲೆ ಮೊದಲಾದವುಗಳು ಬದಲಾವಣೆಗಳ ಸ್ವರೂಪವನ್ನು ಕಂಡುಕೊಂಡರೂ ಸಂಸ್ಕೃತಿಯ ಬಿಡಿನಿಂದ ದೂರವಾಗಿಲ್ಲ. ಗ್ರಾಮೀಣ ಸಮಾಜದ ವ್ಯವಸ್ಥೆಯಲ್ಲಿಯ ಬದುಕು ಸಂಸ್ಕೃತಿಯನ್ನು ತನ್ನದಾಗಿಸಿಕೊಂಡಿದ್ದು ವೈಶಿಷ್ಟ್ಯ ಪೂರ್ಣವಾಗಿದೆ ಎಂದು ಹೇಳಬಹುದು.

೩.೧. ಜನಸಮುದಾಯ ಮತ್ತು ಭಾಷೆ

ಕರ್ನಾಟಕದ ಭೂಪರಿಸರ ವೈವಿಧ್ಯಮಯವಾಗಿರುವುದರಿಂದ, ಇಲ್ಲಿಯ ಜನಸಮುದಾಯವು ವಿಭಿನ್ನತೆಯಿಂದ ಕೂಡಿದೆ. ಹಾಗೆಯೇ ಸೊರಬದ ಜನಸಮುದಾಯ ಸಹಜವಾಗಿಯೇ ವಿಭಿನ್ನ ಘಟಕಗಳಾಗಿ ಒಡೆದು ನಿಂತಿದೆ. ನಾಡಿನಲ್ಲಿ ಕಾಲಕಾಲಕ್ಕೆ ಬೇರೆ ಬೇರೆ ಜನಸಮುದಾಯಗಳೂ ತೂರಿ ಬಂದಂತೆ ತಾಲೂಕಿನಲ್ಲೂ ಕಾಣುತ್ತೇವೆ. ಅವುಗಳ ಸಂಗಮದಿಂದಾಗಿ ಮೂಲದ ಸಮುದಾಯಗಳು ಮಿಶ್ರರೂಪಕ್ಕೆ ತಿರುಗಿದವು. ಹೀಗಾಗಿ ತಾಲೂಕಿನ ಸಮುದಾಯ ಸಂಖ್ಯಾದೃಷ್ಟಿಯಿಂದ, ಅನೇಕ ಸ್ವರೂಪ ದೃಷ್ಟಿಯಿಂದ ವಿಶಿಷ್ಟವೆನಿಸಿದೆ. ಕೆಳಗಿನ ಸಮುದಾಯಗಳಲ್ಲಿ ಆಯಾ ಸಮುದಾಯದ ಆಚರಣೆಗಳು, ಸಾಮಾಜಿಕ ಸ್ಥಾನಮಾನಗಳು, ಸ್ತ್ರೀಯರ ಸ್ಥಿತಿಗತಿಗಳು, ಸಾಂಸ್ಕೃತಿಕ ವಿಶಿಷ್ಟತೆಗಳು ರಾಜಕೀಯ ಪ್ರಾಬಲ್ಯ ಮತ್ತು ಆಧುನಿಕ ಸೌಲಭ್ಯಗಳು ಭಾಷಾ ಬಳಕೆ ಕುರಿತಾಗಿ ಹೇಳಲಾಗಿದೆ.

ಜನಸಮುದಾಯದ ದಾಖಲೆಯೆನ್ನುವುದು "ಬೆರಳು ಸಂದುಗಳಲ್ಲಿ ಸೋರಿ ಹೋಗಿ, ಉಳಿದಿರುವ ನೀರನ್ನು ಬೊಗಸೆಯಲ್ಲಿ ಹಿಡಿದಂತೆ"[೧] ಮೇಲಾಗಿ ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ಬದಲಾದ, ಬದಲಾಗುತ್ತಿರುವ ಸಮುದಾಯಗಳ ನಿರ್ದಿಷ್ಟ ದಾಖಲೆ ಅಸಾಧ್ಯವೆನ್ನಬಹುದು.

ತಾಲೂಕಿನಲ್ಲಿ ಕನ್ನಡ ಭಾಷೆ ವ್ಯಾಪಕವಾಗಿದೆ. ಕನ್ನಡ ಭಾಷೆಯನ್ನು ತಾಲೂಕಿನ ಪ್ರಮುಖ ಜಾತಿಯವರೆಲ್ಲರೂ ಮಾತನಾಡುತ್ತಾರೆ. ಹಾಗೆಯೇ ತೆಲುಗು ಮಾತನಾಡುವ ಮಂದಿಯೂ ಇದ್ದಾರೆ. ಲಂಬಾಣಿ, ಉರ್ದು, ಹಿಂದಿ, ಕೊರವ ಭಾಷೆಗಳು ತಾಲೂಕಿನ ಜನ ಮಾತನಾಡುವ ಇತರ ಭಾಷೆಗಳು. ಲಂಬಾಣಿ ಭಾಷೆಗೆ ಬರಹ ರೂಪ ಕಾಣುವುದಿಲ್ಲ. ಇನ್ನೂ ಕೆಲವು ಸಮುದಾಯಗಳ ಭಾಷೆಗಳು ಮಿಶ್ರಭಾಷೆಗಳಾಗಿರುತ್ತವೆ. ಕನ್ನಡ-ತೆಲುಗು ಭಾಷೆಯನ್ನು ಕೂಡಿ ಮಾತನಾಡುವ ಜನರಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಸಮುದಾಯದವರು ಕನ್ನಡ ಬಲ್ಲವರಾಗಿದ್ದಾರೆ. ಪ್ರಾದೇಶಿಕವಾಗಿ ಇಲ್ಲಿಯ ಕನ್ನಡ ಭಾಷೆ ಮಲೆನಾಡು ಕನ್ನಡವಾಗಿದೆ. ಸಾಮಾಜಿಕವಾಗಿ ಇಲ್ಲಿಯ ಕನ್ನಡ ಭಾಷೆ ಬಹುತೇಕ ಸಮುದಾಯಗಳಲ್ಲಿ ಒಂದೇ ಆಗಿದೆ.

ದೀವರು

ಸೊರಬ ತಾಲೂಕಿನಲ್ಲಿ ದೀವರೆ ಹೆಚ್ಚಿದ್ದಾರೆ. ಇವರನ್ನು ಹಳೇಪೈಕ ಎಂದು ಕರೆಯುತ್ತಾರೆ. ಹಳೇಪೈಕ ಎನ್ನುವ ಪದವೇ ಇವರ ಪ್ರಾಚೀನತೆಯನ್ನು ಸೂಚಿಸುತ್ತದೆ. ದೀವರನ್ನು ಈಡಿಗರ ಒಂದು

ಉಪಪಂಗಡವಾಗಿ ಪರಿಗಣಿಸಲಾಗಿದೆ. ಅತ್ಯಂತ ಶ್ರೀಮಂತ ಜಾನಪದ ಪರಂಪರೆಯುಳ್ಳ ಈ ಜನರು ಭೂಮಿ ಹುಣ್ಣಿಮೆ, ಗೌರಿ ಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸುತ್ತಾರೆ. ಭೂಮಿ ಹುಣ್ಣಿಮೆಯ ಸಂದರ್ಭದಲ್ಲಿ ಗೋಡೆಗಳ ಮೇಲೆ ಬರೆಯುವ ಚಿತ್ತಾರಗಳು ಅತ್ಯಂತ ಮನಮೋಹಕ. ಸಾಂಸ್ಕೃತಿಕ ನಾಯಕನಾದ ಕುಮಾರರಾಮನ ಆರಾಧನೆಯನ್ನು ಮಾಡುತ್ತಾರೆ, ದೀವರು ಡೊಳ್ಳಿನ ಕುಣಿತದಲ್ಲಿ ಪರಿಣತರು. ಕನ್ನಡ ಭಾಷೆಯನ್ನೇ ಅವಲಂಬಿಸಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಭೂಮಾಲೀಕರ ಭೂಮಿಯಲ್ಲಿ ಕೃಷಿ ಕೂಲಿಗಳಾಗಿ ಗೇಣಿದಾರರಾಗಿ ದುಡಿಯುತ್ತಿದ್ದ ಇವರು ಸ್ವಾತಂತ್ರ್ಯಾನಂತರದಲ್ಲಿ ಸ್ವಲ್ಪ ಉನ್ನತಸ್ಥಿತಿಗೆ ಬಂದರು. ಪ್ರಸಿದ್ಧ ಸಮಾಜವಾದಿ ನಾಯಕ ಗೋಪಾಲ ಗೌಡರ ನಾಯಕತ್ವದಲ್ಲಿ ನಡೆದ ಭೂ ಸುಧಾರಣ ಚಳುವಳಿ ಈ ಸಮುದಾಯದ ಜನರಿಗೆ ವರವಾಗಿ ಪರಿಣಮಿಸಿತು. ನಂತರದ ದಿನಗಳಲ್ಲಿ ತಮ್ಮ ಆರ್ಥಿಕ ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಮನಾರ್ಹವಾದ ಬದಲಾವಣೆಯನ್ನು ಹೊಂದಿದ್ದಾರೆ. ಇದೇ ಸಮುದಾಯದ ಶ್ರೀ.ಎಸ್. ಬಂಗಾರಪ್ಪನವರು ರಾಜಕೀಯ ರಂಗದಲ್ಲಿ ಬೆಳೆದು ತನ್ನ ಸಮುದಾಯದ ಅನೇಕ ಕೊರತೆಯನ್ನು ದೂರ ಮಾಡಿದ್ದಾರೆ.

ದೀವರಲ್ಲಿ ವಿಭಕ್ತ ಕುಟುಂಬಗಳು ಸಾಮಾನ್ಯ ಇವರಲ್ಲಿ ಹೊರಬಾಂಧವ್ಯ ಮದುವೆಗಳು ಚಾಲ್ತಿಯಲ್ಲಿವೆ. ರಕ್ತ ಸಂಬಂಧಗಳಲ್ಲೇ ಮದುವೆಯಾಗಲು ಪ್ರೋತ್ಸಾಹಿಸುತ್ತಾರೆ. ಋತುಮತಿಯಾದಾಗ ಮಾಡುವ ವಿಧಿಯನ್ನು 'ಹೊಸಿಗೆ' ಎನ್ನುತ್ತಾರೆ. ಶವವನ್ನು ಹೂಳುತ್ತಾರೆ. ಸೂತಕವು ಹನ್ನೊಂದು ದಿನ ಇರುತ್ತದೆ. ಇವರಲ್ಲಿ ಇಂದು ವ್ಯವಸಾಯಗಾರರು ಹಾಗೂ ವ್ಯವಸಾಯ ಕೂಲಿಗಳು ಇದ್ದಾರೆ. ಯಲ್ಲಮ್ಮ ಈ ಕೋಮಿನ ಆರಾಧ್ಯ ದೈವ. ಸುರೆಗಡಿಗೆ ದೇವರನ್ನು ಇವರು ಸೂಚಿಸುತ್ತಾರೆ. ರಾಜ್ಯ ಮಟ್ಟದ ನಾಯಕರು ಇದ್ದಾರೆ. ಇವರು ಆಧುನಿಕ ಶಿಕ್ಷಣ ಪದ್ಧತಿ, ಇತರೆ ಆಧುನಿಕ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ. ತತ್ತೂರು, ನೆಗವಾಡಿ, ಕುಪ್ಪಗಡ್ಡೆ, ಕುಬಟುಡು ಸೊರಬ. ಹೀಗೆ ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ಕಂಡುಬರುತ್ತಾರೆ.

ಭೋವಿ

ಭೋವಿ ಎನ್ನುವ ಪದ 'ಬಾವಿ' ಎನ್ನುವ ಪದದ ವಿಕಲ್ಪ ರೂಪ ಎನ್ನಲಾಗಿದೆ. ಕೆರೆ-ಬಾವಿ ತೋಡುವುದು ಇವರ ಪಾರಂಪರಿಕ ವೃತ್ತಿ. ಇತ್ತೀಚಿಗೆ ಸಾಗುವಳಿಯನ್ನು ಮಾಡುತ್ತಿದ್ದಾರೆ. ಇವರು ಶೂದ್ರ ವರ್ಣಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ. ಇವರು ತೆಲಗು ಮತ್ತು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಇವರಲ್ಲಿ ಕಲ್ಲುಭೋವಿ (ಕಲ್ಲು ಒಡೆಯುವವರು), ಮಣ್ಣುಭೋವಿ (ಮಣ್ಣಿನ ಕೆಲಸ ಮಾಡುವವರು) ಹಾಗೂ ಉಪ್ಪಾರ ಭೋವಿ (ಗಾರೆ ಕೆಲಸಗಾರರು) ಎಂಬ ಒಳಪಂಗಡಗಳಿವೆ. ಆಯಾ ಸಂಬಂಧದಲ್ಲಿ

ಮದುವೆ ಹೆಚ್ಚು. ತಾಯಿಯ ಸಹೋದರನ ಮಗಳು, ತಂದೆಯ ಸಹೋದರಿಯ ಮಗಳು ಅಥವಾ ಹಿರಿಯಕ್ಕನ ಮಗಳ ಜೊತೆ ಸಾಧ್ಯವಿದೆ.

ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಹೆಂಗಸರು ಸಕ್ರಿಯವಾಗಿ ಭಾಗವಹಿಸುತ್ತಾರೆ. ಇವರು ಆಂಜನೇಯನ ಭಕ್ತರು. ಇವರು ಮಾರಿಯಮ್ಮ ಹಾಗೂ ಇತರೆ ದೇವತೆಗಳನ್ನು ಪೂಜಿಸುತ್ತಾರೆ. ತಾಲೂಕಿನಲ್ಲಿ ಈ ಸಮುದಾಯ ಆರ್ಥಿಕವಾಗಿ ಶೈಕ್ಷಣಿಕವಾಗಿ ಇತ್ಯಾದಿ ಸೌಲಭ್ಯ ಪಡೆದಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ ಇವರು ಇನ್ನು ಹಲವು ಕ್ಷೇತ್ರಗಳಲ್ಲಿ ಬೆಳೆಯಬೇಕಿದೆ. ಇವರು ಹಿರೇಕಬ್ಬೂರು, ತತ್ತೂರು, ಉದ್ರಿ, ಗುಡುಗಿನ ಕೊಪ್ಪ, ಸಿರಿನಾಯಕನ ಕೊಪ್ಪ, ಹಿರೇಮಾಗಡಿ ಇತ್ಯಾದಿ ಕಡೆ ಈ ಸಮುದಾಯದ ಜನ ಹೆಚ್ಚು ಇದೆ. ಇವರು ಹೆಚ್ಚಿರುವ ಕಡೆ ಪ್ರತ್ಯೇಕ ವಡ್ಡರ ಕೇರಿ ಎಂಬ ಹೆಸರು ಇರುವುದನ್ನು ಕಾಣುತ್ತೇವೆ.

ಗೊಲ್ಲ

ಗೊಲ್ಲರನ್ನು ಯಾದವ, ಅಡವಿಗೊಲ್ಲ ಮತ್ತು ಗೋಪಾಲರೆಂದು ಕರೆಯುವರು. ಇವರ ಸಮುದಾಯದ ಹೆಸರನ್ನು ಸಂಸ್ಕೃತದ 'ಗೋಪಾಲ' ಎಂಬ ಶಬ್ದದಿಂದ, ಅಂದರೆ 'ಹಸುವನ್ನು ಸಾಕುವವ' ಎಂಬ ಅರ್ಥದಿಂದ ಬಂದಿದೆ ಎಂದು ಹೇಳಲಾಗುತ್ತದೆ. ಗುಲ್ಲ, ಗುಲ್ಲಾಯಿ, ಗೊಲ್ಲವರು, ಗವಾಲಿ ಮತ್ತು ಥಾಂಗರು ಗೊಲ್ಲರ ಪರ್ಯಾಯ ಪದವಾಗಿದೆ. ತಾಲೂಕಿನ ನೆಗವಾಡಿ, ಕೊಳ್ಗಿ, ಮಂಚಿ, ಕುಪ್ಪಗಡ್ಡೆ, ಸಾರೆಕೊಪ್ಪ, ಗುಡ್ಡೆಕೊಪ್ಪ, ಉದ್ರಿ, ಗುಡುಗಿನಕೊಪ್ಪ ಇನ್ನು ಮೊದಲಾದ ಕಡೆ ಈ ಸಮುದಾಯದವರನ್ನು ಕಾಣಬಹುದು. ಈ ಗೊಲ್ಲ ಸಮುದಾಯದವರು ಹಿಂದೆ ಗೌಡ್ರುಮನೆ, ಬೇರೆ ಬೇರೆ ಶ್ರೀಮಂತರ ಮನೆಯಲ್ಲಿ ಆಳಾಗಿ ದುಡಿಯುತ್ತಿದ್ದರು. ಕೆಲವರು ತಮ್ಮ ಬೇಸಾಯದ ಕೆಲಸ ಮತ್ತು ಕೂಲಿ ಕೆಲಸ ಮಾಡಿ ಬದುಕುತ್ತಿದ್ದರು. ಇಂದು ಈ ಸಮುದಾಯದವರು ಶಿಕ್ಷಣ ಪಡೆದು ಬೇರೆ ಬೇರೆ ಕ್ಷೇತ್ರದ ವೃತ್ತಿಯನ್ನು ಆರಂಭಿಸಿಯೂ ಜೀವನ ಮಾಡುತ್ತಾರೆ. ಇವರ ಭಾಷೆ ಕನ್ನಡ ಮತ್ತು ತೆಲಗು ಆಗಿದೆ. ಗೊಲ್ಲ ಸಮುದಾಯದಲ್ಲಿ ಕಾಡು ಗೊಲ್ಲ ಮತ್ತು ಊರುಗೊಲ್ಲ ಎಂಬ ಎರಡು ಪ್ರಕಾರಗಳು ಬರುತ್ತವೆ. ಸೊರಬದಲ್ಲಿ ಊರುಗೊಲ್ಲರನ್ನು ಮಾತ್ರ ಕಾಣುತ್ತೇವೆ. ತಾಲೂಕಿನಲ್ಲಿ ಬೇರೆ ಸಮುದಾಯಕ್ಕಿಂತ ಇವರ ಆಚರಣೆಗಳು ಹೆಚ್ಚೇನು ಭಿನ್ನತೆಯಿಂದಿರುವುದಿಲ್ಲ. ಇವರ ಪ್ರಮುಖ ದೇವತೆಗಳೆಂದರೆ ಚಿತ್ರಲಿಂಗೇಶ್ವರ, ಗೊಲ್ಲಮ್ಮ, ಮಾರಮ್ಮ ಪಟ್ಟಲಿಂಗೇಶ್ವರ ಇತ್ಯಾದಿ. ಇವರು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿಯು ಇನ್ನು ಬೆಳೆಯಬೇಕಿದೆ.

ಬ್ರಾಹ್ಮಣ

ಸೊರಬದಲ್ಲಿ ಹವ್ಯಕ ಬ್ರಾಹ್ಮಣರನ್ನು ಕಾಣುತ್ತೇವೆ. ಸ್ಕಂದಪುರಾಣದ ಪ್ರಕಾರ ಪರಶುರಾಮನು ಸಮುದ್ರ ರಾಜನಿಂದ ಭೂಮಿ ಪಡೆದ ನಂತರ, ಪಶ್ಚಿಮ ಕರಾವಳಿಯಲ್ಲಿ ಆ ಭೂಮಿಯನ್ನು ಏಳು

ಭಾಗ ಮಾಡಿದ ಅದರಲ್ಲಿ ಒಂದು ಭಾಗ 'ಹವಿಗ' ಎನ್ನುವುದು, ಆ ಭಾಗದಲ್ಲಿ ಬ್ರಾಹ್ಮಣರು ವಾಸಿಸಿದರು. ಅವರೇ ನಂತರ ಹವ್ಯಕ ಬ್ರಾಹ್ಮಣರಾದರು ಎಂದು ಹೇಳಲಾಗುತ್ತದೆ. ಇವರು ಹವ್ಯಕ ಕನ್ನಡವನ್ನು ಮಾತನಾಡುತ್ತಾರೆ. ಅದು ಅವರಲ್ಲೇ ಮಾತನಾಡಲು ಬಳಸುವ ಕನ್ನಡದ ಒಂದು ಉಪಭಾಷೆ ಬೇರೆಯವರೊಂದಿಗೆ ಮಾತನಾಡಲು ಸಾಮಾನ್ಯ ಕನ್ನಡವನ್ನು ಬಳಸುತ್ತಾರೆ. ಸಮುದಾಯ ಮಟ್ಟದಲ್ಲಿ ಒಳ ಬಾಂಧವ್ಯ ವಿವಾಹ ಪದ್ಧತಿ ಹಾಗೂ ಗೋತ್ರದ ಮಟ್ಟದಲ್ಲಿ ಹೊರ ಬಾಂಧವ್ಯ ವಿವಾಹ ಪದ್ಧತಿ ಇವರಲ್ಲಿ ಜಾರಿಯಲ್ಲಿದೆ. ಹಿರಿಯ ಮಗ ತಂದೆಯ ನಂತರ ಕುಟುಂಬದ ಉತ್ತರಾಧಿಕಾರಿಯಾಗುತ್ತಾನೆ. ನಾಮಕರಣ, ಮುಂಡನ ಹಾಗೂ ಮೊದಲ ಅನ್ನಪ್ರಾಸನ ಮುಂತಾದ ಆಚರಣೆಗಳೂ ಇವರಲ್ಲಿವೆ. ಮದುವೆಯ ಮುಖ್ಯ ಆಚರಣೆಗಳಾದರೆ, ನಿಶ್ಚಿತಾರ್ಥ, ಅಶ್ವರೋಹಣ, ವರಪೂಜೆ, ಹಾರ ಬದಲಾಯಿಸಿಕೊಳ್ಳುವುದು, ಧಾರೆ ಮುಹೂರ್ತ, ಮಂಗಳ ಸೂತ್ರ ಕಟ್ಟುವುದು, ಸಪ್ತಪದಿ, ಕನ್ಯಾದಾನ ಇತ್ಯಾದಿ ಶವವನ್ನು ಸುಟ್ಟು, ಸೂತಕವು ಹತ್ತು ದಿನಗಳವರೆಗೆ ಇರುತ್ತದೆ. ನಂತರ ಹದಿಮೂರನೇ ದಿನ ತಿಥಿಯನ್ನು ಮಾಡುತ್ತಾರೆ.

ಇವರ ಸಾಂಪ್ರದಾಯಿಕ ವೃತ್ತಿ ಕೃಷಿ. ಈಗಲೂ ಹಲವರು ಕೃಷಿ ಮಾಡುತ್ತಾರೆ. ಇವರಲ್ಲಿ ಪೂಜಾರಿಗಳು, ವ್ಯಾಪಾರಿಗಳು, ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸದಲ್ಲಿರುವವರೂ ಇದ್ದಾರೆ. ಇವರ ಕೋಮಿನ ದೇವರು ವೆಂಕಟೇಶ್ವರ, ಇವರ ಇಷ್ಟದೇವತೆ ಗೌರಿ. ಯಕ್ಷಗಾನ ಮತ್ತು ಜನಪದ ನಾಟಕಗಳಲ್ಲಿ ಬಹಳಷ್ಟು ಜನ ಪರಿಣತಿಯುಳ್ಳವರಾಗಿದ್ದಾರೆ. ಆಧುನಿಕ ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ಇದೆ. ಆಧುನಿಕ ಸಾಮಾಜಿಕ ಸೌಲಭ್ಯಗಳನ್ನು ಇವರು ವ್ಯವಸ್ಥಿವಾಗಿ ಪಡೆದುಕೊಂಡಿದ್ದಾರೆ. ಇವರು ತಾಲೂಕಿನ ಎಲ್ಲಾ ಹೋಬಳಿಯೊಳಗೂ ಇದ್ದಾರೆ. ಹೊಸಬಾಳೆ, ಯಲಸಿ, ಯಕ್ಷಿ, ತವನಂದಿ, ಆನವಟ್ಟಿ, ಸೊರಬ ಪಟ್ಟಣ, ತತ್ತೂರು, ನೆಗವಾಡಿ, ತಲ್ಲೂರು, ಗುಡಗಿನಕೊಪ್ಪ, ಗುಡ್ಡೆಕೊಪ್ಪ ಹೀಗೆ ಸಾಕಷ್ಟು ಊರಗಳಲ್ಲಿ ಇರುವುದನ್ನು ಕಾಣುತ್ತೇವೆ.

ಲಿಂಗಾಯತ

ಸೊರಬದ ತುಂಬಾ ಹಳ್ಳಿಗಳಲ್ಲಿ ಈ ಸಮುದಾಯದ ಜನರು ಇದ್ದಾರೆ. ಇವರು ಕನ್ನಡವನ್ನು ಮಾತನಾಡಿ ಕನ್ನಡ ಲಿಪಿಯನ್ನು ಬಳಸುತ್ತಾರೆ. ಇಲ್ಲಿ ಹೆಚ್ಚು ಜಂಗಮರನ್ನು ನೋಡಬಹುದು. ಎಲ್ಲಾ ಹೋಬಳಿಗಳಲ್ಲಿ ಇರುವುದನ್ನು ನೋಡುತ್ತೇವೆ. ಗಂಡಸರು ಮತ್ತು ಹೆಂಗಸರು ಹಣೆಯ ಮೇಲೆ ವಿಭೂತಿಯನ್ನು ಧರಿಸುತ್ತಾರೆ. ಜಂಗಮರು, ಹಿರೇಮಠ, ಸಾಲಿಮಠ, ಗದ್ದಗಿಮಠ, ಚಿಕ್ಕಮಠ ಇತ್ಯಾದಿ ಮನೆತನದ ಹೆಸರುಗಳನ್ನು ಬಳಸುತ್ತಾರೆ. ಜಂಗಮರು ಅಡ್ಡ ಹೆಸರಿಗೆ 'ಮಠ' ಎಂಬ ಶಬ್ದ ಜೋಡಿಸಿಕೊಳ್ಳುತ್ತಾರೆ. ಈ ಸಮುದಾಯದಲ್ಲಿ ಸೋದರ ಸಂಬಂಧಿ ಮದುವೆಯು ಹೆಚ್ಚಾಗಿದೆ. ವರದಕ್ಷಿಣೆಯನ್ನು ಇವರು ಹಣ ಮತ್ತು ಇತರ ರೂಪಗಳಲ್ಲಿ ಕೊಡುತ್ತಾರೆ. ವಿವಾಹ ವಿಚ್ಛೇದನಕ್ಕೆ

ಅವಕಾಶವಿಲ್ಲ. ನಾಮಕರಣ ಶಾಸ್ತ್ರವನ್ನು ಮಗು ಜನಿಸಿದ ಹನ್ನೊಂದು ಅಥವಾ ಹದಿಮೂರನೇ ದಿನದಂದು ಮಾಡುತ್ತಾರೆ. ಗಂಡು ಮಗುವಿಗೆ "ಜವಳ" ಕಾರ್ಯ ಮಾಡುತ್ತಾರೆ. ವೀರಶೈವ ಧರ್ಮದ ಅಯ್ಯಾಚಾರ ಕಾರ್ಯವನ್ನು ಗಂಡುಮಕ್ಕಳಿಗೆ ಮಾತ್ರ ಮಾಡಿಸುತ್ತಾರೆ. ಹೆಣ್ಣು ಮಗುವಿಗೆ 'ಮೈನರೆಯುವುದು' ಕಾರ್ಯವನ್ನು ಮಾಡುತ್ತಾರೆ. ಮದುವೆ ಹಾಗೂ ಶೋಭನ ಕಾರ್ಯಗಳನ್ನು ವರನ ಮನೆಯಲ್ಲಿ ಮಾಡುತ್ತಾರೆ. ಸತ್ತವರನ್ನು ಕೂತಿರುವ ಹಾಗೆ ಹೂಳುತ್ತಾರೆ. ಇವರು ಸಾವಿನ ಸೂತಕವನ್ನು ಐದು, ಏಳು, ಒಂಬತ್ತು ದಿನಗಳಲ್ಲಿ ಆಚರಿಸುತ್ತಾರೆ. ನಂದಿ, ಶಿವ, ವೀರಭದ್ರ, ಪಾರ್ವತಿ ಹಾಗೂ ಇತ್ಯಾದಿ ದೇವತೆಗಳನ್ನು ಇವರು ಪೂಜಿಸುತ್ತಾರೆ. ವ್ಯವಸಾಯವನ್ನು ಮಾಡುತ್ತಾರೆ. ಸರ್ಕಾರಿ ಹಾಗೂ ಖಾಸಗಿಯಲ್ಲಿ ನೌಕರಿಯನ್ನು ಮಾಡುತ್ತಾರೆ. ಬೇರೆ ಬೇರೆ ಕ್ಷೇತ್ರದ ಉದ್ಯೋಗದಲ್ಲಿ ತೊಡಗಿಸಿಕೊಂಡ ಇವರು ತಾಲುಕಿನಲ್ಲಿ ಅಭಿವೃದ್ಧಿ ಸಾಧಿಸಿದ್ದಾರೆ. ಜಡೆ, ಕುಬಟೂರು, ಕುಪ್ಪಗಡ್ಡೆ, ಮೂಡಿ, ಹೀರೆಮಾಗಡಿ, ಕೊಳ್ಗಿ, ಹರಿಸಿ, ಬಾರಂಗಿ, ನಿಸ್ರಾಣಿ, ಹೊಸಬಾಳೆ, ಯಲಸಿ ಇನ್ನು ಮೊದಲಾದ ಊರುಗಳಲ್ಲಿ ಇವರು ಇರುವುದನ್ನು ನೋಡುತ್ತೇವೆ.

ಮುಸ್ಲಿಮ್

ಉರ್ದು ಭಾಷೆ ಇವರ ಮಾತೃ ಭಾಷೆ. ಇವರು ತಾಲೂಕಿನ ಆನವಟ್ಟಿ, ಜಡೆ, ಕುಪ್ಪಗಡ್ಡೆ, ಮೂಡಿ, ಸೊರಬ ಇತ್ಯಾದಿ ಹೋಬಳಿಗಳಲ್ಲಿ ಹರಡಿಕೊಂಡಿದ್ದಾರೆ. ಕನ್ನಡ ಭಾಷೆಯನ್ನು ಮಾತನಾಡಿ, ಕನ್ನಡ ಲಿಪಿಯನ್ನು ಬಳಸುತ್ತಾರೆ. ರಕ್ತ ಸಂಬಂಧ ಹಾಗೂ ದೂರ ಸಂಬಂಧಗಳೆರಡರಲ್ಲೂ ಮದುವೆಗಳು ಸಾಧ್ಯವಿದೆ. ಬಹುಪತ್ನಿತ್ವಕ್ಕೆ ಅವಕಾಶವಿದ್ದರೂ ತಾಲೂಕಿನಲ್ಲಿ ಅಂತಹ ಉದಾಹರಣೆಗಳು ಕಡಿಮೆ. ಇಸ್ಲಾಂ ಕಟ್ಟಳೆಗಳನ್ನೇ ಆಚರಿಸುತ್ತಾರೆ. ಹೆರಿಗೆಗೆ ಮುನ್ನ 'ಗೋದ್ ಭರನಾ' ಎಂಬ ಸಾಂಪ್ರದಾಯಿಕ ಕಾರ್ಯಗಳನ್ನು ಹಾಗೂ ಹೆರಿಗೆಯ ನಂತರ ನಾಮಕರಣ, 'ಸುನ್ನತಿ' ಕಾರ್ಯಗಳನ್ನು ಮಾಡುತ್ತಾರೆ. ಮದುವೆ ಆಚರಣೆಯಲ್ಲಿ ನಿಶ್ಚಿತಾರ್ಥ, ಕಬೂಲ್ ಕಿಯಾ, ಲಚ್ಚಾ ಕಟ್ಟುವುದು ಹಾಗೂ ಜಲ್ವಗಳು ಸೇರಿವೆ. ಶವವನ್ನು ಹೂಳಿ, ತಿಥಿ ಕಾರ್ಯವನ್ನು ಇಪ್ಪತ್ತನೇ ಹಾಗೂ ನಲವತ್ತನೇ ದಿನ ಮಾಡುತ್ತಾರೆ. ಇವರ ಧಾರ್ಮಿಕ ವ್ಯಕ್ತಿಯನ್ನು 'ಬಾಜಿ' ಎಂದು ಕರೆಯುತ್ತಾರೆ. ಬಾಜಿಯು ಎಲ್ಲ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಡುತ್ತಾನೆ. ತಾಲೂಕಿನ ಮುಸ್ಲಿಂನ ಸಮುದಾಯ ಬೇರೆ ಬೇರೆ ವೃತಿಯಲ್ಲಿ ತೊಡಗಿರುತ್ತಾರೆ. ಕೃಷಿ, ಎತ್ತು, ಧನದ ವ್ಯಾಪಾರ, ಅಂಗಡಿ ವ್ಯಾಪಾರ, ದಲ್ಲಾಳಿ ಇನ್ನು ಮೊದಲಾದ ವೃತ್ತಿಯಲ್ಲಿ ಕಾಣುತ್ತೇವೆ. ತಾಲೂಕಿನಲ್ಲಿ ಕಡಿಮೆ ಜನರು ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿದ್ದಾರೆ ಎನ್ನಬಹುದು. ಆಧುನಿಕ ಸೌಲಭ್ಯಗಳನ್ನು ಎಲ್ಲರು ಬಳಸಿಕೊಳ್ಳುತ್ತಾರೆ. ಕುಪ್ಪಗಡ್ಡೆ, ಬಾರಂಗಿ, ನೆಗವಾಡಿ, ಹೊಸತತ್ತೂರು, ದರ್ಗ, ಹೀಗೆ ತಾಲೂಕಿನ ಅನೇಕ ಹಳ್ಳಿಗಳಲ್ಲಿ ಇರುವುದನ್ನು ಕಾಣುತ್ತೇವೆ. ಇವರು ಇರುವ ಊರಿನಲ್ಲಿ ಪ್ರತ್ಯೇಕ ಕೇರಿಗಳು ಇರುವುದು ಕಂಡುಬರುತ್ತದೆ. ತಾಲೂಕಿನಲ್ಲಿ ಈ ಸಮುದಾಯದ ಶೈಕ್ಷಣಿಕ ಮತ್ತು ರಾಜಕೀಯ ಪರಿಸ್ಥಿತಿ ಇನ್ನೂ ಸುಧಾರಿಸಬೇಕಾಗಿದೆ.

ಕ್ರಿಶ್ಚಿಯನ್

ತಾಲೂಕಿನ ಕೆಲವು ಸ್ಥಳಗಳಲ್ಲಿ ಮಾತ್ರ ಇರುವುದನ್ನು ಕಾಣುತ್ತೇವೆ. ಬಾರಂಗಿ, ಆನವಟ್ಟಿ, ಸೊರಬ, ಮೊದಲಾದವುಗಳಲ್ಲಿ ಇದ್ದಾರೆ. ಕ್ರಿಶ್ಚಿಯನ್‌ರಲ್ಲಿ ಮುಖ್ಯವಾದಿ ಕ್ಯಾಥೊಲಿಕ್, ಪ್ರಾಟೆಸ್ಟಂಟ್ ಪಂಗಡಗಳಿವೆ. ಸೊರಬದಲ್ಲಿ ಕ್ಯಾಥೊಲಿಕರನ್ನು ನೋಡಬಹುದು. ಇವರು ಏಸುವಿನ ಜೊತೆಗೆ ಅನೇಕ ಕ್ರಿಶ್ಚಿಯನ್ ಸಂತರನ್ನು ಪೂಜಿಸುತ್ತಾರೆ. ಚರ್ಚಿನಲ್ಲಿ ಪ್ರಾರ್ಥನೆಯನ್ನು ಕೊಂಕಣಿ ಭಾಷೆಯಲ್ಲಿ ಮಾಡುತ್ತಾರೆ. ತಾಲೂಕಿನ ಆನವಟ್ಟಿ ಮತ್ತು ಸೊರಬಗಳಲ್ಲಿ ಸುಂದರ ಚರ್ಚ್‌ಗಳಿವೆ. ಇವರು ಕೊಂಕಣಿಯನ್ನೇ ಬಳಸಿದರೂ ತುಳು ಭಾಷೆಯಲ್ಲಿ ಮಾತನಾಡಬಲ್ಲರು. ಕನ್ನಡವನ್ನು ಮಾತನಾಡಿ, ಕನ್ನಡ ಲಿಪಿಯನ್ನು ಬಳಸುತ್ತಾರೆ.

ಇವರ ಹೆಚ್ಚು ಮದುವೆಯಗಳು ಚರ್ಚ್‌ನಲ್ಲಿ ನಡೆಯುತ್ತವೆ. ರಕ್ತಸಂಬಂಧಗಳಲ್ಲಿ ಮದುವೆಗೆ ಅವಕಾಶವಿದೆ. ಇವರ ಪರಂಪರೆಯಲ್ಲಿ ಶವವನ್ನು ಹೂಳುತ್ತಾರೆ. ಸತ್ತವರಿಗಾಗಿ, ೩, ೭, ೩೩ನೇ ಹಾಗೂ ವರ್ಷ ತುಂಬಿದ ದಿನ ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ತಾಲೂಕಿನಲ್ಲಿ ಕ್ರಿಶ್ಚಿಯನ್ ಸಮುದಾಯ ಕೃಷಿ, ವ್ಯಾಪಾರ, ನೌಕರಿ ಇತ್ಯಾದಿ ದುಡಿಮೆ ಮಾಡುವುದನ್ನು ನೋಡಬಹುದು. ಆಧುನಿಕ ಶಿಕ್ಷಣ, ಆರೋಗ್ಯ ಇತ್ಯಾದಿ ಸೌಲಭ್ಯ ಪಡೆಯುತ್ತಾರೆ.

ಉಪ್ಪಾರ

ತಾಲೂಕಿನ ಉಪ್ಪಾರ ಸಮುದಾಯವು ಕನ್ನಡವನ್ನು ಮಾತನಾಡುವ ಇವರು ಅದೇ ಲಿಪಿಯನ್ನು ಬಳಸುತ್ತಾರೆ. ಸಮುದಾಯದಲ್ಲಿ ಬಹಳಷ್ಟು ಬೆಡಗುಗಳು ಇರುತ್ತವೆ. ಇವರಲ್ಲಿ ಒಳಬಾಂಧವ್ಯ ವಿವಾಹವು ಸಮುದಾಯದ ಮಟ್ಟದಲ್ಲೂ ಮತ್ತು ಹೊರಬಾಂಧವ್ಯ ವಿವಾಹವು ಕುಲದ ಮಟ್ಟದಲ್ಲೂ ರೂಢಿಯಲ್ಲಿದೆ. ಪಾರಂಪರಿಕವಾಗಿ ಕಲ್ಲಿನ ಕೆಲಸ, ಕಲ್ಲುಕುಟ್ಟುವ ಕೆಲಸ, ಗಾರೆಕೆಲಸ ಹಾಗೂ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಇವರು ಎಲ್ಲಾ ಆಧುನಿಕ ಸೌಲಭ್ಯ ಪಡೆಯುತ್ತಿದ್ದಾರೆ. ಆನವಟ್ಟಿ, ಸೊರಬ, ಬಾರಂಗಿ, ಮೊದಲಾದಡೆ ಇದ್ದಾರೆ. ಇವರು ಪ್ರತ್ಯೇಕ ಸಹ ಸಂಘಟನೆಗಳನ್ನು ಹೊಂದಿರುವುದನ್ನು ಗುರುತಿಸಬಹುದು.

ಬೇಡ

ತಾಲೂಕಿನಲ್ಲಿ ಈ ಬೇಡ ಸಮುದಾಯವನ್ನು ತಳವಾರ ಎಂದು ಗುರುತಿಸುತ್ತಾರೆ. ಇವರು ತಾವು ವಾಲ್ಮೀಕಿ ಋಷಿಗಳ ವಂಶದವರೆಂದು ಹೇಳಿ ಕೊಳ್ಳುತ್ತಾರೆ. ಇವರು ಕನ್ನಡ ಭಾಷೆಯನ್ನು ಮಾತನಾಡಿ ಕನ್ನಡ ಲಿಪಿಯನ್ನು ಬಳಸುತ್ತಾರೆ. ಸೊರಬದಲ್ಲಿ ಈ ತಳವಾರರು ಊರಿನಲ್ಲಿ ವಾಸ ಮಾಡುತ್ತಾರೆ. ಊರ

ಹೊರಗೆ ಪ್ರತ್ಯೇಕವಾಗಿ ಅಥವಾ ಕಾಡುಗಳಲ್ಲಿ ವಾಸ ಮಾಡುವವರು ಇರುವುದಿಲ್ಲ. ಊರಿನೊಳಗೆ ಪ್ರತ್ಯೇಕ ಇದ್ದು ತಳವಾರ ಕೇರಿ ಎಂದು ಹೆಸರು ಇರುವುದನ್ನು ಕಾಣುತ್ತೇವೆ. ಒಳಬಾಂಧವ್ಯ ವಿವಾಹವೂ ಸಮುದಾಯದ ಮಟ್ಟದಲ್ಲೂ ಹೊರಬಾಂಧವ್ಯ ವಿವಾಹ ಬಳ್ಳಿಗಳ ಮಟ್ಟದಲ್ಲೂ ರೂಢಿಯಲ್ಲಿದೆ. ಈ ಸಮುದಾಯದಲ್ಲಿ ಹಿರಿಯ ಮಗನು ತಂದೆಯ ನಂತರ ಕುಟುಂಬದ ಉತ್ತರಾಧಿಕಾರಿಯಾಗುತ್ತಾನೆ. ಇವರು ಸಾಂಪ್ರದಾಯಿಕವಾಗಿ, ಗ್ರಾಮ ಸೇವಕರಾಗಿ ದುಡಿಯುತ್ತಿದ್ದರು. ಇತ್ತೀಚಿಗೆ ಕೃಷಿ, ನೌಕರಿ, ಬೇರೆ ಬೇರೆ ಉದ್ಯೋಗದಲ್ಲಿ ತೊಡಗಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಇವರು ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಪರಿಸ್ಥಿತಿಗಳು ಸುಧಾರಣೆಯ ಹಾದಿಯಲ್ಲಿ ಇರುವುದನ್ನು ಕಾಣುತ್ತೇವೆ. ತಳವಾರರನ್ನು ನಾಯಕರು ಎಂದು ಸಹ ಕರೆಯುತ್ತಾರೆ. ಹೆಚ್ಚು ಹನುಮಂತನ ಆರಾಧಕರಾಗಿರುತ್ತಾರೆ. ಇವರ ಸಮುದಾಯದೊಳಗೆ ಬೆಡಗುಗಳು ಇರುವುದನ್ನು ಗುರುತಿಸಬಹುದು.

ಹರಿಜನರು

'ಮಾದರು' ಎಂದು ಸ್ಥಳೀಯರಿಂದ ಕರೆಯಲ್ಪಡುವ ಇವರು ತಾಲೂಕಿನಲ್ಲಿ ಆಯಾ ಊರಿನ ಪ್ರತ್ಯೇಕ ಕೇರಿಗೆ ಸೀಮಿತರಾಗಿರುವುದನ್ನು ನೋಡಬಹುದು. ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಹಲವು ಬೆಡಗುಗಳನ್ನು ಹೊಂದಿರುತ್ತಾರೆ. ಇವರು ತೆಲುಗಿನ ಜೊತೆಗೆ ಕನ್ನಡದಲ್ಲೂ ವ್ಯವಹರಿಸುತ್ತಾರೆ. ಸಾಂಪ್ರದಾಯಿಕ ವೃತ್ತಿಗಳೆಂದರೆ ಚರ್ಮದ ಕೆಲಸ, ಚಪ್ಪಲಿ ಹೊಲೆಯುವುದು ಹಾಗೂ ವ್ಯವಸಾಯದ ಕೂಲಿಗಳಾಗಿ ದುಡಿಯುವುದು. ಇತ್ತೀಚೆಗೆ ಕೆಲವರು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ನೌಕರಿ ಮಾಡುವುದನ್ನು ನೋಡಬಹುದು. ಇವರು ಇತ್ತೀಚೆಗೆ ಈ ಸಮುದಾಯ ಸರ್ಕಾರದ ಸೌಲಭ್ಯಗಳಿಂದ ಸುಧಾರಣೆಯ ಹಾದಿಯಲ್ಲಿದ್ದಾರೆ. ತಾಲೂಕಿನ ಅನವಟ್ಟಿ, ಜಡೆ ಕುಪ್ಪಗಡ್ಡೆ ಉಳವಿ, ಕಸಭ, ಚಂದ್ರಗುತ್ತಿ ಈ ಎಲ್ಲಾ ಹೋಬಳಿಯಲ್ಲಿಯ ಹಲವಾರು ಊರುಗಳಲ್ಲಿ ಇರುವುದನ್ನು ನೋಡುತ್ತೇವೆ.

ಹಸಲ

ಇವರ ಭಾಷೆ ಕನ್ನಡವಾಗಿದೆ. ಇವರು ಸಾಂಪ್ರದಾಯಿಕವಾಗಿ ಮನೆಯಾಳುಗಳಾಗಿದ್ದವರು. ಈಗ ಇವರಲ್ಲಿ ಬಹಳಷ್ಟು ಜನ, ವ್ಯವಸಾಯ ಹಾಗೂ ಕೂಲಿ ಆಳುಗಳಾಗಿ ಕೆಲಸ ಮಾಡುತ್ತಾರೆ. ಇವರು ತಮ್ಮ ಸ್ಥಳೀಯ ದೈವಗಳನ್ನು ಪೂಜಿಸುತ್ತಾರೆ. ತಾಲೂಕಿನಲ್ಲಿ ಹಸಲರು ಉತ್ತಮ ಜನಪದ ಕಲೆಯನ್ನು ಹೊಂದಿದವರು ಹಬ್ಬದ ಹಾಡು, ಡೊಳ್ಳು ಕುಣಿತ, ಮದುವೆ ಹಾಡುಗಾರು ಇತ್ಯಾದಿ ಕಲೆ ತಿಳಿದವರಾಗಿದ್ದಾರೆ. ಇವರು ತಾಲೂಕಿನ ಅಲ್ಲಲ್ಲಿ ಕಂಡುಬರುತ್ತಾರೆ.

ಗುಡಿಕಾರರು

ಗುಡಿಕಾರ ಎನ್ನುವ ಹೆಸರನ್ನು ಗುಡಿ ಎಂಬ ಪದದಿಂದ ಬಳಸಲಾಗಿದೆ. ಇವರು ಮೊದಲು ದೇವಸ್ಥಾನದಲ್ಲಿ ಕೆತ್ತನೆ ಕೆಲಸ ಮಾಡುತ್ತಿದ್ದವರು. ಬಣ್ಣ ಬಳಿದು ದೇವಸ್ಥಾನವನ್ನು ಸುಂದರಗೊಳಿಸುವ ವೃತ್ತಿಗೆ ಸಂಬಂಧಿಸಿದವರು ಎಂದು ಥರ್ಸ್ಟನ್ (೧೯೦೯) ಹೇಳುತ್ತಾರೆ. ಮೂಲತಃ ಗೋವಾದವರು. ಇವರು ಕರ್ನಾಟಕಕ್ಕೆ ವಲಸೆ ಬಂದರು. ಈ ಸೊರಬದಲ್ಲೂ ಬಂದು ನೆಲೆಸಿದರು. ಸೊರಬದ ಗುಡಿಕಾರರು ಹಿಂದಿನಿಂದಲೂ ಹೆಸರುವಾಸಿಯಾದವರು. ಶ್ರೀಗಂಧ, ದಂತದಲ್ಲಿ ಇವರು ದೇವತಾ ವಿಗ್ರಹಗಳನ್ನು, ಕರಂಡಕ, ಗಾಳಿಪಂಕ ಇತ್ಯಾದಿಗಳನ್ನು ಕೆತ್ತಿರವರು. ಹೆಂಗಸರು ಗಂಧದ ಕಟ್ಟಿಗೆಯಿಂದ ಹಾರಗಳನ್ನು, ಹೂವುಗಳನ್ನು ತಯಾರಿಸಿ ಕುಟುಂಬದ ಆದಾಯಕ್ಕೆ ಸಹಾಯ ಮಾಡುತ್ತಿದ್ದರು. ಇತ್ತೀಚಿಗೆ ಶ್ರೀಗಂಧ ದೊರಕದಿರುವುದರಿಂದ ಶಿವನೆಮರವನ್ನು ಕಲಾಕೃತಿಗೆ ಬಳಸುತ್ತಾರೆ. ಈ ವೃತ್ತಿಯನ್ನು ಅಂದು ೩೨೦ ಕುಟುಂಬ ಮಾಡುತ್ತಿದ್ದವು. ಇಂದು ೧೮ ಕುಟುಂಬ ಮಾಡುತ್ತಿವೆ. ಬೇರೆ ಬೇರೆ ವೃತ್ತಿಗೆ ಆಕರ್ಷಣೆಗೊಂಡಿದ್ದಾರೆ. ಇವರು ಸೊರಬದ ಮತ್ತು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಕಂಡುಬರುತ್ತಾರೆ.

ಹಗಲು ವೇಷಗಾರರು

ಸಿದ್ಧಿ ಸಮುದಾಯ, ಕಾಡು ಸಿದ್ಧರು ಎನಿಸಿಕೊಂಡ ಇವರು ತಾಲೂಕಿನಲ್ಲಿ ಕಡಿಮೆ ಪ್ರಮಾಣದಲ್ಲಿ ಇದ್ದಾರೆ. ಸಾಂಪ್ರದಾಯಿಕವಾಗಿ ವೇಷಭೂಷಣ ಹಾಕಿಕೊಂಡು ಬೇರೆ ಬೇರೆ ಹಳ್ಳಿಗೆ ಹೋಗಿ ತಮ್ಮ ಕೈಚಳಕದ ಆಟ ಮತ್ತು ಕಲೆಯನ್ನು ತೋರಿಸುವುದು ಇವರ ವೃತ್ತಿ. ಇತ್ತೀಚಿಗೆ ಕೃಷಿಯನ್ನು ಅವಲಂಬಿಸಿದ್ದಾರೆ. ತಾಲೂಕಿನ ಅಲ್ಲಲ್ಲಿ ಕಾಣಸಿಗುತ್ತಾರೆ. ಹಿರೇಕಬ್ಬೂರು ಎಂಬ ಚಿಕ್ಕಹಳ್ಳಿಯಲ್ಲಿ ಕೆಲವು ಸುಡಗಾಡು ಸಿದ್ಧರ ಕುಟುಂಬಗಳು ಇರುವುದನ್ನು ಕಾಣುತ್ತೇವೆ. ಭಾಷೆ ಕನ್ನಡವಾಗಿದೆ. ನೌಕರಿಯಲ್ಲಿ ಇರುವುದನ್ನು ನೋಡಬಹುದು.

ಹೀಗೆ ಇಲ್ಲಿಯ ಸಮುದಾಯಗಳು ಕನ್ನಡ, ತುಳು, ತೆಲಗು, ಕೊಂಕಣಿ ಭಾಷೆ ಬಲ್ಲವರಾಗಿದ್ದಾರೆ. ಬಹುಸಂಖ್ಯೆಯ ಸಮುದಾಯಗಳು ಕನ್ನಡ ಭಾಷೆ ಬಲ್ಲವರು. ಇತ್ತೀಚಿಗೆ ಎಲ್ಲಾ ಸಮುದಾಯಗಳು ಸುಧಾರಣೆಯ ಹಾದಿಯಲ್ಲಿದೆ. ಎಲ್ಲಾ ಕ್ಷೇತ್ರದಲ್ಲೂ ತಾಲೂಕಿನ ಸಮುದಾಯಗಳ ಪಾತ್ರ ಇರುವುದನ್ನು ಗುರುತಿಸಬಹುದಾಗಿದೆ.

೩.೨. ಕಲಾರಂಗ

ಸಾಂಸ್ಕೃತಿಕ ಪರಂಪರೆಯಲ್ಲಿ ವೈಶಿಷ್ಟತೆ ಹೊಂದಿರುವ ಸೊರಬವು ಕಲಾವಿದರ ನಾಡಾಗಿಯು ಗುರುತಿಸಿಕೊಂಡಿದೆ. ಇಲ್ಲಿಯ ಕಲೆಯನ್ನು ಪ್ರದರ್ಶನ ಕಲೆಗಳು, ಜನಪದ ಕಲೆಗಳು, ಲಲಿತ ಕಲೆಗಳು ಇತ್ಯಾದಿ ರೂಪದಲ್ಲಿ ಗುರುತಿಸಲು ಸಾಧ್ಯವಿದೆ.

ಪ್ರದರ್ಶನ ಕಲೆಗಳು

ಗುಡಿಗಾರಿಕೆ : ಸೊರಬ ಎಂದಾಗ ನೆನಪಿಗೆ ಬರೋದು ಗುಡಿಗಾರಿಕೆ ಕಲೆ, ಗುಡಿಗಾರರು ಹಿಂದಿನಿಂದಲೂ ಶ್ರೀಗಂಧ, ದಂತದಲ್ಲಿ ದೇವತಾವಿಗ್ರಹಗಳನ್ನು, ಕರಂಡಕ, ಗಾಳಿಪಂಕ ಇತ್ಯಾದಿಗಳನ್ನು ಕೆತ್ತಿದವರು. ಹೊಸನಗರ ತಾಲೂಕಿನ ರಾಮಚಂದ್ರಾಪುರ ಮಠದಲ್ಲಿರುವ ದಂತದ ಸಿಂಹಾಸನ ಸೊರಬದ ಗುಡಿಗಾರನ ಕಲಾಪ್ರತಿಭೆಯ ದ್ಯೋತಕ. ಈ ಸಿಂಹಾಸನವನ್ನು ಕೆತ್ತಲು ಸೊರಬದ ಗುಡಿಗಾರರು ೧೮ ವರ್ಷಗಳನ್ನು ತೆಗೆದುಕೊಂಡಿದ್ದರೆಂಬುದು ಆಶ್ಚರ್ಯದ ವಿಷಯ. ಇದರಲ್ಲಿ ಮೂಡುಗೋಡಿನ ಹಿರಿಯಣ್ಣ ಪ್ರಮುಖರು, ರಾಮಾಯಣ, ಮಹಾಭಾರತದ ಎಲ್ಲ ದೃಶ್ಯಾವಳಿಗಳನ್ನೂ ಹೊಂದಿರುವ ಈ ಸಿಂಹಾಸನ ಹಿಂದೆಲ್ಲಾ ರಾಷ್ಟ್ರೀಯ ಮಟ್ಟದ ವಸ್ತು ಪ್ರದರ್ಶನದಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು. ಸೊರಬದಲ್ಲಿ ಈ ಗುಡಿಗಾರಿಕೆ ಕಲೆ ಪಾರಂಪರಿಕ ವೃತ್ತಿಯಾಗಿತ್ತು. ಕೆಲವು ವರ್ಷಗಳ ಹಿಂದೆ ೧೨೦ ಕಲಾವಿದರ ಕುಟುಂಬಗಳಿದ್ದವು. ಈಗ ೧೮ ಮನೆಗಳಿವೆ. ಬಹುತೇಕರು ಕೆತ್ತನೆ ಕೆಲಸ ಬಿಟ್ಟಿದ್ದಾರೆ. ಬೇರೆ ಬೇರೆ ಉದ್ಯೋಗಗಳ ಕಡೆ ಕಲಾವಿದರ ಮಕ್ಕಳ ಮನಸ್ಸು ವಾಲುತ್ತಿವೆ.

ಸೊರಬ ನಗರದಲ್ಲಿ ಮೈಸೂರು ಗುಡಿಗಾರರ ಸಹಕಾರಿ ಸಂಘದ ಒಂದು ಶಾಖೆ ಇದೆ. ಮೈಸೂರು ಗುಡಿಗಾರರ ಸಹಕಾರಿ ಸಂಘ ಪ್ರಾರಂಭವಾಗಿದ್ದು, ೧೯೧೫ರಲ್ಲಿ ಈ ಸಂಘ ಶ್ರೀಗಂಧದ ಕಲಾಕೃತಿಗಳಿಗೆ ದೇಶ-ವಿದೇಶಗಳಲ್ಲಿ ನಡೆಯುತ್ತಿದ್ದ ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ಮಾರುಕಟ್ಟೆ ಒದಗಿಸಿಕೊಟ್ಟಿತ್ತು. ಸೊರಬದ ಗುಡಿಗಾರರ ಶ್ರೀಗಂಧದ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು. ಈಗ ಶ್ರೀಗಂಧದ ಕೊರತೆ ಇದ್ದುದ್ದರಿಂದ ಶಿವನೆ ಮರವನ್ನು ಕಲಾಕೃತಿಗೆ ಬಳಸುತ್ತಾರೆ.

ಯಕ್ಷಗಾನ ಬಯಲಾಟ : ರಂಗಭೂಮಿಯಲ್ಲಿ ಪ್ರದರ್ಶಿಸಲ್ಪಡುವ ಪ್ರದರ್ಶನ ಕಲೆಯಾಗಿದೆ. ಇದು ನೃತ್ಯ, ಅಭಿನಯ, ಸಾಹಿತ್ಯ ಸಂಭಾಷಣೆ ಸಂಗೀತಗಳೆಲ್ಲವೂ ಸೇರಿದ ಒಂದು ಸಮಷ್ಠಿ ಕಲೆ, ಯಕ್ಷಗಾನ ಎಂಬುದೊಂದು ಸಂಗೀತ ಶೈಲಿ ಇದನ್ನು ಅನುಸರಿಸಿ ಬಯಲಿನಲ್ಲಿ ಆಡುವ ಆಟವೇ ಬಯಲಾಟ. ಇಲ್ಲಿ ವಾದ್ಯದದ ಜೊತೆಗೆ ವೇಷಭೂಷಣಗಳೇ ಪ್ರಧಾನ. ಸೊರಬದಲ್ಲಿ ಒಳ್ಳೆಯ ಯಕ್ಷಗಾನ ಕಲಾವಿದರನ್ನು ಕಾಣುತ್ತೇವೆ.

ಹಳೆಯ ತಲೆಮಾರಿನ ಯಕ್ಷಗಾನ ಕಲಾವಿದರಲ್ಲಿ ನಿಸ್ರಾಣಿ ದೇವಪ್ಪ ಹೆಗಡೆ, ದೊಡ್ಡೇರಿ 'ರಾಮಚಂದ್ರಪ್ಪ, ತತ್ತೂರು ವಡ್ಡಿಗೇರಿಯ ಕಲ್ಲೂಡ್ಡಿ ಎಲ್ಲಪ್ಪ, ಉಳವಿ-ಸೀತಾರಾಂ ಹೆಗಡೆ ಮತ್ತು ನಿಸ್ರಾಣಿ ಸಬ್ಬರಾವರನ್ನು ಗುರುತಿಸಬಹುದು. ಯಕ್ಷಗಾನ ಪ್ರಸಂಗದ ಸಾಹಿತ್ಯದಲ್ಲಿ ಹೊಸಬಾಳೆ ಪುಟ್ಟಪ್ಪ, ಕೆರೆಕೊಪ್ಪದ ಜಾಣ ಮಂಜಪ್ಪ ಅವರನ್ನು ಕಾಣುತ್ತೇವೆ.

ನಾಟಕ : ಸೊರಬದ ನಾಟಕ ರಂಗದಲ್ಲಿ ತಾಲೂಕಿನ ಮೂಡಗೋಡಿನ ಶಾಂತಾರಾಮ್ ಹಾಸ್ಯ ನಟನೆಯಿಂದಾಗಿ ಖ್ಯಾತಿಗಳಿಸಿದ್ದಾರೆ. ಬಿದರಗೇರಿಯ ದ್ಯಾವಪ್ಪನವರು ನಾಟಕ ಕಲಾವಿದರಾಗಿ, ಹಾರ್ಮೋನಿಯಂ ವಾದಕರಾಗಿ

ನಾಟಕ ಕಲಿಸುವ ಮಾಸ್ತರರಾಗಿ ಖ್ಯಾತಿಗಳಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ. ಇತ್ತೀಚಿನ ದಿನದಲ್ಲಿ ಇವರ ಶಿಷ್ಯಂದಿರಾದ ಹಿರೇಕಬ್ಬೂರು ಪಕ್ಕಿರಪ್ಪ ಮತ್ತು ಸಿರನಾಯ್ಕನ ಕೊಪ್ಪದ ಆನಂದಪ್ಪ ಇವರು ತಾಲೂಕಿನ ಅನೇಕ ಹಳ್ಳಿಗಳಲ್ಲಿ ಸಾಮಾಜಿಕ ನಾಟಕಗಳನ್ನು ಕಲಿಸಿ ಆಡಿಸಿದ್ದನ್ನು ಕಾಣಬಹುದು.

ನಾಟಕ ಕಲಾವಿದರಲ್ಲಿ ತಾಲೂಕಿನ ದಿ. ಕಲ್ಲೂಡ್ಡಿ ಎಲ್ಲಪ್ಪ ತತ್ತೂರು-ವಡ್ಡಿಗೇರಿ ಇವರ ಹೆಸರು ಹೆಚ್ಚು ಚಿರಪರಿಚಿತ. ಸ್ವಯಂ ಆಸಕ್ತಿಯಿಂದ ಈ ಕಲೆಯಲ್ಲಿ ಬೆಳೆದವರು. ಯಕ್ಷಗಾನ ಬಯಲಾಟದ ಕಲಾವಿದರಾಗಿ, ನಾಟಕ ಮೇಷ್ಟ್ರಾಗಿ ಎತ್ತರದ ಸ್ಥಾನದಲ್ಲಿದ್ದವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸನ್ಮಾನಿತರಾದ ಇವರು ರೈತಾಪಿ ಜೊತೆಗೆ ಹವ್ಯಾಸ ರಂಗಭೂಮಿಯಲ್ಲಿ ಈ ಕಲೆಯನ್ನು ಬೆಳೆಸಿಕೊಂಡವರು. ಇವರು ತಾಲೂಕಿನ ಅನೇಕ ಹಳ್ಳಿಗಳಲ್ಲಿ ಮಾತ್ರವಲ್ಲದೆ. ಸುತ್ತಲಿನ ಹಾಗನಲ್ಲು, ಶಿಕಾರಿಪುರ, ಶಿರಸಿ, ಹಿರೇಕೆರೂರು ಮೊದಲಾದ ಕಡೆ ನಾಟಕ ಮೇಷ್ಟ್ರಾಗಿ ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಕಲಿಸಿ ಆಡಿಸಿ ಹೆಸರು ಪಡೆದಿದ್ದಾರೆ.

ಇವರು ಆಡಿಸಿದ ನಾಟಕಗಳಾದ 'ಕಿತ್ತೂರು ಚೆನ್ನಮ್ಮ', 'ಸಂಗೊಳ್ಳಿರಾಯಣ್ಣ', 'ಪಟಾನ್ ಪಾಶ', 'ಭೀಮಾರ್ಜುನರ ಕಾಳಗ', 'ಲಂಕಾದಹನ', 'ನಳ ಚರಿತ್ರೆ', 'ಸತಿ ಸಾವಿತ್ರಿ', 'ಸಿದ್ಧಾರೂಡರ ಮಹಾತ್ಮೆ', ಜಗಜ್ಯೋತಿ ಬಸವೇಶ್ವರ', 'ಅಲ್ಲಾಮಾದ್ದಿನ ಖಿಲ್ಜಿ' ಮೊದಲಾದವುಗಳನ್ನು ಹೆಸರಿಸಬಹುದಾಗಿದೆ.

ಇವರ ಸೇವೆ ಕಲಾರಂಗಕ್ಕೆ ಮಾತ್ರವಲ್ಲದೆ ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಸದಸ್ಯರಾಗಿ ಹತ್ತುವರ್ಷ ಮತ್ತು ವ್ಯವಸಾಯ ಸೇವಾ ಸಹಕಾರಿ ಸಂಘದ ಕಾರ್ಯದರ್ಶಿಯಾಗಿ ಹತ್ತು ವರ್ಷ ಸೇವೆ ಸಲ್ಲಿಸಿದ್ದಾರೆ. ಇವರು ಧಾರವಾಡದಲ್ಲಿ ನಡೆದ ಕಾಗೋಡು ಚಳವಳಿ, ಭೂ ಸುಧಾರಣ ಚಳವಳಿಯಲ್ಲಿ ಪಾಲ್ಗೊಂಡು ಸೇವೆ ನೀಡಿದವರು. ಇವರು ೧೩-೧-೧೯೯೫ರಂದು ನಿಧನರಾಗಿದ್ದಾರೆ. ಇದೆ ಹಾದಿಯಲ್ಲಿ ವೀರಬಸಪ್ಪಪೂಜಾರ, ತಂಡಿಗೆ ವೀರಭದ್ರಪ್ಪಗೌಡ ಮೊದಲಾದವರನ್ನು ಹೆಸರಿಸಬಹುದಾಗಿದೆ.

ಹೀಗೆ ಸೊರಬ ತಾಲೂಕಿನಲ್ಲಿ ನಾಟಕ ಕಲಾವಿದರು ಇರುವುದರಿಂದ ಸುಮಾರು ಹಳ್ಳಿಗಳಲ್ಲಿ ಪ್ರತಿವರ್ಷ ನಾಟಕಗಳು ನಡೆಯುತ್ತಿದ್ದವು. ಅನೇಕ ಹಳ್ಳಿಗಳಲ್ಲಿ ನಾಟಕ ಸಂಘಗಳು ಇದ್ದವು. ಕುಪ್ಪಗಡ್ಡೆಯಲ್ಲಿ ಬಯಲು ರಂಗಮಂದಿರ ಇರುವುದನ್ನು ಮಾವಳಿಯಲ್ಲಿ ನಾಟಕ ಕಂಪನಿ ಇದ್ದದ್ದನ್ನು ಗುರುತಿಸಲಾಗಿದೆ. ೪/೫ ವರ್ಷದ ಇತ್ತೀಚಿಗೆ ಹಳ್ಳಿಗಳಿಂದ ನಾಟಕ ಕಲೆ ದೂರ ಉಳಿದಿದ್ದನ್ನು ಕಾಣುತ್ತೇವೆ.

ತಾಳಮದ್ದಳೆ : ವೇಷಭೂಷಣ ನರ್ತನಗಳಿಲ್ಲದೆಯೇ ಕುಳಿತಲ್ಲಿಯೇ ಯಕ್ಷಗಾನ ಕಥಾ ಪ್ರಸಂಗವನ್ನು ನಡೆಸಿಕೊಡುವ ಸಂಪ್ರದಾಯವೇ ತಾಳಮದ್ದಳೆ, ಅಂದರೆ ಕುಳಿತಲ್ಲಿಯೇ ಭಾಗವತನು ಶ್ರುತಿ, ರಾಗ, ತಾಳಗಳಿಗೆ ಬದ್ಧನಾಗಿ ಯಕ್ಷಗಾನದ ಪದಗಳನ್ನು ಹಾಡುತ್ತಿದ್ದರೆ, ಆ ತಾಲಕ್ಕೆ ಸರಿಯಾಗಿ ಮದ್ದಳೆಗಾರ ಮದ್ದಳೆ ಬಾರಿಸುತ್ತಾನೆ. ಈ ದೃಷ್ಟಿಯಿಂದ ಇದಕ್ಕೆ ತಾಳಮದ್ದಳೆ ಎಂಬ ಹೆಸರು ಬಂದಿದೆ. ಈ ಕಲೆಯಲ್ಲಿ ತಾಲೂಕಿನ ಅಮಚಿ ಲಕ್ಷ್ಮೀನಾರಾಯಣ ಭಟ್‌ರ ಹೆಸರು ಕೇಳಿಬರುತ್ತದೆ.

ಇಲ್ಲಿ ಯಾವ ರಂಗ ಸಜ್ಜಿಕೆಯೂ ಕಂಡುಬರುವುದಿಲ್ಲ. ಪುರಾಣ ಕಥೆಗಳನ್ನು ಹೇಳುವುದರಿಂದ ಕೇಳುವುದರಿಂದ ಪುಣ್ಯ ಪ್ರಾಪ್ತಿಯಾಗಿ, ಇಷ್ಟಾರ್ಥ ಸಿದ್ಧಿಯಾಗುವುದೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಕಲೆ ತನ್ನ ಅಸ್ತಿತ್ವ ಉಳಿಸಿಕೊಂಡಿದೆ.

ಚಿತ್ತಾರ : ಹಳ್ಳಿಮನೆ ಗೋಡೆಗಳನ್ನು ಚಿತ್ತಾರಗಳಿಂದ ಸಿಂಗರಿಸುವುದು. ಮದುವೆ ಸಂದರ್ಭದಲ್ಲಿ ಮದುವೆ ಮನೆಯ ಮುಂದಿನ ಕೋಣೆಯ ಗೋಡೆಯ ಮೇಲೆ ಹಸೆಗೋಡೆ ಬರೆಸುತ್ತಾರೆ. ಹಸೆಗೋಡೆಯ ಕೆಳೆಗೆ ವಧೂವರರೂ ಹರಿಷಿಣ ಹಚ್ಚಿಕೊಳ್ಳಬೇಕು. ಈ ಹಸೆಗೋಡೆ ಚಿತ್ತಾರ ಬರೆಯುವವರಲ್ಲಿ ತಾಲೂಕಿನ ಹಿರೇಚೌಟಿ ಪಕ್ಕಿರಪ್ಪರನ್ನು ಹೆಸರಿಸಬಹುದು. ಕೆಲವರು ಬುಟ್ಟಿಯ ಮೇಲೆ ಬರೆಯುತ್ತಾರೆ. ಮತ್ತು ಭತ್ತದ ಕಣಜದ ಸುತ್ತಲಿನ ಗೋಡೆಗೆ ಕೆಮ್ಮಣ್ಣು ಸುಣ್ಣಬಳಿದು ಇದರ ಮೇಲೆ ಕೂಡ ಚಿತ್ತಾರ ಬರೆಯುತ್ತಾರೆ. ಎಲ್ಲಾ ಹಳ್ಳಿಗಳಲ್ಲೂ ಇಂತಹ ಚಿತ್ತಾರ ಕಲೆಯನ್ನು ಕಾಣಬಹುದಾಗಿದೆ.

ಡೊಂಬರಾಟ : ಮರಗಾಲು ಕುಣಿತ, ಗಣೆ ಹತ್ತುವುದು, ತಂತಿ ಮೇಲೆ ನಡೆಯುವುದು. ಪೈಲ್ವಾನನಾಟ, ಸೊಂಟ ಬಾಗಿಸುವುದು, ಜಿಗಿಯುವುದು, ಚಪಾತಿ ವೇಷ ಹಾಕಿ ಹಾಸ್ಯ ಪ್ರದರ್ಶಿಸುವುದು. ಈ ಕಲೆಯನ್ನು ಹೊಸೂರು ಡಂಬರ ಜನಾಂಗದಲ್ಲಿ ಕಾಣುತ್ತೇವೆ.

ಜೋಗೆರ್ ಆಟ : ಕರ್ನಾಟಕದ ಜಾನಪದ ರಂಗಭೂಮಿಯಲ್ಲಿ ಜೋಗೆರ್ ಆಟ ವಿಶಿಷ್ಟವಾದದ್ದು. ಹಬ್ಬ ಹರಿದಿನಗಳಲ್ಲಿ, ಉತ್ಸವ ಕಾಲಗಳಲ್ಲಿ, ಮದುವೆ ಸಂದರ್ಭದಲ್ಲಿ ಒಂದು ರಾತ್ರಿ ಪೂರ್ಣವಾಗಿ ೩/೪ ಜನ ಸಂಘಟಿಕರನ್ನು ಕಟ್ಟಿಕೊಂಡು ಅಭಿನಯದೊಂದಿಗೆ ರಾಘುವಾಗಿ ಕಥೆ ಹೇಳುತ್ತಾ ಮತ್ತೆ ಮತ್ತೆ ತತ್ವಪದ ಮತ್ತು ಲಾವಣಿಗಳನ್ನು ಬೆಳೆಸುತ್ತಾ ಆಗಾಗ ಹಾಸ್ಯಪ್ರಸಂಗ ನಿರೂಪಿಸುತ್ತಾ ಜನರನ್ನು ಮಂತ್ರ ಮುಗ್ಧರನ್ನಾಗಿ ೭/೮ ತಾಸುಗಳವರೆಗೂ ಕಟ್ಟಿ ಹಾಕುವ ಮೋಡಿ ಈ ಆಟಕ್ಕಿದೆ. ತಾಲೂಕಿನಲ್ಲಿ ಈ ಕಲೆಯನ್ನು ಕರಗತ ಮಾಡುಕೊಂಡು ಪ್ರದರ್ಶನಮಾಡಿ ಕೀರ್ತಿಗಳಿಸಿದವರೆಂದರೆ ಗುಡಗಿನಕೊಪ್ಪದ ಪಕ್ಕಿರಪ್ಪ ಜೋಗೆರ್ ಎಂಬುವವರಾಗಿದ್ದಾರೆ.

ಧಾರವಾಡ ಜಿಲ್ಲೆ ಹಾನಗಲ್ಲು ತಾಲೂಕಿನ ಹುಳಗಡಿ ಗ್ರಾಮದಲ್ಲಿಯ ಬಡಕುಟುಂಬದ ಈರಪ್ಪ ಪಕ್ಕಿರವ್ವ ದಂಪತಿಗಳಿಗೆ ಮಗನಾಗಿ ೧೪-೫-೧೯೨೨ರಂದು ಜನಿಸಿದರು. ಕಾಲಾಂತರದಲ್ಲಿ ಕುಪ್ಪಗಡ್ಡೆ ಹೋಬಳಿಯ ಗುಡಗಿನಕೊಪ್ಪದಲ್ಲಿ ವಾಸವಾದರು. ಜೋಗೆರ್ ಆಟದ ಪರಂಪರೆ ಮನೆತನದ ಹಿರಿಯರಿಂದ ಬೆಳೆದುಬಂದಿದೆ. ಬಾಯಿಯಿಂದ ಕೇಳಿ ಕಣ್ಣಿನಿಂದ ಕಂಡು ಮನೆತನದ ಕಲಾವಿದರ ಮಾರ್ಗದರ್ಶನದಲ್ಲಿ ತರಬೇತಿ ಪಡೆದು ಈ ಕಲೆಯನ್ನು ತಮ್ಮಲ್ಲಿ ಬೆಳೆಸಿಕೊಂಡರು. ಕಿನ್ನರಿ ನುಡಿಸುವುದರೊಂದಿಗೆ ಜೋಗಿಪದ, ಜನಪದಗಳನ್ನು ಹಾಡುತ್ತಿದ್ದರು. ಇವರು ವಸಂತ ಶೀಲ, ಕುಸುಮಾಂಜಲಿ, ಸತ್ಯಚನ್ನಮ್ಮ, ಲಕ್ಷಾಪತಿ, ಪಿತ್ರಶೇಖರ, ಸೋಮಶೇಖರ ಮುಂತಾದ ೧೨ ಕಲೆಗಳನ್ನು ಹೊಂದಿದವರಾಗಿದ್ದರು. ಸೊರಬ ತಾಲೂಕು ಸೂತ್ತಲಿನ ಸಾಗರ, ಶಿಕಾರಿಪುರ, ಹಾನಗಲ್ಲು ಮೊದಲಾದಡೆಯ ಜನರನ್ನು ಅಪೂರ್ವ

ಕಲೆಯಿಂದ ಮನರಂಜಿಸಿದವರು. ಬದುಕಿಗೆ ಸಂಬಂಧಿಸಿದ ಪದಗಳನ್ನು ಹಾಡುತ್ತಿದ್ದರು. ಮತ್ತು ಶಿಶುನಾಳರ ತತ್ವಪದಗಳನ್ನು ತಮ್ಮದೇ ಆದ ಸ್ವಂತ ರಾಗದಲ್ಲಿ ಹಾಡುತ್ತಿದ್ದರು.

ಶಿಕ್ಷಣದಿಂದ ದೂರ ಉಳಿದ ಇವರು ಲೋಕನಾನುಭವದ ಶಿಕ್ಷಣ ಕಂಡುಕೊಂಡಿದ್ದಾರೆ. ತಮ್ಮ ವಂಶಪರಂಪರೆಯ ಮಕ್ಕಳಿಗೆ ತರಬೇತಿ ನೀಡಿದ್ದಾರೆ. ಆದ್ದರಿಂದ ಇಂದು ಸಹ ಇವರ ವಂಶದಲ್ಲಿ ಈ ಕಲೆ ಉಳಿದುಬಂದಿದೆ.

ಜನತೆ ಕೊಟ್ಟ ಬಡ ಅತಿಥ್ಯಕ್ಕೆ, ಪುಡಿ ಕಾಸಿಗೆ ಬೆಲೆ ಕೊಡದೆ ಜೋಗೆರ ಆಟವನ್ನು ಜೀವನೋಪಾಯಕ್ಕೆ ಮಾಡಿಕೊಳ್ಳದೆ ಕಲೆಗಾಗಿ ಕಲೆ ಎಂಬ ಉದಾರತೆಯಿಂದ ಮೆರೆದಿದ್ದಾರೆ. ಈ ಹಿನ್ನಲೆಯಿಂದ ಜಾನಪದ ಸಾಹಿತ್ಯ ಅಕಾಡೆಮಿ ರಾಜ್ಯಪ್ರಶಸ್ತಿ ಮತ್ತು ೧೯೮೩ರಲ್ಲಿ ಹೆಗ್ಗೋಡಿನಲ್ಲಿ ಕರ್ನಾಟಕದ ನಾಟಕ ಅಕಾಡೆಮಿ ಸಂಘದಿಂದ ಪ್ರಮಾಣ ಪತ್ರ ಪಡೆದು ಕೀರ್ತಿಗಳಿಸಿದ್ದಾರೆ. ಜಗವೆಲ್ಲ ನಗುತಿರಲಿ ಜಗದಳಲು ನನಗಿರಲಿ ಎಂಬ ಕವಿಪ್ರಾರ್ಥನೆ ಇವರಿಗೂ ಅನ್ವಯವಾಗಿದೆ.

ಹೀಗೆ ಕಲೆಯನ್ನು ಜೀವನದ ಒಂದು ಭಾಗವನ್ನಾಗಿಸಿಕೊಂಡ ಇವರು ಬದುಕಿನ ಕೊನೆಯವರೆಗೂ ಉಳಿಸಿಕೊಂಡವರಾಗಿದ್ದಾರೆ. ಇವರು ೧೮-೯-೧೯೯೯ರಿಂದ ನಿಧನರಾದರು. ಇವರಿಗೆ ಎರಡು ಮಕ್ಕಳು ಇದ್ದು ಇಂದು ಈ ಕಲೆ ಇವರಲ್ಲಿಯೂ ಪಾರಂಪರಿಕವಾಗಿ ಬೆಳೆದುಬಂದಿರುವುದನ್ನು ಕಾಣುತ್ತೇವೆ.

ಚಿತ್ರರಂಗ

ತಾಲೂಕಿನ ಎಸ್ ಕುಮಾರ್ ಬಂಗಾರಪ್ಪ ಮತ್ತು ಎಲಿವಾಳದ ಬಿ.ಸಿ.ಪಾಟಿಲ್ ಚಿತ್ರರಂಗದಲ್ಲಿ ಹೆಸರುಗಳಿಸಿದ್ದಾರೆ.

ಪೋಲೀಸ್ ಪಾಟೀಲರ ಸಿನಿಮಾ ನಂಟು : ಬಿ.ಸಿ.ಪಾಟೀಲ್ ಎಂದು ಹೆಸರಾದ ಇವರು ದಾವಣಗೆರೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿಯೇ "ನಿಷ್ಕರ್ಷ" ಚಿತ್ರದಲ್ಲಿ ಪಾತ್ರ ಮಾಡಿದ್ದರು. ತಮ್ಮ ಪಾತ್ರವನ್ನಂತೂ ತುಂಬಾ ಪರಿಣಾಮಕಾರಿಯಾಗಿ ನಿರ್ವಹಿಸಿದ್ದರು. ನಂತರ ಪೂರ್ಣಸತ್ಯ, ಜೈ ಹಿಂದ್, ದಳವಾಯಿ ಚಿತ್ರಗಳಲ್ಲಿ ಭಾಗವಹಿಸಿದರು. ಮುಂದೆ ತಮ್ಮ ಉದ್ಯೋಗದಿಂದ ಮೇಲೇರಿ ಯಶವಂತಪುರ ಪೋಲೀಸ್ ಠಾಣೆಗೆ ವರ್ಗವಾಗಿ ಬಂದ ಮೇಲೆ. 'ಕೌರವ' ಚಿತ್ರದಲ್ಲಿ ಹೀರೋ ಆಗಿ ನಟಿಸಿದರು. ನಂತರ 'ಪ್ರೇಮಾಚಾರಿ' ಎಂಬ ವಿಭಿನ್ನ ಚಿತ್ರದಲ್ಲಿ ನಟಿಸಿದರು. ತಮ್ಮ ಸೋದರ ಅಶೋಕ ಪಾಟೀಲ್ ನಿರ್ದೇಶನದ 'ಶಾಪ' ಚಿತ್ರದಲ್ಲಿಯೂ ಪಾತ್ರ ಮಾಡಿದ್ದಾರೆ. ಹಾಗೆಯೇ 'ಲಂಕೇಶ' ಚಿತ್ರದ ನಿರ್ದೇಶನವನ್ನು ನಿರ್ವಹಿಸಿದ್ದಾರೆ. ಹೀಗೆ ಚಿತ್ರರಂಗದಲ್ಲಿ ಗುರುತಿಸಿಕೊಂಡಂತೆ. ರಾಜಕೀಯ ದಲ್ಲಿಯೂ ಎತ್ತರದ ಸ್ಥಾನದಲ್ಲಿದ್ದಾರೆ.

ಎಸ್. ಕುಮಾರ್ ಬಂಗಾರಪ್ಪರ ಸಿನಿಮಾ ನಂಟು : ತಾಲೂಕಿನ ಕುಬಟೂರಿನವರಾಗಿದ್ದು ಇವರು ರಾಜಕೀಯ ಪ್ರವೇಶದ ಮುಂಚೆಯೇ ಸಿನಿಮಾ ರಂಗದಲ್ಲಿ ಆಸಕ್ತಿ ಉಳ್ಳವರಾಗಿದ್ದು, ಉತ್ತಮ ಪಾತ್ರಗಳ ಮೂಲಕ ಚಿತ್ರರಂಗದಲ್ಲಿ ಬೆಳೆದು ನಾಯಕ ಪಾತ್ರದಲ್ಲಿ ಪರಿಣಾಮಕಾರಿಯಾದ ನಟನೆಯನ್ನು ತೋರಿಸಿದ್ದಾರೆ. ಮೃದುಸ್ವಭಾವದ ಇವರ ಪಾತ್ರದ ಆಯ್ಕೆ ಹೋಲಿಕೆ ಆಗುವಂತೆ ಇದೆ. ಜನಪ್ರಿಯವಾದ ಚಿತ್ರಗಳೆಂದರೆ "ಅಶ್ವಮೇಧ", "ರಕ್ತಕಣ್ಣೀರು", "ಓ ಮಲ್ಲಿಗೆ" ಮೊದಲಾದವುಗಳನ್ನು ಹೆಸರಿಸಬಹುದು.

"ಹೃದಯ ಸಮುದ್ರ ಕಲಕಿ ಹತ್ತಿದ ರೋಷದ ಬೆಂಕಿ ರೋಷಾಗ್ನಿ ಜ್ವಾಲೆ ಉರಿದುರಿದು", ಜನಪ್ರಿಯ ಹಾಡು ಇವರ ಸಿನಿಮಾದ್ದು.

ಇವರು ಸಿನಿಮಾ ನಟರಾಗಿಯೇ ರಾಜಕೀಯಕ್ಕೆ ಇಳಿದರು. ಇವರ ಕೊಡುಗೆ ಸಿನಿಮಾ ಕ್ಷೇತ್ರಕ್ಕೆ ಸೀಮಿತವಾಗಿರದೆ ರಾಜ್ಯದ ನೀರಾವರಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

ಮಧು ಬಂಗಾರಪ್ಪ : ಆಕಾಶ ಆಡಿಯೋ ನಿರ್ವಾಹಕರಾಗಿ ಕನ್ನಡ ಚಿತ್ರರಂಗಕ್ಕೆ ಸೇವೆ ನೀಡಿದ್ದಾರೆ. 'ಕಲ್ಲರಳಿ ಹೂವಾಗಿ' ಸಿನಿಮಾದ ನಿರ್ಮಾಪಕರಾಗಿ ಈ ಚಿತ್ರಕ್ಕೆ ೨೦೦೮ರಲ್ಲಿ ರಾಷ್ಟ್ರ ಪ್ರಶಸ್ತಿ ಪಡೆದಿದ್ದರೆ, ಇದು ಅವರ ಮೊದಲ ಸಿನಿಮವಾಗಿದೆ.

ಎನ್.ಎಸ್.ಶಂಕರ : ತಾಲೂಕಿನವರಾದ ಇವರು 'ಉಲ್ಟಾಪಲ್ಟಾ', 'ರಾಂಗ್‌ನಂಬರ್' ಸಿನಿಮಾ ನಿರ್ದೇಶಕರಾಗಿದ್ದಾರೆ. ಹಾಗೂ ಉತ್ತಮ ಸಿನಿಮಾ ವಿಮರ್ಶಕರೂ ಆಗಿ ಹೆಸರು ಮಾಡಿದ್ದಾರೆ.

ಧಾರವಾಹಿ : ಸೊರಬದ ಎಂ.ಸೈಯದ್ ಅನ್ಸರರ ಹೆಸರು ಕೇಳಿಬರುವುದು. "ಏಸೂರು ಕೊಟ್ಟರು ಈಸೂರು ಬಿಡೆವು" ಎಂಬ ಕಿರುತೆರೆಯ ಧಾರವಾಹಿಯಲ್ಲಿ ನಟಿಸಿದ್ದಾರೆ. ಇದು ಅವರು ಮೊದಲು ನಟಿಸಿದ್ದಾಗಿದೆ. ಅವರ ಉತ್ತಮ ನಟನೆಯಿಂದ ಇನ್ನು ಅನೇಕ ಧಾರವಾಹಿಯಲ್ಲಿ ಕಾಣಲು ಸಾಧ್ಯವಿದೆ.

ಜಾನಪದ ಕಲೆಗಳು

ಡೊಳ್ಳು ಕುಣಿತ : ತಾಲೂಕಿನ ಗ್ರಾಮೀಣದಲ್ಲಿ ಈ ಜನಪದ ಕಲೆ ಸಮೃದ್ಧವಾಗಿ ಬೆಳೆದಿದೆ. ಹವೀಕ, ದೀವರ, ಹಸಲರ ಜನಾಂಗದವರು ಈ ಡೊಳ್ಳು ಕುಣಿತವನ್ನು ಹಬ್ಬ-ಜಾತ್ರೆ-ಮದುವೆ ಇತರೆ ಉತ್ಸವ ಸಂದರ್ಭದಲ್ಲಿ ತಮ್ಮ ಈ ಕಲೆಯನ್ನು ಪ್ರದರ್ಶಿಸುತ್ತಾರೆ. ಡೊಳ್ಳು ಮೇಳಗಳು ತತ್ತೂರು ವಡ್ಡಿಗೇರಿ, ಗುಡ್ಡೆಕೊಪ್ಪ, ಹಿರೇಮಾಗಡಿ, ಸಾರೆಕೊಪ್ಪ, ಕುಪ್ಪಗಡ್ಡೆ ಮೊದಲಾದಡೆ ಶ್ರೀ ಸಿದ್ಧರಾಮೇಶ್ವರ, ಶ್ರೀ ವೀರಭದ್ರೇಶ್ವರ ಹೆಸರಿನ ಮೇಳಗಳು ಕಾಣಸಿಗುತ್ತವೆ. ಡೊಳ್ಳಿನೊಂದಿಗೆ ಕಂಚಿನ ತಾಳ ಬಳಸುತ್ತಾರೆ. ವೇಷಭೂಷಣ ಧರಿಸಿರುತ್ತಾರೆ. ಪದಗಳನ್ನು ಹಾಡುತ್ತಾ ಕುಣಿತದ ನೋಟವನ್ನು ತೋರಿಸುತ್ತಾರೆ.

ಭಜನೆ : ಸೊರಬದ ಪ್ರತಿ ಹಳ್ಳಿಯಲ್ಲಿಯೂ ಭಜನೆ ಹಾಡುವ ಕಲೆ ಇರುವುದನ್ನು ಗುರುತಿಸಬಹುದು. ಹಬ್ಬಗಳ ಪೂಜೆಯ ಸಂದರ್ಭದಲ್ಲಿ, ಉತ್ಸವ ಇರುವಾಗ, ವಿಶೇಷ ಆಚರಣೆ ಇದ್ದಾಗ ಈ ಕಲೆ

ಕಾಣಬಹುದು. ಹಾಡುವಾಗ ಹಾರ್ಮೋನಿಯಂ, ತಂಬೂರಿ, ತಬಲ, ತಪ್ಪಡೆ, ತಾಳ ಇರುತ್ತವೆ. ಇವುಗಳನ್ನು ಲಯಬದ್ಧವಾಗಿ ಬಳಸುತ್ತಾರೆ. ಮುಂದೆ ಒಬ್ಬರು ಹಾಡಿದರೆ ಹಿಮ್ಮೇಳದ ೬/೭ ಜನ ಹಾಡುತ್ತಾರೆ. ದಾಸರ ಹಾಡುಗಳು, ಶಿಶುನಾಳ ಶರೀಫರ ಹಾಡುಗಳನ್ನು ಹೆಚ್ಚು ಹೇಳುತ್ತಾರೆ.

ವೀರಭದ್ರನ ಕುಣಿತ : ಇದು ವೀರಭದ್ರನನ್ನು ಆರಾಧಿಸುವ ಒಂದು ಕ್ರಮ. ವೀರನೃತ್ಯ ಇದಾಗಿದೆ. ಒಡಬು ಹೇಳುತ್ತಾ ಚಮಾಳದ ಮೊಳಗುವ ಢಣಢಣ ಸದ್ದಿಗೆ ಹೆಜ್ಜೆ ಹಾಕಲಾರಂಭಿಸುತ್ತಾರೆ. ಈ ಪ್ರಕ್ರಿಯೆ ವೀಕ್ಷಕರನ್ನು ರೋಮಾಂಚನಗೊಳಿಸುತ್ತದೆ. ವೇಷಭೂಷಣದಿಂದ ವೀರಭದ್ರನ ಪ್ರತಿರೂಪದಂತೆ ಕಂಗೊಳಿಸುತ್ತಾನೆ. ಸೊರಬದಲ್ಲಿ ಈ ಕುಣಿತ ವೀರಭದ್ರದೇವರ ಜಾತ್ರೆ ಸಂದರ್ಭದಲ್ಲಿ ಹೆಚ್ಚು ಕಂಡುಬರುತ್ತದೆ. ಚಾಟೀಕೊಪ್ಪದ ಜಾತ್ರೆಯಲ್ಲಿ ಈ ಕುಣಿತವನ್ನು ಕಾಣಬಹುದು. ತತ್ತೂರು ಗ್ರಾಮದ ಮುಖಪ್ಪ ಎಂಬುವರು ಈ ಕಲೆಯನ್ನು ರೂಢಿಸಿಕೊಂಡಿದುದನ್ನು ನೋಡಬಹುದಾಗಿದೆ.

ಲಲಿತ ಕಲೆಗಳು : ಸಂಗೀತದಲ್ಲಿ ತಾಲೂಕಿನ ಬಿ. ನಾರಾಯಣಪ್ಪ ಅವರನ್ನು ಹೆಸರಿಸಿದರೆ, ಸೀತಾರ ವಾದಕದಲ್ಲಿ ಜೋತಾಡಿ ವಸಂತ ಕುಮಾರ್, ಕೊಳಲುವಾದಕದಲ್ಲಿ ಗಿರಿಧರ್ ದೊಡ್ಡೇರಿ, ಗಮಕ ವಾಚನಕ್ಕೆ ಕೆರೆಕೊಪ್ಪದ ಕೆ.ವಿ.ನರಹರಿ ಶರ್ಮಾರನ್ನು ಗುರುತಿಸಲಾಗಿದೆ.

ಇತರೆ ಕಲೆಗಳು : ತಾಲೂಕಿನ ಆಕಾಶವಾಣಿ ಕಲಾವಿದರಲ್ಲಿ ಹೆಚ್.ಗುರುಮೂರ್ತಿ, ಇಂದುಮತಿ, ನೀಲಕಂಠರಾವ್, ಮಧುಶ್ರೀ, ತೇಜಸ್ವಿನಿ ಹೊಸಬಾಳೆ ಮೊದಲಾದವರನ್ನು ಕಾಣಬಹುದಾಗಿದೆ.

ಚಿತ್ರಕಲೆಯಲ್ಲಿ ಆನಂದ ಗೋಡಬೋಲೆಯನ್ನು, ಶಿಲ್ಪಕಲೆಯಲ್ಲಿ ವಿಶ್ವನಾಥ ನಾವುಡ, ರಾಘವೇಂದ್ರ ಶೇಟ್, ಕುಮಾರ ಗುಂಡಶೆಟ್ಟಿಕೊಪ್ಪರನ್ನು ಗುರುತಿಸಿದರೆ, ತಾಂತ್ರಿಕ ಕಲೆಯಲ್ಲಿ ಸೊರಬದ ನಾಡಿಗ್ ನೀಲಕಂಠರಾವ್ ಮೈಸೂರು ಸಂಸ್ಥಾನದ ವೇಳೆಗೆ ಕಾರ್ಯನಿರ್ವಹಿಸಿ ಹೆಸರುಗಳಿಸಿದ್ದಾರೆ. ಛಾಯಗ್ರಹಣ ಕಲೆಯಲ್ಲಿ ದಿ.ಡಾ.ಡಿ.ವಿ.ರಾವ್ ಅವರನ್ನು ನೋಡಬಹುದಾಗಿದೆ. ಹಾಗೆಯೇ ನಾಟಿ ವೈದ್ಯರಲ್ಲಿ ಕೋಣನಕಟ್ಟೆ ನಂಜುಂಡರಾಯರು, ಮರೂರು ಗುರುಬಸಪ್ಪಗೌಡರು, ಹಿರೇಕಬ್ಬೂರಿನ ಸಣ್ಣ ಹನುಮಂತಪ್ಪ ಗೊಡೇರ್ ಮೊದಲಾದವರು ಅಪಾರವಾಗಿ ಸೇವೆಗೈದಿದ್ದಾರೆ. ಮೂಳೆ ಮುರಿತಕ್ಕೆ ಔಷಧಿ ನೀಡುವಲ್ಲಿ ಬೆಣಗೇರಿ ಬಸವನಗೌಡರನ್ನು ಚಿಕ್ಕಮಾಕೊಪ್ಪದ ಹುಚ್ಚರಾಯಪ್ಪರನ್ನು ಹೆಸರಿಸಬಹುದು. ಅಜಂತ ಕಲಾವಿದರೆಂದೇ ಖ್ಯಾತಿಗಳಿಸಿರುವ ಬಸವರಾಜ ಕಟ್ಟೀಮನಿಯವರನ್ನು ಸೊರಬ ತಾಲೂಕಿನಲ್ಲಿ ಕಾಣಬಹುದು.

ಈ ರೀತಿಯಲ್ಲಿ ಕಂಡುಬರುವ ಸೊರಬದ ಕಲಾರಂಗ ನಾಡಿನ ಸಾಂಸ್ಕೃತಿಕ ಪರಂಪರೆಗೆ ತನ್ನ ಕೊಡುಗೆ ನೀಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಕಲಾರಂಗ ವೃತ್ತಿಯಾಗಿಯೂ ಬೆಳೆದಿದೆ ಹಾಗೂ ಹವ್ಯಾಸವಾಗಿಯೂ ಬೆಳೆದಿರುವುದು ಕಂಡುಬರುತ್ತದೆ. ಇವಷ್ಟೆ ಅಲ್ಲದೆ ತಾಲೂಕಿನಲ್ಲಿ ಹಗಲು ವೇಷ ದಾರಿಗಳನ್ನು, ಎಣ್ಣೆಕೊಪ್ಪದ ಬಾಬಾ ಸಾಹೇಬ್ ರಂತಹ ಲಾವಣಿಕಾರರನ್ನು ಜನಪದ ತಜ್ಞ ಹುಚ್ಚಪ್ಪ

ಮಾಸ್ತರರನ್ನು, ತಂಬೂರಿಯ ಸಾದಪ್ಪ ತತ್ತೂರು ವಡ್ಡಿಗೇರಿ ಹಾಗೂ ವ್ಯಂಗ್ಯ ಚಿತ್ರ ಕಲೆಯಲ್ಲಿ ಹಾ.ಉಮೇಶ, ಡಾ. ವಿಶ್ವನಾಥರಾವ್, ಡೊಂಗ್ರೆ ಇವರುಗಳನ್ನು ಶ್ಲಾಘಿಸಬಹುದು. ಜೋಗಿಪದದ ಕೊರಕೋಡು ಫಕ್ಕಿರಪ್ಪ, ಲಕ್ಷ್ಮಣಪ್ಪ ಜೋಗಿ, ಚಂಡೆವಾದ್ಯದ ಮೂಡುಗೋಡು, ಮಹಾಬಲೇಶ್ವರು, ಹರ್ಷ ಹೊಸಬಾಳೆ, ಹರೀಶ ಹೊಳ್ಳ, ಸಂಶೋಧಕ ಬಿ.ಟಿ.ಸುಬ್ಬರಾವ್ ಮೊದಲಾದವರು ಕಲಾರಂಗದಲ್ಲಿ ಸೇವೆಗೈದಿದ್ದಾರೆ.

ತಾಲೂಕಿನ ಹಳ್ಳಿಗಳಿಗೆ ಹೊರಗಿನಿಂದ ಅನೇಕ ಕಲೆಗಾರರು ಬಂದು ಪ್ರದರ್ಶನ ಮಾಡಿ ಹೋಗುತ್ತಾರೆ. ಗುತ್ತಿ ಜಾತ್ರೆಗೆ ಚೌಡಿಕೆಯವರು ದೂರದ ತಾಲೂಕಿನಿಂದ ಬರುತ್ತಾರೆ. ಹಾಗೆಯೇ ಹೆಳವರು, ಕೋಲಾಟದವರು, ಸಿದ್ದವೇಷದವರು, ಹುಲಿವೇಷದವರು. ಬುಡಬುಡಕಿಯವರು, ದೊಂಬರಾಟದವರು, ಕೀಲು ಕುದುರೆ ಕುಣಿತದವರು, ಕೊಲೆ ಬಸವ ಆಡಿಸುವವರು, ಕರಡಿ ವೇಷದವರು ಗೊಂಬೆಯಾಟದವರು ಇನ್ನೂ ಮೊದಲಾದವರು ಹೊರಗಿನ ತಾಲ್ಲೂಕು, ಜಿಲ್ಲೆಗಳಿಂದ ಸೊರಬಕ್ಕೆ ಬಂದು ಹಲವು ಹಳ್ಳಿಗಳನ್ನು ಸುತ್ತಾಡಿ ತಮ್ಮ ಕಲೆಯನ್ನು ಪ್ರದರ್ಶಿಸಿ, ಭತ್ತ, ಅಕ್ಕಿ, ಮೆಣಸು, ಹುಣಸೆಹಣ್ಣು ಇತ್ಯಾದಿ ಬಗೆಯ ಧವಸಗಳು ಅಥವಾ ದುಡ್ಡನ್ನು ಪಡೆದು ಮರಳುವುದನ್ನು ಕಾಣುತ್ತೇವೆ.

ಇತ್ತೀಚಿಗೆ ಸಾಂಪ್ರದಾಯಿಕ ಕಲೆಗಳು ಕಡಿಮೆ ಆಗುತ್ತಿರುವಂತೆ ತೋರುತ್ತವೆ. ಅಂದರೆ ಜನರ ಆಸಕ್ತಿ ಬೇರೆ ಬೇರೆ ವೃತ್ತಿಗಳ ಕಡೆ ಕೇಂದ್ರೀಕೃತವಾಗಿದೆ. ಮಾಧ್ಯಮಗಳ ಪ್ರಭಾವದಿಂದ ಹವ್ಯಾಸಿ ಕಲೆ ಸಂಕುಚಿತವಾಗುವಂತೆ ಕಂಡುಬರುತ್ತದೆ. ಈ ರೀತಿಯಾದ ಅನೇಕಾನೇಕ ಕಾರಣಗಳಿಂದ ವಿವಿಧ ಬಗೆಯ ಸಾಂಪ್ರದಾಯಿಕ ಜನಪದ ಕಲೆಗಳು ನಶಿಸುತ್ತಿರುವುದು ನಿರಾಶೆದಾಯಕವಾಗಿದೆ.

೩.೩ ಆಚರಣೆಗಳು

ಆಚರಣೆಗಳು ಸಂಸ್ಕೃತಿಯ ಪ್ರತೀಕ ಇಂದಿಗೂ ಮಾನವನ ಹಲವಾರು ವಿಷಯಗಳು ಆಚರಣೆಯ ಮೂಲಕ ನಡೆಯುತ್ತವೆ. ಅದರಲ್ಲೂ ವಿಶೇಷವಾಗಿ ಮಾನವನ ಸಂಸ್ಕೃತಿ-ಚರಿತ್ರೆಯ ಹಲವಾರು ದರ್ಶನಗಳನ್ನು ಆಚರಣೆಗಳಲ್ಲಿ ಕಾಣಬಹುದು. ಆಚರಣೆ, ನಂಬಿಕೆ, ಸಂಪ್ರದಾಯ, ನಿಷೇದ ಪದ್ಧತಿ, ವಿಧಿ ವಿಧಾನಗಳು ಮಾನವನ ಸಂಸ್ಕೃತಿಯೊಳಗೆ ಸಮ್ಮಿಳಿತಗೊಂಡ ವೈವಿಧ್ಯ ಸಂಸ್ಕೃತಿಯ ರೂಪಗಳಾಗಿವೆ. ಸೊರಬ ಆಚರಣೆಗಳ ಪ್ರಮುಖ ಕೇಂದ್ರ ದೈವವಾಗಿದೆ. ಹಬ್ಬಗಳು, ಉತ್ಸವ, ಜಾತ್ರೆಗಳು ನಡೆಯುವುದು ದೈವದ ನಂಬಿಕೆ ಮೇಲೆ ಹೆಚ್ಚು ಆಚರಣೆಗಳು ಇವೆ. ಇವು ತಾಲೂಕಿನಲ್ಲಿ ಒಂದೇ ಬಗೆಯಾಗಿವೆ. ಕೆಲವೊಂದು ಆಚರಣೆಗಳು ಆಯಾ ಸಮುದಾಯಕ್ಕೆ ಅನುಗುಣವಾಗಿ ರೂಢಿಗತವಾಗಿವೆ. ಬೇರೆ ಬೇರೆ ಊರುಗಳಲ್ಲಿ ಬೇರೆಯಾಗಿಯೇ ಆಚರಣೆ ಇರುವುದು ಕಡಿಮೆ. ಮುಸ್ಲಿಂ, ಕ್ರಿಶ್ಚಿಯನ್ , ಹಿಂದೂಗಳ ಹಬ್ಬ, ಜಾತ್ರೆ ಹೆಚ್ಚಾಗಿ ಬೇರೆ ಬೇರೆಯಾಗಿ ಇರುತ್ತವೆ. ಹಿಂದೂಗಳ ಜನಾಂಗದಲ್ಲಿ ನಡೆಯುವ ಅನೇಕ ಹಬ್ಬ ಜಾತ್ರೆ ಹೆಚ್ಚು ಕಡಿಮೆ ಒಂದೇ ಬಗೆಯದಾಗಿರುತ್ತವೆ.

ಹಬ್ಬಗಳು

ಹಬ್ಬಗಳು ಭಕ್ತಿ, ಧರ್ಮ, ವ್ರತಾಚರಣೆ ಮತ್ತು ಸಂಸ್ಕೃತಿಯ ಸಂವರ್ಧಕಗಳಾಗಿವೆ. ಹಬ್ಬ ಎನ್ನುವ ಪದ ಸಂತೋಷ ಎಂಬ ಅರ್ಥವನ್ನು ಕೊಡುತ್ತದೆ. ಜನರು ನಕ್ಕು ನಲಿಯುವ, ಉಂಡು ತೇಗಿ ಸಂತೋಷ ಪಡುವ ದಿನವನ್ನು 'ಹಬ್ಬ' ಎನ್ನಬಹುದು. ಈ ಹಬ್ಬಗಳು ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾರೂಪಗಳೇ ಆಗಿವೆ. 'ಹಬ್ಬ' ಎಂದರೆ 'ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನು ಒಲಿಸಿಕೊಳ್ಳುವ ಸತತ ಪ್ರಯತ್ನದ ಫಲ' ಎನ್ನಬಹುದು. ದೇವರ ಬಗೆಗಿನ ಭೀತಿಯೇ ಆರಾಧನೆಯಾಗಿ, ಆರಾಧನೆಯೇ ಹಬ್ಬವಾಗಿರಬಹುದು. ನಾವು ಆಚರಿಸುವ ಪ್ರತಿಯೊಂದು ಹಬ್ಬಗಳಿಗೂ ಒಂದೊಂದು ಕಥೆಗಳಿವೆ. ಈ ಕಥೆಗಳು ಜನರು ಸನ್ಮಾರ್ಗದತ್ತ ನಡೆಯುವಂತೆ ತಿಳಿಸುತ್ತವೆ. ಹಬ್ಬಗಳನ್ನು ಸಾಮೂಹಿಕ, ಸಾಂಘಿಕ ಎಂದು ಎರಡು ಗುಂಪುಗಳಾಗಿ ಮಾಡಿಕೊಳ್ಳಬಹುದು. ಸಂಕ್ರಾಂತಿ, ಯುಗಾದಿ, ಗೌರಿ, ದೀಪಾವಳಿ ಮುಂತಾದ ಹಬ್ಬಗಳನ್ನು ಸಾಮೂಹಿಕ ಹಬ್ಬಗಳೆಂದು ಕರೆಯಬಹುದು. ಈ ಹಬ್ಬಗಳನ್ನು ಹಿಂದೂಗಳು ಆಚರಿಸುತ್ತಾರೆ. ಈ ಹಬ್ಬಗಳು ಅವರವರ ಮನೆಯಲ್ಲಿ ನಡೆಸುವ ಆಚರಣೆಗಳಾದರೂ ಏಕಕಾಲದಲ್ಲಿ, ಒಂದೇ ರೀತಯಲ್ಲಿ, ಒಂದೇ ರೂಪದಲ್ಲಿ ಎಲ್ಲಾ ಕಟ್ಟುಪಾಡುಗಳಿಗನುಗುಣವಾಗಿ ನಡೆಸುವುದರಿಂದ ಇವು ಸಾಮೂಹಿಕ ರೂಪವನ್ನು ಪಡೆದುಕೊಳ್ಳುತ್ತವೆ. ಎಲ್ಲರಿಗೂ ಸಂಬಂಧ ಪಡದೆ ಒಂದೊಂದು ಗುಂಪು/ ಸಂಸ್ಥೆಗೆ ಮಾತ್ರ ಸಂಬಂಧಿಸಿದ ಹಬ್ಬಗಳು ಸಾಂಘಿಕ ಹಬ್ಬಗಳು ಎನಿಸುತ್ತವೆ. ಉದಾ : ಪಿತೃ ಪಕ್ಷ, ಜಡೆಮನಿ ಹಬ್ಬ, ಹೊಲದ ಹಬ್ಬ ಇತ್ಯಾದಿ.

ಯುಗಾದಿ ಆಚರಣೆ : ಯುಗಾದಿ ಹಬ್ಬದಿಂದ ಹಿಂದೂ ವರ್ಷವು ಪ್ರಾರಂಭವಾಗುತ್ತದೆ. ಯುಗಾದಿಯೆಂದರೆ ಹೊಸವರ್ಷದ ಮೊದಲದಿನ ಈ ಹಬ್ಬವನ್ನು ಹಿಂದೂಗಳೆಲ್ಲರೂ ಆಚರಿಸುವರು. ಈ ಹಬ್ಬದಲ್ಲಿ ಎಲ್ಲರೂ ಹೊಸ ಬಟ್ಟೆಧರಿಸಿ, ಬೇವು-ಬೆಲ್ಲವನ್ನು ತಿಂದು ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಈ ಹಬ್ಬದಲ್ಲಿ ಮಾವಿನ ಸೊಪ್ಪು ಮತ್ತು ಬೇವಿನ ಸೊಪ್ಪುಗಳನ್ನು ತಂದು ಮನೆ ಮುಂದೆ ತೋರಣಗಳನ್ನು ಕಟ್ಟುತ್ತಾರೆ. ಎಲ್ಲಾ ಊರಿನಲ್ಲಿ ಚಂದ್ರಮಾನ ಯುಗಾದಿ ಆಚರಣೆ ನಡೆಯುತ್ತದೆ. ತಾಲೂಕಿನಲ್ಲಿ ಪಾಡ್ಯ ಗೋಚರಿಸಿದ ದಿನ ಇಲ್ಲವೆ ನಂತರದ ದಿನ ಹಬ್ಬ ಆಚರಿಸುತ್ತಾರೆ. ನಂತರದ ದಿನದಲ್ಲಿ ಚಂದ್ರದರ್ಶನ ಸಾಧ್ಯವಾಗುತ್ತದೆ. ಸಂಜೆ ದರ್ಶನ ಮಾಡಿ ಪರಸ್ಪರ ಬೇವು-ಬೆಲ್ಲ/ಎಳ್ಳು-ಬೆಲ್ಲಗಳ ವಿನಿಮಯ ನಡೆಯುತ್ತದೆ. ಮನೆಯ ಹಿರಿಯರ ಕಾಲಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದ ಪಡೆಯುತ್ತಾರೆ. ಕೆಲವರು ಅಂದೆ ಪಂಚಾಂಗದ ಫಲ ತಿಳಿದುಕೊಳ್ಳುತ್ತಾರೆ. ದೇವಸ್ಥಾನದಲ್ಲಿ ವಿಶೇಷ ಪೂಜೆಗೆ ಪಾಲ್ಗೊಳ್ಳುತ್ತಾರೆ.

ಗೌರಿ ಗಣೇಶನ ಹಬ್ಬದ ಆಚರಣೆ : ಗೌರಿ ಹಬ್ಬ ಹೊಸದಾಗಿ ಮದುವೆಯಾದ ಮದುಮಕ್ಕಳಿಗೆ ವಿಶೇಷ ಹಬ್ಬ. ಭಾದ್ರಪದ ಶುದ್ಧ ತೃತೀಯ ಮತ್ತು ಚತುರ್ಥಿಯಂದು ಗೌರಿಗಣೇಶನ ಹಬ್ಬ ಬರುತ್ತದೆ. ಶಿವನ

ಹೆಂಡತಿಯಾದ ಗೌರಿದೇವಿಯು ತೌರುಮನೆಗೆ ಬರುತ್ತಾಳೆಂದೂ ತಾಯಿಯನ್ನು ಕರೆದುಕೊಂಡು ಹೋಗಲು ಗಣಪತಿ ಬರುವನೆಂದೂ ನಂಬಿಕೆ ಇದೆ. ಸೊರಬದ ಎಲ್ಲಾ ಊರುಗಳಲ್ಲಿಯೂ ಗಣಪತಿಯನ್ನು ಊರಿನ ಮುಖ್ಯಸ್ಥಳದಲ್ಲಿ ಚಪ್ಪರ ಹಾಕಿ ಅಲಂಕರಿಸಿ ಕೂರಿಸುತ್ತಾರೆ. ಕೆಲವರು ಪ್ರತ್ಯೇಕ ತಮ್ಮ ಮನೆಯಲ್ಲಿಯು ಗಣೇಶನ ಆಚರಣೆ ಮಾಡುತ್ತಾರೆ. ಗೌರಿ-ಗಣೇಶನನ್ನು ಕೆರೆಗೆ/ನದಿಗೆ ಬಿಡುವವರೆಗೂ ಪೂಜಾ ಕಾರ್ಯಗಳು ಮತ್ತು ಮನರಂಜನಾ ಕಾರ್ಯಗಳು ನಡೆಯುತ್ತಿರುತ್ತವೆ. ಈ ಹಬ್ಬದಲ್ಲಿ ಶಾವಿಗೆ, ಕಡುಬು ಮೊದಲಾದ ವಿಶೇಷ ಅಡಿಗೆಗಳಿರುತ್ತವೆ. ಸಂಭ್ರಮದ ಹಬ್ಬ ಇದಾಗಿದೆ.

ದೀಪಾವಳಿ ಹಬ್ಬದ ಆಚರಣೆ : ತಾಲೂಕಿನಲ್ಲಿ ಬೆಳಕಿನ ದೀಪಾವಳಿಯನ್ನು ಸಂಭ್ರಮ ಸಡಗರದಿಂದ ಆಚರಿಸುತ್ತಾರೆ. ಹಬ್ಬದ ಮೊದಲ ದಿನ ಮನೆ ಮನೆಗಳಲ್ಲಿ ನೀರಿನ ಭಾವಿ, ಹಂಡೆ, ತಂಬಿಗೆಗಳಿಗೆ ಕಹಿ ಹಿಂಡ್ಲೆ, ಮಾಲಿಂಗನ ಬಳ್ಳಿ, ಕಾಯಿ, ಹೂಮಾಲೆ ಸುತ್ತಿ ಪೂಜೆ ಸಲ್ಲಿಸುತ್ತಾರೆ. ನಂತರದ ದಿನ ನರಕ ಚತುರ್ದರ್ಶಿ ಅಂಗವಾಗಿ ಔಷಧಿಯ ಗುಣಗಳ ಬೂರೆ ನೀರು ಸಂಪ್ರದಾಯ ನೇರವೇರಿಸುತ್ತಾರೆ. ಮಾರನೇ ದಿನ ಲಕ್ಷ್ಮೀ ಪೂಜೆ ಆನೇ ದಿನ ಗೋವುಗಳ ಸ್ಮರಣೆಯ ಅಂಗವಾಗಿ ಗೋಪೂಜೆ ಹಾಗೂ ಭೂಮಿಯ ಸಮೃದ್ಧಿ ನೋಡಲು ಬಲಿಚಕ್ರವರ್ತಿ ಭೂಮಿಗೆ ಬರುತ್ತಾನೆ ಎಂಬ ನಂಬಿಕೆಯಡಿ ಬಲೀಂದ್ರನ ಪೂಜೆ ನಡೆಯುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಜಾನುವಾರುಗಳು, ಎತ್ತಿನ ಗಾಡಿ ಒಳಗೊಂಡಂತೆ ಕೃಷಿ ಪರಿಕರಗಳ ರೂಪದಲ್ಲಿ ಬಲೀಂದ್ರನ ಪೂಜೆ ಕೈಗೊಳ್ಳುವ ಪರಿಪಾಠವಿದೆ. ಇದಕ್ಕಾಗಿ ಅವುಗಳಿಗೆಲ್ಲ ಬಣ್ಣದಿಂದ ಅಲಂಕಾರ ಮಾಡಿರುತ್ತಾರೆ. ಕೆಲವು ಹಳ್ಳಿಗಳಲ್ಲಿ ಎತ್ತು ಮತ್ತು ದನಕರುಗಳನ್ನು ಹೂವು, ಅಡಿಕೆ, ಕೊಬ್ಬರಿ, ಪಚ್ಚೆ ತೆರೆ, ಹಿಂಗಾರದ ಹಾರಗಳಿಂದ ಸಿಂಗರಿಸಿ, ಬೆದರಿಸುವ ಕಾರ್ಯಕ್ರಮ ಹಮ್ಮಿಕೊಂಡಿರುತ್ತಾರೆ. ಸಂಜೆ ಅವು ವಾಪಸ್ ಬರುವಾಗ ಹುಲುಸು ಬೀರಲಾಗುತ್ತದೆ.

ತೋಟ, ಗದ್ದೆಗಳಲ್ಲಿ ದೀಪದ ಕೋಲುಗಳನ್ನು ನೆಟ್ಟು, ರಾತ್ರಿ ಚಿನ್ನರ ಪುಂಡಿಕೋಲಿನ 'ದೀಪ ದೀಪ್ ಹೋಳ್ಗೆ', ಪಂಚಿನ ಮೆರವಣಿಗೆ, ಮನೆಗಳ ಮುಂದೆ ಉರಿಯುವ ಹಣತೆಗಳ ಸಾಲು ಇತ್ಯಾದಿ ಕಾಣುತ್ತೇವೆ. ಹಳ್ಳಿಗಳ ಕೆಲ ಉತ್ಸಾಹಿ ತರುಣರು ಗ್ರಾಮದೇವತೆಗೆ ಹಚ್ಚಿದ ದೀಪವನ್ನು ಮನೆಮನೆಗೆ ತಲುಪಿಸುವ 'ಅಂಟಿಕೆ-ಪಂಟಿಕೆ' ಸಂಪ್ರದಾಯ ಆಚರಿಸುತ್ತಾರೆ.

ಭೂಮಿ ಹುಣ್ಣಿಮೆ ಹಬ್ಬದ ಆಚರಣೆ : ಇದು ಸೊರಬ ರೈತಾಪಿ ಜನರಿಗೆ ವಿಶೇಷ ಹಬ್ಬವಾಗಿದೆ. ಹಬ್ಬದ ಹಿಂದಿನ ರಾತ್ರಿ ನಿದ್ದೆಯಿಂದ ಎಚ್ಚೆದ್ದು ವಿವಿಧ ಜಾತಿಯ ಸಸ್ಯಗಳ ಎಲೆ ತಂದು ಬೇಯಿಸುತ್ತಾರೆ. ಅದನ್ನು ಬೆರಕೆ ಸೊಪ್ಪಿನ ಪಲ್ಯ/ಚರಗ ಮಾಡಿ ಅನ್ನಬೆರೆಸುತ್ತಾರೆ. ಬಾಳೆ ಎಲೆಯಿಂದ ಕೊಟ್ಟೆ ಕಡುಬು ಮಾಡುತ್ತಾರೆ. ವಿವಿಧ ರೀತಿಯ ಸಿಹಿ ಪದಾರ್ಥಗಳನ್ನು ಮಾಡುತ್ತಾರೆ. ನಂತರ 'ಅಚ್ಚಂಬಲಿ ಮತ್ತು

ಅಲಿಯಂಬಲಿ' ಮಾಡಿಕೊಂಡು ಪೂಜಾ ಸಾಮಗ್ರಿಗಳೊಂದಿಗೆ ನಸುಕಿನಲ್ಲಿಯೇ ಗದ್ದೆ, ತೋಟಕ್ಕೆ ಹೋಗಿ ಭೂಮಿಯನ್ನು ಪೂಜೆ ಮಾಡಿ, ಕೊಟ್ಟೆಕಡುಬನ್ನು ಜಮೀನಿನಲ್ಲಿ ಹುಗಿದು ನಂತರ ತಮ್ಮ ತಮ್ಮ ಎಲ್ಲಾ ಜಮೀನುಗಳಿಗೂ ಬೆರಕೆ ಸೊಪ್ಪಿನ ಅನ್ನವನ್ನು ಭೂಮಿ ತಾಯಿ ಊಟ ಮಾಡಲಿ ಎಂಬುವ ಸಂಕೇತವಾಗಿ ಉಗ್ಗುತ್ತಾ ಹೋಗುತ್ತಾರೆ.(ಕೆಲವು ಹಳ್ಳಿಗಳಲ್ಲಿ ಪೂಜೆಗಿಂತ ಮೊದಲೇ ಈ ಸಂಪ್ರದಾಯವಿದೆ) ಉಗ್ಗುವಾಗ "ಅಚ್ಚಂಬಲಿ ಅಲಿಯಂಬಲಿ ಬೇಲಿ ಮೇಲಿನ ಹೀರೆಕಾಯಿ ಒಪ್ಪಿಕೊಂಡು ಊಟ ಮಾಡು ಭೂಮಿ ತಾಯಿ ಕೂ...ಹೂ..." ಎಂದು ಅಥವಾ ಹುಲಿಗಿ, ಹುಲಿಗಿ.. ಹೂ..(ಬೆಳೆ ಹುಲಸಾಗಲಿ ಎಂದರ್ಥ) ಎಂದು ಕೂಗುತ್ತಾ ಬೆರಕೆ ಸೊಪ್ಪಿನ ಅನ್ನವನ್ನು ಗದ್ದೆಗಳಿಗೆ ಎರಚುತ್ತಾ ಹೋಗುತ್ತಾರೆ. ನಂತರ ಊಟದ ಕಾರ್ಯನಡೆಯುತ್ತದೆ.

ನಾಗರಪಂಚಮಿ ಹಬ್ಬದ ಆಚರಣೆ : ಶ್ರಾವಣ ಮಾಸದಲ್ಲಿ ಬರುವ ನಾಗರ ಪಂಚಮಿ ನಾಡಿಗೇ ದೊಡ್ಡ ಹಬ್ಬ. ಗ್ರಾಮಸ್ಥರೆಲ್ಲ ಅಂದು ನಾಗನಿಗೆ ಹಾಲೆರೆದು ಪೂಜಿಸುತ್ತಾರೆ. ತಾಲೂಕಿನಲ್ಲಿ ಸಂಭ್ರಮದಿಂದ ನಡೆಯುತ್ತದೆ. ವಿಶೇಷ ಅಂದರೆ ಹೆಂಗಸರು ಜೋಕಾಲೆಯಾಡುತ್ತಾರೆ. ಅಂದು ಸಿಹಿ ಉಂಡೆಯ ಅಡುಗೆ ತಯಾರಿಸುತ್ತಾರೆ. ಈ ಹಬ್ಬ ಹೆಣ್ಣು ಮಕ್ಕಳಿಗೆ ಹೆಚ್ಚು ಕುಸಿಕೊಡುತ್ತದೆ.

ಸಂಭ್ರಮದ ಬಕ್ರೀದ್ ಆಚರಣೆ : ತಾಲೂಕಿನಲ್ಲಿ ಮುಸ್ಲಿಂ ಬಾಂಧವರು ತ್ಯಾಗ, ಬಲಿದಾನ ಹಾಗೂ ಭ್ರಾತೃತ್ವದ ಸಂಕೇತವಾಗಿ ಬಕ್ರೀದ್ ಹಬ್ಬವನ್ನು ಶ್ರದ್ಧೆ-ಭಕ್ತಿಯಿಂದ ಆಚರಿಸುತ್ತಾರೆ. ಸೊರಬದ ಜಾಮಿಯ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸುತ್ತಾರೆ. ಇನ್ನೂ ಕೆಲವರು ಈದ್ಗಾಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದ ಬಾಂಧವರು ನಂತರ ಬಡ ಬಗ್ಗರಿಗೆ ಕುರಿದಾನ ಮಾಡಿ ಹಬ್ಬವನ್ನು ಸಾಕಾರಗೊಳಿಸುತ್ತಾರೆ.

ಸಡಗರದ ಕ್ರಿಸ್ಮಸ್ ಆಚರಣೆ : ಕ್ರಿಸ್ಮಸ್‌ನ ಹಬ್ಬದಂದು ಸೊರಬದ ಸಂತ ಸೆಬಾಸ್ಟಿಯನ್ ಧರ್ಮಕೇಂದ್ರದಲ್ಲಿ ಧರ್ಮಗುರು ರೆನೋಲ್ಡಾ ವಂದನಾ ಹಬ್ಬದ ಸಂದೇಶ ನೀಡಿ, ಜಾತಿ-ಮತಭೇದವಿಲ್ಲದೆ, ನಾವೆಲ್ಲಾ ಒಂದಾಗಿ ಮಾನವೀಯತೆಯಿಂದ ಧರ್ಮ ಮೆರೆಯಬೇಕು ಎಂದು ಕರೆನೀಡುತ್ತಾರೆ. ಆನವಟ್ಟಿಯ ಕ್ರಿಸ್ತರಾಜ ಚರ್ಚ್‌ನ ಧರ್ಮಗುರು ಡಾ.ಫಾದರ್ ಪಿ.ವಿ.ಜೋಸೆಫ್‌ರು ಸಂದೇಶ ನೀಡುತ್ತಾರೆ. ಬಲಿಪೂಜೆ ಸಾರುವ ದೃಶ್ಯವನ್ನು ಮಕ್ಕಳು ಭರತನಾಟ್ಯದ ಮೂಲಕ ಸಾರುವುದು ಉಂಟು ಮತ್ತು ಚರ್ಚ್ ಆವರಣದಲ್ಲಿ ಭಾರತೀಯ ಜನ ಜೀವನ ಮಾದರಿಯಲ್ಲಿ ರಚಿಸಿದ ಏಸು ಕ್ರಿಸ್ತನ ಜೀವನ ಚರಿತ್ರೆ ತಿಳಿಸುವ ಭಿತ್ತಿ ಚಿತ್ರಗಳು ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಹಬ್ಬ ದಿನದ ಹಿಂದಿನ ರಾತ್ರಿ ಸಾಂತಾಕ್ಲಾಸ್ ಮೆರವಣಿಗೆ, ಸಿಹಿ ಹಂಚಿಕೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುತ್ತಾರೆ.

ಹೀಗೆ ತಾಲೂಕಿನಲ್ಲಿ ಸಾಕಷ್ಟು ವಿಶೇಷ ಸಡಗರದ ಆಚರಣೆಗಳು ಬೆಳೆದು ಬಂದಿವೆ. ಜೊತೆಗೆ ಶಿವರಾತ್ರಿ ಹಬ್ಬ, ಸಂಕ್ರಾಂತಿ ಹಬ್ಬ, ಸಾಂಘಿಕ ಹಬ್ಬ ಎನಿಸಿಕೊಂಡ ಪಿತೃಪಕ್ಷ, ಹೊಲದ ಹಬ್ಬಗಳು ಸಹ ಪ್ರಸ್ತುತ ಆಚರಣೆಯಲ್ಲಿವೆ.

ಜಾತ್ರೆಗಳು

ಹಬ್ಬಗಳು ಕೌಟುಂಬಿಕ ಆಚರಣೆಗಳಾದರೆ ಜಾತ್ರೆಗಳು ಸಾರ್ವಜನಿಕ ಆಚರಣೆಗಳು. ಕೆಲವು ಸಲ ಹಬ್ಬ ಮತ್ತು ಜಾತ್ರೆ ಒಂದೇ ದಿವಸ ನಡೆಯುತ್ತವೆ. ಮಾನವನ ನಂಬಿಕೆಗಳು ಬರುಬರುತ್ತಾ ಧಾರ್ಮಿಕ ಆಚರಣೆಯಾಗಿ ಮಾರ್ಪಾಡಾದವು. ಇವು ಆರಾಧನೆಯಾಗಿ ಬೆಳೆದ ಆನಂತರ ಧಾರ್ಮಿಕವಾದ ಹಿನ್ನೆಲೆಯಲ್ಲಿ ಜಾತ್ರೆಗಳು, ಹಬ್ಬಗಳು, ಉತ್ಸವಗಳು ಹುಟ್ಟಿಕೊಂಡವು. ಜಾತ್ರೆಗಳು ಎಂದರೆ ಉತ್ಸವ ಎಂದು ಹೇಳಬಹುದು. ಈ ಜಾತ್ರೆಗಳ ಸುತ್ತ ಜನರ ಸಡಗರ, ನಂಬಿಕೆ-ಸಂಸ್ಕೃತಿ ಮೊದಲಾದವೆಲ್ಲಾ ಹೆಣೆದುಕೊಂಡಿರುತ್ತವೆ. ಗುತ್ತಿ ಜಾತ್ರೆ ಇಡೀ ತಾಲೂಕಿಗೆ ಅತ್ಯಂತ ಸಡಗರದ ಜಾತ್ರೆ. ಇದಲ್ಲದೆ ಅನೇಕ ಹಳ್ಳಿಗಳಲ್ಲಿ ಹೀಗೆಯೇ ಆಯಾ ಗ್ರಾಮದೇವತೆಗಳ ಜಾತ್ರೆ, ಮಠಗಳ ಜಾತ್ರೆ ಮತ್ತು ದೇವರ ಜಾತ್ರೆ ನಡೆಯುತ್ತಿರುತ್ತವೆ. ಕೆಲವೊಂದು ಜಾತ್ರೆಗಳು ವರ್ಷಕ್ಕೊಮ್ಮೆ ನಡೆಯುತ್ತವೆ. ಕೆಲವು ಜಾತ್ರೆಗಳು ೩ ವರ್ಷಕ್ಕೊಮ್ಮೆ ೫ ವರ್ಷ ಮತ್ತು ೧೩ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಗಳು ಸೊರಬದಲ್ಲಿ ಇರುವುದನ್ನು ನೋಡುತ್ತೇವೆ. ಕೆಲವು ಜಾತ್ರೆಗಳು ಆಯಾ ಊರಿಗಷ್ಟೇ ಸೀಮಿತವಾಗಿದ್ದರೆ, ಇನ್ನು ಕೆಲವು ಜಾತ್ರೆಗಳು ಸುತ್ತ ಐದಾರು ಹಳ್ಳಿಗೆ ಮತ್ತು ಹೋಬಳಿಗೆ ವಿಸ್ತರಿಸಿಕೊಂಡಿರುತ್ತವೆ.

ಸೊರಬ ತಾಲೂಕಿನಲ್ಲಿ ಅನೇಕ ಜಾತ್ರೆ ಉತ್ಸವ ನಡೆಯುತ್ತವೆ. ಮುಖ್ಯವಾದವುಗಳೆಂದರೆ

೧. ಚಂದ್ರಗುತ್ತಿ ರೇಣುಕಾಂಬಾ ಜಾತ್ರೆ
೨. ತತ್ತೂರಿನಲ್ಲಿಯ ದುರಗಮ್ಮನ ಜಾತ್ರೆ
೩. ಸಾರೆಕೊಪ್ಪದ ಮಾರಿಯಮ್ಮನ ಜಾತ್ರೆ
೪. ಚಾಟಿಕೊಪ್ಪದ ಶ್ರೀ ವೀರಭದ್ರಸ್ವಾಮಿಯ ರಥೋತ್ಸವ
೫. ಆನವಟ್ಟಿಯ ಶ್ರೀ ತಿಮ್ಮಪ್ಪ ದೇವರ ರಥೋತ್ಸವ.
೬. ಉದ್ರಿ ವಡ್ಡಿಗೇರಿಯ ಶ್ರಿ ಆಂಜನೇಯ ಸ್ವಾಮಿಯ ಜಾತ್ರೆ
೭. ಹಿರೇಮಾಗಡಿಯ ಮುರಘರಾಜೇಂದ್ರ ಮಠದ ಜಾತ್ರೆ
೮. ಬಂಕಸಾಣದ ಹೊಳೆ ಲಿಂಗೇಶ್ವರ ಜಾತ್ರೆ
೯. ಮಂಚಿ ಭೀಮಪ್ಪನ ಜಾತ್ರೆ ಮೊದಲಾದವುಗಳು

೧. ಚಂದ್ರಗುತ್ತಿ ರೇಣುಕಾಂಬಾ ಜಾತ್ರೆ : ಕನ್ನಡ ನಾಡಿನ ಪ್ರಮುಖ ಜಾತ್ರೆಗಳಲ್ಲಿ ಚಂದ್ರಗುತ್ತಿ ಜಾತ್ರೆಯೂ ಒಂದು. ಶಕ್ತಿ ದೇವತೆಯಾದ ರೇಣುಕಾ ಎಲ್ಲಮ್ಮಳ ಆರಾಧನೆಯ ರೂಪವೇ ಈ ಜಾತ್ರೆ. ಈ ಗುತ್ತಿಜಾತ್ರೆಗೆ ಸೊರಬದ ಭಕ್ತಾದಿಗಳಷ್ಟೇ ಅಲ್ಲದೆ ಜಿಲ್ಲೆಯ, ಬೇರೆ ಬೇರೆ ತಾಲೂಕಿನ ಜನರು ಮತ್ತು ಹಾವೇರಿ, ಧಾರವಾಡ, ದಾವಣಗೆರೆ ಈ ಜಿಲ್ಲೆಯ ಜನರು ಅಪಾರ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಜಾತ್ರೆಯಲ್ಲಿ ದೀವರು, ಒಕ್ಕಲಿಗರು, ಮಡಿವಾಳರು, ಹೊಲೆಯರು, ಭೋವಿಗಳು, ಮಾದರು, ಹಸಲರು

ಬಡಗಿಯವರು ಸೇರಿದಂತೆ ಬಹುತೇಕ ಜನಾಂಗಗಳು ದೇವತೆಯನ್ನು ಆರಾಧಿಸುತ್ತಾರೆ. ಬಯಲು ಸೀಮೆಯ ಲಿಂಗಾಯತರಿಗೆ ಈ ಗುತ್ತಿ ಮನೆ ದೇವರಾಗಿದ್ದಾಳೆ. ಜಾತ್ರೆ ನಡೆಯುವುದು ಮಾರ್ಚ್ ತಿಂಗಳಲ್ಲಿ. ಶಿವರಾತ್ರಿಯ ಅಮಾವಸ್ಯೆ ಕಳೆದು ಒಂಬತ್ತು ದಿನಕ್ಕೆ ಮಹಾರಥೋತ್ಸವ ನಡೆಯುತ್ತದೆ. ಮಾಘ ಬಹುಳ ೬ ರಂದು ಜಾತ್ರೆಯ ನಿರೂಪ ಬಿಡುಗಡೆಯಾಗುತ್ತದೆ. ಅಂದಿನಿಂದ ಜಾತ್ರೆ ಪದ್ಧತಿ ಮುಂದುವರೆದು ಫಾಲ್ಗುಣ ಶುದ್ಧ ೧೧ ರಂದು ಹರಕೆ ಒಪ್ಪಿಸುವ ಕಾರ್ಯಕ್ರಮ ಇರುತ್ತದೆ.

ಈ ಜಾತ್ರೆ ಸಂದರ್ಭದಲ್ಲಿ ಕುರಿ ಬಲಿಕೊಟ್ಟು ಅಲ್ಲಿಯೇ ಅಡಿಗೆ ಮಾಡಿ ಊಟ ಮಾಡುವುದನ್ನು ಕಾಣುತ್ತೇವೆ. ಇದು ಸಂಪ್ರದಾಯವಾಗಿದೆ. ಜಾತ್ರೆಯ ಮನರಂಜನೆಗೆ ಜನಪದರ ಕಲೆಗಳು ಪ್ರದರ್ಶನಗೊಳ್ಳುತ್ತವೆ. ಜಾತ್ರೆಯಲ್ಲಿ ಹಲವು ಬಗೆಯ ಅಂಗಡಿಗಳಿರುತ್ತವೆ. ಒಟ್ಟಾರೆ ಈ ಜಾತ್ರೆಯು ಅಗಮಿಸಿದ ಎಲ್ಲಾ ಭಕ್ತರಿಗೂ ಸಂಭ್ರಮ ನೀಡುತ್ತದೆ.

೨. ತತ್ತೂರಿನ ದುರಗಮ್ಮನ ಜಾತ್ರೆ : ಮಾರಿಹಬ್ಬ-ಮಾರಿಜಾತ್ರೆ ಎಂದು ಆಚರಿಸುವ ಇದು ಮಾರಿಯಮ್ಮ ದೇವತೆಯ ಆರಾಧನೆ ನೆಗವಾಡಿಯಲ್ಲಿ ವಾಸವಾಗಿದ್ದ ಮಾಂಕಾಳಿಯನ್ನು ಉದ್ರಿ, ಹರಗಿ, ಚಿಕ್ಕಮಾಗಡಿ ಮುಂತಾದಡೆ ಕರೆದೊಯ್ದು ಜಾತ್ರೆ ಆಚರಿಸಿದಂತೆ ತತ್ತೂರಿಗೂ ಕರೆತಂದು ದುರಗಮ್ಮನೊಂದಿಗೆ ಇರಿಸಿ ಈ ಹಬ್ಬದ ಜಾತ್ರೆ ಮಾಡುತ್ತಾರೆ. ತತ್ತೂರು ಮತ್ತು ಸುತ್ತಲಿನ ೫-೬ ಹಳ್ಳಿ ಕೂಡಿ ೫ ವರ್ಷಕ್ಕೊಮ್ಮೆ ಆಚರಿಸುತ್ತಾರೆ. ೪ನೇ ವರ್ಷದ ಸುಗ್ಗಿ ಮುಗಿದ ನಂತರ ಈ ಜಾತ್ರೆ ಒಂದು ಮಂಗಳವಾರದಂದು ನಡೆಯುತ್ತದೆ. ಈ ಜಾತ್ರೆಯ ವಿಶೇಷ ಕೋಣನ ಬಲಿಕೊಡುವುದಾಗಿದೆ. ಈ ಜಾತ್ರೆ ಮುಗಿದು ಬರುವ ಮಂಗಳವಾರ ಮರಿಕೋಣವನ್ನು ತಂದು ಅಮ್ಮನ ಮುಂದೆ ಕಂಕಣ ಕಟ್ಟಿ ಊರಲ್ಲಿ ಬಿಡುತ್ತಾರೆ. ಹೀಗೆ ಬಿಟ್ಟ ಕೋಣ ಎಲ್ಲಿ ಯಾರ ಹೊಲದಲ್ಲಿ ಏನನ್ನೇ ಮೇಯ್ದರೂ ಯಾರು ಕೇಳುವಂತಿಲ್ಲ.

ಹಬ್ಬಕ್ಕೆ ಮೂರು ದಿನ ಮೊದಲೇ ಸಾರಾಕುತ್ತಾರೆ. ಸಾರಾಕಿದ ನಂತರ ಹೊರಗಿನ ಯಾರನ್ನೂ ಊರೊಳಗೆ ಬಿಡುವುದಿಲ್ಲ. ಕೋಣದ ಬಲಿಯಾಗಿ ಚರಗ ಚೆಲ್ಲುವವರೆಗೂ ಕಟ್ಟುನಿಟ್ಟು. ಸಾರಾಕಿದ ನಂತರ ಕೋಣಕ್ಕೆ ಕಂಕಣಕಟ್ಟಿ ಊರನ್ನು ಸೂತ್ತಿಸುತ್ತಾರೆ. ನಂತರ ಗದ್ದಿಗೆ ಮರಿ ಸೂತ್ತ ಮೂರು ಸುತ್ತು ಹಾಕಿಸುತ್ತಾರೆ. ಗದ್ದಿಗೆ ಎಂದರೆ ಕುರಿಕಡಿದು ಕೋಣ ಊರಾಡಿ ಬರುವವರೆಗೂ ಅಮ್ಮನ ಮುಂದೆ ತೆರೆಹಾಕಿರುತ್ತಾರೆ. ಆಗ ಕೇಕೆ ಹಾಗೂ ತಮಟೆ ಬಡಿತ - ಹಲಗೆ ಬಡಿತಗಳು ನಡೆಯುತ್ತವೆ. ನಂತರ ಕೋಣನ ಬಲಿ ಆಗುತ್ತದೆ. ಆಮೇಲೆ ಚರಗದ ಅನ್ನ ಅದಕ್ಕೆ ಕಡಿದ ಕೋಣದ ರಕ್ತ ಬೆರೆಸುತ್ತಾರೆ. ಅದನ್ನೆ ಚರಗ ಎನ್ನುತ್ತಾರೆ. ಈ ಚರಗವನ್ನು ಅಮ್ಮನ ಗದ್ದಿಗೆಯ ಸುತ್ತ ಚೆಲ್ಲುತ್ತಾ ಮೂರು ಸುತ್ತು ಬರುತ್ತಾರೆ. ಇದೆ ಜಾತ್ರೆಯಲ್ಲಿ ಬೇವುಡುವುದು ರೂಢಿ ಇದೆ. ಜಾತ್ರೆಯ ಅಂಗವಾಗಿ ಆಚರಿಸುವ ಎಲ್ಲರ ಮನೆಯಲ್ಲಿ ಕುರಿ ಊಟ ನಡೆಯುತ್ತದೆ. ಜಾತ್ರೆಯಲ್ಲಿ ರಥೋತ್ಸವ ನಡೆಯುತ್ತದೆ ಮತ್ತು ವಿವಿಧ ಬಗೆಯ ಅಂಗಡಿಗಳು ಬಂದಿರುತ್ತದೆ. ಈ ಜಾತ್ರೆಯನ್ನು ಆಚರಿಸುವ ತತ್ತೂರು ವಡ್ಡಿಗೇರಿ, ಹಿರೇಕಬ್ಬೂರು,

ಕುಂಬಾರಕೊಪ್ಪ, ಬಾಟಿಕೊಪ್ಪ ಹಿರೇಮಾಗಡಿ ಈ ಮೊದಲಾದ ಊರಗಳ ಜನರು ಮತ್ತು ಅವರ ಬಂಧುಗಳು ಪಾಲ್ಗೊಳ್ಳುತ್ತಾರೆ. ಬೇರೆ ಬೇರೆ ಊರಿನಿಂದಲೂ ಭಕ್ತರು ಆಗಮಿಸುತ್ತಾರೆ.

೩. ಸಾರೆಕೊಪ್ಪದ ಮಾರಿಯಮ್ಮನ ಜಾತ್ರೆ : ಇಲ್ಲಿಯು ಮಾರಿಯಮ್ಮನ ಜಾತ್ರೆ ಸಡಗರದಿಂದ ನಡಿಯುತ್ತದೆ. ಈ ಒಂದೇ ಊರೆ ಹಬ್ಬದ ಜಾತ್ರೆಯನ್ನು ೧೩ ವರ್ಷಕ್ಕೊಮ್ಮೆ ಆಚರಿಸುತ್ತದೆ. ರಥೋತ್ಸವ ಮತ್ತು ಕೋಣನ ಬಲಿ, ಹರಕೆ, ಕೋಳಿ-ಕುರಿ ಊಟ ಅಲ್ಲಿಯ ಭಕ್ತಾದಿಗಳಲ್ಲಿ ರೂಢಿಯಾಗಿ ಬಂದಿದೆ. ಈ ಜಾತ್ರೆಗೆ ಸುತ್ತಮುತ್ತಲಿನ ಹಳ್ಳಿಯ ಜನರು, ದೂರದ ಊರಿನ ಸಂಬಂಧಿಕರು ಸೇರಿರುತ್ತಾರೆ.

೪. ಚಾಟಿಕೊಪ್ಪದ ಶ್ರೀ ವೀರಭದ್ರ ಸ್ವಾಮಿಯ ರಥೋತ್ಸವ : ಈ ಜಾತ್ರೆಯ ರಥೋತ್ಸವ ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ಇದನ್ನು ತತ್ತುರು, ಉದ್ರಿ, ಗಂಗೊಳ್ಳಿ, ಕೊಳ್ಗಿ, ಹಿರೇಕಬ್ಬೂರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಕೂಡಿ ಆಚರಿಸುತ್ತಾರೆ. ೪-೫ ದಿನ ಈ ಜಾತ್ರೆಯ ಕಾರ್ಯಕ್ರಮಗಳು ಹಂತ ಹಂತವಾಗಿ ನಡೆಯುತ್ತವೆ. ಕಂಕಣಧಾರಣ ಮತ್ತು ದೀಪ ಹಾಕುವುದು. ಗಾಲಿ, ಕಳಸ, ರುದ್ರ ಪೂಜೆ ನಡೆಸುವುದು. ಪುಷ್ಪಕ ರಥೋತ್ಸವ (ಹೂವಿನ ತೇರು) ವಿಜೃಂಭಣೆಯಿಂದ ಜರುಗುತ್ತದೆ. ವಾದ್ಯ ವೃಂದಗಳೊಂದಿಗೆ, ಗುಗ್ಗುಳದೊಂದಿಗೆ ವರ್ಣರಂಜಿತವಾದ ರಥದ ವೈಭವ ನೆರದ ಭಕ್ತ ಸಮೂಹದಿಂದ ನಡೆಯುತ್ತದೆ. ಜಾತ್ರೆಯ ದಿನದಂದು ಅನ್ನ ಸಂತರ್ಪಣೆ, ಬೇರೆ ಬೇರೆ ಮಠಗಳ ಸ್ವಾಮಿಗಳಿಂದ ಧರ್ಮಸಭೆಯು ನಡೆಯುತ್ತದೆ.

೫. ಆನವಟ್ಟಿಯ ಶ್ರೀ ತಿಮ್ಮಪ್ಪ ದೇವರ ರಥೋತ್ಸವ : ತಿಮ್ಮಾಪುರದ ತಿಮ್ಮಪ್ಪದೇವರ ಗುಡ್ಡದಲ್ಲಿ ವಿರಾಜಮಾನರಾಗಿರುವ ಶ್ರೀ ತಿಮ್ಮಪ್ಪ ದೇವರ ರಥೋತ್ಸವ ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಈ ಜಾತ್ರೋತ್ಸವ ನಡೆಯುತ್ತದೆ. ೩ ದಿವಸ ಶ್ರೀ ತಿಮ್ಮಪ್ಪ ದೇವರ ಕಾರ್ಯಕ್ರಮಗಳು ನೇರವೆರುತ್ತವೆ.

ಜಾತ್ರೆಯ ಆರಂಭದ ದಿನ ಧ್ವಜಾರೋಹಣ, ಪುಣ್ಯಾಹ, ನಾಂದಿ, ಕಲಶಸ್ಥಾಪನೆ, ಪೂಜೆ, ಕಂಕಣಬಂಧನ, ರಥಪೂಜೆ, ಮಂಗಳಾರತಿ ನಡೆದರೆ ನಂತರದ ದಿನ ಶ್ರೀ ತಿಮ್ಮಪ್ಪ ದೇವರ ಸರ್ವಾಲಂಕಾರ ಸಹಿತ ಮಹಾಪೂಜೆ ರಥೋತ್ಸವಾಂಗ ಹವನ, ಪೂರ್ಣಾಹುತಿ, ಆಮೇಲೆ ಮಹಾರಥೋತ್ಸವ, ಮಂಗಳಾರತಿ, ಪ್ರಸಾದ ವಿನಿಯೋಗ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳೆಲ್ಲರೂ ಪಾಲ್ಗೊಂಡು ಸಡಗರದಿಂದ ಆಚರಿಸುತ್ತಾರೆ. ಈ ಜಾತ್ರೆಯಲ್ಲಿ ಆನವಟ್ಟಿ, ಕುಬಟೂರು, ಸಮನವಳ್ಳಿ, ತುಡ್ನೂರು, ತಲ್ಲೂರು, ಹಿರೇಇಡಗೋಡು ಮೊದಲಾದ ಊರಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಈ ಜಾತ್ರೋತ್ಸವದಲ್ಲಿ ಸಾಮೂಹಿಕ ಮದುವೆಗಳು ನೆರವೇರುತ್ತವೆ.

೬. ಉದ್ರಿ ಪಡ್ಡಿಗೇರಿಯ ಶ್ರೀ ಆಂಜನೇಯ ಸ್ವಾಮಿಯ ಜಾತ್ರೆ : ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಈ ಜಾತ್ರೆ ನಡೆಯುತ್ತದೆ. ಇಲ್ಲಿಯೂ ಸಹಶ್ರೀ ಆಂಜನೇ ಸ್ವಾಮಿಯ ಪೂಜೆ ಕಾರ್ಯಕ್ರಮಗಳು, ರಥೋತ್ಸವ

ನಡೆಯುತ್ತವೆ. ಅದೇ ಊರಿನ ಭಕ್ತಾದಿಗಳಿಂದ ಈ ಜಾತ್ರೆ ಸಂಭ್ರಮವಾಗಿ ನೇರವೇರುತ್ತದೆ. ಸಂಬಂಧಿಕರು, ಸುತ್ತ ಮುತ್ತಲಿನ ಭಕ್ತರು ಬರುತ್ತಾರೆ. ಜಾತ್ರೆಯ ಅಂಗವಾಗಿ ನಂತರದ ದಿನ ಕ್ರಿಕೇಟ್ ನಂತಹ ಕ್ರೀಡೆಗಳನ್ನು ಕೈಗೊಂಡಿರುತ್ತಾರೆ.

ಸಾವಿರಾರು ಭಕ್ತ ಸಮೂಹದೊಂದಿಗೆ ನೇರವೆರುವ ರಥೋತ್ಸವದಂದು ಜಯಘೋಷ, ವಾದ್ಯವೃಂದ ಇರುತ್ತವೆ. ಹಣ್ಣುಗಳನ್ನು ತೂರುವುದರೊಂದಿಗೆ ಭಕ್ತರು ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಕಂಕುಳಲ್ಲಿ ಪುಟ್ಟ ಮಕ್ಕಳ ಸಮೇತ ಹೆಂಗಳೆಯರು, ಮಕ್ಕಳು, ಯುವಕರು, ವೃದ್ಧರು, ರಥೋತ್ಸವದಲ್ಲಿ ಪಾಲ್ಗೊಂಡು ಪುನೀತರಾಗುತ್ತಾರೆ.

೭. ಹಿರೇಮಾಗಡಿ ಮುರಘರಾಜೇಂದ್ರ ಮಠದ ಜಾತ್ರೆ : ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಶ್ರೀ ಚನ್ನಬಸವ ಮುರುಘರಾಜೇಂದ್ರ ಮಹಾಶಿವಯೋಗಿಗಳವರ ವಿರಕ್ತಮಠ ಬಸವಕೇಂದ್ರ, ಸುಕ್ಷೇತ್ರದಲ್ಲಿ ಸಂಭ್ರಮದಿಂದ ಜಾತ್ರಾ ಮಹೋತ್ಸವ ನೇರವೆರುತ್ತದೆ. ಶ್ರೀ ಮ.ನಿ.ಪ್ರ ಶಿವಮೂರ್ತಿ ಮುರುಘ ರಾಜೇಂದ್ರ ಮಹಾಸ್ವಾಮಿಗಳವರ ಅಡಿಯಲ್ಲಿ ಆ ಊರಿನ, ಸುತ್ತಮುತ್ತಲೂರಿನ ಭಕ್ತರಿಂದ ಈ ಜಾತ್ರೆ ನಡೆಯುತ್ತದೆ.

ಈ ಜಾತ್ರೆಯಲ್ಲಿ ಶ್ರೀ ಚನ್ನ ಬಸವ ಮುರುಘರಾಜೇಂದ್ರ ಮಹಾಶಿವಯೋಗಿಗಳವರ ಸ್ಮರಣೋತ್ಸವ, ಜಾತ್ರಾಮಹೋತ್ಸವ ಹಾಗೂ ಸರ್ವಧರ್ಮಸಮ್ಮೇಳನ, ಮಹಾ ಪ್ರಸಾದ ಶಿವಪ್ರಸಾದ ವಿನಿಯೋಗ ನಡೆಯುತ್ತವೆ. ಶ್ರೀ ವೀರಭದ್ರ ದೇವರ ಗುಗ್ಗಳವು ನಡೆಯುತ್ತದೆ. ಮನರಂಜನೆಗಾಗಿ ನಾಟಕ ಕಾರ್ಯಕ್ರಮ ಇರುತ್ತದೆ. ಎರಡು ದಿನ ಈ ಜಾತ್ರೆ ವೈಭವವಾಗಿ ನಡೆಯುವುದನ್ನು ಕಾಣುತ್ತೇವೆ.

೮. ಬಂಕಸಾಣದ ಹೊಳೆಲಿಂಗೇಶ್ವರ ಜಾತ್ರೆ : ಜನವರಿ ತಿಂಗಳಲ್ಲಿ ಸಂಕ್ರಾಂತಿಯಂದು ಇಲ್ಲಿ ವೈಭವದ ಜಾತ್ರೆ ನಡೆಯುತ್ತದೆ. ಇಲ್ಲಿಯ ಲಿಂಗವನ್ನು ಹೊಳೆ ಲಿಂಗೇಶ್ವರನೆಂದು ಕರೆಯುತ್ತಾರೆ. ಇದು ಉದ್ಭವಲಿಂಗವೆಂದು ಪ್ರತೀತಿ ಇದೆ. ಬಂಕಸಾಣ ವರದಾ ಹಾಗೂ ದಂಡಾವತಿ ನದಿಗಳ ಸಂಗಮ ಸ್ಥಳ. ಎಂದು ಕೂಡ ಕರೆಯುತ್ತಾರೆ. ಇದೇ ಸಮಯದಲ್ಲಿ ಈ ಹೊಳೆಲಿಂಗೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಎಸ್.ಬಂಗಾರಪ್ಪನವರು ಪ್ರತಿವರ್ಷ ಉಚಿತ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುತ್ತಿದ್ದಾರೆ. ೧೯೮೦ ರಿಂದ ಈ ಕಾರ್ಯಕ್ರಮ ನಿರಂತರವಾಗಿ ನಡೆದುಕೊಂಡು ಬಂದಿದೆ. ಪ್ರತಿವರ್ಷ ಸಾವಿರಾರು ಮದುವೆಗಳು ಈ ಸಂದರ್ಭದಲ್ಲಿ ನಡೆಯುತ್ತವೆ. ಮದುವೆಗೆ ಬೇಕಾದ ಎಲ್ಲಾ ಅಗತ್ಯಗಳನ್ನು ಎಸ್.ಬಂಗಾರಪ್ಪ ಪೂರೈಸುತ್ತಾರೆ. ಮಕರ ಸಂಕ್ರಾಂತಿಯ ಈ ಜಾತ್ರೆಗೆ ತಾಲೂಕಿನ ಅನೇಕ ಊರುಗಳಿಂದ ಜನರು ಬರುತ್ತಾರೆ. ಸ್ವಾಮಿಯ ಪೂಜೆ ಉತ್ಸವಗಳು ಅನೇಕ ಕಾರ್ಯಕ್ರಮಗಳು ನಡೆಯುತ್ತವೆ. ವೈವಿಧ್ಯತೆಯ ಅಂಗಡಿಗಳು ಇರುತ್ತವೆ. ಅಲಂಕೃತವಾದ ವೈಭವವನ್ನು ಈ ಜಾತ್ರೆಯಲ್ಲಿ ಕಾಣುತ್ತೇವೆ.

೯. ಮಂಚಿ ಭೀಮಪ್ಪನ ಜಾತ್ರೆ : ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಪ್ರತಿವರ್ಷ ಈ ಜಾತ್ರೆ ನೇರವೇರುತ್ತದೆ. ಪೂಜಾ ಕಾರ್ಯಕ್ರಮಗಳ ಜೊತೆಗೆ ಮರ ತರುವ ರೂಢಿಯು ಇದೆ. ಪತ್ರಿಮರ ತರುವ ಉತ್ಸವ ಇಲ್ಲಿಯ

ವಿಶೇಷವಾಗಿದೆ. ಸಾಂಪ್ರದಾಯಿಕವಾಗಿ ಬೆಳೆದು ಬಂದಿರುವ ಈ ಆಚರಣೆ ಈಗಲೂ ತುಂಬಾ ಅದ್ಧೂರಿಯಾಗಿ ನಡೆಯುತ್ತದೆ. ಮರ ತರುವ ೪-೫ ಪುರುಷರು ಬೆಳಿಗ್ಗೆ ಸು.೯-೧೦ ಗಂಟೆಗೆ ತಮ್ಮ ನಿಗಧಿತ ಸ್ಥಳದಿಂದ ಬೇರೆ ಬೇರೆ ದಿಕ್ಕಿಗೆ ತೆರಳುತ್ತಾರೆ. ಸೊಂಟದ ಉಡುಪಿನಿಂದ, ಆಯುಧ ಇರದೆ ಹೋದ ಇವರು ಬೇರು ಸಮೇತ ಇರುವ ಪತ್ರಿಮರವನ್ನು ಕಿತ್ತುಕೊಂಡು ಸು.೪ ಗಂಟೆಗೆ ಮರ ಹೊತ್ತು ಮೂಲಸ್ಥಾನಕ್ಕೆ ಹಿಂದುರುಗುತ್ತಾರೆ. ಬೇರೆ ಬೇರೆ ದಿಕ್ಕಿಗೆ ಚದುರಿಹೋದ ಅವರು ಮರಳುವಾಗ ಒಂದೇಯಾಗಿ ಹಿಂದೆಮುಂದೆ ಮರ ಹೊತ್ತುಬರುತ್ತಾರೆ. ಮರಗಳು ಹಸಿರೆಲೆಯನ್ನು ಹೊಂದಿದ್ದರೆ, ಮಳೆ ಚೆನ್ನಾಗಿ ಆಗುತ್ತೇ, ಒಣಗಿದ ಎಲೆ ಇದ್ದರೆ ಮಳೆ ಬೀಳುವುದು ಅಸಾಧ್ಯ ಎಂಬ ಮಾತು ಇದೆ. ಈ ಮರ ತರುವುದನ್ನು ಸಾವಿರಾರು ಭಕ್ತರು ವಿಕ್ಷೀಸುತ್ತಿರುತ್ತಾರೆ. ಮರ ತರುವಾಗ ಸಮೀಪದ ವೀಕ್ಷಕರು ಪಾದರಕ್ಷೆ ಹಾಕಿದ್ದರೆ ಅವರನ್ನು ಸುತ್ತು ಹಾಕುತ್ತಾರೆ. ಅಂದರೆ ಪಾದರಕ್ಷೆಗಳು ಸಹ ಅ ಸಂದರ್ಭದಲ್ಲಿ ಹಾಕಬಾರದಾಗಿದೆ. ಕಾಡಿನಿಂದ ಮರ ಹೊತ್ತು ತರುತ್ತಿರುವವರು ವೀಕ್ಷಿಸುವ ಜನರನ್ನು ಕಂಡಕ್ಷಣ ಓಟದ ಹೆಜ್ಜೆಯೊಂದಿಗೆ ಆಗಮಿಸುತ್ತಾರೆ.

ಇದನ್ನು ಒಪ್ಪಿಕೊಳ್ಳಲು ಸಾಧ್ಯವೇ? ಎಂಬ ಪ್ರಶ್ನೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಬ್ರಿಟೀಷ್ ಅಧಿಕಾರಿಯೊಬ್ಬ ಮರಕೀಳುವುದನ್ನು ನೋಡಬೇಕೆಂದು ಕುದುರೆ ಸವಾರಿ ಮಾಡಿಕೊಂಡು ಹೋಗಿ ಮರ ಏರಿದ್ದನಂತೆ, ಅವನ ಕಣ್ಣು ಹೋದವಂತೆ ಎಂಬ ಮಾತು ಕೇಳಿಬರುತ್ತದೆ.

ಈ ರೀತಿಯ ಜಾತ್ರೆ ನೋಡಲು ಸುತ್ತಲಿನ ಜನರಷ್ಟೇ ಅಲ್ಲ ದೂರದಿಂದಲೂ ಜನರು ಬರುತ್ತಾರೆ. ಅನೇಕರು ಕುಟುಂಬ ಸಮೇತ ಜಾತ್ರೆಗೆ ಬರುತ್ತಾರೆ. ಎತ್ತಿನ ಗಾಡಿಗಳು ತುಂಬಾ ಬರುತ್ತವೆ. ತಾಲೂಕಿನ ಈ ಜಾತ್ರೆಯು ಸಂಭ್ರಮದಿಂದ ನಡೆಯುತ್ತದೆ. ಜೊತೆಗೆ ಜಾತ್ರೆಯ ಪ್ರಯುಕ್ತ ವಿವಿಧ ಆಚರಣೆಗಳು, ಜನಪದ ಕಲೆಗಳು, ನಾಟಕ ಇತ್ಯಾದಿಗಳು ನೇರವೇರುತ್ತವೆ.

ಇಷ್ಟೇ ಅಲ್ಲದೆ ಸೊರಬ ತಾಲ್ಲೂಕಿನಲ್ಲಿ ಇನ್ನು ಅನೇಕ ಹಳ್ಳಿಗಳಲ್ಲಿ ಸಡಗರದ ಜಾತ್ರೆಯ ಹಬ್ಬಗಳು ಇವೆ. ಊರ್ನಳ್ಳಿಯ ಕಾಳಿಂಗೇಶ್ವರ ಜಾತ್ರೆ ಇಲ್ಲಿಯ ವಿಶಿಷ್ಟತೆ ಎಂದರೆ ಹಾವಿನ ಕಾಟ, ಹಾವು ಕಚ್ಚಿದಾಗ ಈ ದೇವರ ಮೊರೆ ಹೋಗಿ ಬೇಡಿಕೊಳ್ಳುವುದು. ಕಾಳಿಂಗನ ತೀರ್ಥ ಪಡೆದುಕೊಳ್ಳುವುದು. ಇದರಿಂದ ಹಾವಿನ ಅಪಾಯದಿಂದ ದೂರ ಉಳಿಯುವುದನ್ನು ಹಾಗೂ ಹಾವು ಕಚ್ಚಿಸಿಕೊಂಡವರು ವಾಸಿಯಾಗಿರುವುದನ್ನು ಕಾಣುತ್ತೇವೆ. ಇನ್ನೊಂದು ವಿಶಿಷ್ಟತೆ ಎಂದರೆ ಇಲ್ಲಿರುವ ಭೂತಪ್ಪನ ಬೇವಿನ ಮರ ಸಿಹಿ ಇದ್ದು ಕಹಿಯನ್ನು ಕಳೆದುಕೊಂಡಿದ್ದನ್ನು ನೋಡುತ್ತೇವೆ. ಇಲ್ಲಿಗೆ ತಾಲೂಕಿನ ಮತ್ತು ದೂರದ ಊರಿನ ಜನರು ಬರುತ್ತಿರುತ್ತಾರೆ. ಈ ರೀತಿಯ ವೈಶಿಷ್ಟ್ಯವಿರುವ ಊರಲ್ಲಿ ಜಾತ್ರೆ ಪ್ರತಿವರ್ಷ ನಡೆಯುತ್ತದೆ. ಇಲ್ಲಿಯ ಭೂತಪ್ಪ ದೆವ್ವಗಳ ಕಾಟವನ್ನು ದೂರ ಮಾಡುತ್ತಾನೆ. ಈ ಮೊದಲಾದವುಗಳು

ಸಂಪ್ರಾದಾಯಿಕವಾಗಿ ಬೆಳೆದು ಇಂದೂ ಕೂಡ ನೆರವೇರುತ್ತಿವೆ. ಇಲ್ಲಿಯ ಜಾತ್ರೆ ತಾಲೂಕಿನ ಅದ್ಭುತ ಜಾತ್ರೆಯಲ್ಲಿ ಒಂದಾಗಿದೆ. ಈ ರೀತಿಯ ವಿಶಿಷ್ಟತೆಗಳು ಹಲವಾರು ಇರುವುದನ್ನು ಕಾಣತ್ತೇವೆ.

ಒಟ್ಟಾರೆ ಜಾತ್ರೆ ಎಂಬುದು ಧಾರ್ಮಿಕ ಸಂಪ್ರದಾಯವಾಗಿ ಹಾಗೂ ಸಮಷ್ಟಿ ಜನರ ಒಂದೆಡೆ ಕಲೆಯುವ ಸಾಂಸ್ಕೃತಿಕ ಕೇಂದ್ರವಾಗಿಯು ಸಹ ಕಂಡುಬರುತ್ತದೆ. ವರ್ಷವಿಡಿ ದುಡಿದು ದಣಿದ ಮನಕ್ಕೆ ಒಂದಿಷ್ಟು ಸಂಭ್ರಮ ಹಾಗೂ ರಂಜನೆ ಸಿಗುತ್ತದೆ. ಜಾತ್ಯಾತೀತ ಅಭಿವ್ಯಕ್ತಿಯಾಗಿ ಜಾತ್ರೆ ಕಾಣುತ್ತದೆ ಎಂದು ಹೇಳಬಹುದು.

ಅಡಿಟಿಪ್ಪಣಿ

೧. ಜನ ಸಮುದಾಯ ಸಂಪುಟ, ಕರ್ನಾಟಕ ರಾಜ್ಯ ಕೋಶ-೪, ಆರಂಭದ ವಿಷಯ

ಅಧ್ಯಾಯ ೪

ಸಾಮಾಜಿಕ ಸ್ಥಿತಿಗತಿಗಳು

ಸಾಮಾಜಿಕ ಸ್ಥಿತಿಗತಿಗಳು

ಸೊರಬ ಪ್ರದೇಶವು ಸಾಂಸ್ಕೃತಿಕವಾಗಿ ತನ್ನ ಹಿರಿಮೆಯನ್ನು ಕಾಪಾಡಿಕೊಂಡಿದೆ. ಚರಿತ್ರೆಯಾದ್ಯಂತ ಅಲ್ಲಿ ಜನಗಳ ಜೀವನ ಕ್ರಮವು ಸುಗಮವಾಗಿ ನಡೆದು ಹೋಗಿದೆ. ಭವಿಷ್ಯದಲ್ಲೂ ತಾಲ್ಲೂಕು ತನ್ನ ಪರಂಪರೆಯನ್ನು ಹಿಂದಿಟ್ಟುಕೊಂಡು ನೆಮ್ಮದಿಯ ಬದುಕನ್ನು ರೂಢಿಸಿಕೊಳ್ಳಲು ಪ್ರಯತ್ನಿಸಿದೆ. ಸೊರಬವು ಐತಿಹಾಸಿಕವಾಗಿ ಮಹತ್ವದ್ದಾಗಿದ್ದು, ತನ್ನದೇ ಆದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆಡಳಿತಾತ್ಮಕ ಸ್ಥಿತಿಗತಿಗಳು ಬೆಳೆದು ಬಂದಿದ್ದವು. ತದನಂತರದಲ್ಲಿ ಅವನ ಬದುಕಿನಲ್ಲಿ ಹಲವು ಬದಲಾವಣೆಗಳು ಉಂಟಾಗುತ್ತಾ ಬಂದವು. ಪಾರಂಪರಿಕ ಜೀವನ ಕ್ರಮಗಳು ರೂಢಿಗತವಾಗಿದ್ದರು ಹೊಸಬದಲಾವಣೆಯನ್ನು ಕಂಡುಕೊಂಡಿದ್ದಾರೆ. ತಾಲೂಕಿನ ಜನತೆ ಆಧುನಿಕತೆಯ ಪರಂಪರೆಗೆ ತಮ್ಮ ಸಂಸ್ಕೃತಿಯನ್ನು ಹೊಂದಿಸಿಕೊಂಡು ಬದುಕುತ್ತಿದ್ದಾರೆ.

ಸಾಮಾಜಿಕ ಸ್ಥಿತಿಗತಿ

ಸಮಾಜ ಸಂಸ್ಕೃತಿಯಲ್ಲಿ ಕುಟುಂಬವು ಸಮಾಜದ ಒಂದು ಚಿಕ್ಕ ಘಟಕ. ಈ ಘಟಕದಲ್ಲಿ ಅವಿಭಜಿತ ಕುಟುಂಬಗಳು ಕಂಡುಬರುವುದರಿಂದ ಸಮಾಜದ ಶಕ್ತಿಗಳಾಗಿ ಅವು ಬೆಳೆಯತೊಡಗಿದವು. "ಕೂಡಿ ಬಾಳಿದರೆ ಸ್ವರ್ಗಸುಖ" ಎಂಬ ಮಾತೊಂದಿದೆ. ಈ ಮಾತಿನ ತತ್ವವನ್ನರಿತುಕೊಂಡು ಕುಟುಂಬಗಳಲ್ಲಿ ಐಕ್ಯಮತ್ಯವು ಹುಟ್ಟಿ ಸಮಾಜವು ಸಂರಚನೆಯಾಗಿತ್ತು. ಇಂದಿನ ದಿನಗಳಲ್ಲಿ ವಿಭಕ್ತ ಕುಟುಂಬಗಳು ಬಹುಸಂಖ್ಯೆಯಲ್ಲಿ ಹುಟ್ಟಿಕೊಂಡಿವೆ. ಇದರೊಂದಿಗೆ ಸಾಮಾಜಿಕ ಜೀವನ ಬದಲಾವಣೆಗೊಂಡಿರುವುದನ್ನು ಕಾಣುತ್ತೇವೆ. ತಾಲೂಕಿನ ಜನರ ಮುಖ್ಯ ಕಸುಬು ವ್ಯವಸಾಯವಾಗಿದೆ. ಅದರ ಜೊತೆಗೆ ಪಶು ಸಂಗೋಪನೆ, ಸಣ್ಣ ಉದ್ಯಮಗಳಲ್ಲಿ ಉದ್ಯೋಗ, ಬಡಿಗಿತನ, ವ್ಯಾಪಾರ ಮೊದಲಾದವುಗಳನ್ನು ನೋಡಬಹುದು. ಜೊತೆಗೆ ಸರ್ಕಾರಿ-ಖಾಸಗಿಗಳಲ್ಲಿ ನೌಕರಿ ಕೆಲಸ ಇತ್ಯಾದಿಗಳನ್ನು ತೊಡಗಿಸಿಕೊಂಡು ಸೊರಬದ ಜನತೆ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಇವರ ಉದ್ಯೋಗ ಒಂದು ಕಡೆಯದರೆ ಹಬ್ಬ-ಜಾತ್ರೆಗಳು, ಧಾರ್ಮಿಕ ಉತ್ಸವಗಳನ್ನು ತಮ್ಮ ಸಮಾಜದಲ್ಲಿ ರೂಢಿಗತವಾಗಿ ನಡೆಸಿಕೊಂಡು ಬಂದಿದ್ದಾರೆ.

ಮನರಂಜನೆ ಜನಪದ ಕಲೆಗಳನ್ನು ಬೆಳೆಸಿಕೊಂಡಿದ್ದಾರೆ. ಇತ್ತೀಚಿಗೆ ಆಧುನಿಕ ಪ್ರಭಾವದಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಬದಲಾವಣೆಗಳು ಗೋಚರವಾಗಿವೆ.

ತಾಲೂಕಿನಲ್ಲಿ ಎಲ್ಲಾ ಸಮುದಾಯಕ್ಕೂ ಶಿಕ್ಷಣ ದೊರಕಿದೆ. ಕೃಷಿ ಮತ್ತು ಕೂಲಿ ಆಳಾಗಿ ದುಡಿಯುವುದಕ್ಕೆ ಸೀಮಿತವಿದ್ದ ಜನತೆ ಬೇರೆ ಬೇರೆ ಕ್ಷೇತ್ರದಲ್ಲಿ ಉದ್ಯೋಗಕ್ಕೆ ತೊಡಗಿ ಸ್ವಾವಲಂಬಿತರಾಗಿದ್ದಾರೆ. ತಮ್ಮ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಿಕೊಂಡಿದ್ದಾರೆ. ಕೆಳವರ್ಗದ ಜನತೆಯ ಶೋಷಣೆ ಇಂದು ದೂರವಾಗಿದೆ. ಆದರೆ ವಿವಾಹ ಕಾರ್ಯಗಳು ಹಿಂದಿನಂತೆಯೇ ತಮ್ಮ ಸಮುದಾಯದಲ್ಲಿಯೇ ನಡೆಯುತ್ತವೆ. ಅನ್ಯಜಾತಿ ವಿವಾಹ ಕಂಡುಬಂದರೂ ಸಾರ್ವತ್ರಿಕ ಮನ್ನಣೆ ತಾಲೂಕಿನಲ್ಲಿ ದೊರಕಿಲ್ಲ.

ಸಾಮಜದಲ್ಲಿಯ ಧಾರ್ಮಿಕ ಆರಚಣೆಗಳು ಬಹು ಸಂಖ್ಯೆಯಲ್ಲಿ ಎಲ್ಲಾ ಸಮುದಾಯಗಳು ಒಳಗೊಂಡು ನಡೆಯುತ್ತಿರುವುದನ್ನು ಕಾಣುತ್ತೇವೆ. ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯದ ಕೆಲವು ಧಾರ್ಮಿಕ ಆಚರಣೆಗಳು ಬೇರೆ ಸಮುದಾಯದಿಂದ ದೂರ ಇದ್ದು ನಡೆಯುತ್ತವೆ.

ತಾಲೂಕಿನಲ್ಲಿ ಸಾಕಷ್ಟು ಸಹಕಾರ ಸಂಘಗಳು, ಯುವಕ ಸಂಘಗಳು ಸಮುದಾಯ ಸಂಘಗಳು, ಮಹಿಳಾ ಸಂಘಗಳು ಬೆಳೆದು ಜನರ ಸಾಮಾಜಿಕ ಸ್ಥಿತಿ-ಗತಿ ಸುಧಾರಿಸಿವೆ ಮತ್ತು ಆರ್ಥಿಕವಾಗಿಯು ಸಮೃದ್ಧಿ ಹೊಂದಿದ್ದಾರೆ. ಗ್ರಾಮಗಳಲ್ಲಿ ರಸ್ತೆಗಳ ಸೌಲಭ್ಯ, ಶಾಲೆಗಳು, ಸಮೀಪದಲ್ಲಿ ಮಾರುಕಟ್ಟೆ, ಸರಿಯಾದ ಸಾರಿಗೆ ವ್ಯವಸ್ಥೆ, ಜನರಿಗೆ ವಸತಿ, ನೀರು, ವಿದ್ಯುತ್ ಮೊದಲಾದ ಸೌಲಭ್ಯಗಳು ಹಾಗೂ ಸಾಲ, ಉದ್ಯೋಗ ಹೀಗೆ ದೊರಕುತ್ತಿದ್ದರಿಂದ ಗ್ರಾಮಗಳ ಸಾಮಾಜಿಕ ಸ್ಥಿತಿ-ಗತಿ ಸುಧಾರಿಸಿದೆ.

೪.೧. ಆಡಳಿತಾತ್ಮಕ ಸ್ಥಿತಿಗತಿ

ಐತಿಹಾಸಿಕ ಸಮಯದಲ್ಲಿ ಜಿಲ್ಲೆಯನ್ನು ನಾಡ, ಸೀಮೆ, ಕಂಪಣ, ವೇಂಟೆ ಎಂದೆಲ್ಲ ಕರೆಯುತ್ತಿದ್ದರು. ಆದರೆ ಬ್ರಿಟಿಷರು ಅಧಿಕಾರಕ್ಕೆ ಬಂದ ಮೇಲೆ ಕೆಲ ಬದಲಾವಣೆಗಳನ್ನು ಮಾಡಿಕೊಂಡರು. ಈಗಿರುವಂತೆ ಜಿಲ್ಲೆಗಳು ರೂಪುಗೊಂಡವು. ತಾಲ್ಲೂಕುಗಳನ್ನು ಒಳಗೊಂಡ ಉಪವಿಭಾಗಗಳು ಕಾಣಿಸಿಕೊಂಡವು. ಕೆಲ ಹಳ್ಳಿಗಳನ್ನು ಸೇರಿಸಿ ಹೋಬಳಿಗಳನ್ನು ರೂಪಿಸಿದರು. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯನ್ನು ಎರಡು ಉಪವಿಭಾಗವನ್ನಾಗಿ ಮಾಡಿದರು. ಸಾಗರ ಮತ್ತು ಶಿವಮೊಗ್ಗ ಈ ಎರಡು ಉಪವಿಭಾಗಗಳು. ಸಾಗರ ಉಪವಿಭಾಗದಲ್ಲಿ ಸಾಗರ, ಸೊರಬ, ಶಿಕಾರಿಪುರ, ಹೊಸನಗರ ತಾಲ್ಲೂಕುಗಳು ಒಳಗೊಂಡಿದೆ. ಇದು ಸಾಗರದಲ್ಲಿರುವ ಉಪ ವಿಭಾಗಾಧಿಕಾರಿಯ ಕಕ್ಷೆಯಲ್ಲಿರುತ್ತದೆ. ಸೊರಬ ತಾಲೂಕು ಹೀಗೆ ಸಾಗರದ ಉಪವಿಭಾಗಕ್ಕೆ ಸೇರಿದ ತಾಲೂಕು.

ಈ ಉಪವಿಭಾಗಾಧಿಕಾರಿಕಯು ತನ್ನ ವಿಭಾಗದ ಎಲ್ಲ ಆಗು ಹೋಗುಗಳಿಗೂ ಜವಾಬ್ದಾರರಾಗಿರುತ್ತಾರಲ್ಲದೆ. ಈ ವಿಭಾಗದ ಮೇಲೆ ಅವರಿಗೆ ಸಂಪೂರ್ಣವಾದ ಹಕ್ಕಿರುತ್ತದೆ. ಉಪವಿಭಾಗಧಿಕಾರಿಯು ತಾಲ್ಲೂಕು ತಹಸೀಲ್ದಾರರ ಕೆಲಸಗಳನ್ನು ವೀಕ್ಷಿಸಬಹುದು. ಜಮಾಬಂದಿ ನಡೆಸುವುದು, ಭೂ ಆಕ್ರಮಣ ಇತ್ಯಾದಿಗಳ ಬಗ್ಗೆ ಗಮನಿಸುವುದು. ಬೆಳೆ, ತಕಾವಿ ಸಾಲ ವಿತರಣೆ, ಸರಕಾರಿ ಸಾಲ ವಸೂಲಿ ಹೀಗೆ ಹಲವಾರು ಕೆಲಸಗಳನ್ನು ಉಪವಿಭಾಗಾಧಿಕಾರಿಗೆ ಕೊಡಲಾಗಿರುತ್ತದೆ. ಉಪವಿಭಾಗಾಧಿಕಾರಿಯ ನಂತರ ತಾಲೂಕಿಗೆ ಓರ್ವ ತಹಸೀಲ್ದಾರರು ಇರುತ್ತಾರೆ.

ಸೊರಬದ ಪಟ್ಟಣದಲ್ಲಿ ತಹಸೀಲ್ದಾರರ ಕಛೇರಿ ಇದ್ದು, ತಹಸಿಲ್ದಾರರ ಅಡಿಯಲ್ಲಿ ತಾಲೂಕಿನ ಕಂದಾಯ ವಸೂಲಾತಿ, ಜಮೀನು ಹಂಚಿಕೆ, ಆಹಾರ ದಾನ್ಯಗಳ ಹಂಚಿಕೆ, ಭತ್ತ ಇತ್ಯಾದಿಗಳನ್ನು ರೈತರಿಂದ ಸಂಗ್ರಹಿಸುವುದು, ತಾಲೂಕಿನ ಶಾಂತಿ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದು, ಮತಪಟ್ಟಿಯನ್ನು ಸಿದ್ಧಪಡಿಸುವುದು, ಜನಗಣತಿ ನಡೆಸುವ ಹೊಣೆ ಇವೆಲ್ಲಾ ಚಟುವಟಿಕೆ ಕೈಗೊಳ್ಳುತ್ತವೆ. ತಹಸೀಲ್ದಾರರ ಕಛೇರಿಯನ್ನು ಸಾಮಾನ್ಯವಾಗಿ ತಾಲೂಕ ಕಛೇರಿಯೆಂದೇ ಕರೆಯುವುದು ವಾಡಿಕೆ.

ಪ್ರತಿ ತಾಲೂಕನ್ನು ಒಂದು ಕ್ಷೇತ್ರವೆಂದು ಪರಿಗಣಿಸಿ ಅದಕ್ಕೆ ಒಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿಯನ್ನು ನೇಮಿಸಲಾಗಿದೆ. ಕ್ಷೇತ್ರಾಭಿವೃದ್ಧಿ ಅಧಿಕಾರಿಯ ಕಛೇರಿ ಕೂಡ ಸೊರಬದಲ್ಲೇ ಇದೆ. ತಾಲೂಕಿನ ಎಲ್ಲ ಅಭಿವೃದ್ಧಿ ಕೆಲಸಗಳ ಮೇಲ್ವಿಚಾರಣೆ ಇದರ ಹೊಣೆಗಾರಿಕೆಯಾಗಿರುತ್ತದೆ.

ಸೊರಬವು ವಿಧಾನಸಭಾ ಕ್ಷೇತ್ರವೆಂದು ೧೯೬೭ರಲ್ಲಿ ಪರಿಗಣಿಸಲ್ಪಟ್ಟಿತು. ಈ ಕ್ಷೇತ್ರದಲ್ಲಿ ದಿ.ವೈ.ಮಲ್ಲಿಕಾರ್ಜುನಗೌಡ ಎಣ್ಣೆಕೊಪ್ಪ ಇವರು ಸ್ವಾತಂತ್ರ್ಯ ನಂತರ ಕೆಲಕಾಲ ಶಾಸಕರಾಗಿದ್ದರು. ನಂತರ ಆನವಟ್ಟಿಯ ಲಕ್ಷ್ಮೀಕಾಂತಪ್ಪನವರು ಅದರ ನಂತರ ಸಾರೇಕೊಪ್ಪದ ಬಂಗಾರಪ್ಪ ನಂತರ ಕುಮಾರ ಬಂಗಾರಪ್ಪ ಇಂದು ಹೆಚ್.ಹಾಲಪ್ಪ ತಾಲೂಕಿನಿಂದ ಆಯ್ಕೆಯಾಗಿ ರಾಜ್ಯದ ನಾಗರಿಕ ಪೂರೈಕೆ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸೊರಬ ಪಟ್ಟಣದಲ್ಲಿ ತಾಲ್ಲೂಕು ಪಂಚಾಯಿತಿ ಇದ್ದು ತಾಲೂಕಿನ ಸಮಸ್ತ ಕಾರ್ಯಗಳ ಮೇಲ್ವಿಚಾರಣೆ ಮತ್ತು ಅಭಿವೃದ್ಧಿ ತಾಲೂಕಿನ ಪಂಚಾಯಿತಿಗೆ ಸೇರಿದೆ. ಈ ಪಂಚಾಯಿತಿ ಕೆಳಗೆ ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು ಲೆಕ್ಕಪತ್ರ ಹಾಗೂ ಯೋಜನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿಗಳು ಇವೆ. ಸರ್ಕಾರವು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯನ್ನು ನೇಮಿಸಿರುತ್ತದೆ. ತಾಲ್ಲೂಕು ಪಂಚಾಯಿತಿಯಲ್ಲಿ ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಪಂಚಾಯಿತಿ ಕೊಡುವ ಧನಸಹಾಯ ಹಾಗೂ ಸಾಲಗಳು, ತಾನು ವಿಧಿಸುವ ತೆರಿಗೆಗಳು ಮತ್ತು ಸುಂಕಗಳು, ಸರ್ಕಾರ ಮತ್ತು ಇತರೆ ಸಂಘಸಂಸ್ಥೆಗಳು ಕೊಡುವ ಕೊಡುಗೆಗಳು, ಧನಸಹಾಯ ಮತ್ತು ತನ್ನ ಆಸ್ತಿಯಿಂದ ಬರುವ ಬಾಡಿಗೆ ಮತ್ತು ವರಮಾನ

ಈ ರೀತಿಯ ನಿಧಿಯನ್ನು ಹೊಂದಿದೆ. ಇದರ ಅಡಿಯಲ್ಲಿ ತಾಲೂಕಿನ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ.

ತಾಲೂಕಿನಲ್ಲಿ ೩೯ ಮಂಡಲ್ ಪಂಚಾಯಿತಿಗಳಿದ್ದು ೫೦೦೦ ರಿಂದ ೭೦೦೦ ಜನಸಂಖ್ಯೆಗೆ ಒಂದು ಮಂಡಲ್ ಸ್ಥಾಪನೆಯಾಗಿದೆ. ಈ ಪಂಚಾಯ್ತಿಗಳು ಆಡಳಿತ ವ್ಯವಸ್ಥೆಯ ಕೊನೆಯ ಹಾಗೂ ಪ್ರಾಥಮಿಕ ಘಟಕವಾಗಿವೆ. ಇವು ಗ್ರಾಮ ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿವೆ. ಪ್ರತಿ ಮಂಡಲ್ ಪಂಚಾಯಿತಿಯ ಅಧಿಕಾರ ಅವಧಿ ೫ ವರ್ಷಗಳು. ಚುನಾವಣೆಯ ಮೂಲಕ ಆಯ್ಕೆಯಾದ ಸದಸ್ಯರು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಮಂಡಲ್ ಪಂಚಾಯಿತಿಯು ಹಲವು ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳುತ್ತದೆ. ಉತ್ಪಾದನಾ ಸಮಿತಿ, ನ್ಯಾಯ ಸಮಿತಿ, ಮತ್ತು ಸೌಕರ್ಯಗಳ ಸಮಿತಿಗಳು ತಾಲೂಕಿನ ಇದರ ಅಡಿಯಲ್ಲಿ ನಡೆಯುತ್ತವೆ. ಈ ಪಂಚಾಯಿತಿಗಳು ಸರ್ಕಾರ, ಜಿಲ್ಲಾ ಮತ್ತು ತಾಲೂಕು ಪಂಚಾಯ್ತಿಗಳು ನೀಡುವ ಧನಸಹಾಯ, ತಾನು ವಿಧಿಸಿದ ತೆರಿಗೆಗಳು ಮತ್ತು ಸುಂಕಗಳು ಇವುಗಳಿಂದ ಬರುವ ವರಮಾನ, ಸರ್ಕಾರ ಅಥವಾ ಸಂಸ್ಥೆಗಳು ಅಥವಾ ವ್ಯಕ್ತಿಗಳು ನೀಡುವ ಧನ ಸಹಾಯ ಕೊಡುಗೆಗಳ ಮೊತ್ತ, ತನ್ನ ಆದಾಯದಿಂದ ಬರುವ ಬಾಡಿಗೆ ಮತ್ತು ವರಮಾನ ಹೀಗೆ ನಿಧಿಗಳನ್ನು ಒಳಗೊಂಡಿವೆ. ಈ ಮಂಡಲ ಪಂಚಾಯ್ತಿ ವ್ಯಾಪ್ತಿಯಲ್ಲಿ ಗ್ರಾಮ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತವೆ. ಇದರ ಕಾರ್ಯಗಳ ಆಂತರಿಕ ಮತ್ತು ಆರ್ಥಿಕ ಚಟುವಟಿಕೆಗಳ ಮೇಲೆ ತಾಲೂಕು ಪಂಚಾಯ್ತಿಯ ಮೇಲ್ವಿಚಾರಣೆ ಇರುತ್ತದೆ.

ಹೀಗೆ ಗ್ರಾಮಾಂತರ ಪ್ರದೇಶದ ಸ್ಥಳೀಯ ಸರ್ಕಾರಗಳು ಮತ್ತು ನಗರ ಪ್ರದೇಶದ ಸ್ಥಳೀಯ ಸರ್ಕಾರಗಳಾದ ಮಹಾನಗರ ಪಾಲಿಕೆ, ಪುರಸಭೆಗಳು ಮತ್ತು ನಗರ ಸಭೆಗಳು ಸ್ಥಳೀಯ ಮಟ್ಟದ ಸಮಸ್ಯೆಗಳಿಗೆ ಸ್ಥಳೀಯ ಜನರಿಂದಲೇ ಪರಿಹಾರ ಕಾರ್ಯಗಳನ್ನು ಪೂರೈಸಿ ಸ್ಥಳೀಯ ಮಟ್ಟದಿಂದ ಅಧಿಕಾರವನ್ನು ನಿರ್ವಹಿಸುವುದರ ಮೂಲಕ ಸ್ಥಳೀಯ ಜನರು ನೇರವಾಗಿ ಸರ್ಕಾರದಲ್ಲಿ ಭಾಗವಹಿಸುವಂತೆ ಮಾಡಲು ಈ ಪದ್ಧತಿ ಸಹಾಯಕವಾಗಿದೆ. ಇವುಗಳ ಮೂಲಕ ದಕ್ಷ ಆಡಳಿತ ವ್ಯವಸ್ಥೆ ತಾಲೂಕಿನಲ್ಲಿ ನೆಲೆಯೂರಿದೆ.

ತಾಲೂಕಿನ ಆಡಳಿತ ವ್ಯವಸ್ಥೆಯಲ್ಲಿ ಈಗಿರುವ ರಾಜಕೀಯ ಪಕ್ಷಗಳ ಪಾತ್ರ ತುಂಬಾ ಇದೆ. ಸಾರೆಕೊಪ್ಪದ ಎಸ್. ಬಂಗಾರಪ್ಪನವರನ್ನು ಸೊರಬ ತಾಲ್ಲೂಕು ರಾಜಕೀಯ ಕ್ಷೇತ್ರದಲ್ಲಿ ಬಹು ಎತ್ತರಕ್ಕೆ ಬೆಳೆಸಿದೆ. ಕಾಂಗ್ರೇಸ್ ಪಕ್ಷದಿಂದ ೧೯೯೦-೯೨ರಲ್ಲಿ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಸ್ಥಾನದಲ್ಲಿ ಸೇವೆ ಸಲ್ಲಿಸಿದರು ಇವರ ಅಧಿಕಾರದ ಅವಧಿಯಲ್ಲಿ ಅಕ್ಷಯಯೋಜನೆ, ಆಶ್ರಯಯೋಜನೆ, ಶುಶ್ರೂಷೆಯೋಜನೆ, ವಿಶ್ವಯೋಜನೆ, ಆರಾಧನಾ ಯೋಜನೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆ, ಪುಸ್ತಕ ಪ್ರಾಧಿಕಾರ ಸ್ಥಾಪನೆಗೆ ಪ್ರಯತ್ನ. ಹೀಗೆ ಹಲವಾರು ಮಹತ್ವದ ಯೋಜನೆಗಳು ನಾಡಿಗೆ

ಕೊಡುಗೆಯಾಗಿ ಬಂದಿವೆ. ಸೊರಬ, ತಾಲೂಕು ಒಂದರಲ್ಲೇ ೧೧ ಸಾವಿರ ಕುಟುಂಬಗಳಿಗೆ ಗೇಣಿ ಹಕ್ಕು ನೀಡಿದರು. ಆದರೆ ಇದರಾಚೆಗೆಯ ಇವರ ಕೊಡುಗೆ ತಾಲೂಕನ್ನು ತೃಪ್ತಿಪಡಿಸಿಲ್ಲ. ತಾಲೂಕಿನ ಸಾಕಷ್ಟು ಕೊರತೆಗಳು ಇವರ ಸೇವೆಯನ್ನು ಕಾಣದಾದವು. ಇವರು ಬಿಜೆಪಿ ಪಕ್ಷದಲ್ಲಿ (೨೦೦೪) ಸಂಸತ್ ಸದಸ್ಯರಾಗಿದ್ದರು. ನಂತರ ಅದಕ್ಕೆ ರಾಜೀನಾಮೆ ಮಾಡಿ ಅಂದೇ ಸಮಾಜವಾದಿ ಪಕ್ಷಕ್ಕೆ ಸೇರ್ಪಡೆ ಮತ್ತು ಕರ್ನಾಟಕ ಪ್ರದೇಶ ಸಮಾಜವಾದಿ ಪಕ್ಷದ ರಾಜಾಧ್ಯಕ್ಷರಾಗಿ ನೇಮಕವಾದರು. ೨೦೦೫ರಲ್ಲಿ ೪ನೇ ಬಾರಿಗೆ ಸಂಸತ್ ಸದಸ್ಯರಾಗಿ ಸಮಾಜವಾದಿ ಪಕ್ಷದಿಂದ ಮರು ಆಯ್ಕೆ, ೨೦೦೮ರಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ನೆರೆ ತಾಲೂಕು ಶಿಕಾರಿಪುರದಿಂದ ಸ್ಪರ್ಧಿಸಿ ಬಿ.ಜೆ.ಪಿ ಪಕ್ಷದ ಯಡಿಯೂರಪ್ಪನವರಿಂದ ಗೆಲವು ಕಾಣದಾದರು.

ಎಸ್.ಬಂಗಾರಪ್ಪನವರ ಪುತ್ರರಾದ ಕುಮಾರ ಬಂಗಾರಪ್ಪನವರು ತಾಲೂಕಿನ ಶಾಸಕರಾಗಿ, ಕಾಂಗ್ರೆಸ್ ಪಕ್ಷದ ಅಧಿಕಾರದಲ್ಲಿ ರಾಜ್ಯದ ಸಣ್ಣ ನೀರಾವರಿ ಸಚಿವರಾಗಿ ಹಾಗೂ ಪೌರಾಡಳಿತ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಇವರ ಅವಧಿಯಲ್ಲಿ ತಾಲ್ಲೂಕು ಸುಧಾರಣೆ ಸ್ವಲ್ಪ ಪ್ರಮಾಣದಲ್ಲಿ ಕಂಡಿತಾದರೂ ಮಹತ್ತರ ಯೋಜನೆಗಳು ಕಾರ್ಯಗಳು ದೂರ ಉಳಿದವು. ೨೦೦೮ರಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸೊರಬದಲ್ಲಿ ಸ್ಪರ್ಧಿಸಿದರು. ಜೊತೆಗೆ ಮಧು ಬಂಗಾರಪ್ಪನವರು ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿದರು. ಹೆಚ್.ಹಾಲಪ್ಪನವರು ಬಿ.ಜೆ.ಪಿ ಪಕ್ಷದಿಂದ ತಾಲೂಕಿನಲ್ಲಿ ಸ್ಪರ್ಧಿಸಿದರು. ಗೆಲುವು ಬಿ.ಜೆ.ಪಿಯದಾಯಿತು. ಪ್ರಸ್ತುತ ಸೊರಬ ತಾಲೂಕಿನಲ್ಲಿ ಬಿಜೆಪಿಯ ಹೆಚ್.ಹಾಲಪ್ಪರ ಆಡಳಿತ ಇದ್ದು, ಇವರ ಆಡಳಿತದಲ್ಲಿ ತಾಲ್ಲೂಕು ಕೊರತೆ ನಿಗಬಹುದು, ಅಭಿವೃದ್ಧಿ ಕಾರ್ಯ ಮತ್ತು ಮಹತ್ತರ ಯೋಜನೆಯ ಕೊಡುಗೆ ದೊರಕಬಹುದು ಎಂಬುದರ ಅಪೇಕ್ಷೆಯ ಹಿನ್ನೆಲೆಯಲ್ಲಿ ತಾಲೂಕು ಜನತೆ ಇವರನ್ನು ಆಯ್ಕೆ ಮಾಡಿದೆ. ಪ್ರಸ್ತುತ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾಗಿ ನಾಡಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ತಾಲೂಕನ್ನು ಅಭಿವೃದ್ಧಿಗೊಳಿಸಿ ಜನತೆಯನ್ನು ತಮ್ಮ ಕಾರ್ಯಗಳ ಮೂಲಕ ಸಂತೃಪ್ತಿಗೊಳಿಸುವ ಸುವರ್ಣ ಅವಕಾಶ ಇವರ ಪಾಲಾಗಿದೆ. ಇವರು ತಾಲೂಕಿನ ದಕ್ಷ ರಾಜಕಾರಣಿಯೇ? ಕಾದು ನೋಡಬೇಕಿದೆ.

ಆರ್ಥಿಕ ಸ್ಥಿತಿಗತಿ

ಆಧುನೀಕರಣಗೊಂಡ ಇಂದಿನ ಈ ಸಮಾಜದಲ್ಲಿ ಆರ್ಥಿಕತೆಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಲಾಗುತ್ತಿದೆ. ಇಂದು ಬಹುಸಂಖ್ಯೆಯ ಹಳ್ಳಿಗಳ ಜನತೆ ಬೇರೆ ಬೇರೆ ವೃತ್ತಿಗೆ ತೊಡಗಿ ಸುಧಾರಣೆಯ ಹಾದಿಯಲ್ಲಿದ್ದಾರೆ. ತಾಲೂಕಿನಲ್ಲಿ ಕೂಲಿಕಾಂರರ ಸಂಖ್ಯೆಯು ಸಾಕಷ್ಟಿದೆ. ಸಣ್ಣ, ಅತಿ ಸಣ್ಣ ಹಿಡುವಳಿದಾರರು ಸಾಕಷ್ಟಿದ್ದಾರೆ. ಸಂಪದ್ಭರಿತವಾಗಿದ್ದರೂ ಜನತೆ ಶ್ರೀಮಂತರಾಗಿಲ್ಲ. ಮಧ್ಯಮವರ್ಗದ ಜನರು ಹೆಚ್ಚಿದ್ದಾರೆ. ತಾಲೂಕಿನಲ್ಲಿ ೨೦೦೧ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಯವರು ೧೮೫-೫೭೨ ಒಟ್ಟು ೧೮.೯೦

ಗ್ರಾಮೀಣದಲ್ಲಿ ೧೯.೨೬ ನಗರದಲ್ಲಿ ೧೦.೩೭, ಪರಿಶಿಷ್ಟ ಪಂಗಡದ ಜನತೆ ೧೮೫.೫೭೨ ಒಟ್ಟು ೩.೬೬. ಗ್ರಾಮೀಣದಲ್ಲಿ ೩.೭೧, ನಗರದಲ್ಲಿ ೨.೨೫ ಜನತೆ ಇದ್ದಾರೆ. ಇಂದು ಮಂಡಲ್ ಪಂಚಾಯಿತಿಯಿಂದ ಉಚಿತ ನಿವೇಶನ ವ್ಯವಸ್ಥೆಯನ್ನು ಪಡೆದಿದ್ದಾರೆ. ತಾಲೂಕಿನ ಬಡವರಿಗೆ ಮತ್ತು ಅಲ್ಪ ಆದಾಯದವರಿಗೆ ಜನತಾ ಮನೆಗಳನ್ನು ಹಾಗೂ ಕಡಿಮೆ ದರದ ಮನೆಗಳನ್ನು ಮಂಜೂರು ಮಾಡಲಾಗಿದೆ. ಈ ತಾಲೂಕಿನಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ೩೯ ಮಂಡಲ್ ಪಂಚಾಯಿತಿಯ ಮೂಲಕ ನಡೆಯುತ್ತಿವೆ. ಮನೆಗ್ರಾಂಟ್, ಉಳುವ ಎತ್ತುಗಳಿಗೆ ಹಣ, ವ್ಯವಸಾಯದ ಉಪಕರಣಗಳು, ವಿದ್ಯಾಭ್ಯಾಸ, ಸೊಸೈಟಿಗಳಿಗೆ ಷೇರು ಹಣ, ಬೋರ್ ವೆಲ್ ಬಡಜನತೆಗೆ ಸರಕಾರದಿಂದ ಧನಸಹಾಯ, ನೀರು ಸರಬರಾಜು ಯೋಜನೆಗಳು, ಆರೋಗ್ಯ ಶಿಕ್ಷಣ ಸ್ವರ್ಣ ಜಯಂತಿ ಷಹರಿ ರೋಜಗಾರ್ ಯೋಜನೆ, ಭಾಗ್ಯದ ಲಕ್ಷ್ಮಿ, ಶಿಶು ಅಭಿವೃದ್ಧಿ ಯೋಜನೆ, ಇನ್ನೂ ಮೊದಲಾದ ಯೋಜನೆಗಳನ್ನು ಸರಕಾರ ಈ ಮಂಡಲ್ ಪಂಚಾಯಿತಿಗಳು ಹಾಗೂ ತಾಲೂಕು ಅಭಿವೃದ್ಧಿ ಮಂಡಳಿ ಹಾಕಿಕೊಂಡು ತಾಲ್ಲೂಕುಗಳನ್ನು ಅಭಿವೃದ್ಧಿಗೊಳಿಸುತ್ತಿವೆ. ಇವುಗಳ ಪ್ರಯೋಜನ ಪಡೆದ ತಾಲೂಕಿನ ಜನತೆ ಸಾಧ್ಯವಾದಷ್ಟು ಮಟ್ಟಿಗೆ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದ್ದಾರೆ ಎನ್ನಬಹುದು.

ವಿಶೇಷವಾಗಿ ತಾಲೂಕು ಕೃಷಿಯನ್ನು ಅವಲಂಬಿಸಿಕೊಂಡಿರುವುದರಿಂದ ಇದರ ಅಭಿವೃದ್ಧಿ ಕಾರ್ಯ ಕೈಗೊಳ್ಳುವುದು ಹೆಚ್ಚಿನ ಅವಶ್ಯಕತೆ ಇದೆ. ತಾಲೂಕಿನಲ್ಲಿ ೧೭-೧೨-೧೯೬೦ರಲ್ಲಿ ತಾಲೂಕು ಅಭಿವೃದ್ಧಿ ಮಂಡಳಿ ೧೫ ಜನ ಚುನಾಯಿತ ಸದಸ್ಯರನ್ನು ಒಳಗೊಂಡು ಇಬ್ಬರು ವಿಧಾನಸಭಾ ಸದಸ್ಯರನ್ನು ಸೇರಿಸಿಕೊಂಡು ಆರಂಭವಾಯಿತು. ಜನಸಂಖ್ಯೆ ಬೆಳೆದ ಹಾಗೆ ಅಭಿವೃದ್ಧಿ ಮಂಡಳಿಯೂ ಬೆಳೆದಿದೆ. ಮಂಡಳಿಯು ಕೆಲವು ಸಮಿತಿಗಳನ್ನು ರಚಿಸಿಕೊಂಡು, ಸಮಾಜ ಕಲ್ಯಾಣ, ಮೀನುಗಾರಿಕೆ, ಸಹಕಾರ, ಆರೋಗ್ಯ, ಕುಟುಂಬ ಕಲ್ಯಾಣ, ವಿದ್ಯಾಭ್ಯಾಸ, ವಸತಿ, ಸಾಲ, ಜೊತೆಗೆ ಕೃಷಿ ಮತ್ತು ನೀರಾವರಿ, ಕುಡಿಯುವ ನೀರು ಹೀಗೆ ಸಮಸ್ತ ವಿಷಗಳನ್ನು ಅಭಿವೃದ್ಧಿ ಮಂಡಳಿ ಗಮನಿಸಿ ಜನತೆಯ ಬೇಡಿಕೆಗಳನ್ನು ಪೂರೈಸುತ್ತಾ ಬಂದಿದೆ.

ಕೃಷಿ-ನೀರಾವರಿ

ತಾಲೂಕಿನಲ್ಲಿಯ ಅಭಿವೃದ್ಧಿ ಮಂಡಳಿ ಮತ್ತು ಮಂಡಲ್ ಪಂಚಾಯಿತಿಗಳು ಕೃಷಿಗೆ ಸಂಬಂಧಿಸಿ ಸಾಕಷ್ಟು ಕಾರ್ಯ ಮಾಡುತ್ತವೆ. ಕೆರೆ ಕಟ್ಟೆಗಳ ನಿರ್ಮಾಣ, ಹಳೆ ಕೆರೆಗಳ ಜೀರ್ಣೋದ್ಧಾರ, ಏತ ನೀರಾವರಿ ಯೋಜನೆ, ಸಣ್ಣ ಜಲಾಶಯಗಳ ನಿರ್ಮಾಣಗಳ ಬಗ್ಗೆ ಹೆಚ್ಚು ಗಮನ ನೀಡುತ್ತವೆ. ಹೀಗೆ ಕೃಷಿ ರಂಗಕ್ಕೆ ಸಕಲ ನೆರವನ್ನು ನೀಡಲಾಗುತ್ತದೆ. ಸಹಕಾರ ಸಂಘ, ಬ್ಯಾಂಕುಗಳು ಕೂಡ ಕೃಷಿಗೆ ನೆರವನ್ನು ನೀಡುತ್ತಿವೆ. ಇಲ್ಲಿಯ ಮುಖ್ಯ ಬೆಳೆ ಭತ್ತ ಮಳೆ ಆಧಾರಿತ ಬೆಳೆ. ಇತ್ತೀಚಿಗೆ ಪಂಪ್‌ಸೆಟ್ ಹೆಚ್ಚು ಸಹಕಾರಿಯಾಗಿದೆ. ಕೆಲವು ಭಾಗಕ್ಕೆ ತಾಲೂಕಿನಲ್ಲಿ ಹರಿಯುವ ವರದಾ ಮತ್ತು ದಂಡವತಿ ನದಿಗಳು

ವ್ಯವಸಾಯಕ್ಕೆ ತುಂಬಾ ಅನುಕೂಲ ಮಾಡಿಕೊಡುತ್ತಿವೆ. ೮೦೩ ಚಿಕ್ಕ ಕೆರೆಗಳು ಇದ್ದು ೧೭.೭೯೫.೬ ಹೆಕ್ಟೇರು ಪ್ರದೇಶಕ್ಕೆ ನೀರುಣಿಸಿದರೆ, ೨೧ ಜಲಾಶಯಗಳು ೬೧೬.೪ ಹೆಕ್ಟೇರುಗಳಿಗೆ ನೀರನ್ನು ಸರಬರಾಜು ಮಾಡುತ್ತವೆ. ಈ ಕೃಷಿ ಅಭಿವೃದ್ಧಿಗೆ ಸರಕಾರಿ ಬೀಜೋತ್ಪಾದನ ಕೇಂದ್ರ ಹಾಗೂ ಒಕ್ಕಲುತನ ಸಂಶೋಧನಾ ಕೇಂದ್ರಗಳು ತಾಲೂಕಿನಲ್ಲಿದ್ದು ಸಾಕಷ್ಟು ನೆರವು ನೀಡುತ್ತವೆ. ಸಹಕಾರಿ ಸಂಘವು ರಾಸಾಯನಿಕ ಗೊಬ್ಬರ, ಬೀಜ, ಔಷಧಿ, ಕೃಷಿ ಉಪಕರಣ, ಕೃಷಿ ತರಬೇತಿ ಇತ್ಯಾದಿ ರೀತಿಯಲ್ಲಿ ನೆರವು ಮಾಡುತ್ತಿದೆ. ಹೀಗೆ ಕೃಷಿ ಅಭಿವೃದ್ಧಿಗೆ ನೆರವು ನೀಡಿ ಜನತೆಯ ಆರ್ಥಿಕ ಸ್ಥಿತಿಗತಿ ಸುಧಾರಿಸಲಾಗಿದೆ.

ಆದರೂ ಕೂಡ ತಾಲೂಕಿನ ಜನತೆ ಬದುಕಿನ ಸಂಪೂರ್ಣ ಉತ್ಸುಕತೆ ಕಂಡುಕೊಂಡಿಲ್ಲ. ಕೃಷಿಯಿಂದಲೇ ಜೀವನ ನಿರ್ವಹಣೆ ದುಸ್ತರವಾಗುತ್ತಲಿದೆ. ಈ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಅತಿಯಾದ ಬಳಕೆಯಿಂದ ಭೂಮಿ ಸತ್ವ ಕಳೆದುಕೊಂಡು ಬರಡಾಗುವುದು ಕಾಣಬರುತ್ತಿದೆ. ಅಕಾಲಿಕ ಮಳೆ, ಅನಿಯತ ಮಳೆಯಿಂದ ಬೆಳೆಹಾನಿ, ಬರಗಾಲಕ್ಕೆ ತುತ್ತಾಗುತ್ತಿರುವ ಕ್ಷಣಗಳನ್ನು ಕಾಣುತ್ತಲಿದ್ದೇವೆ. ಕೃಷಿ ಉತ್ಪಾದನೆಗೆ ಮಾಡಿದ ವೆಚ್ಚವೇರುತ್ತಲಿದ್ದು, ಏನೇ ಆದಾಯ ಬಂದರೂ ವೆಚ್ಚಕ್ಕೆ ಸರಿಯಾಗುತ್ತಿದೆ.

ಇಂತಹ ಸಂದರ್ಭದಲ್ಲಿಯೂ ತಾಲೂಕಿನ ಕೆಲವರು ಸಂಕೀರ್ಣತೆಯಿಂದ, ಬುದ್ಧಿವಂತಿಕೆಯಿಂದ ಕೃಷಿ ರಂಗದಲ್ಲಿ ಯಶಸ್ಸು ಕಂಡವರೂ ಇದ್ದಾರೆ. ಅವರು ಕೃಷಿಯಲ್ಲಿ ವ್ಯವಹಾರಿಕ ಜ್ಞಾನದಿಂದ ಅಭಿವೃದ್ಧಿಪಡಿಸುವರು. ಹವಾಮಾನದ ಮಾಹಿತಿ, ಮಣ್ಣಿನ ಗುಣ ಲಕ್ಷಣ, ಕೂಲಿಕಾರರ ಲಭ್ಯತೆ, ಉತ್ಪಾದಿತ ಧಾನ್ಯದ ಮಾರಾಟ ವ್ಯವಸ್ಥೆ, ಬೇಡಿಕೆಯ ಪರಿಗಣನೆ ಮೇರೆಗೆ ಬೆಳೆ ಉತ್ಪಾದನೆ ಇವುಗಳ ಬಗ್ಗೆ ಚಿಂತನೆ ಮಾಡಿ ಸೂಕ್ತ ಯೋಜನೆ ರೂಪಿಸಿ ಕಾರ್ಯಪ್ರವೃತ್ತರಾಗಬೇಕಿದೆ. ಕೃಷಿ ರಂಗವು ಈಗ ಜಮಿನು ವಿಸ್ತೀರ್ಣ, ನೀರಾವರಿ ಲಭ್ಯತೆ, ಹಣತೊಡಗಿಸುವ ಸಾಮರ್ಥ್ಯ, ಸೂಕ್ತ ಬೆಳೆ ಯೋಜನೆ, ಮಣ್ಣು ಮತ್ತು ನೀರು, ಬೆಳೆ ನಿರ್ವಹಣೆ ಒಳಗೊಂಡು ಒಂದು ಸಂಕೀರ್ಣವೃತ್ತಿಯಾಗಿದೆ. ಕೃಷಿಯೂ ಈಗ ಹುಂಬತನದಿಂದ ಮಾಡುವ ವೃತ್ತಿಯಾಗಿಲ್ಲ. ಬುದ್ಧಿವಂತಿಕೆಯಿಂದ ತನ್ನ ಹೊಲದಲ್ಲಿ ತಾನೇ ತಜ್ಞನಾಗಿ ಬೆಳೆ ಅವಧಿಯಲ್ಲಿ ಕಾಲಕಾಲಕ್ಕೆ ಗಮನಕೊಟ್ಟು ನಿರ್ವಹಿಸಬೇಕಾದ ಪೂರ್ಣಾವಧಿ ವೃತ್ತಿಯಾಗಿದೆ ಯೆಂಬುದನ್ನು ಅರಿಯಬೇಕಿದೆ. ತಾಲೂಕಿನಲ್ಲಿ ಕೃಷಿಗೆ ಸಾಕಷ್ಟು ರಿಯಾಯಿತಿ ಸವಲತ್ತುಗಳು, ಬ್ಯಾಂಕ್ ಸಾಲಗಳು ಈಗ ಹೆಚ್ಚುತ್ತಲಿದ್ದು, ಅನೇಕರು ಸಾಂಪ್ರದಾಯಿಕ ಬೆಳೆಯಷ್ಟೆ ಅಲ್ಲದೆ, ತೆಂಗು ಅಡಿಕೆ, ಮಾವು, ತೋಟಗಾರಿಕೆ ಇತ್ಯಾದಿ ಬೆಳೆಗಳಲ್ಲಿ ವ್ಯವಸಾಯ ಹೊಂದಲು ತಳಿಗಳ ಮಾಹಿತಿ ಪಡೆದು ಅನುಸರಿಸುತ್ತಿರುವುದನ್ನು ಕಾಣುತ್ತೇವೆ.

ಆಧುನಿಕ ಕೃಷಿ ಯಂತ್ರೋಪಕರಣದಿಂದ ಕೃಷಿ ಕಾರ್ಮಿಕರ ಕೊರತೆ ಎದುರಾದರೂ ನಿಭಾಯಿಸುವ ಪ್ರಸಕ್ತ ಸಂದರ್ಭ ಉಂಟಾಗಿದೆ. ಪ್ರಸಕ್ತ ಕೃಷಿ ಬೆಳೆಗಳೆಂದರೆ ಭತ್ತ, ಜೋಳ, ರಾಗಿ, ಮೆಣಸಿನಕಾಯಿ,

[illegible]

ದ್ವಿದಳ ಧಾನ್ಯ, ತೊಗರಿ, ಕಬ್ಬು, ಹತ್ತಿ, ನೆಲಗಡಲೆ, ಅಡಕೆ, ತೆಂಗು, ಸೂರ್ಯಕಾಂತಿ, ಹೆಸರು, ಹಲಸಂದಿ, ಹುರುಳಿ, ಅವರೆ ಇತ್ಯಾದಿ ಬೆಳೆ ಕಾಣುತ್ತೇವೆ. ಇಂದು ಗಂಗಾಕಲ್ಯಾಣ ಯೋಜನೆಯಿಂದ ಮತ್ತು ಸ್ವಂತಾಗಿ ಸಾಕಷ್ಟು ಪಂಪ್‌ಸೆಟ್ ಹುಟ್ಟಿಕೊಂಡಿವೆ. ಜನರು ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತಾರೆ. ಹಾಗಾಗಿ ಕೃಷಿಯ ಆದಾಯ ಹೆಚ್ಚಳವಾಗಿ ಆರ್ಥಿಕ ಸುಧಾರಣೆ ಬೆಳವಣಿಗೆಯ ಹಾದಿಯಲ್ಲಿದೆ.

ಪಶುಸಂಗೋಪನೆ

ಅಂದು ರೈತ ಕುಟುಂಬದ ಮನೆಯಲ್ಲಿ ೮-೧೦ ದನಕರುಗಳು ದೊಡ್ಡ ಕುಟುಂಬದವರ ಮನೆಯಲ್ಲಿ ೮೦ ರಿಂದ ೧೦೦ರವರೆಗೆ ದನಕರು, ಎಮ್ಮೆರಾಸುಗಳು ಕೊಟ್ಟಿಗೆಯಲ್ಲಿರುತ್ತಿದ್ದವು. ಆದ್ದರಿಂದ ದೊರೆಯುವ ಸಾಕಷ್ಟು ಸಗಣಿಗೊಬ್ಬರ ಅವರ ಹೊಲಗಳಿಗೆ ಹಾಕಲು ಸಾಕಾಗುತ್ತಿತ್ತು. ಮಕ್ಕಳು-ಮರಿಗಳು, ದೊಡ್ಡವರು ಹಾಲು, ಮೊಸರು, ಬೆಣ್ಣೆಯ ಸೇವನೆಯಿಂದ ಆರೋಗ್ಯ ಪೂರ್ಣವಾಗಿರುತ್ತಿದ್ದರು. ಇಂದು ದನಕರುಗಳ ಮೇವಿಗೆ ಮೀಸಲಿದ್ದ ಬ್ಯಾಣ ಇಲ್ಲದಂತಾಗಿ ದನಕರುಗಳ ನಿರ್ವಹಣೆ ದುಸ್ತರವಾಗುತ್ತಲಿದೆ. ಈಗ ಹಳ್ಳಿಯಲ್ಲಿ ಸಾಕಾಗುವಷ್ಟು ಹಾಲು ಹೈನು ದೊರೆಯುತ್ತಿಲ್ಲ. ಪೇಟೆಯಿಂದಲೇ ಹಳ್ಳಿಗೆ ನಂದಿನಿ ಪ್ಯಾಕೆಟ್ ಹಾಲು ಸರಬರಾಜಾಗುತ್ತಲಿದೆ. ಆರ್ಥಿಕ ಸಮೃದ್ಧಿ ಕ್ಷೀಣಿಸಿದೆ.

ತಾಲೂಕಿನಲ್ಲಿ ದನಗಳ/ಪಶುಗಳ ಪಾಲನೆ ಪೋಷಣೆಗೆ ನೆರವು ನೀಡಲು ಅನವಟ್ಟಿ, ಉಳವಿ, ಚಂದ್ರಗುತ್ತಿ ಮೊದಲಾದಡೆ ಪಶುವೈದ್ಯಕೇಂದ್ರಗಳಿವೆ. ಇವುಗಳ ಮೂಲಕ ಜಾನುವಾರುಗಳನ್ನು ಸಾಕಲು ಪ್ರೋತ್ಸಾಹಿಸುವುದರ ಜೊತೆಗೆ ಜರ್ಸಿ ಮತ್ತು ಸಿಂಧಿ ಆಕಳುಗಳನ್ನು, ಕೋಳಿಗಳನ್ನು ಸಾಕಲು ನೆರವು ಮತ್ತು ಸಂರಕ್ಷಣೆಯನ್ನು ಈ ಕೇಂದ್ರಗಳು ನೀಡುತ್ತವೆ. ಜೊತೆಗೆ ದೊಡ್ಡ ಕೆರೆಗಳಲ್ಲಿ ಮೀನು ಸಾಕಾಣಿಕೆಗೆ ಅವಕಾಶ ನೀಡುತ್ತವೆ. ತಾಲೂಕಿನಲ್ಲಿ ಮೀನು ಸಹಕಾರಿ ಸಂಘವನ್ನು ಕೂಡ ಸ್ಥಾಪಿಸಲಾಗಿದೆ. ಈ ಸಂಘದ ವತಿಯಿಂದ ಸದಸ್ಯರಿಗೆ ಬಲೆಗಳನ್ನು ಕೊಡುವುದು, ದೊಡ್ಡಕೆರೆಗಳಲ್ಲಿ ಮೀನು ಹಿಡಿಯಲು ೨ ವರ್ಷದ ಗುತ್ತಿಗೆ ಕೊಡುವುದು ಮೊದಲಾದ ಅನುಕೂಲಗಳು ಲಭ್ಯವಾಗಿವೆ. ಇವು ಗ್ರಾಮೀಣ ಜನತೆಯ ಆರ್ಥಿಕತೆಯನ್ನು ಸುಧಾರಿಸುವಲ್ಲಿ ಸಹಾಯಕವಾಗಿವೆ.

ಕೈಗಾರಿಕೆ

ತಾಲೂಕಿನಲ್ಲಿ ಕೈಗಾರಿಕೆಯ ಬೆಳವಣಿಗೆ ಇಲ್ಲದಿರುವುದು ನಿರಾಶದಾಯಕದ ಸಂಗತಿ. ಆದರೆ ಗುಡಿಗಾರರ ಗುಡಿಗಾರಿಕೆ, ಕೈಗಮಗ್ಗದ ಹತ್ತಿ ಬಟ್ಟೆ, ಸುಣ್ಣ ತಯಾರಿಕೆ, ಬೊಂಬಿನಿಂದ ಬುಟ್ಟಿ, ತಟ್ಟೆ ಹೆಣೆಯುವುದು, ಚರ್ಮೋದ್ಯಮ ಇವೆಲ್ಲ ಸಣ್ಣ ಪ್ರಮಾಣದ ಉದ್ದಿಮೆಗಳು, ತಾಲೂಕಿನಲ್ಲಿ ೩೫ ಅಕ್ಕಿ ಗಿರಣಿಗಳು ೪೦ ಹಲ್ಲರ್ ಗಿರಣಿಗಳು ಇವೆ. ಪ್ರಿಂಟಿಂಗ್ ಪ್ರೆಸ್. ಐಸ್ ಫ್ಯಾಕ್ಟರಿ ಮೊದಲಾದವುಗಳ ಆದಾಯದಿಂದ ಕೆಲವಂದಷ್ಟು ಜನತೆ ಆರ್ಥಿಕವಾಗಿ ಸುಧಾರಿಸಿಕೊಂಡಿದ್ದಾರೆ.

ತಾಲೂಕಿನ ಆರ್ಥಿಕ ಸುಧಾರಣೆಯಲ್ಲಿ ಮಹಿಳಾ ಸಬಲೀಕರಣದ ಪಾತ್ರ ಮಹತ್ವದ್ದು. ಮಹಿಳಾ ಸಬಲೀಕರಣ ಅಂದರೆ, ಮಹಿಳೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಸಮೃದ್ಧಿಗೊಂಡಿರುವುದು ಎಂದು. ಹೆಣ್ಣು ಸಂಪೂರ್ಣ ಸುರಕ್ಷೆ ಪಡೆದಿರುವುದು ಎಂದು. ಈ ಹಾದಿಯಲ್ಲಿ ತಾಲೂಕಿನ ಮಹಿಳಾ ಪಾತ್ರ ಮುಖ್ಯವಾಗಿ ಕಾಣಿಸಿಕೊಂಡಿದೆ. ಅವರ ಸಬಲತೆಗೆ ಸ್ವಸಹಾಯ ಸಂಘಗಳು ನೆರವಿಗೆ ಬಂದಿವೆ. ೧೯೯೯ರಿಂದ ಆರಂಭಗೊಂಡ ಈ ಸಂಘಗಳು ಶೇ.೬೦ರಷ್ಟು ಮಹಿಳೆಯರಿಗೆ ಸಹಾಯಕವಾಗಿವೆ. ಸ್ತ್ರೀ ಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗುಂಪುಗಳು ಹೀಗೆ ಗುಂಪುಗಳು ಹುಟ್ಟಿಕೊಂಡಿದ್ದು, ಮಹಿಳೆಯರಲ್ಲಿಯ ಒಗಟ್ಟು, ಪ್ರಾಮಾಣಿಕತೆ, ಸಾಲ, ಮರುಪಾವತಿ ವೇಗವಾಗಿ ಬೆಳೆದು ಬಂದು ಪ್ರಬಲತೆಗೆ ಕಾರಣವಾಗಿದೆ. ಇಂದಿನ ಸರ್ಕಾರದ ಸಂಘಸಂಸ್ಥೆಗಳು, ಕೃಷಿ ಕೇಂದ್ರಗಳು ಮತ್ತು ಸಾಂಸ್ಕೃತಿಕ ಕೇಂದ್ರಗಳು ಮೊದಲಾದ ಕಾರ್ಯಕ್ರಮಗಳ ಪಟ್ಟಿಯಲ್ಲಿ ಈ ಸ್ವಸಹಾಯ ಸಂಘಗಳ ಸದಸ್ಯರಿಗೆ ಅಗ್ರಸ್ಥಾನವಿದೆ. ಈಗಿನ ಸರ್ಕಾರ ಶೇ.೭ರಷ್ಟು ಬಡ್ಡಿದರದಲ್ಲಿ ಸಾಲ ಪಡೆಯಲು ನೆರವು ಮಾಡಿದೆ. ಈ ಸಂಘಗಳು ಆಯಾ ಗ್ರಾಮದ ನೈರ್ಮಲ್ಯ, ಸಾರಾಯಿ ಅಂಗಡಿ ನಿರ್ಮೂಲನಾ, ರಸ್ತೆದುರಸ್ತಿ, ಕುಡಿಯುವ ನೀರಿನ ಸೌಲಭ್ಯ, ಬೀದಿ ದೀಪ, ಶಾಲೆಗಳಲ್ಲಿ ಪಾಠನಡಿಯುವಂತೆ ಕ್ರಾಂತಿ ಮಾಡಿವೆ. ಇಂದಿನ ಮಹಿಳೆಯರಿಗೆ ಸಾಮಾನ್ಯ ಶಿಕ್ಷಣ, ಉನ್ನತ ಶಿಕ್ಷಣ, ತಾಂತ್ರಿಕ, ತರಬೇತಿ ಶಿಕ್ಷಣ ದೊರಕಿದೆ.

ಸೊರಬದ ಹೆಚ್ಚು ಗ್ರಾಮಗಳಲ್ಲಿ ಈ ಸ್ವಸಹಾಯ ಸಂಘಗಳು ಅರಂಭಗೊಂಡಿದ್ದು, ಹೊಸ ಆಯಾಮವನ್ನು ಸೃಷ್ಟಿಸಿವೆ. ಜಾತಿ-ಧರ್ಮಗಳ ಬೇದವಿಲ್ಲದೆ, ಬಡತನ-ಸಿರಿತನಗಳ ಪ್ರದರ್ಶನವಿಲ್ಲದೆ ಒಂದು ಪರಿಶುದ್ಧವಾದ ಹೊಂದಾಣಿಕೆಯ ಹೊದಿಕೆ ಹೊದ್ದುಕೊಂಡು ಸ್ವಾವಲಂಬನೆಯ ಹಾದಿಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ತಣ್ಣನೆಯ ಕ್ರಾಂತಿಯನ್ನು ನಿರ್ಮಿಸುತ್ತಾ ಸಾಗಿವೆ.

ಬಡವರ್ಗಗಳ ಜನರಲ್ಲಿ ಸಣ್ಣ ಉಳಿತಾಯದ ಕ್ರೋಢೀಕರಣ ಮತ್ತು ಸಾಲ-ಸೌಲಭ್ಯ, ಬ್ಯಾಂಕಿನಿಂದ ಕಿರುಸಾಲ ಪಡೆಯುವುದು, ಗುಡಿ ಕೈಗಾರಿಕೆಗೆ ತೊಡಗಲು ನೆರವು ಇತ್ಯಾದಿಗಳನ್ನು ನಿರ್ಮಿಸಿಕೊಂಡಿರುತ್ತವೆ. ಒಟ್ಟಾರೆ ಸ್ವಸಹಾಯ ಗುಂಪುಗಳು ಸದಸ್ಯರ ಆರ್ಥಿಕ ಅಭಿವೃದ್ಧಿಯ ವೇದಿಕೆಗಳಾಗಿವೆ.

ಈ ಮೇಲಿನ ಎಲ್ಲಾ ಅಂಶಗಳು ಸೊರಬ ತಾಲೂಕಿನ ಆರ್ಥಿಕ ಸ್ಥಿತಿಗತಿಯಲ್ಲಿ ಮಹತ್ತರ ಅಂಶಗಳಾಗಿವೆ. ಜೊತೆಗೆ ಸಾರಿಗೆ-ಮಾರುಕಟ್ಟೆ-ವ್ಯಾಪಾರಗಳು ಬದಲಾವಣೆಗೊಂಡಿದ್ದು, ಇವುಗಳು ಸಹ ಆರ್ಥಿಕ ಸಮೃದ್ಧಿಗೆ ನೆರವಾಗಿವೆ. ಆದರೂ ಸೊರಬವು ಸಾಕಷ್ಟು ಪ್ರಮಾಣದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಕಂಡುಕೊಂಡಿಲ್ಲ. ಹಾಗಾಗಿ ಕೃಷಿ-ನೀರಾವರಿ, ಪಶುಸಂಗೋಪನೆ, ಮೀನುಗಾರಿಕೆ, ಕೈಗಾರಿಕೆ, ಸಾರಿಗೆ-ಮಾರುಕಟ್ಟೆ-ವ್ಯಾಪಾರ, ಶಿಕ್ಷಣದ ಗುಣಮಟ್ಟ, ಸ್ವಸಹಾಯ ಸಂಘಗಳ ಅಭಿವೃದ್ಧಿಗೆ ಶ್ರಮಿಸಬೇಕಿದೆ.

ಧಾರ್ಮಿಕ ಸ್ಥಿತಿಗತಿ

ತಾಲೂಕಿನಲ್ಲಿ ಜೈನ, ವೀರಶೈವ ಮತಧರ್ಮಗಳು ನೆಲೆಗೊಂಡಿದ್ದು, ಹಾಗೆಯೇ ಮಧ್ಯಕಾಲೀನ ಯುಗದಲ್ಲಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ನೆಲೆಗೊಂಡಿವೆ.

ಜೈನಧರ್ಮ

ಬಸದಿಗಳಲ್ಲಿ ಇದ್ದ ಜಿನ ಮುನಿಗಳೆಂದರೆ ಹಿರೇಆವಲಿಯದಲ್ಲಿ : ಮುನಿಭದ್ರ, ಸಕಳಚಂದ್ರ, ಜಿನಸೇನ, ವೀರಸೇನ, ಲಕ್ಷ್ಮಿಸೇನ. ಕುಪಟೂರಿನಲ್ಲಿ : ಪದ್ಮನಂದಿ, ಪಾರ್ಶ್ವನಾಥ, ಸಿದ್ಧಾಂತ ಯೋಗೀಂದ್ರ, ಗೌತಮ ಮುನಿ, ವಿಷ್ಣುಮುನಿ, ದೇವಚಂದ್ರ. ಉದ್ದರಿಯಲ್ಲಿ : ಸಕಳಚಂದ್ರ ಭಟ್ಟಾರಕ, ಮುನಿಭದ್ರ, ಮುನಿಸಿದ್ಧಾಂತ, ಭಾನುಕೀರ್ತಿ, ದೇವಚಂದ್ರ, ಸಿದ್ಧಾಂತ ಯೋಗೀಂದ್ರ, ಪದ್ಮನಂದಿಸಿದ್ಧಾಂತ ದೇವ, ಭಾರಂಗಿಯಲ್ಲಿ : ಜಯ ಕೀರ್ತಿ, ಅಭಯ ಚಂದ್ರದೇವ ಇವರಿಗೆ ಭಟ್ಟಾರಕ, ಆಚಾರ್ಯ ಮುನಿ ಪಂಡಿತ, ಸಿದ್ಧಾಂತ ಎಂಬ ಅಂಕಿತವಿತ್ತು. ಜೈನ ಮಠದ ಮುಖ್ಯ ಅಧಿಕಾರ ಸ್ಥಾನದಲ್ಲಿರುವವರಿಗೆ ಮಹಾಮಂಡಲಾಚಾರ್ಯ ಎಂಬ ಹೆಸರಿತ್ತು. ಜೈನ ಧರ್ಮದಲ್ಲಿ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಸರ್ವಸಾಧು ಎಂಬುವರು ಐದು ಗುರುಗಳು. ಇವರು ಸಲ್ಲೇಖನ ಮುಖಾಂತರ ದೇಹವನ್ನು ತ್ಯಜಿಸುತ್ತಿದ್ದರು. ಇದಕ್ಕೆ ಸಮಾಧಿ ಮಾರಣವೆಂದೂ ಹೇಳಲಾಗಿದೆ.[೧]

ವೀರಶೈವ ಧರ್ಮ

ಹಿರೇಮಾಗಡಿಯ ವಿರಕ್ತಮಠ, ಜಡೆ, ಮೂಡಿ ಮಠಗಳು ಸಹಪ್ರಾಚೀನ ವೀರಶೈವ ಗುರು ಪೀಠಗಳೆಂದು ತಿಳಿಯುತ್ತವೆ.

ಕೆಳದಿ ಅರಸರ ಕಾಲಕ್ಕೆ ಸೊರಬದಲ್ಲಿ ಗುರುತಿಸುವ ಮಠಗಳೆಂದರೆ ಮಹತ್ತಿನ ಮಠ ಉಳೀವಿಯಲ್ಲಿ, ವಿರಕ್ತಮಠ ಉಡುಗಣಿಯಲ್ಲಿ, ಕಲ್ಲುಮಠ ಕೂಡಲಿ, ಆನವಟ್ಟಿಯಲ್ಲಿ ಇವೆ. ಹೆಚ್ಚು ಮಠಗಳನ್ನು ಸಾರ್ವಜನಿಕರೇ ಕಟ್ಟಿಸುತ್ತಿದ್ದರು. ಒಂದು ಮಠದ ವ್ಯಾಪ್ತಿಗೆ ಕೆಲವು ಗ್ರಾಮಗಳು ಮೀಸಲಾಗಿತ್ತೆಂದು ಭಾವಿಸಬಹುದು. ಸಾರ್ವಜನಿಕರು ಅರಸರ ಅಪ್ಪಣೆ ಪಡೆದು ಅರಸರ ಹೆಸರಿನೊಂದಿಗೆ ದಾನಪತ್ರವನ್ನು ನೀಡಬೇಕಾಗಿತ್ತು. ಇಂತಹ ದಾನ ಪತ್ರದ ಕೊನೆಯಲ್ಲಿ ಮಠದ ಧರ್ಮವನ್ನು ಸಾಂಗವಾಗಿ ನೆರವೇರಿಸಿಕೊಡಬಹುದೆಂದು ಬರೆಸಲಾಗುತ್ತಿತ್ತು.

ಮುಸ್ಲಿಂ ಧರ್ಮ

ತಾಲೂಕಿನ ಆನವಟ್ಟಿ, ಜಡೆ, ಉಳವಿ, ಕುಪ್ಪಗಡ್ಡೆ, ಚಂದ್ರಗುತ್ತಿ, ಕಸಭ ಈ ಎಲ್ಲಾ ಹೋಬಳಿಗಳಲ್ಲಿ ಮುಸ್ಲಿಂ ಬಾಂಧವರು ನೆಲೆಸಿದ್ದು, ಇವರು ತಮ್ಮ ಧರ್ಮ, ಪೂಜೆ, ಪ್ರಾರ್ಥನೆಗಳನ್ನು

ವಿಶೇಷವಾಗಿ ನಡೆಸಿಕೊಂಡು ಬಂದಿದ್ದಾರೆ. ಉದಾ : ತಾಲೂಕಿನಲ್ಲಿ ಮುಸ್ಲಿಂ ಬಾಂಧವರು ತ್ಯಾಗ, ಬಲಿದಾನ ಹಾಗೂ ಭ್ರಾತೃತ್ವದ ಸಂಕೇತವಾದ ಬಕ್ರೀದ್ ಹಬ್ಬವನ್ನು ಶ್ರದ್ಧೆ-ಭಕ್ತಿಯಿಂದ ಧಾರ್ಮಿಕ ಹಿನ್ನೆಲೆಯಲ್ಲಿ ಆಚರಿಸುತ್ತಾರೆ. ತಾಲೂಕಿನ ಮುಸ್ಲಿಂ ಬಾಂಧವರು ಸಮೀಪದ ಈದ್ಗಾಕ್ಕೆ ತೆರಳಿ ವಿಶೇಷ ಧಾರ್ಮಿಕ ಪೂಜೆ, ಪ್ರಾರ್ಥನೆ ಮಾಡುತ್ತಾರೆ. ಮಸೀದಿ-ಧರ್ಮ-ಶಾಲೆ-ಗೋರಿ ಇವುಗಳು ಈ ಧರ್ಮದ ಕೇಂದ್ರ ಸಂಕೇತಗಳಾಗಿವೆ. ತಾಲೂಕಿನ ಸೊರಬ ಪಟ್ಟಣದ ಜಾಮೀಯಾ ಮಸೀದಿ ಪ್ರಸಿದ್ಧವಾಗಿದೆ. ಇವರ ಆಚರಣೆಗಳಲ್ಲಿ ಮೊಹರಂ ಹಬ್ಬವನ್ನು ಜನತಾ ಹಬ್ಬವಾಗಿ ಆಚರಿಸಲಾಗುತ್ತದೆ. ಅಂದರೆ ಹಿಂದೂ ಮುಸ್ಲಿಂರು ಐಕ್ಯತೆಯಿಂದ ಆಚರಿಸುತ್ತಾರೆ. ತಾಲೂಕಿನ ಬೇರೆ ಬೇರೆ ಊರುಗಳಲ್ಲಿಯು ಮಸೀದಿಗಳು ಇರುವುದನ್ನು ನೋಡುತ್ತೇವೆ. ಈ ಧರ್ಮ ತಾಲೂಕಿನಲ್ಲಿ ವೈಶಿಷ್ಟ್ಯಪೂರ್ಣವಾಗಿ ನೆಲೆಸಿದೆ.

ಕ್ರಿಶ್ಚಿಯನ್ ಧರ್ಮ

ಸೊರಬ ತಾಲೂಕಿನಲ್ಲಿ ದೇವಾಲಯ, ಮಸೀದಿಗಳಂತೆ ಕ್ರೈಸ್ತರ ಚರ್ಚ್‌ಗಳು ಸಹ ಕಂಡುಬರುತ್ತವೆ. ಚರ್ಚ್‌ಗಳು ನಗರ ಹಾಗೂ ಹೋಬಳಿ ಕೇಂದ್ರದಲ್ಲಿ ನಿರ್ಮಾಣಗೊಂಡಿವೆ. ಜೊತೆಗೆ ಸಣ್ಣ ಪುಟ್ಟ ಪ್ರಾರ್ಥನಾ ಮಂದಿರಗಳಿವೆ. ಸೊರಬ ಪಟ್ಟಣದಲ್ಲಿ ಸಂತ ಸೆಬಸ್ಟಿಯನ್ ಧರ್ಮಕೇಂದ್ರ ಇದೆ. ಇಲ್ಲಿಯ ಧರ್ಮಗುರು ರೆನೋಲ್ಡಾ. ಆನವಟ್ಟಿಯಲ್ಲಿ ಕ್ರಿಸ್ತರಾಜ ಚರ್ಚ್ ಇದ್ದು ಇದರಲ್ಲಿ ಧರ್ಮಗುರು ಡಾ.ಫಾದರ್ ಇರುವುದನ್ನು ಕಾಣುತ್ತೇವೆ. ಪ್ರಮುಖವಾಗಿ ಕನ್ನಡ ಮತ್ತು ತೆಲುಗು ಭಾಷಿಕರಾಗಿದ್ದಾರೆ. ಯುವ ಕ್ರೈಸ್ತ ವಿದ್ಯಾರ್ಥಿಗಳು ಎಂಬ ಸಂಘಸಂಸ್ಥೆಗಳು ಪವಿತ್ರ ಹೃದಯ ಚರ್ಚಿನ ಆಶ್ರಯದಲ್ಲಿವೆ. ಅಲ್ಲದೆ ಕೆಲವು ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿದೆ. ತೆಲುಗು ಭಾಷೆಯಲ್ಲಿ ಬೈಬಲ್ ಪಠಣ ನಡೆಯುತ್ತದೆ. ಇವರು ಈ ಧರ್ಮದ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ಸಡಗರದ ಕ್ರಿಸ್ಮಸ್ ಆಚರಣೆ ನಡೆಯುವುದು. ಈ ಆಚರಣೆ ಮೂಲಕ ಏಸು ಕ್ರಿಸ್ತನ ಪೂಜೆ, ಪ್ರಾರ್ಥನೆ, ಮನರಂಜನೆ ಕಾರ್ಯಕ್ರಮ ನಡೆಯುತ್ತವೆ. ಈ ರೀತಿಯಲ್ಲಿ ಕ್ರಿಶ್ಚಿಯನ್ ಧರ್ಮ ತಾಲೂಕಿನಲ್ಲಿ ವೈಭವಯುತವಾದ ನೆಲೆಯನ್ನು ಹೊಂದಿದೆ.

ಹಿಂದೂ ಧರ್ಮ

ಈ ಧರ್ಮವನ್ನು ಪ್ರತಿಬಿಂಬಿಸುವ ದೇವಾಲಯಗಳು ತಾಲೂಕಿನಾದ್ಯಂತ ಇರುವುದು ಕಂಡುಬರುತ್ತದೆ. ಈ ಧರ್ಮ ಪ್ರಾಚೀನ ಕಾಲದಲ್ಲಿ ವೈದಿಕ ಧರ್ಮವಾಗಿತ್ತು. ತದನಂತರ ಹಿಂದೂ ಧರ್ಮವಾಗಿದೆ. ಈ ಧರ್ಮದಲ್ಲಿ ಶಿವದೇವಾಲಯ, ವಿಷ್ಣು ದೇವಾಲಯ, ವೀರಭದ್ರೇಶ್ವರ ದೇವಾಲಯ ಆಂಜನೇಯ ದೇವಾಲಯ, ಈ ಮೊದಲಾದ ದೇವಾಲಯಗಳು ತಾಲೂಕಿನ ಪ್ರತಿ ಹಳ್ಳಿ-ನಗರಗಳಲ್ಲಿ ಬೆಳೆದು ಬಂದಿವೆ. ಹಿಂದೂ ಧರ್ಮ ತನ್ನದೇ ಆದ ಪೂಜಾ ಪದ್ಧತಿಯನ್ನು, ಆಚರಣೆಯನ್ನು ನಿರ್ಮಿಸಿಕೊಂಡಿದೆ. ಈ

ಧರ್ಮದ ನೆಲೆ ತಾಲೂಕಿನಲ್ಲಿ ಅರಸರ ಕಾಲದಿಂದಲೂ ಇರುವುದನ್ನು ನೋಡುತ್ತೇವೆ. ತಾಲೂಕು ಹಿಂದೂ ಧರ್ಮಿಯನ್ನರ ನಾಡಾಗಿದೆ. ಬಹು ಸಂಖ್ಯೆಯಲ್ಲಿ ಕನ್ನಡ ಭಾಷೆಯನ್ನು ಒಳಗೊಂಡವರಿದ್ದಾರೆ. ಇವರ ಧರ್ಮದ ಹಿನ್ನಲೆಯಲ್ಲಿ ವೃತ್ತಿ ಹಾಗೂ ಬದುಕು ನಡೆಯುತ್ತಿರುವುದನ್ನು ಕಾಣುತ್ತೇವೆ.

ಈ ಮೇಲಿನ ಎಲ್ಲಾ ಧರ್ಮಗಳಲ್ಲಿ ತಾಲೂಕಿನಲ್ಲಿ ಹಿಂದೂ ಧರ್ಮ ಹೆಚ್ಚಿನ ಪ್ರಾಶಸ್ತ್ಯ ಹೊಂದಿದೆ. ವೀರಶೈವ ಧರ್ಮ ಪ್ರತ್ಯೇಕವಾದದ್ದು ಎನ್ನುವುದಾದರೂ ತಾಲೂಕಿನಲ್ಲಿ ಆ ಪ್ರತ್ಯೇಕತೆ ಕಾಣುವುದಿಲ್ಲ. ವೀರಶೈವ ಮಠಗಳಲ್ಲಿ ಹಿಂದೂ ಧರ್ಮದ ಪದ್ಧತಿ ಆಚರಣೆಗಳು ರೂಪುಗೊಂಡಿರುವುದನ್ನು ಕಾಣುತ್ತೇವೆ. ವೀರಶೈವ ಮತ್ತು ಹಿಂದೂ ಧರ್ಮ ಒಂದೇ ಎಂಬಂತೆ ಪ್ರತಿಬಿಂಬಿಸುತ್ತವೆ. ಆದರೆ ಕೆಲವೊಂದು ಶಿಷ್ಟತೆಯಲ್ಲಿ ಅದರಾಚೆಗೆ ವೀರಶೈವ ಧರ್ಮ ಕಾಣುವುದಿಲ್ಲ. ಮಠಗಳ ಜಾತ್ರೆ, ಹಬ್ಬ, ವೈಭವತೆ ಇವೆರಡು ಧರ್ಮದಲ್ಲಿಯ ಸಹಕಾರದ ಜೊತೆ ನೆರವೇರುತ್ತವೆ. ಆದರೆ ಹಿಂದೂ ಧರ್ಮದ ವೈಶಿಷ್ಟ್ಯತೆಯಲ್ಲಿ ವೀರಶೈವ ಧರ್ಮದ ಪಾತ್ರ ತುಂಬಾ ಕಡಿಮೆ ಎನ್ನಬಹುದು. ತದನಂತರ ಮುಸ್ಲಿಂ ಧರ್ಮದ ಮೋಹರಂ ಹಬ್ಬಗಳಲ್ಲಿ ಹಿಂದೂ ಧರ್ಮ ಭಾಗಿಯಾಗುವುದನ್ನು ನೋಡಬಹುದು. ಹಿಂದೂ ಧರ್ಮದ ದೇವಾಲಯಗಳ ಪೂಜಾ ವಿಧಾನದಿಂದ ಮುಸ್ಲಿಂ ಧರ್ಮ ದೂರ ಇದೆ. ಕ್ರಿಶ್ಚಿಯನ್ ಧರ್ಮ ಪ್ರತ್ಯೇಕ ಚರ್ಚ್‌ನ್ನು ಹೊಂದಿ ಅವರದೆ ಆದ ಧಾರ್ಮಿಕ ಆಚರಣೆಗಳನ್ನು ಹೊಂದಿದೆ. ಇತ್ತೀಚಿಗೆ ಯಾವುದೇ ಧರ್ಮವಾದರೂ ವಿಶ್ವಾಸ, ನಂಬಿಕೆಗಳೊಂದಿಗೆ ಸಂಸ್ಕೃತಿಯಲ್ಲಿ ಲೀನವಾಗಿವೆ. ಸಾಂಸ್ಕೃತಿಕವಾಗಿ ಜನಜೀವನ ಕ್ರಮ ಏಕತೆಯನ್ನು ಸಾಧಿಸುವ ದಾರಿಯಲ್ಲಿ ಸಾಗುತ್ತಿವೆ ಎಂದು ಹೇಳಬಹುದು.

ಶೈಕ್ಷಣಿಕ ಸ್ಥಿತಿಗತಿಗಳು

ಸೊರಬವು ಅಂದು ಅಗ್ರಹಾರಗಳ ನಾಡಾಗಿತ್ತು. ಚರಿತ್ರೆಯಾದ್ಯಂತ ಅದು ಅನೇಕ ರಾಜವಂಶಗಳ ಕಾಲದಲ್ಲಿ ಮಹತ್ವದ ಶೈಕ್ಷಣಿಕ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಜೈನ ಧರ್ಮೀಯರಿಗಂತೂ ಶಿಕ್ಷಣದ ನೆಲೆಯಾಗಿರುವ ಸೊರಬವು ಅಗ್ರಹಾರಗಳನ್ನು ಒಳಗೊಂಡಿತ್ತು. ಕುಪ್ಪಗಡ್ಡೆ, ಕುಪಟೂರು, ಕೆಂಚನಹಳ್ಳಿ, ಸೊರಬದಲ್ಲಿ ಇದ್ದ ಇವು ಕೆಳದಿ ಅರಸರ ಕಾಲದಲ್ಲಿ ತಾಲೂಕಿನಲ್ಲಿ ಕಂಡುಬಂದಿವೆ. ಜೈನ ಬಸದಿಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿದ್ದವು.

ಇಂದು ಸೊರಬದಲ್ಲಿ ೨೦೦೧ರ ಜನಗಣತಿಯಂತೆ ಸಾಕ್ಷರತೆ ಜನಸಂಖ್ಯೆ, ೭೪:೨೪ ನಮೂದಾಗಿದ್ದು, ೫೧:೪೯ ಅನುಪಾತದಲ್ಲಿ ಪುರುಷರು ಮತ್ತು ಮಹಿಳೆಯರು ಇರುತ್ತಾರೆ. ಒಟ್ಟು ಇಲ್ಲಿನ ವಿದ್ಯಾವಂತರ ಸಂಖ್ಯೆ ಸರಿಸುಮಾರು ೮೦ ಪ್ರತಿಶತ ಇದೆ.

ತಾಲೂಕಿನಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳು - ೨೯೧

ಹಿರಿಯ ಪ್ರಾಥಮಿಕ ಶಾಲೆಗಳು - ೧೨೧

ಪ್ರೌಢಶಾಲೆಗಳು ೧೯

(ಸರ್ಕಾರಿ ಶಾಲೆ-೧೫, ಖಾಸಗಿ ಶಾಲೆ-೧೬)

ಜೂನಿಯರ್ ಕಾಲೇಜು - ೨

ತರಬೇತಿ ಕೇಂದ್ರ - ೧

ಗಿರಿಜನ ಆಶ್ರಮ ಶಾಲೆ - ೧

ತಾಂತ್ರಿಕ ಶಿಕ್ಷಣ ಇಲಾಖೆ - ೧

ಸರ್ಕಾರಿ ಪಾಲಿಟೆಕ್ನಿಕಲ್ ಕಾಲೇಜು (೧೯೬೬) - ೧

ಸಹ್ಯಾದ್ರಿ ರೂರಲ್ ಕೈಗಾರಿಕಾ ತರಬೇತಿ ITI ಕಾಲೇಜು-೧

ಜೊತೆಗೆ ತಾಲೂಕಿನ ಬಹುಸಂಖ್ಯೆಯ ಹಳ್ಳಿಗಳಲ್ಲಿ ಅಂಗನವಾಡಿ ಕೇಂದ್ರಗಳು ಏಕೋಪಾಧ್ಯಯ ಶಾಲೆಗಳು ಹುಟ್ಟಿಕೊಂಡಿವೆ. ಅಲ್ಲಲ್ಲಿ ಕಾನ್ವೆಂಟ್ ಶಾಲೆಗಳು ಊರ್ದುಶಾಲೆ ತಲೆಯೆತ್ತಿವೆ. ತಾಲೂಕಿನ ಶಿಕ್ಷಣ ಕೇಂದ್ರಗಳಾಗಿ ಆನವಟ್ಟಿ ಮತ್ತು ಸೊರಬಗಳನ್ನು ಗುರುತಿಸಬಹುದು. ಅನವಟ್ಟಿಯಲ್ಲಿ ಶಿಶುವಿಹಾರಗಳು, ಕಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಕಿರಿಯ ಮಹಾವಿದ್ಯಾಲಯಗಳು ಇತ್ಯಾದಿ ಕಂಡುಬರುತ್ತದೆ. ಅಂದರೆ ITI ಕಾಲೇಜು ಪದವಿ ಪೂರ್ವ ಕಾಲೇಜು, ಪದವಿಕಾಲೇಜು, ತರಬೇತಿ ಕೇಂಧ್ರ ನೋಡಬಹುದು. ಗ್ರಂಥಾಲಯ ವಸತಿ ನಿಲಯಗಳನ್ನು ಕಾಣುತ್ತೇವೆ.

ಸೊರಬನಗರದಲ್ಲಿ ಶಿಶುವಿಹಾರ, ಪ್ರಾಥಮಿಕ ಪ್ರಾಢಶಾಲೆಗಳು, ಕಂಪ್ಯೂಟರ್ ಶಿಕ್ಷಣಕೇಂದ್ರ, ಪದವಿಪೂರ್ವ ಮತ್ತು ಪದವಿ ಕಾಲೇಜುಗಳು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ವಸತಿ ನಿಲಯಗಳು ಮತ್ತು ಗ್ರಂಥಾಲಯ ಕಂಡುಬರುತ್ತವೆ. ಜೊತೆಗೆ ಶಾಲಾಭಿವೃದ್ಧಿ ಸಮಿತಿ, ಪ್ರೌಢ ಶಾಲಾ ಶಿಕ್ಷಕರ ಸಂಘ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇದ್ದು ಶಿಕ್ಷಣ ಕೇಂದ್ರವಾಗಿದೆ.

ಇಂದು ೬ ರಿಂದ ೧೪ ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಪೂರ್ಣಗೊಳಿಸಲು ಸರ್ವ ಶಿಕ್ಷಣ ಅಭಿಯಾನ ಜಾರಿಗೆ ಬಂದನಂತರ ತಾಲೂಕಿನಲ್ಲಿ ಶೇ.೯೫ರಷ್ಟು ಗಂಡು-ಹೆಣ್ಣು ಮಕ್ಕಳಿಗೆ ಶಿಕ್ಷಣ ದೊರಕುತ್ತಿದೆ. ಸರ್ವಶಿಕ್ಷಣ ಅಭಿಯಾನದ ವಿಶೇಷ ಯೋಜನೆಗಳು ಇಲಾಖೆಯ ಅಧಿಕಾರಿಗಳನ್ನು ಶಿಕ್ಷಕರನ್ನು ಸದಾ ಕಾರ್ಯಶೀಲರನ್ನಾಗಿ ಮಾಡುತ್ತಿದೆ. ಈ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದರೂ ಕೂಡ ಕೇಂದ್ರಸರ್ಕಾರ ಹಾಗೂ ರಾಜ್ಯಸರ್ಕಾರ ಅನುದಾನದ ಅನುಪಾತದಲ್ಲಿ ಯೋಜನೆಗಳು ಯಶಸ್ವಿಗೊಳ್ಳುತ್ತವೆ. ಅಕ್ಷರ ದಾಸೋಹ, ಚಿಣ್ಣರ ಅಂಗಳ, ಬಾ ಮರಳಿ ಶಾಲೆಗೆ, ಮೊದಲಾದ ಕಾರ್ಯಕ್ರಮಗಳು ಪ್ರಾಥಮಿಕ ಶಿಕ್ಷಣದ ಸಮೃದ್ಧಿಗೆ ಮುಖ್ಯವಾಗಿದೆ. ಜೊತೆಗೆ, ಸಮವಸ್ತ್ರ, ಪುಸ್ತಕ, ಸೈಕಲ್ಲು ಇತ್ಯಾದಿ ಒದಗಿಸಿದ್ದರಿಂದ ತಾಲೂಕಿನಲ್ಲಿ ಪ್ರಾಥಮಿಕ ಶಿಕ್ಷಣ ಪ್ರಗತಿಯಾಗುತ್ತಿದೆ.

ಹಾಗೆಯೇ ತಾಲೂಕಿನಲ್ಲಿ ಪ್ರೌಢ ಶಾಲೆಯ ಶಿಕ್ಷಣವು ಯಶಸ್ವಿ ಕಾಣಬೇಕಾಗಿದೆ. ನಂತರದ ಕಾಲೇಜು ಶಿಕ್ಷಣ ತಾಲೂಕಿನ ಗ್ರಾಮೀಣ ಬಹುಸಂಖ್ಯೆಯ ಮಕ್ಕಳಿಗೆ ತುಂಬಾ ತೊಂದರೆಯಾಗಿದೆ. ಹೆಣ್ಣು ಮಕ್ಕಳಿಗೆ ಹೆಚ್ಚು ತೊಂದರೆಯಾಗಿದೆ. ಆನವಟ್ಟಿ ಮತ್ತು ಸೊರಬದಲ್ಲಿ ಮಾತ್ರ ಇದ್ದು ಇಲ್ಲಿಯ ಎರಡೇ ಕಾಲೇಜು ಶಿಕ್ಷಣದ ಕೊರತೆಯನ್ನು ನೀಗಿಸಲು ಸಾಧ್ಯವಾಗುತ್ತಿಲ್ಲ. ತೊಗರ್ಸಿ, ಶಿರಾಳಕೊಪ್ಪ, ಸಾಗರ, ಶಿವಮೊಗ್ಗಗಳಿಗೆ ಕಾಲೇಜು ಶಿಕ್ಷಣ ಪಡೆಯಲು ಹೋಗಬೇಕಾಗಿದೆ. ಪದವಿ ಶಿಕ್ಷಣದ ಕೊರತೆಯು ತುಂಬಾ ಇದೆ. ತಾಲೂಕಿನಲ್ಲಿ ಶಿಕ್ಷಣ ತರಬೇತಿ ಕೇಂದ್ರ ಒಂದೇ ಇರುವುದು ನಿರಾಶದಾಯಕವಾಗಿದೆ. ಉನ್ನತ ಶಿಕ್ಷಣವಂತು ಇಲ್ವೇ ಇಲ್ಲ. ಈ ರೀತಿಯಿಂದಾಗಿ ತಾಲೂಕಿನಲ್ಲಿ ಶಿಕ್ಷಣದ ಗುಣಮಟ್ಟದ ಬೆಳವಣಿಗೆ ಪೂರ್ಣಪ್ರಮಾಣದಲ್ಲಿ ಕಂಡುಬರುತ್ತಿಲ್ಲ. ತಾಲೂಕಿನ ಗಂಡುಮಕ್ಕಳು ಶಿವಮೊಗ್ಗ, ಧಾರವಾಡ, ಹಂಪಿ ಇತ್ಯಾದಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುವುದನ್ನು ಕಾಣುತ್ತೇವೆ. ಹೆಣ್ಣು ಮಕ್ಕಳಿಗೆ ಇದು ಕಷ್ಟ ಸಾಧ್ಯವಾಗಿದೆ. ಆದ್ದರಿಂದ ಈ ಶಿಕ್ಷಣದ ಅನುಪಾತದಲ್ಲಿ ತುಂಬಾ ಅಂತರವಿದೆ. ತಾಲೂಕಿನಲ್ಲಿ ವಯಸ್ಕರ ಶಿಕ್ಷಣವು ಕೂಡ ಪ್ರಗತಿ ಕಂಡುಕೊಳ್ಳದೆ, ಅತೃಪ್ತಿ ನೀಡಿದೆ. ಹೀಗಿದ್ದರೂ ಕೂಡ ತಾಲೂಕಿನ ಸಾಕ್ಷರತೆ ೮೦ ಪ್ರತಿಶತ ಇರುವುದು ಹೆಮ್ಮೆಯ ಸಂಗತಿಯಾಗಿದೆ.

ಅಡಿಟಿಪ್ಪಣಿ

೧. ಸೊರಬ ತಾಲ್ಲೂಕು ದರ್ಶನ, ನಾ.ಡಿಸೋಜ, ಪು.೩೮

ಅಧ್ಯಾಯ ೫

ಐತಿಹಾಸಿಕ ನೆಲೆಗಳು

೫.೧. ಧಾರ್ಮಿಕ ಕೇಂದ್ರಗಳು ಮತ್ತು ಸ್ಮಾರಕಗಳು

೫.೨. ಪ್ರಾಕೃತಿಕ ಕೇಂದ್ರಗಳು

೫

ಐತಿಹಾಸಿಕ ನೆಲೆಗಳು

ಸೊರಬ ತಾಲೂಕು ಪ್ರಕೃತಿ ರಮ್ಯ ತಾಣಗಳು ಪ್ರೇಕ್ಷಣಿಯ ಸ್ಥಳಗಳು, ಐತಿಹಾಸಿಕವಾಗಿ ಮಹತ್ವವುಳ್ಳ ಕಲಾಪೂರ್ಣ ಸ್ಮಾರಕಗಳಿಂದ ಕಂಗೊಳಿಸುತ್ತಿದೆ. ಇಲ್ಲಿಯ ಅನೇಕ ಸ್ಥಳಗಳು ಕಲಾತ್ಮಕ ಪರಂಪರೆಯ ದೇವಾಲಯಗಳನ್ನು ಹೊಂದಿವೆ. ಇಲ್ಲಿಯ ಸಭ್ಯ ಸಂಸ್ಕೃತಿ, ಮಹಾನ್ ಪರಂಪರೆ, ಸರಳತೆ, ಸಜ್ಜನಿಕೆಗಳಿಗೆ ದೇಗುಲಗಳು ಪ್ರಭಾವ ಬೀರುತ್ತವೆ.

“ಸೂರ್ಯೋದಯ, ಚಂದ್ರೋದಯ, ದೇವರದಯೆ ಕಾಣೋ” ಎಂದು ರಸ ಋಷಿ ಕುವೆಂಪುರವರ ವಾಣಿಯಂತೆ ಸೌಂದರ್ಯದ ಹಿಂದೆ ‘ದೇವರ ರುಜು’[೧೫] ಇದೆ ಎಂಬ ಹಿನ್ನಲೆಯಲ್ಲಿ ನೋಡಿದಾಗ ಪ್ರತಿಯೊಂದು ಸ್ಥಳವನ್ನು ಸೌಂದರ್ಯ, ಕಲಾತ್ಮಕತೆ, ಐತಿಹಾಸಿಕವಾಗಿ ನೋಡುವುದೂ ಅಗತ್ಯವೆಂದೆನಿಸುತ್ತದೆ. ಆ ನಿಟ್ಟಿನಲ್ಲಿ ಸೊರಬದ ಕೆಲವು ಪ್ರಸಿದ್ಧ ಐತಿಹಾಸಿಕ ದೇಗುಲಗಳ ಸಾಂಸ್ಕೃತಿಕ ಪರಂಪರೆಯ ನೆಲೆಗಳನ್ನು ತಿಳಿಯಲಾಗುವುದು.

ಕೋಟಿಪುರ

ಕುಂತಳಪುರದ ಉಲ್ಲೇಖವು ಸರ್ ಮೆಕೆಂಜಿ ಸಂಪಾದಿಸಿರುವ ಕೈಫಿಯತ್ ಸಂಪುಟ ೧೮೩೯ರಲ್ಲಿ ಕಂಡುಬರುವಂತೆ “ಕೈಟಬೇಶ್ವರ ಲಿಂಗ ಇದ್ದ ಸ್ಥಳದ ಅಭಿದಾನವೇನೆಂದರೆ, ಕುಂತಳಪುರ, ಕಮಠಪುರ ಈ ಅಭಿದಾನಗಳು” ಈ ರೀತಿ ಉಲ್ಲೇಖ ಕಂಡುಬರುತ್ತದೆ. ವಿಷ್ಣುವು ಕೈಟಭ ಎಂಬ ರಾಕ್ಷಸನನ್ನು ವಧಿಸಿದನೆಂದು, ಮಹಾ ಶಿವಭಕ್ತನಾಗಿದ್ದ ಅವನ ಹೆಸರಿನಲ್ಲಿ ಕೈಟಬೇಶ್ವರ ಲಿಂಗ ಸ್ಥಾಪನೆಯನ್ನು ಮತ್ತು ಬನವಾಸಿಯಲ್ಲಿ ಮಧು ಎಂಬ ಶಿವಭಕ್ತ ರಾಕ್ಷಸನನ್ನು ವಧಿಸಿ, ಮಧುಕೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನೆಂಬ ಐತಿಹ್ಯಗಳಿವೆ. ಮುಂದೆ ಬೇರೆ-ಬೇರೆ ಕಾಲಗಳಲ್ಲಿ ದೇವಾಲಯಗಳ ನಿರ್ಮಾಣವಾಗಿರುವುದನ್ನು, ಅನೇಕ ರಾಜರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು ದಾನದತ್ತಿಗಳನ್ನು ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ಕುಬಟೂರಿನಿಂದ ಪೂರ್ವದಿಕ್ಕಿನಲ್ಲಿ ಆನವಟ್ಟಿಯಿಂದ ಹಾನಗಲ್‌ಗೆ ಹೋಗುವ ಮುಖ್ಯರಸ್ತೆಯ ಎಡಭಾಗದಲ್ಲಿ ಎತ್ತರವಾದ ಪ್ರದೇಶದಲ್ಲಿ ಇತಿಹಾಸ ಪ್ರಸಿದ್ಧ ಕೈಟಬೇಶ್ವರ ದೇವಾಲಯವಿದೆ. ಹೊಯ್ಸಳ

ವಾಸ್ತು ಶೈಲಿಯಲ್ಲಿರುವ ಈ ದೇವಾಲಯವನ್ನು ಕಟ್ಟಿಸಿದವನು ಪಶ್ಚಿಮ ಚಾಲುಕ್ಯರ ಸಾಮಂತನಾಗಿದ್ದ ವಿನಯಾದಿತ್ಯ. ಆದ್ದರಿಂದ ಚಾಲುಕ್ಯ ವಾಸ್ತುಶೈಲಿಯ ಲಕ್ಷಣಗಳು ಇಲ್ಲಿಯು ಕಂಡುಬರುತ್ತವೆ. ಕ್ರಿ.ಶ.೧೦೭೦ರಲ್ಲಿ ನಿರ್ಮಾಣವಾಗಿರುವ ಕೈಟಭೇಶ್ವರ ದೇವಾಲಯವನ್ನು ೧೧೮೦ರಲ್ಲಿ ಜೀರ್ಣೋದ್ಧಾರ ಮಾಡಿ ಚಿನ್ನದ ಕಳಶವನ್ನು ಸ್ಥಾಪಿಸಿದ ಸಂಗತಿ ಶಾಸನೋಕ್ತವಾಗಿದೆ. ಕೈಟಭೇಶ್ವರ ದೇವಾಲಯಕ್ಕೆ ಕೆಳದಿ ಅರಸ ವೆಂಕಟಪ್ಪನಾಯಕನು ತೊರವಂದ, ಕೋಡಿಹಳ್ಳಿ, ನೇರಲಿಗೆ, ತದ್ದಲೂರು ಮುಂತಾದ ಗ್ರಾಮಗಳನ್ನು ದತ್ತಿ ನೀಡಿದ ಉಲ್ಲೇಖ ಹಿರೇಚೌಟಿಯ ತಾಮ್ರ ಶಾಸನ ಸಂಖ್ಯೆ ೬೩ರಲ್ಲಿ ಕಂಡುಬರುತ್ತದೆ. ಪ್ರಾಚೀನವಾಗಿ ಕೋಟೇಶ್ವರ ಎಂಬ ಹೆಸರೂ ಇತ್ತು ಎಂಬುದಾಗಿ ತಿಳಿಯುತ್ತದೆ.

ಕುಬಟೂರು

ತಾಲೂಕಿನ ಆನವಟ್ಟಿಯ ಹೊರವಲಯದಲ್ಲಿರುವ ಕುಬಟೂರು ಈಗ ಚಿಕ್ಕ ಗ್ರಾಮ ಇದು ಸೊರಬದಿಂದ ೨೯ ಕಿ.ಮೀ ದೂರದಲ್ಲಿದೆ. ಪ್ರಾಚೀನವಾಗಿ ಚಂದ್ರಹಾಸನ ರಾಜಧಾನಿ ಕುಂತಳ ನರವಾಗಿತ್ತು ಎಂಬ ಉಲ್ಲೇಖಗಳು ಕಂಡುಬರುತ್ತದೆ. ಚಾರಿತ್ರಿಕವಾಗಿ ರಾಷ್ಟ್ರಕೂಟರ ಕಾಲದಿಂದಲೂ ದೊಡ್ಡ ಪಟ್ಟಣವಾಗಿತ್ತು ಎಂಬುದನ್ನು ಈಗಲೂ ಇಲ್ಲಿ ಕಂಡುಬರುತ್ತಿರುವ ಐತಿಹಾಸಿಕ ಅವಶೇಷಗಳಿಂದ ತಿಳಿಯಬಹುದೆಂದು ವಿದ್ವಾಂಸರ ಅಭಿಪ್ರಾಯ.

ಮೌರ್ಯರ ಕಾಲದ ಆಳ್ವಿಕೆಯ ಕುರುಹು ಇಲ್ಲಿಯ ಶಾಸನವೊಂದರಲ್ಲಿ ಕಂಡುಬರುತ್ತದೆ. ಈ ಶಾಸನದಲ್ಲಿ ಚಂದ್ರಗುಪ್ತ ಹೆಸರಿನ ಪ್ರಸ್ತಾಪವಿದ್ದು, ಈ ಕುರಿತು ಅಧ್ಯಯನ ನಡೆಯಬೇಕಿದೆ. ಸಮೀಪದ ಬಂದಳಿಕೆಯಲ್ಲಿರುವ ಹೊಯ್ಸಳರ ಶಾಸನದಲ್ಲಿ ಸಹ ನಂದರು ಮತ್ತು ಮೌರ್ಯರು ಕುಂತಲವನ್ನು ಆಳಿದ ಪ್ರಸ್ತಾಪ ಉಲ್ಲೇಖವಾಗಿದೆ. ಕ್ರಿ.ಶ.೧೦ ರಿಂದ ೧೪ನೇ ಶತಮಾನದ ಶಾಸನಗಳ ಆಧಾರದಿಂದ, ಕರ್ನಾಟಕದ ಉತ್ತರ ಭಾಗದ ಪ್ರದೇಶಗಳು ಕುಂತಲ ದೇಶವಾಗಿತ್ತು ಎಂದು ತಿಳಿದುಬರುತ್ತದೆ. ವಿಶಾಲವಾದ ಪ್ರದೇಶ ಹಲವಾರು ಗುಡಿ, ಮಂಟಪ, ಕೆರೆ, ಶಾಸನ, ಬಿಡಿ ವಿಗ್ರಹಗಳ ಆವಾಸವಾಗಿದ್ದು, ಪ್ರಾಚ್ಯ ವಸ್ತು ಸಂಶೋಧಕರಿಗೆ ಇಲ್ಲಿ ಸಾಕಷ್ಟು ವಿಷಯಗಳು ದೊರೆಯುತ್ತವೆ.

ಕುಬಟೂರನ್ನು ಶಾಸನಗಳು ಮನದಣಿಯ ಬಣ್ಣಿಸಿವೆ. ಬನವಾಸಿ ಸನ್ನಿರ್ಚಾಸಿರದ ನಾಗರಖಂಡದ ಪುತ್ರರ ವ್ಯಾಪ್ತಿಯಲ್ಲಿದ್ದ ಈ ಕುಬಟೂರು ಚಂದ್ರಹಾಸನ ಕುಂತಳನಾಡು ಎಂಬ ಅಭಿಪ್ರಾಯದೊಂದಿಗೆ ಇಲ್ಲಿ 'ವಾಣಿ' ಎಂಬ ಮನೆತನ ರಾಜ್ಯಭಾರ ಮಾಡುತ್ತಿದ್ದ ಬಗ್ಗೆ ಇಲ್ಲಿನ ಶಾಸನಗಳು ಉಲ್ಲೇಖಿಸುತ್ತವೆ. ಈ ಕುಬಟೂರು ೬ನೇ ಶತಮಾನದಿಂದ ೧೫-೧೬ನೇ ಶತಮಾನದ ತನಕ ಹೆಚ್ಚು ಪ್ರಬಲವಾಗಿಯೂ, ಪ್ರಖ್ಯಾತವಾಗಿಯೂ ಇತ್ತೆನ್ನುವ ಶಾಸನಗಳು ಆಧಾರವಾಗಿವೆ. ಇದು ಪ್ರಸಿದ್ಧ ಜನಕೇಂದ್ರಿತವಾಗಿತ್ತು. ಇಲ್ಲಿ ತಂತ್ರಿಣಿಗಚ್ಚಕ್ಕೆ ಸೇರಿದ ಜನ ಪಂಗಡವಿತ್ತು. ಸಮೀಪದ ಕೋಟಿಪುರ ಈ ಕುಬಟೂರು

ವ್ಯಾಪ್ತಿಯಲ್ಲಿತ್ತು. ಹಾಗೆಯೇ ಇಲ್ಲಿ ಕೈಟಭೇಶ್ವರ ದೇಗುಲ ಸುತ್ತಲ ಹಲವು ದೇಗುಲಗಳಿಗೆ ಮೂಲಸ್ಥಾನವಾಗಿತ್ತು. ಇಲ್ಲಿಯ ಶಾಸನಗಳು ಶೈವ, ಕಾಳಾಮುಖ, ಪಂಡಿತರ ವಿಚಾರ ಕುರಿತು ಹೇಳುತ್ತವೆ. ದೇಗುಲಗಳಲ್ಲಿ ಅಂಗಭೋಗ ರಂಗಭೋಗ ವ್ಯವಸ್ಥೆ ಇದ್ದದ್ದು ಕಂಡುಬರುತ್ತದೆ. ಇಷ್ಟಲ್ಲದೇ ಊರಲ್ಲಿನ ಕ್ರಿ.ಶ.೧೦ನೇ ಶತಮಾನದಿಂದ ೧೬ನೇ ಶತಮಾನದ ತನಕದ ವೀರಗಲ್ಲುಗಳು, ವೀರರು ಕಾಡುಮೃಗಗಳೊಡನೆ, ವೈರಿಗಳೊಡನೆ ಸೆಣಸಾಡಿ ವೀರಸ್ವರ್ಗ ಪಡೆದ ಬಗ್ಗೆ ಮತ್ತು ಇಲ್ಲಿಯ ವೀರರ ವೀರತ್ವದ ಬಣ್ಣನೆಯೊಡನೆ ಗಮನ ಸೆಳೆಯುತ್ತವೆ.

ಚಂದ್ರಹಾಸನ ಕತೆಗೆ ಸಂಬಂಧಪಟ್ಟಂತೆ ನಡೆದ ಎಲ್ಲಾ ಘಟನೆಗಳನ್ನು ಇಲ್ಲಿಯ ಒಂದೊಂದು ಸ್ಥಳದೊಡನೆ ಹೋಲಿಸಿ ಇಲ್ಲಿಯ ಜನ ಹೇಳುತ್ತಾರೆ. ಇಲ್ಲಿ ಕಾಳಿಕಾ ದೇವಾಲಯವಿದೆ. ಇಲ್ಲಿ ಕ್ರಿ.ಶ.೯೧೭ರಲ್ಲಿ ಕಟ್ಟಲಾದ ಒಂದು ಪಾರ್ಶ್ವನಾಥ ಬಸದಿ ಇದೆ. ಕ್ರಿ.ಶ.೬೦೦ರಲ್ಲಿ ರಾಷ್ಟ್ರಕೂಟರು ಕಟ್ಟಿಸಿದ ರಾಮೇಶ್ವರ ದೇವಾಲಯವಿದೆ. ಚಿಂತಾಮಣಿ ನರಸಿಂಹ ದೇವಾಲಯ ಇಲ್ಲಿರುವ ಮತ್ತೊಂದು ಗುಡಿ. ದ್ಯಾಮವ್ವ ಎಂದು ಕರೆಯಲಾಗುವ ೧೬ ಕೈಗಳ ಒಂದು ಮರದ ವಿಗ್ರಹ ಕೂಡ ಕುಬಟೂರಿನಲ್ಲಿದೆ.

ಇಷ್ಟೆಲ್ಲ ಅಂಶಗಳಿಂದ ಮಾನ್ಯಗೊಂಡ ಕುಬಟೂರು ಇಂದು ಹಾಳು ಸುರಿಯುತ್ತಿದೆ. ಹಿಂದೊಮ್ಮೆ ಇಲ್ಲಿಯವರೇ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದು, ಅವರ ಇಲ್ಲಿಯ ಅರಮನೆ ಎದುರು ಈ ಪಾಳು ದೇಗುಲಗಳು ಸಾಮಾನ್ಯಗೊಂಡಿವೆ. ನೆಮ್ಮದಿತರುವ ಅಂಶವೆಂದರೆ ಹಿಂದೊಮ್ಮೆ ಪ್ರಾಂತ್ಯ ಇಲಾಖೆ ಎರಡು ದೇಗುಲಗಳನ್ನು ಜೀರ್ಣೋದ್ಧಾರಗೊಳಿಸಿದ್ದು ಈಗ ಈ ದೇಗುಲಗಳು ಪ್ರಾಚ್ಯ ಇಲಾಖೆಯಡಿಯಲ್ಲಿ ಸಂರಕ್ಷಿಸಲ್ಪಡುತ್ತಿವೆ.

ಕುಪ್ಪಗಡ್ಡೆ

ಸೊರಬದಿಂದ ೧೫ ಕಿಲೋಮೀಟರ್ ಅಂತರದಲ್ಲಿರುವ ಕುಪ್ಪಗಡ್ಡೆ ಹಿಂದೆ ಪುಷ್ಪಾವತಿ, ಪುಷ್ಪನಗರ, ಪುಷ್ಪಶಕಟ ಎಂದೆಲ್ಲ ಕರೆಯಲ್ಪಡುತ್ತಿದ್ದ ಊರು. ಇಲ್ಲಿಯ ರಾಮೇಶ್ವರ ದೇವಾಲಯ ಅತ್ಯಂತ ಭವ್ಯವಾದದ್ದು, ಮನೆಮನೆ ವಂಶದ ರಾಮನೆಂಬಾತ ಈ ದೇವಾಲಯವನ್ನು ನಿರ್ಮಿಸಿದ್ದನೆಂಬ ವಿಷಯವನ್ನು ಇಲ್ಲಿಯೇ ಇರುವ ಒಂದು ಶಾಸನವು ತಿಳಿಯಪಡಿಸುತ್ತದೆ. ಈ ಶಾಸನವು ಕ್ರಿ.ಶ.೧೧೪೮ಕ್ಕೆ ಸೇರಿದ್ದಾಗಿದೆ. ರಾಮೇಶ್ವರ ದೇಗುಲದ ಬಳಿ ನರಸಿಂಹಗುಡಿ ಇದೆ. ಇದೇ ಗುಡಿಯಲ್ಲಿ ಸುಮಾರು ೫-೭ನೇ ಶತಮಾನದ್ದು ಎನ್ನಲಾದ ಅನಂತಶಯನನ ಪ್ರತಿಮೆ ಇದೆ. ಹಾಗೆಯೇ ಗಣಪತಿ, ಮಹಿಷಮರ್ಧಿನಿ, ವೀರಭದ್ರನ ವಿಗ್ರಹವೂ ಇಲ್ಲಿದೆ.

ಈ ನರಸಿಂಹಗುಡಿಯ ಪಕ್ಕದಲ್ಲಿ ಮತ್ತೆರಡು ಗುಡಿಗಳು ಪಾಳುಗೊಂಡಿವೆ. ಒಂದರಲ್ಲಿ ಸೂರ್ಯನಾರಾಯಣನಿದ್ದನೆಂದೂ ಅದು ಕಳುವಾಗಿ ಸಿಕ್ಕು ಸದ್ಯಕ್ಕೆ ಶಿವಮೊಗ್ಗದ ಪ್ರಾಚ್ಯವಸ್ತು

ಸಂಗ್ರಹಾಲಯದಲ್ಲಿದೆಯೆಂದು ಬಲ್ಲವರ ಹೇಳಿಕೆಯಾಗಿದೆ. ಇನ್ನೊಂದರಲ್ಲಿ ನೀಲಕಂಠ (ಲಿಂಗರೂಪಿ)ನಿದ್ದಾನೆ. ಈ ಗುಡಿ ಸಂಪೂರ್ಣ ಅವನತಿ ಹಂತದಲ್ಲಿದೆ. ಈ ದೇಗುಲಗಳ ಆವರಣದಿಂದ ತುಸು ದೂರದಲ್ಲಿ ಜೀರ್ಣೋದ್ಧಾರಗೊಂಡು ಮತ್ತೆ ಅವನತಿಯ ಹಂತದಲ್ಲಿರುವ ಇನ್ನೊಂದು ಗುಡಿ ಮಾಧವನದಾಗಿದೆ. ಇಲ್ಲಿ ನಿಧಿಗಾಗಿ ತನ್ನ ಹೊಟ್ಟೆಯನ್ನೇ ತೆರೆದುಕೊಟ್ಟ ಗಣಪನಿದ್ದಾನೆ. ಈ ಗುಡಿಗಳೊಂದಿಗೆ ಊರ ಹೊರ ಆವರಣದಲ್ಲಿ ಮತ್ತೊಂದ ಬಸವ ದೇಗುಲ ಜೀರ್ಣೋದ್ಧಾರಗೊಂಡಿದೆ.

ಹೀಗೆ ನಾನಾ ವಿಧದ ವೈಶಿಷ್ಟ್ಯಗಳಿಂದ ಮೆರೆದ ಕುಪ್ಪಗಡ್ಡೆ ಇಂದು ಕಳೆಗುಂದಿದೆ. ರಾಮೇಶ್ವರ ದೇವಾಲಯ ಪ್ರಾಚ್ಯ ಇಲಾಖೆಯ ವಸ್ತು ಸಂಗ್ರಾಲಯದ ಜವಬ್ದಾರಿಯಲ್ಲಿದೆ. ಇದನ್ನು ಹೊರತುಪಡಿಸಿ ಇರುವ ಅನೇಕ ಶಾಸನ, ವಿಗ್ರಹಗಳು, ಗುಡಿಗಳು ಸೂಕ್ತ ಸ್ಥಾನವಿಲ್ಲದೇ ಅನಾಥಗೊಂಡಿವೆ. ದೇಗುಲದ ಸೂರು ಭಗ್ನಗೊಂಡಿರುವುದು ಇತ್ಯಾದಿ ಗಮನಿಸಿದಾಗ ಇದಕ್ಕೆ ಇನ್ನೂ ಹೆಚ್ಚಿನ ಕಾಳಜಿ ಬೇಕಾಗಿದೆ.

ಬಾರಂಗಿ

ಈ ತಾಲೂಕಿನ ಬಾರಂಗಿಯು ಹಿಂದೊಮ್ಮೆ ಅತ್ಯಂತ ಕಲಾತ್ಮಕ ದೇಗುಲ, ಬಸದಿ, ಕೋಟೆ ಕೊತ್ತಲಗಳನ್ನೊಳಗೊಂಡ ಐತಿಹಾಸಿಕ ಹಿನ್ನೆಲೆಯನ್ನೊಳಗೊಂಡ ಗ್ರಾಮ ಇದು ವಿಜಯನಗರದ ಕಾಲದಲ್ಲಿ ಮುಖ್ಯ ಪಟ್ಟಣವಾಗಿದ್ದ ಬಗ್ಗೆ ಉಲ್ಲೇಖವಿದೆ. ಇಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ಅನೇಕ ದೇಗುಲ ಶಿಲ್ಪಗಳಿದ್ದು ಅವು ಸಾಕಷ್ಟು ಅವನತಿ ಹಂತವನ್ನು ಹೊಂದಿವೆ. ಕಲ್ಲಪ್ಪ ದೇಗುಲ, ನಾರಾಯಣ ದೇಗುಲ, ಬಸದಿ, ಮಠಗಳು ಇವೆ. ಜೊತೆಗೆ ಕೆಲಪ್ರಾಚೀನ ಪಾಳು ನೆಲಗಟ್ಟು, ಹಗೇವು, ಭಾವಿಕೋಟೆ ಇತ್ಯಾದಿ ಅವಶೇಷಗಳೊಂದಿಗೆ ಅನೇಕ ಶಿಲಾಶಾಸನ, ವೀರಗಲ್ಲು, ಗೋಸಾಸಿ, ಮಾಸ್ತಿಕಲ್ಲುಗಳಿವೆ. ಪ್ರಸ್ತುತ ಇಲ್ಲಿನ ದೇವಾಲಯಗಳು ಪ್ರಾಚ್ಯ ಸಂರಕ್ಷಣಾ ಇಲಾಖೆಯಡಿಯಲ್ಲಿ ಸೇರಿಲ್ಲ. ಊರ ಜನರಿಗೆ ಇಂತಹದರ ಬಗ್ಗೆ ನಿಗಾವಹಿಸಲು ಸಾಧ್ಯವಾಗುತ್ತಿಲ್ಲ. ಬಹಳ ಕಷ್ಟ ಎಂಬ ವಿಚಾರ ಮಹತ್ವದ್ದು. ಕೊನೆ ಪಕ್ಷ ಈಗಿರುವ ಸ್ಥಿತಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಕಷ್ಟವೇನಲ್ಲ.

ಚಂದ್ರಗುತ್ತಿ

ಚಂದ್ರಗುತ್ತಿ ಎಂದಾಗ ನೆನಪಾಗೋದು ಬೆತ್ತಲೆಸೇವೆ! ಬೆತ್ತಲೆ ಎಂದಾಗ ನೆನಪಾಗುವುದು ಚಂದ್ರಗುತ್ತಿ! ಈ ಬೆತ್ತಲೆ ಹಾಗೂ ಚಂದ್ರಗುತ್ತಿ ಎಷ್ಟು ವಿಸ್ತಾರದ ವ್ಯಾಪ್ತಿಯನ್ನು ಹೊಂದಿದೆಯೆಂದರೆ ಇದು ದೇಶದಲ್ಲಿಯೇ ಖ್ಯಾತ! ಹಾಗಾದರೆ ಇದು ಇತಿಹಾಸ ಖ್ಯಾತವೇ? ಹೌದು ಇದು ಸೊರಬ ತಾಲೂಕಿನ ಒಂದು ಹೊಬಳಿ ಗ್ರಾಮ. ಇದು ಕಾರವಾರ ಜಿಲ್ಲೆಯ ಅಂಚಿನಲ್ಲಿದೆ. ಇದು ಪುರಾಣ ಪ್ರಸಿದ್ಧ ಕ್ಷೇತ್ರ, ಸುಂದರ ಗಿರಿಧಾಮ, ಐತಿಹಾಸಿಕ ಕ್ಷೇತ್ರ ಹಾಗೂ ಇಲ್ಲಿಯ ವರದಾ ತೀರದ ಮರಳು ಮತ್ತು ಗುಡ್ಡದ ಕಲ್ಲು ಬಹು ಉಪಯೋಗಿಯೂ ಹೌದು.

ಇಲ್ಲಿ ಮುಂದೆ ಮುನಿಗಳು ತಪಸ್ಸಾಚರಿಸಿದ್ದರೆಂಬ, ಜರಾಸಂಧ-ಕೃಷ್ಣ ಯುದ್ಧ ಮಾಡುವಾಗ ಕೃಷ್ಣ ಇಲ್ಲಿಯ ಬೆಟ್ಟದಡಿ ಅಡಗಿದ್ದ, ಜಮದಗ್ನಿಯ ಮಗನಾದ ಪರಶುರಾಮ ತನ್ನ ತಂದೆಯ ಆಜ್ಞೆಯಂತೆ ತಾಯಿ ರೇಣುಕಾದೇವಿಯನ್ನು ಬೆನ್ನಟ್ಟಿದಾಗ ಆಕೆ ಇಲ್ಲಿಯ ಗುಹೆಯೊಳಗೆ ಹೊಕ್ಕಳು ಎಂಬ ಪುರಾಣಗಳ ಹಿನ್ನೆಲೆ ಇದೆ.

ಚಂದ್ರಗುತ್ತಿಗೆ-ಚಂದ್ರಗುಪ್ತಿ, ಚಂದ್ರಗುಪ್ತಾಪುರ, ಗುತ್ತಿ ಎಂತಲೂ ಕರೆಯಲಾಗುತ್ತಿತ್ತು. ಚಂದ್ರಗುತ್ತಿ ಮಹಾನ್ ರಾಜರಾಳ್ವಿಕೆಯಲ್ಲಿ ಉನ್ನತ ಸ್ಥಾನ ಹೊಂದಿತ್ತು ಎಂಬ ಬಗ್ಗೆ ಇತಿಹಾಸದ ಪುಟಗಳಿಂದಲೂ ಇಲ್ಲಿರುವ ಅನೇಕ ದೇಗುಲ, ಕೋಟೆ-ಕೊತ್ತಲಗಳಿಂದಲೂ ಅಮೂಲ್ಯವಾದ ವಿಚಾರಗಳನ್ನು ಗ್ರಹಿಸಬಹುದು ಹಾಗೂ ತಜ್ಞರಿಂದ ಬೆಳಕಿಗೆ ಬರಬಹುದಾದ ವಿಷಯ ಕೂಡ ಬಹಳಷ್ಟಿದೆ.

ಕದಂಬ, ವಿಜಯನಗರ, ಕೆಳದಿ ಅರಸರಲ್ಲದೇ ಹೈದರನ ತನಕ ಅನೇಕ ಸಣ್ಣಪುಟ್ಟ ಅರಸುಮನೆತನಗಳ ಆಳ್ವಿಕೆ ಇಲ್ಲಿ ನಡೆದುದರ ಉಲ್ಲೇಖವಿದೆ. ಇಲ್ಲಿಯ ರೇಣುಕ ದೇಗುಲ ಹಾಗೂ ಜೀನ ಬಸದಿ (ಈಗ ಪಾಳು ಬಿದ್ದಿವೆ)ಗಳು ಚಾಲುಕ್ಯ ಶೈಲಿಯನ್ನು ಹೊಂದಿವೆ. ರೇಣುಕ ದೇಗುಲ ಅನೇಕ ರಾಳ್ವಿಕೆಯಲ್ಲಿ ದುರಸ್ತಿ ನವೀಕರಣಗೊಂಡಿರಬಹುದಾದ ಸಾಧ್ಯತೆ ಇದೆ. ಇಲ್ಲಿಯ ಕೋಟೆಯನ್ನು ''ಹಿಂದೂ ವಾಸ್ತುವಿನ ಕೋಟೆ'' ಎಂದು ಕರೆಯಲಾಗಿದೆ. ಈ ಕೋಟೆಯೂ ಸಹ ಅನೇಕ ರಾಜರುಗಳ ಆಳ್ವಿಕೆಯಲ್ಲಿ ಸುಧಾರಿತಗೊಂಡಿರ ಬಹುದಾದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಊರೊಳಗೆ ವಿಠೋಬ ದೇಗುಲವಿದೆ. ಇವೆಲ್ಲದರ ಹಿನ್ನೆಲೆಯಲ್ಲಿ ಚಂದ್ರಗುತ್ತಿ ಬೆತ್ತಲೆ ಸೇವೆಗೆ ಹೆಸರಾಗಿದ್ದು ಖೇದವೆನಿಸುತ್ತದೆ.

ಹೀಗೆ ಸೊರಬ ತಾಲೂಕಿನ ಪ್ರತಿಹಳ್ಳಿಯು ವಿಶಿಷ್ಟವೆ ಅದರಲ್ಲೂ ಐತಿಹಾಸಿಕ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವದ ಹಿನ್ನಲೆಯುಳ್ಳ ಹಳ್ಳಿ-ಹಳ್ಳಿಗಳಲ್ಲಿ ಶಿಲ್ಪ, ದೇಗುಲ, ಶಾಸನ, ವೀರಗಲ್ಲು, ಮಾಸ್ತಿಕಲ್ಲು, ಕೋಟೆಕೊತ್ತಲು, ಇತಿಹಾಸ ಪೂರ್ವಸಮಾದಿ ಇತ್ಯಾದಿ ಅವಶೇಷಗಳು ಲಭಿಸುತ್ತವೆ. ಬನವಾಸಿಯ ೨೨೦೦೦ದ ವ್ಯಾಪ್ತಿಗೊಳಪಟ್ಟಿದ್ದ ಈ ತಾಲೂಕಿನಲ್ಲಿ ಕದಂಬ ಕಾಲದಿಂದ ವಿಜಯನಗರದ ಕಾಲದವರೆಗಿನ ಅನೇಕ ಐತಿಹ್ಯಗಳನ್ನು ಗುರುತಿಸಬಹುದು. ಇದುವರೆಗೂ ೮೦೦ಕ್ಕೂ ಹೆಚ್ಚು ಶಿಲಾ, ತಾಮ್ರಶಾಸನ ಬೆಳಕಿಗೆ ಬಂದಿದ್ದು ಇನ್ನೂ ನೂರಾರು ಶಾಸನಗಳು ಬೆಳಕಿಗೆ ಬರಬೇಕಾಗಿದೆ.

ಐತಿಹಾಸಿಕ ನೆಲೆಯ ಹಾದಿಯಲ್ಲಿ ಇನ್ನೂ ಸಾಕಷ್ಟು ಊರುಗಳನ್ನು ಹೆಸರಿಸಬಹುದು. ಉದ್ರಿ, ಕೋಡಕಣೆ, ಸೊರಬ, ಎಲೆವಾಳ, ತೊರೆವಂದ, ಚಾಟಿಕೊಪ್ಪ, ಉರ್ನಳ್ಳಿ, ಹಂಚಿ ಇತ್ಯಾದಿಯ ಸುಮಾರು ಹಳ್ಳಿಗಳಲ್ಲಿಯ ಐತಿಹ್ಯ ಬೆಳಕಿಗೆ ಬರಬೇಕಾಗಿದೆ. ಈ ಎಲ್ಲಾ ಊರಿನ ದೇಗುಲವನ್ನು ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಒಳಪಡಿಸಿದಾಗ ಮಾತ್ರ ಬೆಳಕಿಗೆ ಬರಲು ಸಾಧ್ಯ ಮತ್ತು ಸಂರಕ್ಷಿಸಲು ಸಾಧ್ಯ ಎಂಬ ಮಾತನ್ನು ಹೇಳಬಹುದು.

೫.೧. ಧಾರ್ಮಿಕ ಕೇಂದ್ರಗಳು ಮತ್ತು ಸ್ಮಾರಕಗಳು

ಧಾರ್ಮಿಕ ಕೇಂದ್ರಗಳು

ಸಕಲ ಧರ್ಮದಲ್ಲೂ ಸಮನ್ವಯ ಬೆಳವಣಿಗೆ ಕಂಡ ಇಲ್ಲಿ ಶೈವ, ವೈಷ್ಣವ, ಜೈನ, ಕಾಳಾಮುಖ, ಸೌರಪಂಥ, ನಾಥಪಂಥದ ಇರುವನ್ನು ಗುರುತಿಸಲಾಗಿದೆ. ಕದಂಬ ಕಾಲದಿಂದಲೇ ಅಸ್ತಿತ್ವದಲ್ಲಿದ್ದ ವೆನ್ನಬಹುದಾದ ಅಗ್ರಹಾರಗಳಲ್ಲಿ ಯಲಸಿ, ಕುಪ್ಪಗಡ್ಡೆ ಕುಬಟೂರು, ಮುಖ್ಯವಾದವು. ನಂತರ ಕಾಲದಲ್ಲಿ ಬೆಣ್ಣಗೆರೆ, ನೇರಲಿಗೆ, ಹೆಚ್ಚೆ, ಭಾರಂಗಿ, ಉದ್ರಿ, ಕಂತನಹಳ್ಳಿ, ಹೊಸೂರು ಕೂಡಾ ಅಗ್ರಹಾರಗಳಾಗಿದ್ದವು. ವಿಜಯನಗರದ ಕಾಲದಿಂದ ಕೆಳದಿ ಅರಸರ ಕಾಲದಲ್ಲಿ ಉಳವಿಯಲ್ಲಿ ಮಹತ್ತಿನ ಮಠ, ಅಂಡಿಗೆ, ಕೆರೆಹಳ್ಳಿ, ಚೌಡಿಕೊಪ್ಪ, ಕ್ಯಾಸನೂರು, ಕಪ್ಪಗಳಲೆ, ಕುಣೇತಪ್ಪ, ಆನವಟ್ಟಿ, ಕುಪ್ಪಗಡ್ಡೆ, ಜಡೆ, ತವನಂದಿ, ತಾವರೇಕೊಪ್ಪ, ಕುಬಟೂರು, ಕುಂಸಿ, ಕೋಟಿಪುರ, ಕೋಡಿಹಳ್ಳಿ, ಗುಂಜನೂರು, ಗುತ್ತಿ, ತಾಳಗುಪ್ಪ, ತೆಕ್ಕೂರು, ಬೆನ್ನೂರು, ಹಿರೇಮಾಗಡಿ, ಮೂಡಿ, ಶಾಂತಾಪೂರ, ಕೊಲ್ಲುಗಣಿಸೆಗಳಲ್ಲಿ ವಿರಕ್ತಮಠವಿದ್ದ ಬಗ್ಗೆ ಉಲ್ಲೇಕವಿದೆ.[೨] ಅದೇ ರೀತಿ ಹಿಂದೊಮ್ಮೆ ಸೊರಬ ತಾಲ್ಲೂಕು ಪ್ರಸಿದ್ದ ಜೈನ ಕೇಂದ್ರವೂ ಆಗಿತ್ತು. ಅಂತೆಯೇ ಅಂಡಿಗೆ, ಹಿರೇಮಾಗಡಿ, ಹಂಚಿ, ತೆವರತೆಪ್ಪ, ಗಿಣಿವಾಲ, ಹಿರೇಕಸವಿ, ಮಾವಲಿ, ಹಿರೇಚೌಟಿ, ಉದ್ರಿ, ನೇರಲಿಗೆ, ಕುಪ್ಪೆ ಇನ್ನು ಮುಂತಾದೆಡೆ ಜೈನ ಅವಶೇಷಗಳನ್ನು ಕಾಣಬಹುದು. ಅದೇ ಈಗಲೂ ಕುಬಟೂರು, ಹಿರೆಯಾವಲಿ, ತಲಗಡ್ಡೆ ಬಾರಂಗಿಯಲ್ಲಿ ಜೈನ ಬಸದಿಗಳಿವೆ. ಚಂದ್ರಗುತ್ತಿ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಧಾರ್ಮಿಕ ಕೇಂದ್ರವೆಂದು ಖ್ಯಾತಿ ಪಡೆದಿದೆ.

ಬಸದಿ ಕೇಂದ್ರಗಳು

ಬಾರಂಗಿ : ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದ ಬಸದಿ ಕೇಂದ್ರ. ಈ ಬಾರಂಗಿ ಬಸದಿಯ ಪಾರ್ಶ್ವನಾಥ ಮೂರ್ತಿಯು ಕಣ್ಮರೆಯಾಗಿದೆ. ಹೊರಗೋಡೆಯ ಪೂರ್ವದ ಕಡೆ ಪಟ್ಟಿಕೆಯಲ್ಲಿ ಮುಕ್ಕೊಡೆಯ ಜಿನ ವಿಗ್ರಹವಿದೆ. ಈಗಿರುವ ತೀರ್ಥಂಕರರ ಮೂರ್ತಿಯು ಈಚಿನದು. ಜಯಕೀರ್ತಿ ಮತ್ತು ಅಭಯ ಚಂದ್ರದೇವ ಎಂಬ ಜಿನ ಮುನಿಗಳಿದ್ದರು.

ಕುಪಟೂರು : ಕುಪಟೂರು ಬಸದಿಯು ಪಾಳು ಬಿದ್ದಿದೆ. ಸುಮಾರು ೩ ಅಡಿ ಎತ್ತರದ ಪಾರ್ಶ್ವನಾಥ ಸ್ವಾಮಿ ತೀರ್ಥಂಕರರಿಗೆ ಮುಕ್ಕೋಡೆ ಹಾಗೂ ಎಡಬಲದಲ್ಲಿ ಯಕ್ಷ ಯಕ್ಷಿಯರಿದ್ದಾರೆ. ಮೂರ್ತಿಯ ಆಕರ್ಷಕವಾಗಿದೆ. ಇಲ್ಲಿ ಪದ್ಮನಂದಿ ಪಾರ್ಶ್ವನಾಥ, ಸಿದ್ಧಾಂತ ಯೋಗಿಂದ್ರ, ಗೌತಮ ಮುನಿ, ವಿಷ್ಣುಮುನಿ, ದೇವಚಂದ್ರ ಮೊದಲಾದ ಜಿನ ಮುನಿಗಳಿದ್ದರು.

ಉದ್ದರಿ : ಜಿಡ್ದುಗಳಿಗೆ ೭೦ರ ರಾಜಧಾನಿಯಾಗಿದ್ದು ಉದ್ದರಿಯಲ್ಲಿರುವ ಜಿನಗೇಹವನ್ನು 'ಎರಗ ಜಿನಾಲಯ'ವೆಂದು ಕರೆದಿದೆ. ಇದನ್ನು ಕ್ರಿ.ಶ.೧೧೮೭ರಲ್ಲಿ ಮಹಾದೇವ ದಂಡನಾಯಕನು ಕಟ್ಟಿಸಿದನು.

ಈಗ ಇದು ಶಿವಾಲಯವಾಗಿ ಪರಿವರ್ತನೆಗೊಂಡಿದೆ. ಶಾಂತಿನಾಥನ ಮೂರ್ತಿಯು ಭಗ್ನಗೊಂಡಿದೆ. ಅಂತರಾಳದ ದ್ವಾರಲಲಾಟದಲ್ಲಿ ತೀರ್ಥಕರನ ಶಿಲ್ಪವಿದೆ. ಭುವನೇಶ್ವರಿಯಲ್ಲಿ ಕಮಲದ ಕೆತ್ತನೆಯಿದೆ. ನವರಂಗದ ದ್ವಾರಕ್ಕೆ ಐದು ಶಾಖೆಗಳಿವೆ. ನವರಂಗದಲ್ಲಿ ಜಾಲಂದ್ರವಿದೆ. ಅಂತರಾಳದಲ್ಲಿ ಎರಡು ದೇವ ಕೋಷ್ಟಗಳಿವೆ. ನವರಂಗದ ದ್ವಾರದಲ್ಲಿ ಗಜಲಕ್ಷ್ಮಿಯ ಮೂರ್ತಿಯಿದೆ. ಇಲ್ಲಿ ಮುನಿಭದ್ರ, ಮುನಿಸಿದ್ಧಾಂತ, ಭಾನುಕೀರ್ತಿ, ದೇವಚಂದ್ರ, ಸಿದ್ಧಾಂತ ಯೋಗಿಂದ್ರ, ಪದ್ಮನಂದಿ, ಸಿದ್ಧಾಂತ ದೇವ ಜೀನಮುನಿಗಳು ಇದ್ದರು.

ಮಠಗಳು : ಮಠಗಳು ಧಾರ್ಮಿಕತೆ ಮಾನವೀಯ ಸಂಬಂಧಗಳನ್ನು ಬಲಗೊಳಿಸುತ್ತವೆ. ನಾವು ಇಡುತ್ತಿರುವ ಹೆಜ್ಜೆಯ ಬಗ್ಗೆ ಅವಲೋಕನ ಮಾಡಿಕೊಳ್ಳಲು ಸಹಕರಿಸುತ್ತವೆ. ಹೀಗಾಗಿಯೇ ಮಠಗಳು, ಮಠಾಧೀಶರು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ನಿಲ್ಲುತ್ತಾರೆ. ಇಲ್ಲಿ ಮಠವೆಂದರೆ ಕೇವಲ ಧಾರ್ಮಿಕ ವಿಚಾರಗಳಿಗೆ ಮಾತ್ರ ಸೀಮಿತವಾಗಿಲ್ಲ. ಅದರೊಂದಿಗೆ ಸಾಮಾಜಿಕ, ಶೈಕ್ಷಣಿಕ, ಪರಿಸರ, ಯೋಗ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲೂ ತನ್ನದೇ ಆದ ವಿಶಿಷ್ಟ ಸೇವೆ ಸಲ್ಲಿಸುತ್ತವೆ.

ಜಡೆ ಮಠ : ಸೊರಬದ ಹೋಬಳಿಗಳಲ್ಲಿ ಒಂದಾದ ಇದು ಕ್ರಿ.ಶ.೧೧ನೇ ಶತಮಾನದ ಇತಿಹಾಸವುಳ್ಳ ಐತಿಹಾಸಿಕ ಮಹತ್ವದೊಂದಿಗೆ ವಿಶೇಷ ಸ್ಥಾನ ಪಡೆದುಕೊಂಡಿದೆ. ಇಲ್ಲಿಯ ಸಂಸ್ಥಾನ ಮಠವು ೧೭ನೇ ಶತಮಾನದ ಆರಂಭದಲ್ಲಿ ಸಿದ್ಧವೃಷಭೇಂದ್ರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು,[೬] ನಂತರ ಕುಮಾರಪ್ರಭು ಸ್ವಾಮೀಜಿ ಅವರಿಂದ ಜೀರ್ಣೋದ್ಧಾರಗೊಂಡು ಕರ್ತೃವಿನ ಜಾತ್ರಾ ಮಹೋತ್ಸವ ಆಚರಿಸುತ್ತಾ ಜಾತಿ, ಮತ, ಪಂಥಗಳ ಭೇದವೆಣಿಸದೆ ಸಾಮರಸ್ಯ ಸಾಧಿಸಲು ನೆರವಾಗಿದೆ. ಈ ವೀರಶೈವ ಮಠದ ವತಿಯಿಂದ ನಡೆಯುತ್ತಿರುವ ಕಾರ್ಯಕ್ರಮಗಳು ಜನ ಸಾಮಾನ್ಯರಿಗೂ ತಲುಪಿವೆ. ನೆಮ್ಮದಿ ಹಾಗೂ ಚಟುವಟಿಕೆಯಿಂದ ಕೂಡಿದ ಬದುಕು ದೇಹಾರೋಗ್ಯ ನೀಡಲು ಸಾಧ್ಯ. ಇದು ಪ್ರಾಪ್ತವಾಗಬೇಕಾದರೆ ಯೋಗ, ಧ್ಯಾನಗಳು ಅತ್ಯವಶ್ಯ ಎಂಬುದು ಇಲ್ಲಿನ ಮಠಾಧೀಶರಾದ ಮಹಾಂತ್ವಸ್ವಾಮೀಜಿ ಕಂಡುಕೊಂಡ ಸತ್ಯ. ಇದಕ್ಕಾಗಿಯೇ ಅವರು ಮಠದ ಆವರಣದಲ್ಲಿ ಪ್ರತಿವರ್ಷ ಬೇಸಿಗೆಯಲ್ಲಿ ೧೦ ದಿನಗಳ ಕಾಲ ಯೋಗ ಶಿಬಿರ ನಡೆಸಿ, ಪ್ರಾಣಾಯಾಮ, ಸತ್ಸಂಗ, ಧ್ಯಾನಗಳ ತರಬೇತಿ ನೀಡುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಪ್ರತಿ ಹುಣ್ಣಿಮೆ ದಿನದಂದು ನೂರಾರು ಭಕ್ತರನ್ನು ಒಗ್ಗೂಡಿಸಿ ಯೋಗಾಸನ, ಧ್ಯಾನ, ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಕಲ್ಯಾಣ ಮಂಟಪ, ಯೋಗಮಂದಿರ ಸ್ಥಾಪನೆಗೆ ಅಡಿಯಿಟ್ಟಿದೆ.

ಮಠದ ವಿಶೇಷವೆಂದರೆ ಸ್ವತಃ ಕಾಯಕಯೋಗಿಯಾಗಿರುವ ಮಹಾಂತ್ವಸ್ವಾಮೀಜಿಯವರು. ಮೂಲತಃ ಬೆಳಗಾಂ ಜಿಲ್ಲೆಯವರಾದ ಅವರನ್ನು ೧೯೮೫ರಲ್ಲಿ ಕುಮಾರ ಸ್ವಾಮೀಜಿ ಇಲ್ಲಿಗೆ ಕರೆತಂದರು. ೩೮ರ ಪ್ರಾಯದ ಇವರ ಅವಧಿಯ ಸಾಧನೆ, ಕೋಟಿ ರೂ.ಗೂ ಮೀರಿದ್ದು. ೫೦ ಲಕ್ಷ ರೂ. ವೆಚ್ಚದ

ಮಠ. ೮ ಎಕರೆ ತೋಟಗೆ ಕುಡಿಯುವ ನೀರು ಹೀಗೆ ಇವರ ಸಾಧನೆ ವರ್ಣಿಸಲು ಅಸದಳ ಪರಿಸರದ ಬಗ್ಗೆ ಅಪ್ರತಿಮ ಕಾಳಜಿ ಹೊಂದಿದ್ದಾರೆ. ಹುಟ್ಟಿದ ಪ್ರತಿ ಮಗುವಿನ ಹೆಸರಿನಲ್ಲಿ ೧೦ ಗಿಡ ನೆಡುವಂತೆ ಜನತೆಯನ್ನು ಪ್ರೇರೇಪಿಸಿದ್ದಾರೆ. ಟ್ರಸ್ಟ್ ಮೂಲಕ ಉಚಿತ ಆರೋಗ್ಯ, ಶಿಕ್ಷಣ, ಬಟ್ಟೆ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದಾರೆ. ವಿಶ್ವಶಾಂತಿಗಾಗಿ ಜಪ ತಪ ಮಾಡುವುದರೊಂದಿಗೆ ಬ್ಯಾತನಾಳ ಅಣೆಕಟ್ಟಿನಂತಹ ಯೋಜನೆಗಳು ತಾಲೂಕಿನ ಅರ್ಧಭಾಗವನ್ನೇ ಮುಳುಗಿಸುವ ಆತಂಕವೊಡ್ಡಿದಾಗ ಕಾಲ್ನಡಿಗೆ, ಪ್ರತಿಭಟನಾ ಸಭೆಗಳ ಮೂಲಕ ಜನತೆಯ ನೋವಿನಲ್ಲಿ ತಾವೂ ಸಹಭಾಗಿಗಳು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಮಕ್ಕಳ ಹಂತದಿಂದಲೇ ಉತ್ತಮ ಸಂಸ್ಕಾರ ನೀಡಬೇಕು ಎಂದು ಕಿವಿಮಾತು ಹೇಳುತ್ತಾರೆ. ಈ ಕುರಿತು ಜಾಗೃತಿ ಮೂಡಿಸುವಲ್ಲಿ ಕ್ರಿಯಾಶೀಲರಾಗಿದ್ದಾರೆ.

ಹಿರೇಮಾಗಡಿಯ ಮಠ : ಹಿರೇಮಾಗಡಿ ಶ್ರೀ ಚನ್ನಬಸವ ಮುರುಘರಾಜೇಂದ್ರ ಮಹಾಶಿವಯೋಗಿಗಳವರ ಸುಕ್ಷೇತ್ರ. ಇಲ್ಲಿರುವ ವಿರಕ್ತಮಠ ಬಸವಕೇಂದ್ರ ಸು.೩೦೦ ವರ್ಷಗಳ ಹಿಂದೆ ಶಂಕು ಸ್ಥಾಪನೆಯಾಗಿದೆ. ಇದೊಂದು ಗದ್ದುಗೆ. ಈ ಮುರುಘಿ ಮಠ, ಮುರುಘಾರಾಜೇಂದ್ರ ಮಠ ಎಂದು ಹೆಸರು ಪಡೆದಿದೆ. ಈ ಮಠದ ಸ್ಥಾಪನೆ ಹಿನ್ನಲೆ ವಿಶಿಷ್ಟವಾಗಿದೆ. ಶ್ರೀ ಮಹಾಶಿವಯೋಗಿಗಳವರ ಮೂಲ ನಿವಾಸ ಚಿತ್ರದುರ್ಗ. ಅಲ್ಲಿಂದ ಸಂಚಾರ ಕೈಗೊಂಡು ಸೊರಬದ ತಿಳುವಳ್ಳಿಯಲ್ಲಿ ಮೊದಲು ಧ್ಯಾನಕ್ಕೆ ಕುಳಿತರು. ಅಲ್ಲಿ ಯಾರ ಬಕ್ತಿ ಸಿಗದೆ ಇದ್ದಾಗ ಮುಂದಿನ ಸಂಚಾರ ಹಿರೇಮಾಗಡಿಗೆ ಆಗಮಿಸಿ ಊರ ಹೊರಗಿನ ಅರಳಿ ಮರದ ಕೆಳಗೆ ಧ್ಯಾನಕ್ಕೆ ಕುಳಿತರು. ಆ ಊರಿನ ದನಕಾಯುವ ಹುಡುಗರೊಂದಿಗೆ ಸಂಬಂಧ ಬೆಳೆಯಿತು. ದಿನವು ಪ್ರಸಾದವನ್ನು ಹುಡುಗರಿಗೆ ನೀಡುತ್ತಿದ್ದರು. ಇತನ ಚೇತನ ಶಕ್ತಿ ಹುಡುಗರಿಗೂ ತಿಳಿದು ಗ್ರಾಮದಲ್ಲಿಯೂ ಹಬ್ಬಿತು. ಹಿರೇಮಾಗಡಿ ಗೌಡನ ಹೆಂಡತಿ ಸ್ವಾಮಿಗಳನ್ನು ಬೇಟಿ ಮಾಡಿದಳು. ಆಗ ಸ್ವಾಮಿ ಅವಳಿಗೆ ತನ್ನ ಯಜಮಾನರೊಂದಿಗೆ ಆಗಮಿಸಲು ಕರೆ ಕೊಟ್ಟರು. ಕಣ್ಣು ಕಾಣದಿರುವ ಯಜಮಾನನೊಂದಿಗೆ ಗೌಡತಿ ಸ್ವಾಮಿ ಬಳಿ ಬಂದು ಭಕ್ತಿಯಿಂದ ನಡೆದುಕೊಂಡಳು. ಆಗ ಸ್ವಾಮಿಯ ಆಶೀರ್ವಾದದಿಂದ ಕಣ್ಣು ಕಾಣಿಸುವಂತಾಯಿತು. ಅವರ ಈ ಅದ್ಭುತ ಶಕ್ತಿ ಬಗ್ಗೆ ವಿಶ್ವಾಸ ಬೆಳೆದು ಆ ತಾಯಿ ಸ್ವಾಮಿಯವರು ತಮ್ಮ ಗ್ರಾಮದಲ್ಲಿ ನೆಲಸಬೇಕೆಂದು ಬೇಡಿಕೊಂಡಳು. ಅವಳ ಕೋರಿಕೆಯಂತೆ ಒಪ್ಪಿದ ಸ್ವಾಮಿಜೀ ತಮ್ಮ ಕೈಯಲ್ಲಿಯ ಬೆತ್ತವನ್ನು ತಾವು ನಿಂತ ಸ್ಥಳದಿಂದ ಬೇರೊಂದು ಭಾಗಕ್ಕೆ ಎಸೆದು, ಆ ಬೆತ್ತ ಬಿದ್ದ ಸ್ಥಳದಲ್ಲಿ ಮಠ ಸ್ಥಾಪನೆ ಮಾಡಲು ಗೌಡತಿಗೆ ಹೇಳಿದರು. ಆಗ ಆ ತಾಯಿ ಮಠ ನಿರ್ಮಾಣ ಮಾಡಿಸಿದಳು. ಹಾಗಾಗಿಯೇ ಮಠದ ಮುಂದುಗಡೆ ದಾಖಲೆಯ ಗೌಡತಿ ವಿಚಾರದ ಶಾಸನವನ್ನು ಸಂರಕ್ಷಿಸಲಾಗಿದೆ.

ಹಿರೇಮಾಗಡಿ ಮಠದಲ್ಲಿ ವಾಸವಾಗಿದ್ದ ಸ್ವಾಮೀಜಿ ತಿಳುವಳ್ಳಿಯಲ್ಲಿಯು ಮಠ ಸ್ಥಾಪನೆಗೆ ಕಾರಣವಾದರು. ಎರಡು ಸ್ಥಳಗಳಲ್ಲಿಯೂ ನೆಲೆಸುತ್ತಿದ್ದರು. ಇವರು ಐಕ್ಯವಾದ ನಂತರ ಅನೇಕ

ಸ್ವಾಮಿಗಳು ಇಲ್ಲಿ ನೆಲಸಿ ಸೇವೆ ಮಾಡಿದರು. ಶ್ರೀ ಮನ್ಮಹಾರಾಜ, ನಿರಂಜನ ಜಗದ್ಗುರು, ಶ್ರೀ ಚನ್ನಬಸವ ಇತ್ಯಾದಿ ಸ್ವಾಮಿಗಳು ಆಗಿ ಹೋಗಿದ್ದಾರೆ. ಗದಗದಿಂದ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು ಬಂದು ನೆಲೆಸಿದ್ದಾರೆ. ೧೯೮೩ರಲ್ಲಿ ಇವರ ಪಟ್ಟಾಧಿಕಾರವಾಯಿತು. ಶ್ರೀ ಮಹಾಶಿವಯೋಗಿಗಳವರ ಕರ್ತೃ ಗದ್ದುಗೆಗೆ ನಿತ್ಯ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಪ್ರಸಾದ ಜರುಗುತ್ತದೆ. ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಗದಗಿನ ಭಾಗದಿಂದ ಭಕ್ತರು ಬರುತ್ತಾರೆ. ಕಣಗಿನಹಾಳ, ಮಜ್ಜಿಗುಡ್ಡ, ಮಾನಬಸೂರು ಮೊದಲಾದ ಗ್ರಾಮದಿಂದ ಜಾತ್ರೆಗೆ ರೊಟ್ಟಿ ಪಲ್ಲೆಯ ಊಟವನ್ನೆ ತಯಾರು ಮಾಡಿಕೊಂಡು ಬಂದು ಜಾತ್ರೆ ಮುಗಿಸಿಕೊಂಡು ಹೋಗುತ್ತಾರೆ. ಸುತ್ತಲಿನ ಗ್ರಾಮದ ಭಕ್ತರು ಆಗಮಿಸುತ್ತಾರೆ. ಅನ್ನ ಸಂತರ್ಪಣೆ ಮತ್ತು ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮ, ರಥೋತ್ಸವ ಇತ್ಯಾದಿ ಕಾರ್ಯಕ್ರಮಗಳು ವೈಭವವಾಗಿ ನೆರವೇರುತ್ತವೆ.

ಮಠದ ವತಿಯಿಂದ ಬಡಮಕ್ಕಳು ಉಚಿತ ಶಿಕ್ಷಣ ಹೊಂದುತ್ತಿದ್ದಾರೆ. ಅನಾಥಮಕ್ಕಳು ಆಶ್ರಯ ಪಡೆಯುತ್ತಿದ್ದಾರೆ. ಮಠದಲ್ಲಿ ಯೋಗಾಸನ, ಧ್ಯಾನ, ವಿಶೇಷ ಪೂಜೆಗಳು ನಡೆಯುತ್ತವೆ. ಈ ಮಠ ಜೀರ್ಣೋದ್ಧಾರಗೊಂಡು ಸುಂದರ ಪೂರ್ಣವಾಗಿದೆ.

ತತ್ತೂರು ವಡ್ಡಿಗೇರಿ : ಇಲ್ಲಿ ಸಿದ್ಧರಾಮ ಮಠ ಇದೆ. ೧೯೭೦ರಲ್ಲಿ ಸಾದಪ್ಪ ಎಂಬ ಶರಣರ ಪ್ರೇರಣೆಯಿಂದ ಮಠ ಸ್ಥಾಪನೆಗೊಂಡಿದೆ. ಪ್ರತಿ ವರ್ಷ ಮಕರ ಸಂಕ್ರಾಂತಿಗೆ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಸಿದ್ಧಾರಾಮ ಮಠದ ಸಂಕ್ರಾಂತಿ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದ ಸಾದಪ್ಪ ಶರಣರು ವಯಸ್ಸಾದಂತೆ ಅಲ್ಲಿಗೆ ಹೋಗಲು ಸಾಧ್ಯವಾಗದಿದ್ದುದ್ದರಿಂದ ತಮ್ಮ ಸ್ವಗ್ರಾಮದಲ್ಲಿ ಸಿದ್ಧರಾಮಮಠ ಸ್ಥಾಪನೆ ಮಾಡಿಸಿದರು. ಧ್ಯಾನ, ವಿಶೇಷ ಪೂಜೆ, ಹಮ್ಮಿಕೊಳ್ಳುವುದರೊಂದಿಗೆ ಪ್ರತಿವರ್ಷ ಮಕರ ಸಂಕ್ರಾಂತಿಯೊಂದು ರಥೋತ್ಸವ, ಅನ್ನಸಂತರ್ಪಣೆ ಸಾಗಿ ಬಂದಿತು. ೩೦ವರ್ಷ ತಂಬೂರಿಯೊಂದಿಗೆ ಧ್ಯಾನ ನಡಿಸಿಕೊಂಡು ಬಂದ ಸಾದಪ್ಪಜ್ಜ ಸಾವಿನ ಅಂತ್ಯದಲ್ಲಿ ಸಂಭವಿಸುವ ಸಾವನ್ನು ಮೊದಲೇ ಅರಿತು ಮಠದಲ್ಲಿ ತಂಬೂರಿಯೊಂದಿಗೆ ಕೈಮುಗಿದು ಧ್ಯಾನಿಸುತ್ತಾ ಕೊನೆ ಉಸಿರು ಬಿಟ್ಟರು. ೧೯೬೭ರಲ್ಲಿ ಐಕ್ಯರಾದನಂತರವೂ ಆ ಊರಿನ ಭಕ್ತರು ಮಠದ ಸಂರಕ್ಷಣೆಯೊಂದಿಗೆ ಪೂಜೆ, ಧ್ಯಾನ ಮತ್ತು ರಥೋತ್ಸವವನ್ನು ವೈಭವಯುತವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ತತ್ತೂರಿನಲ್ಲಿ ಸ್ಥಾಪಿತವಾದ ಈ ಮಠ ವೀರಶೈವ ಮಠವಾಗಿರದೆ ಪರಿಶಿಷ್ಟ ಜಾತಿಯವರಿಂದ ನಿರ್ಮಾಣಗೊಂಡ ಒಂದು ವಿಶಿಷ್ಟ ಮತ್ತು ತಾಲೂಕಿನಲ್ಲಿ ಮೊದಲ ಮಠ ಎಂಬ ಖ್ಯಾತಿಗೆ ಹೆಸರಿಸುವಂತದ್ದು.

ಮಸೀದಿ-ಚರ್ಚ್‌ಗಳು

ತಾಲೂಕಿನಲ್ಲಿ ಮಸೀದಿಗಳು ಮತ್ತು ಚರ್ಚ್‌ಗಳು ಕೆಲವೇ ಊರಿನಲ್ಲಿ ನಿರ್ಮಾಣಗೊಂಡಿವೆ. ತತ್ತೂರು, ನೆಗವಾಡಿ, ಆನವಟ್ಟಿ, ಕುಪ್ಪಗಡ್ಡೆ, ಸೊರಬ ಮೊದಲಾದ ಊರಿನಲ್ಲಿ ಮಸೀದಿಗಳು ಸುಂದರವಾಗಿ ನಿರ್ಮಾಣಗೊಂಡಿವೆ. ಪ್ರತಿವರ್ಷ ಮೋಹರಂ ಆಚರಣೆಗಳು, ಉರುಸುಗಳು ಬಕ್ರೀದ್ ಆಚರಣೆ, ಸೊಗಸಾಗಿ ನಡೆಯುತ್ತವೆ. ಮುಸ್ಲಿಂರು ಐಕ್ಯತೆಯಿಂದ ಹಬ್ಬವನ್ನು ಆಚರಿಸುತ್ತಾರೆ. ಹಿರೇಚೌಟಿಯಲ್ಲಿ "ಜಮಲ್ ಷಾ ಉರುಸು" ಆಚರಣೆಯಲ್ಲಿದೆ.

ಸೊರಬ ತಾಲೂಕಿನಲ್ಲಿ ದೇವಾಲಯ, ಮಸೀದಿಗಳಂತೆ ಕ್ರೈಸ್ತರ ಚರ್ಚ್‌ಗಳು ಇವೆ. ಚರ್ಚ್‌ಗಳು ನಗರ ಪ್ರದೇಶದಲ್ಲಿ ನಿರ್ಮಾಣಗೊಂಡಿವೆ. ಆನವಟ್ಟಿ, ಸೊರಬ ಪಟ್ಟಣದಲ್ಲಿ ನಿರ್ಮಿತವಾದ ಕ್ರೀಸ್ತರಾಜ ಮತ್ತು ಸಂತ ಸೆಬಾಸ್ಟಿಯನ್ ಚರ್ಚ್ ಬಹುಸುಂದರವಾಗಿ ಇವೆ. ರೋಮನ್ ಕ್ಯಾಥೋಲಿಕರಿಗೆ ಸಂಬಂಧಿಸಿದ ಚರ್ಚ್‌ಗಿದೆ. ಅನೇಕ ರೋಮನ್ ಕ್ಯಾಥೋಲಿಕ್ ಕುಟುಂಬಗಳು ನಗರದಲ್ಲಿ ವಾಸವಾಗಿದ್ದಾರೆ. ಪ್ರತಿ ಭಾನುವಾರ ಜನರು ಚರ್ಚ್‌ಗೆ ಆಗಮಿಸುತ್ತಾರೆ. ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಚರ್ಚ್‌ನ ಕಲಾಪಗಳನ್ನು ನಡೆಸುತ್ತಾರೆ.

ಹೀಗೆ ಸೊರಬ ಕ್ಷೇತ್ರದಲ್ಲಿ ಸಕಲ ಧರ್ಮಗಳು ಇರುವುದನ್ನು ಕಾಣುತ್ತೇವೆ. ಜೈನ ಬಸದಿಗಳು, ವೀರಶೈವ ಮಠಗಳು ಪುರಾತನವಾದವುಗಳು. ಇತ್ತೀಚಿಗೆ ಹಿರೇಮಾಗಡಿ - ಮೂಡಿ-ಜಡೆಯ ವೀರಶೈವ ಮಠಗಳು ಪ್ರಸಿದ್ಧಿ ಪಡೆದಿವೆ. ತಾಲೂಕಿನ ಪ್ರತಿಹಳ್ಳಿಗಳಲ್ಲಿ ಒಂದಲ್ಲಾ ಒಂದು ದೇಗುಲಗಳು ಕಂಡುಬರುತ್ತವೆ. ವಿಠಲ ಮಂದಿರ, ಆಂಜನೇಯ ಗುಡಿ, ಶ್ರೀರಾಮಮಂದಿರ, ಬಸವೇಶ್ವರ ದೇವಸ್ಥಾನ, ವೀರಭದ್ರೇಶ್ವರ ಗುಡಿ ಮೊದಲಾದ ಗುಡಿ ಗೋಪುರಗಳನ್ನು ಕಾಣುತ್ತೇವೆ.

ಸ್ಮಾರಕಗಳು

ತಾಲೂಕಿನ ಕೋಟಿಪುರ, ಉದ್ರಿ, ಕುಪ್ಪಗಡ್ಡೆ, ಕುಬಟೂರು ಈ ಗ್ರಾಮದಲ್ಲಿರುವ ಸ್ಮಾರಕಗಳು ಭಾರತ ಸರ್ಕಾರದ ೧೯೫೮ರ ಪ್ರಾಚೀನ ಸ್ಮಾರಕ ಮತ್ತು ಪುರಾತನ ಅವಶೇಷಗಳಿಂದ ಕೂಡಿದ ಸ್ಥಳಗಳಿಗೆ ಸಂಬಂಧಿಸಿದ ಶಾಸನದ ೨೫ನೆಯ ವಿಧಿಗನುಸಾರವಾಗಿ ರಾಷ್ಟ್ರೀಯ ಪ್ರಮುಖ ಸ್ಮಾರಕವೆಂದು ಘೋಷಿಸಲ್ಪಟ್ಟಿವೆ. ಇವುಗಳನ್ನು ಹಾಳಾಗದಂತೆ ಸಂರಕ್ಷಿಸುವ ಜವಾಬ್ದಾರಿಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವಹಿಸಿಕೊಂಡಿದೆ.

ಕೋಟಿಪುರದ ಕೈಟಬೇಶ್ವರ ದೇವಾಲಯ : ತಾಲೂಕಿನ ಕುಬಟೂರಿನಿಂದ ಪೂರ್ವದಿಕ್ಕಿನಲ್ಲಿ ಆನವಟ್ಟಿಯಿಂದ ಹಾನಗಲ್‌ಗೆ ಹೋಗುವ ಮುಖ್ಯರಸ್ತೆಯ ಎಡಭಾಗದಲ್ಲಿ ಎತ್ತರವಾದ ಪ್ರದೇಶದಲ್ಲಿ ಇತಿಹಾಸ

ಪ್ರಸಿದ್ಧವಾದ ಕೈಟಬೇಶ್ವರ ದೇವಾಲಯವಿದೆ. ಪುರಾಣದ ಮಧು-ಕೈಟಬರ ನೆನಪಿಗಾಗಿ ಬನವಾಸಿಯಲ್ಲಿ ಮಧುಕೇಶ್ವರ, ಈ ಕೋಟಿಪುರದಲ್ಲಿ ಕೈಟಬೇಶ್ವರ ದೇಗುಲ ನಿರ್ಮಾಣಗೊಂಡಿತು ಎಂಬುದು ಪ್ರತೀತಿ. ಹೊಯ್ಸಳ ವಾಸ್ತುಶೈಲಿಯಲ್ಲಿರುವ ಈ ದೇವಾಲಯವನ್ನು ಕಟ್ಟಿಸಿದವನು ಪಶ್ಚಿಮ ಚಾಲುಕ್ಯರ ಸಾಮಂತನಾಗಿದ್ದ ವಿನಯಾದಿತ್ಯ. ಆದ್ದರಿಂದ ಚಾಲುಕ್ಯರ ವಾಸ್ತುಶೈಲಿಯ ಲಕ್ಷಣಗಳೂ ಇಲ್ಲಿ ಕಂಡುಬರುತ್ತವೆ. ಕ್ರಿ.ಶ.೧೧೭೦ರಲ್ಲಿ ನಿರ್ಮಾಣವಾಗಿರುವ ಕೈಟಬೇಶ್ವರ ದೇವಾಲಯವನ್ನು ಕ್ರಿ.ಶ.೧೧೮೦ರಲ್ಲಿ ಜೀರ್ಣೋದ್ಧಾರ ಮಾಡಿ ಚಿನ್ನದ ಕಳಶವನ್ನು ಸ್ಥಾಪಿಸಿದ ಸಂಗತಿ ಶಾಸನೋಕ್ತವಾಗಿದೆ.

ಒಂದೇ ಗರ್ಭಗುಡಿ, ಸುಕನಾಸಿ ಮತ್ತು ಉನ್ನತವಾದ ಸ್ಥಂಭಗಳ ಮೇಲೆ ನಿಂತಿರುವ ನವರಂಗ ಮಂಟಪವಿರುವ ಈ ದೇವಾಲಯದ ಹೊರಗೋಡೆಯ ಮೇಲೆ ಅರೆಗಂಬಗಳು, ಅರೆಗೋಪುರಗಳು ಮತ್ತು ಮಂಟಪಗಳ ಅಲಂಕಾರವಿದೆ. ಗರ್ಭಗುಡಿಯ ಮೇಲೆ ಸುಂದರವಾದ ಕಲ್ಲಿನ ಗೋಪುರವಿದೆ. ದೇವಾಲಯದ ಜಗತಿಯು ಕಾಣಿಸುವುದಿಲ್ಲ. ಪಶ್ಚಿಮ ಭಾಗದ ಗೋಡೆಯ ಪೀಠದಲ್ಲಿ ೫ ಪಟ್ಟಿಕೆಗಳಿವೆ. ಆನೇ ಪಟ್ಟಿಯಲ್ಲಿ ಮಾತ್ರ ಅಲಂಕಾರವಿದೆ. ಗಾರೆಯ ನಂದಿ ವಿಗ್ರಹಗಳಿವೆ. ಕಲ್ಲಿನ ಕಳಶಕ್ಕೆ ಬದಲಾಗಿ ಗಾರೆ ಮತ್ತು ಲೋಹದ ಕಳಸವನ್ನು ಇಡಲಾಗಿದೆ. ಶಿಖರದಲ್ಲಿ ಮಹಿಷ ಮರ್ದಿನಿ, ೫ ತಲೆಗಳ ಬೈರವ, ಯೋಗಾಸನಲದಲ್ಲಿರುವ ದಶಭುಜ ಮಹೇಶ್ವರ ವಿಗ್ರಹಗಳಿವೆ.

ಮಂಟಪ ಪೀಠಿಕೆಯಲ್ಲಿ ಹೂವುಗಳ ಮೇಲೆ ಗೋಪುರಗಳ ಮಧ್ಯೆ ಸಿಂಹಮುಖಗಳು, ಲತೆಗಳು ಚಿತ್ರಿತವಾಗಿವೆ. ಮೇಲಿನ ಕಟಾಂಜನಬಾಗಿದ್ದು ಹೂವುಗಳಿಂದ ಅಲಂಕೃತವಾಗಿದೆ. ಸಪ್ತಮಾತೃಕೆ, ಗಣೇಶ, ಮಹಿಷಾಸುರ ಮರ್ದಿನಿ ವಿಗ್ರಹಗಳಿವೆ. ಮಂಟಪದ ಸ್ತಂಭಗಳು ಅತ್ಯಂತ ಕಲಾತ್ಮಕವಾಗಿ ಸುಮಾರು ಹನ್ನೊಂದು ಅಡಿ ಎತ್ತರವಾಗಿವೆ.

ಗಾತ್ರದಲ್ಲಿಯೂ ದೊಡ್ಡದಾಗಿ ಭವ್ಯವಾಗಿವೆ. ಸ್ತಂಭಗಳು ದುಂಡಾಗಿದ್ದು ತಿರುಗಣಿ (ಲೇಪ್) ಯಿಂದ ಮಾಡಿದ್ದು ಹೊಳಪಿನಿಂದ ಆಕರ್ಷಕವಾಗಿದೆ. ನವರಂಗದ ಮಧ್ಯೆ ಸುಂದರ ಕೆತ್ತನೆಯ ಪದ್ಮವಿದೆ. ಮಂಟಪದ ಕಲ್ಲಿನ ತೊಲೆಗಳು ಬೃಹತ್ ಗಾತ್ರದ ಹೂವಿನ ಕೆತ್ತನೆಗಳಿಂದ ಕೂಡಿವೆ. ಸುಕನಾಸಿಯ ದ್ವಾರದ ಮೇಲೆ ಗಜಲಕ್ಷ್ಮಿ ಚಿತ್ರವಿದೆ. ಸುಮಾರು ೪೦೦ ದಳಗಳಿರುವ ಕಮಲದ ಕೆತ್ತನೆ ಅದ್ಭುತವಾದ ಚಾಲುಕ್ಯ ಶಿಲ್ಪಕಲೆಯ ಅತ್ಯುನ್ನತ ಮಾದರಿಯಾಗಿದೆ. ಅಂಚಿನಲ್ಲಿರುವ ಕಲ್ಲಿನ ಜಗತಿಗಳಲ್ಲಿ ೧೬ ಮೂಲೆಯ ಅರೆಸ್ಥಂಭಗಳಿವೆ. ಮಧ್ಯದ ಭುವನೇಶ್ವರಿಯಲ್ಲಿ ಮೂಲೆ ಕಲ್ಲುಗಳ ಮೇಲೆ ಅಷ್ಟದಿಕ್ಪಾಲಕರು, ನರ್ತಕರು ಮತ್ತು ಲತೆಗಳನ್ನು ಅತ್ಯಂತ ಕಲಾತ್ಮಕವಾಗಿ ಕೆತ್ತಲಾಗಿದೆ. ಮಂಟಪದಲ್ಲಿ ನಂದಿ ವಿಗ್ರಹವಿದೆ. ಎದುರುಭಾಗದ ಮೇಲಿರುವ ಕಲ್ಲಿನ ಕೈಪಿಡಿ ಗೋಡೆಯಲ್ಲಿ ಕೀರ್ತಿಮುಖಗಳೂ, ದೇವತಾ ವಿಗ್ರಹಗಳು, ಮಿಥುನ ಶಿಲ್ಪಗಳೂ ಇವೆ. ಅತ್ಯಂತ ಉನ್ನತವಾಗಿ ಇದ್ದಿರಬಹುದಾದ ಮಹಾದ್ವಾರದ ಪಳೆಯುಳಿಕೆಗಳು ದೇವಾಲಯ ಆವರಣದಲ್ಲಿ ಅನಾಥವಾಗಿ ಅಲ್ಲಲ್ಲಿ ಬಿದ್ದಿವೆ. ದೊಡ್ಡ ಶಿವಲಿಂಗ ಮತ್ತು ಪಾಣಿಪೀಠಗಳೂ

ದೇವಾಲಯದ ಹಿಂಭಾಗದ ಬಯಲಿನಲ್ಲಿ ಬಿಸಿಲು ಮಳೆಗೆ ಅನಾಥವಾಗಿ ಮೈ ತೆರೆದುಕೊಂಡು ಬಿದ್ದಿವೆ. ಕೈಟಭೇಶ್ವರ ದೇವಾಲಯದಲ್ಲಿರುವ ಶಿವಲಿಂಗವು ಎತ್ತರವಾದ ಪಾಣಿಪೀಠದ ಮೇಲೆ ಭವ್ಯವಾಗಿವೆ.

ಈ ದೇವಾಲಯದ ಮಂಟಪದ ಭಾಗದಲ್ಲಿ ೩-೪ ಬೃಹತ್ ತೊಲೆಗಳು ಬಿರುಕು ಬಂದಿವೆ. ಮಳೆ ನೀರು ಒಳಗೆ ಜಿನುಗುತ್ತಿದೆ. ಇದರ ಸಂರಕ್ಷಣಾ ಕಾರ್ಯವನ್ನು ಕೇಂದ್ರ ಪುರಾತತ್ವ ಇಲಾಖೆಯು ಶೀಘ್ರುವಾಗಿ ಕೈಗೆತ್ತಿಕೊಳ್ಳಬೇಕಾಗಿದೆ.

ಕುಬಟೂರಿನ ರಾಮೇಶ್ವರ ದೇಗುಲ : ಶಾಸನದನ್ವಯ, ಇಲ್ಲಿಯ ಅವಶೇಷಗಳಿಂದ ಇದು ರಾಷ್ಟ್ರಕೂಟರ ಕಾಲದ ದೇಗುಲವೆಂದು ಗುರುತಿಸಬಹುದು. ಇತ್ತೀಚಿಗೆ ಇದು ಪ್ರಾಚ್ಯ ಇಲಾಖೆಯವರ ಕೃಪೆಯಿಂದಾಗಿ ಸಂಪೂರ್ಣ ಜೀರ್ಣೋದ್ದಾರಗೊಂಡಿದೆ.

ರಾಮೇಶ್ವರ ದೇವಾಲಯದ ಒಳ ಚಾವಣಿಯಲ್ಲಿ ಅಷ್ಟದಿಕ್ಪಾಲಕರ ನಡುವಿನ ತಾಂಡವಮೂರ್ತಿ ಒಂದು ಸುಂದರವಾದ ಕಲಾತ್ಮಕ ಕೃತಿ. ನವರಂಗದಲ್ಲಿರುವ ಸಪ್ತಮಾತೃಕೆಯರು, ಮಹಿಷಾಸುರ ಮರ್ದಿನಿ, ಗರ್ಭಗೃಹದ ಮುಂದೆ ಇರುವ ಚಂದ್ರಶಿಲೆ ಹಾಗೂ ನಂದಿ ಮಂಟಪದಲ್ಲಿರುವ ನಂದಿ ವಿಗ್ರಹಗಳು ರಾಷ್ಟ್ರಕೂಟರ ಶೈಲಿಯಲ್ಲಿವೆ. ಇದರೊಂದಿಗೆ ಇಲ್ಲಿ ಹೊರ ಆವರಣದಲ್ಲಿ ಅನೇಕ ಶಾಸನ, ವೀರಗಲ್ಲು, ನಾಗರಕಲ್ಲುಗಳನ್ನು ಜೋಡಿಸಲಾಗಿದೆ.

ಕುಪ್ಪಗಡ್ಡೆಯ ರಾಮೇಶ್ವರ ದೇವಾಲಯ : ಇದು ಅತ್ಯಂತ ಭವ್ಯವಾದದ್ದು. ಮನಮನೆ ವಂಶದ ರಾಮನೆಂಬಾತ ಈ ದೇವಾಲಯವನ್ನು ನಿರ್ಮಿಸಿದನೆಂಬ ವಿಷಯವನ್ನು ಇಲ್ಲಿಯೇ ಇರುವ ಒಂದು ಶಾಸನವು ತಿಳಿಯಪಡಿಸುತ್ತದೆ. ಈ ಶಾಸನವು ಕ್ರಿ.ಶ.೧೧೮೪ಕ್ಕೆ ಸೇರಿದ್ದಾಗಿದೆ.[೪]

ದೇವಾಲಯದಲ್ಲಿ ಗರ್ಭಗುಡಿ, ಸುಖನಾಸಿಯಲ್ಲದೆ ಐದು ಅಂಗಣಗಳ ೨೪ ಕಂಬಗಳ ವಿಶಾಲವಾದ ಒಂದು ಸಭಾಮಂಟಪವು ಇದರಲ್ಲಿದೆ. ಅಂತರಾಳದ ಬಾಗಿಲವಾಡದ ಕೆತ್ತನೆಗಳು, ಸುಂದರ ಜಾಲಂಧ್ರಗಳು, ಸೂಕ್ಷ್ಮವಾಗಿ ಕೆತ್ತಲಾದ ಒಂದು ನಂದಿಯ ವಿಗ್ರಹ. ಇವೆಲ್ಲ ಈ ದೇವಾಲಯದ ವೈಶಿಷ್ಟ್ಯಗಳು.

ಕುಪ್ಪಗಡ್ಡೆಯಲ್ಲಿ ವೇಣುಗೋಪಾಲ, ನರಸಿಂಹ ದೇವಾಲಯಗಳೂ ಇವೆ. ನರಸಿಂಹ ದೇವಾಲಯದ ಅನಂತಶಯನಮೂರ್ತಿ ೫-೭ನೇ ಶತಮಾನದ್ದಿರಬಹುದು ಮತ್ತು ಇಲ್ಲಿಯ ಗಜಲಕ್ಷ್ಮಿ ಕೂಡ ಆರನೆಯ ಶತಮಾನದ್ದಿರಬಹುದೆಂದು ವಿದ್ವಾಂಸರ ಅಭಿಪ್ರಾಯ.

ಪುರದ ಸೋಮೇಶ್ವರ ದೇಗುಲ : ಇಲ್ಲಿಯ ಊರ ಮಧ್ಯದಲ್ಲಿ ತುಸು ಎತ್ತರದ ದಿಬ್ಬದ ಮೇಲೆ ದೊಡ್ಡದಾದ ಪ್ರಾಂಗಣ ಮತ್ತು ಚಂದ್ರಶಾಲೆಯ ಕುರುಹು ಇರುವ ಆವರಣದ ನಡುವೆ ನಕ್ಷತ್ರಾಕಾರದ

ತಳಪಾಯವನ್ನೊಳಗೊಂಡ ಮುಖಮಂಟಪವು, ನವರಂಗ, ಸುಖನಾಸಿ, ಗರ್ಭಗೃಹ, ಕದಂಬ ನಾಗರಶೈಲಿಯ ಗೋಪುರವಿದ್ದಿರಬಹುದಾದ ಮಧ್ಯಮ ಅಳತೆಯ ದೇಗುಲವೇ ಸೋಮೇಶ್ವರ ದೇಗುಲ, ಇದೇ ಆವರಣದಲ್ಲಿ ಇನ್ನೂ ಅನೇಕ ಚಿಕ್ಕ-ಚಿಕ್ಕ ಜಂಬಿಟ್ಟಿಗೆಯ ಗುಡಿಗಳು, ಮಾಸ್ತಿಕಲ್ಲು, ಶಾಸನಕಲ್ಲು, ಪಾಳುಗೊಂಡ ದೇಗುಲದ ಬಿಡಿಭಾಗಗಳು ಇವೆ.

ಹುರಳಿಯ ಹನುಮಂತಗುಡಿ : ಇದು ವಿಜಯನಗರದ ಕಾಲದ್ದು. ನವರಂಗ, ಗರ್ಭಗೃಹ, ಸುಖನಾಸಿಯನ್ನು ಹೊಂದಿರುವ ಈ ದೇಗುಲದ ಪೂರ್ವ, ಉತ್ತರ ಭಾಗಕ್ಕೆ ಪ್ರವೇಶ ದ್ವಾರಗಳಿವೆ. ಈ ಪ್ರವೇಶ ದ್ವಾರದ ಶಾಖೆಗಳಲ್ಲಿ ಉತ್ತಮ ಕುಸುರಿ ಕೆತ್ತನೆ ಇದೆ. ನವರಂಗದಲ್ಲಿನ ದುಂಡು ಕಡೆದ ಕಂಬದಲ್ಲಿ ಪತ್ರ. ರೇಖಾ ವಿನ್ಯಾಸದ ವಿವಿಧ ಪಕ್ಷಿ, ಗರುಡ, ಗಣಪತಿ, ಕೃಷ್ಣ ಇನ್ನೂ ಮುಂತಾದ ರೇಖಾ ಚಿತ್ರಣಗಳಿವೆ. ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರ ಚಿತ್ರಣವಿರುವ ಭುವನೇಶ್ವರಿ ಫಲಕ ಮನಸೆಳೆಯುತ್ತಿದೆ. ಇಲ್ಲಿಯೇ ಸುಖನಾಸಿಯ ಪ್ರವೇಶ ದ್ವಾರದ ಅಕ್ಕ-ಪಕ್ಕ ಬೃಹತ್ ವೈಷ್ಣವ ಯಕ್ಷದ್ವಾರಪಾಲಕರು ಗಮನ ಸೆಳೆಯುತ್ತಾರೆ. ಗರ್ಭಗೃಹದಲ್ಲಿ ಸುಮಾರು ೬ ಅಡಿ ಎತ್ತರದ ಒಂದೇ ಕಲ್ಲಿನಲ್ಲಿ ಕೆತ್ತಲಾದ ಹನುಮನ ವಿಗ್ರಹವಿದೆ. ಅಲ್ಲಲ್ಲಿ ದೇವಾನು ದೇವತೆಗಳ ಉಬ್ಬುಶಿಲ್ಪ ಮುಸುಕು-ಮುಸುಕಾಗಿ ಗೋಚರಿಸುತ್ತದೆ. ಇದೇ ರೀತಿ ಹೊರಭಿತ್ತಿಯಲ್ಲೂ ಮಿಥುನ ಮುಂತಾದ ಅರೆಬರೆ ಉಬ್ಬುಶಿಲ್ಪ ಕಾಣಸಿಗುತ್ತವೆ. ಇದೇ ಊರಿನ ಒಂದು ಕೆರೆಯ ಏರಿಯ ಮೇಲೆ ಕಲ್ಲೇಶ್ವರ ದೇಗುಲವಿದೆ.

ಚಂದ್ರಗುತ್ತಿಯ ರೇಣುಕಾಂಬ ಗುಹಾಂತರ ದೇಗುಲ : ವಾಸ್ತುಶಿಲ್ಪದ ದೃಷ್ಟಿಯಿಂದ ಮಹೋನ್ನತ ಕೃತಿಯನ್ನೊಳಗೊಂಡ ಶಿಲಾಮಯವಾದ ಈ ದೇಗುಲ ಗುಹೆಯೋಪಾದಿಯ ಗರ್ಭಗುಡಿಯ ಮುಂಭಾಗಕ್ಕೆ ರಚಿತಗೊಂಡಿದೆ. ಆಯತಾಕಾರದ ತಳಪಾಯವನ್ನೊಳ್ಳ ಈ ದೇಗುಲಕ್ಕೆ ಗೋಪುರವಿಲ್ಲ. ಮೇಲ್ಛಾವಣಿಗೆ ಹಾಸುಗಲ್ಲಿನ ಹಾಸು ಹಾಸಲಾಗಿದ್ದು ಗರ್ಭಗುಡಿಯ ಮೇಲಿನ ಬಂಡೆಯ ಬನದಲ್ಲಿ ಶಿಖರ ಕಳಸವನ್ನು ಕಟ್ಟಲಾಗಿರುವುದು ವಿಶೇಷ. ಮೂರು ದಿಕ್ಕಿನಿಂದ ಪ್ರವೇಶವಿರುವ ಈ ದೇಗುಲ ಕಲಾತ್ಮಕ ದೃಷ್ಟಿಯಿಂದಲೂ ಉತ್ತಮ ಸ್ಥಾನದಲ್ಲಿದೆ. ದೇಗುಲದ ಹೊರ ಪಟ್ಟಿಕೆಯಲ್ಲಿ ಉಬ್ಬು ಶಿಲ್ಪಗಳಲ್ಲಿ ಸಿಂಹ, ಹಂಸಗಳ ಸಾಲು, ಯುದ್ಧ ನಿರತ, ನಾಟ್ಯನಿರತ ಹಾಗೂ ಮಿಥುನ ಶಿಲ್ಪಗಳ ಚಿತ್ರಣಗಳಿವೆ. ನವರಂಗದ ಕೆಲಕಂಬಗಳನ್ನು ವಿನ್ಯಾಸಗೊಳಿಸಿ ಕಲಾತ್ಮಕವಾಗಿ ಕಡೆಯಲಾಗಿದೆ. ನವರಂಗದ ಮೇಲ್ಛಾವಣಿಯ ತಳಭಾಗಕ್ಕೆ ಸುಂದರ ಕಮಲಗಳ ಚಿತ್ತಾರ ಒಂದು ಭಾಗದಲ್ಲಿ, ಇನ್ನೊಂದು ಭಾಗದಲ್ಲಿ ದೇವಾನುದೇವತೆಗಳ ಉಬ್ಬುಶಿಲ್ಪದೊಂದಿಗೆ ಮುಖಮಂಟಪದ ಪ್ರವೇಶ ದ್ವಾರದ ಸುತ್ತಲೂ ಕುಸುರಿ ಕೆಲಸಗಳ ನಿರ್ಮಾಣವಿದೆ. ಈ ದ್ವಾರದ ಎಡ-ಬಲದಲ್ಲಿ ಅನ್ನಪೂರ್ಣೆ, ವಿನಾಯಕನ ಶಿಲಾಪ್ರತಿಮೆ ಇದ್ದು ಅಲ್ಲೇ ಕೆಳಭಾಗದಲ್ಲಿ ಬೇರೆಡೆಯಿಂದ ತಂದ ನಾಗನ, ಮಹಿಷಮರ್ಧಿನಿಯ ಉತ್ತಮ ಕೆತ್ತನೆಯುಳ್ಳ ಪ್ರತಿಮೆಗಳಿವೆ. ಗರ್ಭಗುಡಿಯ ಬಂಡಿಯ ಮಧ್ಯದ ಗುಹೆಯಾದ್ದರಿಂದ ಇಲ್ಲಿ ಕೆತ್ತನೆಗಳೇನೂ ಇಲ್ಲ. ರೇಣುಕಾ ದೇವತೆ ಎನ್ನಲಾಗುತ್ತಿರುವ ಇಲ್ಲಿಯ ಉದ್ಭವರೂಪಿ ಅನೇಕ ಭಕ್ತಾದಿಗಳಿಗೆ ಪರಮ ಪೂಜ್ಯಳೂ ಆಗಿದ್ದಾಳೆ.

ಇಲ್ಲಿ ೮ ರಿಂದ ೧೨ನೇ ಶತಮಾನದ್ದು ಎಂದು ಹೇಳುವ ಹಿಂದೂ ವಾಸ್ತುವಿನ ಕೋಟೆ ಇದೆ. ಇದನ್ನು ಕದಂಬರು ನಿರ್ಮಿಸಿದರೆಂಬ ಮಾತಿದೆ. ಆದರೆ ಖಚಿತ ಮಾಹಿತಿ ಇಲ್ಲದಾಗಿದೆ. ಇಲ್ಲಿನ ಏಳು ಸುತ್ತಿನ ಕೋಟೆಯಲ್ಲಿ ದರ್ಬಾರು ಸಭಾಂಗಣ, ಕುದುರೆ ಲಾಯ, ಮದ್ದಿನ ಮನೆ[೫೯] ಇತ್ಯಾದಿ ಸ್ಮಾರಕಗಳು ಇವೆ.

ಬಾರಂಗಿ : ಕಲ್ಲಪ್ಪ ದೇಗುಲ - ನಾರಾಯಣ ದೇಗುಲಗಳು ಇವೆ. ಇವು ರಾಷ್ಟ್ರಕೂಟರ ಕಾಲ (೧೦ ನೇ ಶತಮಾನ)ಕ್ಕೆ ಸೇರಿದವು ದೇವಾಲಯದ ಹೊರ ಆವರಣದಲ್ಲಿ ೧೫ ಗೋಸಾಸಗಳು ಇವೆ. ಕೆಲವದರಲ್ಲಿ ಬರಹವಿದೆ. ಒಂದು ಕಲ್ಲಿನಲ್ಲಿ ನಾಯಿ, ಹಂದಿಯೊಡನೆ ಹೋರಾಡಿ ಮಡಿದ ಚಿತ್ರಣವಿದೆ. ಇದು ನಾಯಿಯ ನೆನಪಿನ ಸ್ಮಾರಕ.[೬೦] ಇಂತಹ ಪ್ರಾಣಿ ಸ್ಮಾರಕಗಳು ತಾಲೂಕಿನಲ್ಲಿ ಪತ್ತೆಯಾಗಿವೆ. ಇಲ್ಲಿ ಅನೇಕ ಅವಶೇಷಗಳು ಪತ್ತೆಯಾಗಿವೆ. ಇಲ್ಲಿ ಷಣ್ಮುಖನ ಪ್ರತಿಮೆಯ ರುಂಡ-ಮುಂಡ ಬೇರೆಯಾಗಿದೆ. ಆವರಣದಲ್ಲಿ ಮೂರು ಗೋಸಾಸ ಎರಡು ವೀರಗಲ್ಲು ಇವೆ.

ಉದ್ರಿ : ಉದ್ರಿ ಊರಲ್ಲಿ ಕೋಟೆ, ಶಾಸನ, ವೀರಗಲ್ಲು, ಹಾಳು ಗುಡಿಗಳೇ ತುಂಬಿಕೊಂಡಿವೆ. ಉದ್ರಿಯ ಈಶ್ವರ ಗುಡಿಯಲ್ಲಿ ಗರ್ಭಗುಡಿ, ಸುಖನಾಸಿ ಹಾಗೂ ನವರಂಗಗಳಿವೆ. ಈಶ್ವರ ಗುಡಿಯಲ್ಲಿನ ಷಣ್ಮುಖ, ಗಣಪತಿ, ಯಕ್ಷಿಣಿ, ಸಪ್ತಮಾತೃಕೆಯರ ವಿಗ್ರಹಗಳು ಸುಂದರವಾಗಿವೆ.

ಹೀಗೆ ತಾಲೂಕಿನಲ್ಲಿ ಸ್ಮಾರಕಗಳು ಇರುವುದು ಪತ್ತೆಯಾದ್ದರಿಂದ ಐತಿಹಾಸಿಕ ವಿಚಾರಗಳು ಬೆಳಕಿಗೆ ಬಂದವು. ಕಲಾತ್ಮಕ ಕೆತ್ತನೆ ಹೊಂದಿರುವ ಈ ಸ್ಮಾರಕಗಳಲ್ಲಿ ಕೆಲವನ್ನು ಮಾತ್ರ ಪ್ರಾಚ್ಯ ಇಲಾಖೆಯು ಸಂರಕ್ಷಿಸಲು ಜವಾಬ್ದಾರಿ ಹೊಂದಿದೆ. ಇನ್ನು ಅನೇಕ ಸ್ಮಾರಕಗಳು ಪ್ರಾಚ್ಯ ಇಲಾಖೆಯ ವ್ಯಾಪ್ತಿಗೆ ಸೇರಬೇಕಾಗಿವೆ. ಇಲ್ಲಿಯ ಮುಖ್ಯ ಸ್ಮಾರಕ ಕೇಂದ್ರಗಳನ್ನು ಪ್ರವಾಸಿ ತಾಣವನ್ನಾಗಿಸಲು ಸಾಧ್ಯವಿದೆ. ಇದನ್ನು ನಮ್ಮ ಸರ್ಕಾರ ಗಮನಿಸಿ ಈ ನಿಟ್ಟಿನಲ್ಲಿ ಶ್ರಮಿಸಿ, ವ್ಯವಸ್ಥೆಗೊಳಿಸಬೇಕು.

೫.೨. ಪ್ರಾಕೃತಿಕ ಕೇಂದ್ರಗಳು

ಗುಡವಿ ಪಕ್ಷಿಧಾಮ

ಸೊರಬ-ಬನವಾಸಿ ರಸ್ತೆಯಲ್ಲಿ ಸೊರಬದಿಂದ ಸುಮಾರು ೧೬ ಕಿ.ಮೀ.ದೂರದಲ್ಲಿರುವ ಗುಡವಿ ಪಕ್ಷಿಧಾಮಕ್ಕೆ ದೇಶ ವಿದೇಶಗಳಿಂದ ಸುಮಾರು ೧೯೧ ಪ್ರಭೇದದ ಪಕ್ಷಿಗಳು ಸಂತಾನೋತ್ಪತ್ತಿಗಾಗಿ ವಲಸೆ ಬರುತ್ತವೆ. ಇಲ್ಲಿ ಪಕ್ಷಿ ವೀಕ್ಷಣೆಗೆ ಉತ್ತಮ ಸಮಯ ಜೂನ್‌ನಿಂದ ನವೆಂಬರ್, ವೀಕ್ಷಿಸಲು ಎರಡು ಗೋಪುರಗಳಿವೆ. ಪಕ್ಷಿಧಾಮದವರೆಗೆ ರಸ್ತೆ ಸಂಪರ್ಕ ಇದೆ.

ಅಡವಿ ಮಧ್ಯದಲ್ಲಿರುವ ಗುಡವಿ ಪಕ್ಷಿಧಾಮ ಕರ್ನಾಟಕದ ಐದು ಪ್ರಮುಖ ಪಕ್ಷಿಧಾಮಗಳಲ್ಲಿ ಒಂದೆಂಬ ಕೀರ್ತಿ ಪಡೆದಿದೆ. ಸುಮಾರು ಎರಡು ನೂರು ವರ್ಷಗಳ ಇತಿಹಾಸವಿರುವ ಪುರಾತನ ಕೆರೆಯಲ್ಲಿ

ಬೆಳೆದ ಮರಗಳ ಮೇಲೆ ನೆಮ್ಮದಿಯ ನೆಲೆಕಂಡ ಬಾನಾಡಿಗಳ ತಾಣ ಈ ಗುಡವಿ ೭೩.೬೮ ಹೆಕ್ಟೇರುಗಳ ವಿಸ್ತೀರ್ಣ ಹೊಂದಿದ ಈ ಪಕ್ಷಿಧಾಮದಲ್ಲಿ ೩೦ ಹೆಕ್ಟೇರುಗಳ ನೀರಿನಾಶ್ರಯವಿದೆ.[೬] ನೂರಾರು ವರ್ಷಗಳಿಂದ ಸಹಜ ನೆಲೆ ಇದಾಗಿರುವುದನ್ನು ಇತ್ತೀಚಿಗೆ ಅರಣ್ಯ ಇಲಾಖೆ ಅಭಿವೃದ್ಧಿಪಡಿಸಿ ಪಕ್ಷಿಗಳಿಗೆ ರಕ್ಷಣೆ ನೀಡಿ ಒಂದು ಉತ್ತಮ ಪಕ್ಷಿಧಾಮವನ್ನಾಗಿಸಿದೆ.

ಈ ಬಾನಾಡಿಗಳಿಗೆ ಆಶ್ರಯ ನೀಡುವಲ್ಲಿ ೧೭ ಜಾತಿಯ ಮರಗಳು ೧೨ ಜಾತಿಯ ಜಲಸಸ್ಯಗಳು ಇಲ್ಲಿ ಶ್ರಮಿಸಿವೆ. ಪ್ರಕೃತಿಯ ರಕ್ಷಣೆ ಈ ಹಕ್ಕಿಗಳಿಗೆ ಇಲ್ಲಿ ದೊರೆತಿರುವುದಲ್ಲದೆ, ಸುತ್ತಮುತ್ತಲ ಕಾಡಮರಗಳು ಹಾಗೂ ಭತ್ತದ ಗದ್ದೆಗಳು ಈ ಪಕ್ಷಿಗಳಿಗೆ ಆಹಾರದ ಮೂಲವಾಗಿರುವುದು, ವಿಶಿಷ್ಟವಾಗಿದೆ.

ಪ್ರಕೃತಿದತ್ತವಾಗಿ ನಿರ್ಮಾಣಗೊಂಡ ಕೆರೆ, ಅದರ ಮಧ್ಯದಲ್ಲಿ ಬೆಳೆದು ನಿಂತ ಮರಗಳು ಸಹಜವಾಗಿ ಭದ್ರನೆಲೆಯನ್ನೊದಗಿಸಿರುವುದರಿಂದ ಪ್ರತಿ ವರುಷ ಇಲ್ಲಿಗೆ ಬರುತ್ತಿರುವ ಹಕ್ಕಿಗಳ ಸಂಖ್ಯೆ ಅಧಿಕವಾಗುತ್ತಿದೆ. ವೈಟ್ ಪಿಬೀಸ್, ಸ್ಪೂನ್ ಬಿಲ್, ಈಗ್ರೇಡ್, ಕಾರ್ಮೊರೆಂಟ್, ಸ್ನೇಕ್ ಬರ್ಡ್, ಹೆರಾನ್ ಮುಂತಾದ ಪ್ರಮುಖ ಜಾತಿಯ ಪಕ್ಷಿಗಳು ಹೇರಳವಾಗಿ ಕಂಡುಬರುತ್ತವೆ. ಬೆಳಗಿನ ಆರಕ್ಕೆಲ್ಲಾ ಇಲ್ಲಿ ಪಕ್ಷಿಗಳ ಚಿಲಿಪಿಲಿ, ತಮ್ಮ ಮರಿಗಳನ್ನು ಸಂತೈಸಿ ಆಹಾರಕ್ಕೆ ಹಾರಿ ದೂರ ಸಾಗುವ ಸಿದ್ಧತೆ ಕಂಡುಬರುತ್ತದೆ. ಸಂಜೆಯಾಗುತ್ತ ಬಂದಂತೆ ತಾಯಿ ಹಕ್ಕಿಗಾಗಿ ರೆಂಬೆಯ ಮೇಲೆ ಕುಳಿತ ಮರಿಹಕ್ಕಿಗಳು ತವಕದಿಂದ ಕಾಯುವ ದೃಶ್ಯ, ಬಂದಕೂಡಲೇ ಮರಿಗಳಿಗೆ ಸಣ್ಣಮೀನು, ಹುಳಹುಪ್ಪಟೆಗಳನ್ನು ಪ್ರೀತಿಯಿಂದುಣಿಸುವ ಇವುಗಳ ರೀತಿ ಮಮತೆಯ ಹೊಸ ದೃಶ್ಯವನ್ನೇ ಸೃಷ್ಟಿ ಮಾಡುತ್ತವೆ.

ಪಕ್ಷಿ ವೀಕ್ಷಣೆ ಒಂದು ಉತ್ತಮ ಹವ್ಯಾಸವಾಗಿರುವ ಇಂದಿನ ದಿನಗಳಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬದ ಈ ಗುಡವಿ ಅನೇಕರನ್ನು ಆಕರ್ಷಿಸುತ್ತಿದೆ. ಆ ಋತುವಿನಲ್ಲಿ ಸುಮಾರು ೧೦೦೦ಕ್ಕೂ ಮಿಗಿಲಾದ ಪ್ರೇಕ್ಷಕರು ಇಲ್ಲಿ ಬಂದು ಬಾನಾಡಿಗಳ ಸೌಂದರ್ಯ ಕಂಡು ಮನದಣಿಯುತ್ತಾರೆ. ಹೀಗೆ ಗುಡವಿ ಪ್ರಕೃತಿಯ ಸುಂದರ ನೋಟ ತಾಲೂಕಿನ ಹೆಸರನ್ನು ಪ್ರಖ್ಯಾತಿಗೊಳಿಸಿದೆ.

ರೇಣುಕೆಯ ನಾಡು ಚಂದ್ರಗುತ್ತಿ

ಇತಿಹಾಸ ಪ್ರಸಿದ್ಧಿಯಾದ ಚಂದ್ರಗುತ್ತಿ ತಾಲೂಕಿನ ನಿಸರ್ಗದ ನೆಲೆಗಳಲ್ಲೊಂದಾಗಿದೆ. ಸುತ್ತ ಕಾಡಿನಿಂದಾವೃತವಾದ ಈ ಊರನ್ನು ತಲುಪಲು ಸೊರಬದಿಂದ ೧೬ ಕಿ.ಮೀಟರ್‌ಗಳ ದೂರ ಪ್ರಯಾಣಿಸಬೇಕು. ಭತ್ತದ ಗದ್ದೆಗಳ, ವಿಶಾಲ ಬಯಲಿನ ನಡುವೆ ಸಾಗಿದ ದಾರಿ ಸಮುದ್ರಮಟ್ಟದಿಂದ ೮೪೮ ಮೀಟರ್ ಎತ್ತರದ ಬೆಟ್ಟದ ಬಳಿ ನಿಲ್ಲುತ್ತದೆ. ಇದು ತಾಲೂಕಿನ ಎತ್ತರವಾದ ಬೆಟ್ಟ, ಬೆಟ್ಟದ ಮೇಲಿನ ಬಾರೀ ವನ ಸಂಪತ್ತು, ನೆರಳೆ, ಶಿವನಿ, ಹೊನ್ನೆ, ಮತ್ತಿ ಬಿದಿರು ಇತ್ಯಾದಿ ಪಲ್ಲಕ್ಕಿಗಳಿಗೆ

ಬೇಕಾಗುವ ಬಿದಿರು ದೊರೆಯುತ್ತದೆ.[೫] ಅಲ್ಲಿಂದ ಕಾಣುವ ದೃಶ್ಯ ಮನೋಹರ. ವರದಾ ನದಿಯ ದಂಡೆಯ ಮೇಲಿರುವ ಈ ಊರು ತುಂಬಾ ಪ್ರಸಿದ್ಧ. ಚಂದ್ರಗುತ್ತಿ ಒಂದು ಉತ್ತಮ ಪ್ರವಾಸಿ ಕೇಂದ್ರ ಎಂದು ಪ್ರವಾಸಿ ಬುಕಾನನ್ ಇದರ ಸೊಬಗನ್ನು ತನ್ನ ಪ್ರವಾಸ ಗ್ರಂಥದಲ್ಲಿ ಬಣ್ಣಿಸಿದ್ದಾರೆ.

ಇಲ್ಲಿಯ ಬೆಟ್ಟಗಳಲ್ಲಿ ಚಂದ್ರಗುತ್ತಿಯ ಕಲ್ಲೆಂದೇ ಹೆಸರಾದ ಗ್ರಾನೈಟಿನ ಬೆಟ್ಟ ಇಲ್ಲಿದೆ. ಬೆಟ್ಟದ ಕಲ್ಲುಗಳಿಗೆ ಜೋತು ಬಿದ್ದ ಹೆಜ್ಜೇನುಗಳು ಸಹ ಆಕರ್ಷಣೀಯವಾಗಿವೆ. ದೂರದಿಂದ ನೋಡಿದರೆ ಇಡೀ ಬೆಟ್ಟವೇ ಶಿವಲಿಂಗದಂತೆ ಪಾಣಿ ಪೀಠದಂತೆ ಕಂಡುಬರುತ್ತದೆ.

ಇಲ್ಲಿ ಇರುವ ಕೋಟೆಯ ಮೇಲ್ತುದಿಯನ್ನೇರಿ ವೀಕ್ಷಿಸಿದಾಗ ಸುಂದರ, ಮನಮೋಹಕ ನೋಟ ಮನಸೆಳೆಯುತ್ತದೆ. ಏಳುಸುತ್ತಿನ ಕೋಟೆಯ ಬೆಟ್ಟದ ತುದಿಯನ್ನು ಏರಿದಾಗ ಬಂಡೆಯಲ್ಲಿ ಕೊರೆದು ಮಾಡಿದ ನೀರಿನ ಭಾವಿಯೊಂದು ಕಂಡುಬರುತ್ತದೆ.

ಚಂದ್ರಗುತ್ತಿ ಪೌರಾಣಿಕವಾಗಿ, ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿರುವಂತೆ ಪ್ರಶಾಂತ ಪ್ರಕೃತಿ ಯನ್ನಾಶಿಸುವ ಪ್ರಕೃತಿ ಪ್ರೇಮಿಗಳಿಗೂ ಆನಂದದ ನೆಲೆಯಾಗಿ ದೈವಿ ಭಕ್ತರಿಗೆ ಭಕ್ತಿಯ ನೆಲೆವೀಡಾಗಿ ಸಾಹಸ ಪ್ರಿಯರಿಗೆ ಹಲವು ಸವಾಲನ್ನೆಸೆಯುವ ತಾಣವಾಗಿ ಶೋಭಿಸುತ್ತಿದೆ. ಬೆತ್ತಲೆ ಸೇವೆಯ ಹಿನ್ನೆಲೆಯಲ್ಲಿ ಈ ಗುತ್ತಿ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಇತ್ತೀಚಿಗೆ ಚಂದ್ರಗುತ್ತಿ ಸುತ್ತಮುತ್ತಲಿನ ಗುಡ್ಡಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಇಲ್ಲಿಯ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವಂತಿಲ್ಲ ಎಂದು ೨೦೦೪ರಲ್ಲಿಯೇ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ ಈ ಆದೇಶಕ್ಕೂ ಇಲ್ಲಿ ಬಂಡೆ ಒಡೆಯುವುದಕ್ಕೂ ಸಂಬಂಧವಿಲ್ಲದಾಗಿದೆ. ಹಲವು ವರ್ಷಗಳಿಂದ ಬಂಡೆಗಳನ್ನು ಸ್ಫೋಟಕ ಬಳಸಿ ಒಡೆದು ಸಾಗಿಸುವ ಪ್ರಕ್ರಿಯೆ ಅವ್ಯಾಹತ ನಡೆಯುತ್ತಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಇತ್ತ ಲಕ್ಷ್ಯ ವಹಿಸಬೇಕು.[೬]

ಕುಬಟೂರು

ಚಂದ್ರಹಾಸನ ಕುಂತಲನಗರ ಎಂದು ಕರೆಯಲಾಗುವ ಕುಬಟೂರು ಸೊರಬದಿಂದ ೨೯ ಕಿಲೋ ಮೀಟರುಗಳಷ್ಟು ದೂರದ ವಿಶಾಲವಾದ ಪ್ರದೇಶವಾಗಿದೆ. ಈ ಊರನ್ನು ಶಾಸನಗಳು ಮನದಣಿಯ ಬಣ್ಣಿಸಿವೆ. ಇಲ್ಲಿಯ ನಂದನವನಗಳಲ್ಲಿ ಗಿಳಿಗಳು ದುಂಬಿಗಳು ಹಾಡಿ ಕೊಂಡಿದ್ದವೆಂದೂ, ಬಿಳಿಕೊಳಗಳಲ್ಲಿ ಹಂಸಗಳು ತೇಲಾಡುತ್ತಿದ್ದವೆಂದೂ, ಕೋಗಿಲೆಗಳ ಇಂಚರ ಸದಾ ಕೇಳಿ ಬರುತ್ತಿತ್ತೆಂದೂ, ಶೋಭಿಸುವ ದೇವಾಲಯಗಳು ಇಲ್ಲಿದ್ದವೆಂದೂ ಶಾಸನ ಕವಿಗಳು ಹೇಳಿದ್ದಾರೆ.

ಈಗಲೂ ಇಲ್ಲಿಯ ತೋಟದಲ್ಲಿ ನವಿಲುಗಳು ಕಾಣಸಿಗುತ್ತವೆ. ಹಸಿರು ಕಾಡಿನಿಂದ ಇಂದಿಗೂ ಮನೋಹರವಾದ ತಾಣವೇ ಆಗಿ ಉಳಿದಿದೆ. ಬೀಟೆ, ಆಲ, ಮತ್ತಿ, ಕರಿಮರ, ಬಿದಿರು, ನೇರಳೆ, ದೂಪ

ಇತ್ಯಾದಿ ದಟ್ಟ ಮರಗಳು ಇಲ್ಲಿಯ ಪ್ರಕೃತಿಯನ್ನು ಉಳಿಸಿವೆ. ಇಲ್ಲಿ ಬೆಲೆ ಬಾಳುವ ಮರಗಳನ್ನು ಕಾಣುತ್ತೇವೆ.

ಹೀಗೆ ತಾಲೂಕಿನಲ್ಲಿ ವನ ಸಂಪತ್ತು ಇರುವುದರಿಂದ ಮಲೆನಾಡು ಎಂದು ಕರೆಸಿಕೊಂಡಿದೆ. ಸಹ್ಯಾದ್ರಿ ಪರ್ವತ ಶ್ರೇಣಿ ನಿಂತಿರುವುದರಿಂದ ಇಲ್ಲಿ ಕಾಡು ಹೆಚ್ಚು. ಸೊರಬದ ಅರಣ್ಯಗಳು ಒಂದು ಕಾಲದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದ್ದವು. ಆದರೆ ಇಂದು ಸೊರಬವು ಅರೆಮಲೆನಾಡಾಗಿ ಹೆಸರು ಪಡೆದಿದೆ. ಹಾಗಾಗಿಯೇ ಪ್ರಕೃತಿ ಕೇಂದ್ರಗಳು ಸೀಮಿತವಾಗಿವೆ. ಈ ಪ್ರದೇಶದ ಪ್ರಕೃತಿಯನ್ನು ಸಂರಕ್ಷಿಸುವ ಕಡೆ ಅರಣ್ಯ ಇಲಾಖೆ ಗಮನಹರಿಸಬೇಕಿದೆ.

ಅಡಿಟಿಪ್ಪಣಿಗಳು

೧. ಜೋಗದ ಸಿರಿ (ಸ್ಮರಣ ಸಂಚಿಕೆ), ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೬, ಪು.೧೨೮

೨. ಇದೇ ಸ್ಮರಣ ಸಂಚಿಕೆ, ಲೇಖನ : ಸೊರಬ ತಾಲ್ಲೂಕು ಒಂದು ಪಕ್ಷಿನೋಟ, ಶ್ರೀಪಾದ ಬಿಚ್ಚುಗತ್ತಿ, ಪು.೨೧೭

೩. ಪ್ರಜಾವಾಣಿ, ನಮ್ಮ ಊರು ನಮ್ಮ ಜಿಲ್ಲೆ, ಶಿವಮೊಗ್ಗ ಭಾನುವಾರ ೧೬ನೇ ಮಾರ್ಚ್ ೯ ೨೦೦೮, ಲೇಖನ, ಸರ್ವಾಗೀಣ ಅಭಿವೃದ್ಧಿಯತ್ತ ಬಿ.ಎನ್ .ಉಮೇಶ.

೪. ಸೊರಬ ತಾಲ್ಲೂಕು ದರ್ಶನ, ನಾ.ಡಿಸೋಜ, ಪು.೨೭

೫. ಪ್ರಜಾವಾಣಿ ಕೈಪಿಡಿ (ದೀಪಾವಳಿ ವಿಶೇಷಾಂಕ), ಸುಂದರ ನಾಡಿನ ಚೆಂದದ ತಾಣ, ೨೦೦೦, ಪು.೯೭

೬. ಅದೇ ತಾಲ್ಲೂಕು ದರ್ಶನ, ನಾ. ಡಿಸೋಜ, ಪು.೧೮

೭. ಸಿಹಿ ಮೊಗೆಯ ಸಿಂಚನ : ಸಂಚಿಕೆ, ಪು.೭೯

೮. ಇದೇ ಸಿಂಚನ, ಪು.೮೦

೯ಎ. ಪ್ರಜಾವಾಣಿ, ಕರ್ನಾಟಕ ದರ್ಶನ, ೨೭-೩-೨೦೦೪, ಸ್ಥಳೀಯ ನಾಗರಿಕ ಮೋಹನ ಚಂದ್ರಗುತ್ತಿ ಹೇಳಿಕೆ.

ಅಧ್ಯಾಯ ೬

ಸಾಹಿತ್ಯ ಪರಂಪರೆ

೬.೧. ಜಾನಪದ ಸಾಹಿತ್ಯ

೬.೨ ಶಾಸನ ಸಾಹಿತ್ಯ

೬.೩. ಶಿಷ್ಟ ಸಾಹಿತ್ಯ

೬

ಸಾಹಿತ್ಯ ಪರಂಪರೆ

ಕನ್ನಡ ನಾಡಿನಲ್ಲಿ ಸಾಹಿತ್ಯ ಬೆಳವಣಿಗೆಗೆ ಪೂರಕವಾಗಿ ಎಲ್ಲಾ ಪ್ರದೇಶಗಳ ಪಾತ್ರವೂ ಹಿರಿದಾದದ್ದೆ. ಈ ನಿಟ್ಟಿನಲ್ಲಿ ಪ್ರಾದೇಶಿಕ ಅಧ್ಯಯನ ಕೂಡ ಮಹತ್ವದ್ದು. ಅಂತೆಯೇ ಸೊರಬ ತಾಲ್ಲೂಕು ಕೂಡಾ ಸಾಹಿತ್ಯಿಕವಾಗಿ ಬೆಳಕಿಗೆ ಬಂದ ಕಾಲ ಕರ್ನಾಟಕದ ಕನ್ನಡ ಬೆಳವಣಿಗೆಯ ಕಾಲದಷ್ಟೇ ಪ್ರಾಚೀನವೆನ್ನಬಹುದಾದರೂ ಸಮರ್ಪಕ ಉತ್ತರವನ್ನು ಇಲ್ಲಿನ ಶಾಸನಗಳು ನೀಡುತ್ತಿವೆ. ತೇಗುಂದಿಯಲ್ಲಿ ದೊರೆತ ೫ನೇ ಶತಮಾನದ ಕನ್ನಡ ಶಾಸನ ಕರ್ನಾಟಕದ ಕನ್ನಡ ಶಾಸನಗಳಲ್ಲಿ ಎರಡನೇ ಸ್ಥಾನ ಪಡೆಯುತ್ತದೆ. ನಂತರ ಸುಮಾರು ೯ನೇ ಶತಮಾನದಲ್ಲಿ ಮಾವಲಿ ಶಾಸನ, ೧೧ನೇ ಶತಮಾನದ ಕುಪ್ಪಗಡ್ಡೆ ಶಾಸನಗಳ್ಲಲಿ ಉತ್ಕೃಷ್ಟ ಛಂದಸ್ಸನ್ನು ಬಳಸಲಾಗಿದೆ. ಇಲ್ಲಿನ ಶಾಸನಗಳು ಈ ಹಿಂದೆ ಸಾಹಿತ್ಯ ಕ್ಷೇತ್ರದಲ್ಲಿ ಛಾಪು ಮೂಡಿಸಿ ಹೋದ ಕೆಲವು ಬರಹಗಾರರನ್ನು ಹೆಸರಿಸಿವೆ. ಅದರಲ್ಲಿ ಕ್ರಿ.ಶ.೧೦೪೯ರಲ್ಲಿ ಬರುವ ಸಾವಣ್ಣ, ಎಲಿವಾಳದವ, ಕ್ರಿ.ಶ.೧೪೩೯ರಲ್ಲಿ ಬರುವ ಕುಣೇತೆಪ್ಪದ ಮಹಾದೇವರಲ್ಲದೇ ಕ್ರಿ.ಶ.೧೪೦೬ ಮತ್ತು ಕ್ರಿ.ಶ.೧೧೧೬ರಲ್ಲಿ ಇಬ್ಬರು ಅನಾಮಧೇಯ ಗದ್ಯ ಶಾಸನಕಾರರ ಉಲ್ಲೇಖವಿದೆ. ಶಾಸನ ಕವಿಗಳಲ್ಲಿ ಹತ್ತನೇ ಶತಮಾನದಲ್ಲಿ ಬರುವ ಕವಿಕಪ್ಪಣ ಭಟ್ಟ, ಭರತಯ್ಯ ವಿಟ್ಟಪ್ಪಯ್ಯ, ಮಾರಯ್ಯ ಬೀಚ, ನಾಕಯ್ಯ, ಚವುಂಡಯ್ಯ, ಬಮ್ಮರ ಹಿರಿಯಣ್ಣ ೧೨ನೇ ಶತಮಾನದ ಹೊತ್ತಿಗಿದ್ದ ವಾಸುದೇವ, ನಾಚಯ್ಯ, ಕೇಶವದೇವ, ೧೩ನೇ ಶತಮಾನದಲ್ಲಿ ತೊರವಂದದ ವಾಸುದೇವರಾಜ ಪಂಡಿತರು, ೧೪ನೇ ಶತಮಾನದಲ್ಲಿನ ವಜ್ರಿ ಇವರೆಲ್ಲರೂ ಸಾಹಿತ್ಯ ಕ್ಷೇತ್ರದ ಅಗ್ರಗಣ್ಯರು. ಸುಮಾರು ೧೨ನೇ ಶತಮಾನದ ಹೊತ್ತಿಗೆ ಕುಬಟೂರಿನಲ್ಲಿ ವಾತ್ಸಾಯನನ ಕಾಮಸೂತ್ರ ಬೋಧಿಸುವ ಪಂಡಿತರಿದ್ದರು.

ಅಸಂಖ್ಯಾತ ಹಳ್ಳಿಗರು ತಮ್ಮ ಆಡುನುಡಿಯಲ್ಲಿ ರಚಿಸಿದ ವಿಪುಲ ಸಾಹಿತ್ಯ ಕನ್ನಡದಲ್ಲಿದೆ. ಜನಪದರು ರಚಿಸಿದ ಇಂಥ ವಿಶಿಷ್ಟ ಸಾಹಿತ್ಯ ಪ್ರಾದೇಶಿಕವಾಗಿ ನಾಡಿನಲ್ಲಿ ಬೆಳೆದಂತೆ ತಾಲೂಕಿನಲ್ಲೂ ತನ್ನದೇ ಆದ ರೂಪವನ್ನು ಕಂಡುಕೊಂಡಿದೆ. ಹಳೆಯ ಅನೇಕ ಘಟನೆಗಳು ಇಂದಿನವರ ಬಾಯಲ್ಲಿ ದಂತ ಕಥೆಗಳಾಗಿವೆ. ಅದಕ್ಕೆ ಆಧಾರ ದಾಖಲೆಗಳಿಲ್ಲ ಹಿಂದಿನವರು ಹೇಳಿದ ಕಥೆಗಳನ್ನು ಕೇಳಿ ಜ್ಞಾಪಕದಲ್ಲಿಟ್ಟುಕೊಂಡು ಹೇಳುವ ರೂಢಿ ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಹಿರಿಯರಿಂದ ಕೇಳಿ

ತೀಳಿವಿದ್ದನ್ನು ಸಂಗ್ರಹಿಸಿದ್ದು ತುಂಬಾ ಕಡಿಮೆಯಾದರೂ ಪರಂಪರೆಯಿಂದ ಅನೇಕ ಸಂಗತಿಗಳನ್ನು ಹೊತ್ತು ತರುತ್ತಿರುತ್ತದೆ. ಗೀತೆ, ಲಾವಣಿ, ಕಾವ್ಯ, ಕಥೆ, ಗಾದೆ, ಒಗಟು, ಇತ್ಯಾದಿಯನ್ನು ಒಳಗೊಂಡ ಜಾನಪದ ತಾಲೂಕಿನಲ್ಲಿ ತನ್ನದೇ ಅದ ಸ್ಥಾನ ಉಳಿಸಿಕೊಂಡು ಆಚಾರ-ವಿಚಾರ ಪದ್ಧತಿ ಮೇಲೆ ಬೆಳಕು ಚೆಲ್ಲಿದೆ. ಇಲ್ಲಿಯ ಜಾನಪದ ಸಾಹಿತ್ಯ ಮೂರ್ನ್ನಾಲ್ಕು ಶತಮಾನಗಳ ಇತಿಹಾಸ ಹೊಂದಿರುವ ಸಾದ್ಯತೆಯಿದೆ. ಒಂದು ಹಾಡು ಹೇಳಿದವರ ಶೈಲಿಯಿಂದ ಊಹಿಸಬಹುದು. 'ಪೇಳಲೊಂದಳವಲ್ಲವೆ... ಎನ್ನುವ ಸಾಲಿನಲ್ಲಿರುವ ಪ ಕಾರ ಐದು ಶತಮಾನಗಳಿಂದೀಚೆಗೆ ಹ ಕಾರವಾಗಿರುವುದು ಭಾಷಾ ಚರಿತ್ರೆಯಲ್ಲಿ ಕಂಡುಬರುತ್ತದೆ. ಉದಾಹರಣೆಯಾಗಿ ತಾಲೂಕಿನ ಹಿರೇಚೌಡಿಯಲ್ಲಿ ಪವಾಡ ಮೆರೆದ ಗಂಗಮ್ಮನನ್ನು ಗುರುತಿಸಬಹುದು.

ಮಲೆನಾಡಿನ ಬಹಳಷ್ಟು ಕಡೆ ಜಾನಪದದ ಹಾಡುಗಳಲ್ಲಿ, ಗಾದೆಗಳಲ್ಲಿ, ಕಥೆಗಳಲ್ಲಿ, ಗುತ್ತಿಯ ಪ್ರಸ್ತಾಪ ಬರುತ್ತದೆ. ಪುರಾಣ, ಲಾವಣಿಗಳ ಮೂಲಕವು ಜಾನಪದ ಸಾಹಿತ್ಯ ಪರಂಪರೆ ಹಬ್ಬಿದೆ. ಜಾನಪದ ಕುಣಿತ, ವೀರಗಾಸೆ, ಯಕ್ಷಗಾನ, ಒಗಟು, ಭಜನೆ ಇತ್ಯಾದಿ ಶೈಲಿಯ ಹಾಡುಗಬ್ಬವು ತಾಲೂಕಿನಲ್ಲಿ ಈ ಪರಂಪರೆಯನ್ನು ಬೆಳೆಸಿದೆ. ಈ ತಾಲೂಕಿನ ಡಾ. ಶಾಲಿನಿ ರಘುನಾಥ ಭಟ್‌ರು ಜಾನಪದ ತಜ್ಞರು ಇವರು ಜಾನಪದ ವಿಭಾಗ ಧಾರವಾಡದಲ್ಲಿ ಉಪನ್ಯಾಸಕಿಯಾಗಿ ಸಂಶೋಧನಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಯೆಯನ್ನು ತೋರಿಸಿದ್ದಾರೆ. ಇವರ ದಾರಿ ಸಾಧನೆಯ ಹಾದಿಯಲ್ಲಿ ಸಾಗುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ನಾಡಿನಲ್ಲಿ ಕನ್ನಡ ಸಾಹಿತ್ಯದ ಆಧುನಿಕ ಪರಂಪರೆ ವಿವಿಧ ಘಟ್ಟಗಳ ಮೂಲಕ ಬೆಳೆದು ಬಂದಿದೆ. ಹಾಗೆಯೇ ಕನ್ನಡ ಸಾಹಿತ್ಯ ಕಾವ್ಯ, ಭಾವಗೀತೆ, ಕವನ ಸಂಕಲನ ಕಥಾ ಸಂಕಲನ, ನಾಟಕ, ಕಥೆ, ಕಾದಂಬರಿ, ವಿಮರ್ಶೆ, ಅನುವಾದ, ಜೀವನ ಚರಿತ್ರೆ, ಆತ್ಮಕತೆ, ಪ್ರಬಂಧ, ಸಂಶೋಧನಾ ಇತ್ಯಾದಿ ಪ್ರಕಾರದಲ್ಲಿ ಸಾಗಿ ಬಂದಿದ್ದನ್ನು ಕಾಣುತ್ತೇವೆ. ಇದೇ ರೀತಿ ಸೊರಬದಲ್ಲಿಯೂ ಶಿಷ್ಟ ಸಾಹಿತ್ಯ ಬೆಳೆದುಬಂದಿದೆ. ನವೋದಯ ಘಟ್ಟದಲ್ಲಿ ಆನಂದರು ಕಥೆಗಾರರಾಗಿ ಜನಪ್ರಿಯರಾಗಿದ್ದಾರೆ. ನವ್ಯಘಟ್ಟದಲ್ಲಿ ಎಚ್.ಎಂ.ಚನ್ನಯ್ಯ ಕವಿ, ವಿಮರ್ಶಕರಾಗಿ ಖ್ಯಾತಿಗಳಿಸಿದ್ದಾರೆ. ಇದೆ ಘಟ್ಟದಲ್ಲಿ ಡಾ.ಡಿ.ವಿ.ರಾವ್ ಅವರ ಕೃತಿ ಹೊರಬಂದಿದೆ.

ಹೀಗೆ ಬೆಳೆದುಬಂದ ಶಿಷ್ಟ ಸಾಹಿತ್ಯದಲ್ಲಿ ಕಥೆ, ಕವನ, ವೈಚಾರಿಕತೆ, ಶಿಶು ಸಾಹಿತ್ಯ, ಸಂಶೋಧನೆ ಇತ್ಯಾದಿ ಪ್ರಕಾರವಾಗಿ ಸಾಹಿತ್ಯ ಪರಂಪರೆ ತಾಲೂಕಿನಲ್ಲಿ ಬೆಳೆಯುತ್ತಿದೆ. ಒಟ್ಟಾರೆ ಸೊರಬದಲ್ಲಿ ಕನ್ನಡ ಸಾಹಿತ್ಯ ಬೆಳವಣಿಗೆಯನ್ನು ಶಾಸನೋಕ್ತ, ಜಾನಪದ, ಶಿಷ್ಟ ಹೀಗೆ ಮೂರು ರೀತಿಯಲ್ಲಿ ಬೆಳೆದು ಬಂದಿರುವುದನ್ನು ಗುರುತಿಸಲು ಸಾಧ್ಯವಾಗುತ್ತಿದೆ.

೬.೧. ಜಾನಪದ ಸಾಹಿತ್ಯ

ಜಾನಪದ ಇಂದು ನಿನ್ನೆಯದಲ್ಲ. ಅದಕ್ಕೆ ಪ್ರಾಚೀನ ಕಾಲದಷ್ಟು ಇತಿಹಾಸವಿದೆ. ಹಳ್ಳಿ ಜನರಿಗೆ ಸಂಬಂಧಿಸಿದ್ದು ಜಾನಪದ. ಮನುಷ್ಯ ಭೂಮಿಯ ಮೇಲೆ ಉಗಮವಾಗಿ ವಿಕಾಸದ ಹಾದಿಯಲ್ಲಿ ಪ್ರಜ್ಞಾವಂತನಾದಂತೆಲ್ಲ ತನ್ನ ಬದುಕಿನ ಬಗೆಗೆ ಆಲೋಚನಪರವಾಗಿ ರೂಢಿಸಿಕೊಂಡ ಅಂಶಗಳೆಲ್ಲವೂ ಜಾನಪದ ಸಂಸ್ಕೃತಿ ಎಂದೆನಿಸಿಕೊಳ್ಳುತ್ತವೆ. ಅಂದರೆ ಪ್ರಾಚೀನ ಕಾಲದ ಸಂಪ್ರದಾಯಬದ್ಧ ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು ಅರ್ಥಪೂರ್ಣವಾಗಿ ಬೆಳೆಸಿಕೊಂಡಿರುವಂತದ್ದು ಜಾನಪದವಾಗಿದೆ.

ಜಾನಪದ ಸಾಹಿತ್ಯ-ಗೀತೆ, ಲಾವಣಿ, ಕಾವ್ಯ, ಕಥೆ, ಗಾದೆ, ಒಗಟು, ಇತ್ಯಾದಿಯನ್ನು ಒಳಗೊಂಡ ಜಾನಪದದ ಒಂದು ಸಣ್ಣ ಅಂಗ ಮಾತ್ರ ಜಾನಪದ ಸಾಹಿತ್ಯವು ಜನ ಜೀವನದ ರಮ್ಯ ಚಿತ್ರ ಮತ್ತು ರಸವಾಣಿ[೬] ಸೊರಬದ ಸಾಂಸ್ಕೃತಿಕ ಪರಂಪರೆ ಈ ಸಾಹಿತ್ಯದಲ್ಲಿಯು ಬಹುಮಟ್ಟಿಗೆ ಹುದುಗಿದೆ. ಅದನ್ನು ಹೆಂಗಸರ ಪದಗಳು, ಗಂಡಸರ ಪದಗಳು, ಜಾನಪದ ಕಥೆ, ಗಾದೆ, ಪಡೆನುಡಿ, ಬಯ್ಗುಳ, ಒಗಟು, ಬಯಲಾಟ ಇತ್ಯಾದಿ ಪ್ರಕಾರಗಳಲ್ಲಿ ಕಾಣಲು ಸಾಧ್ಯವಿದೆ.

ಹೆಂಗಸರ ಪದಗಳು

ಹೆಂಗರ ಪದಗಳಲ್ಲಿ ವಿವಿಧ ಪ್ರಕಾರದ ಪದಗಳನ್ನು ಗುರುತಿಸಬಹುದು.

ಲಾಲಿ : ಜನಪದ ಸಾಹಿತ್ಯ ರಚನೆಯಲ್ಲಿ ತಾಯಿಯಾದವಳು ಲಾಲಿ, ಜೋಗುಳ ನಿದ್ದೆಪದ, ತೊಟ್ಟಿಲು ಪದ ಮುಂತಾದ ಹೆಸರುಗಳಲ್ಲಿ ಕರೆಯುವ ಹಾಡುಗಳನ್ನು ತ್ರಿಪದಿಗಳಲ್ಲಿ ಹಾಡುತ್ತಾಳೆ. ಮಕ್ಕಳನ್ನು ನೋಡಿ, ಆಡಿಸಿ, ಅವುಗಳ ಆಟಪಾಟಗಳಿಂದ ಆನಂದೊಗೊಂಡ ತಾಯಿ ತೊಟ್ಟಿಲು ತೂಗುತ್ತಾ ರಾಗವಾಗಿ ತನ್ನ ಕಂದನ ಗುಣಗಾನ ಮಾಡುತ್ತಾಳೆ. ಈ ಪದ ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ರೂಢಿಗತವಾಗಿ ಬೆಳೆದಿತ್ತು. ಈಗೀಗ ನಾಗರಿಕ ಜನರಿಂದ ಈ ಲಾಲಿ ಹಾಡುಗಳು ದೂರ ಉಳಿದಿವೆ.

ಆಡಿ ಬಾ ನನಕಂದ ಅಂಗಾಲ ತೊಳದೇನು
ತೆಂಗಿನ ಕಾಯ ತಿಳಿನೀರ | ತಕ್ಕೊಂಡು
ಬಂಗಾರ ಪಾದ ತೊಳದೇನು
　　ತೊಟ್ಟಿಲಾಗೊಂದು ತೊಳೆದ ಮುತ್ತನು ಕಂಡೆ
　　ಹೊಟ್ಟೆ ಮೇಲಾಗಿ ಮಲಗ್ಯಾನ | ಕಂದಯ್ಯಗ
　　ಮುತ್ತಿನ ದೃಷ್ಟಿ ಇಳಿದೇನ[೭]

ದಿನ ನಿತ್ಯದ ಬಳಕೆಯ ಮಾತಿನಲ್ಲಿ ತುಂಬಾ ಪರಿಣಾಮಕಾರಿಯಾಗಿ ಕಾವ್ಯ ಇಲ್ಲಿ ಕೂಡಿ ಬಂದಿದೆ. ಕಂದನ ಅಂಗಾಂಗಳು ಮತ್ತು ಗುಣವರ್ಣನೆಯ ಚಿತ್ರ ಅಸಾಧಾರಣವಾದ ಚೆಲುವಿನಿಂದ ಕೂಡಿದೆ.

ದಣಿವು ಕಾಣದ ಪದಗಳು : ಕುಟ್ಟುವಾಗ, ಬೀಸುವಾಗ, ನಾಟಿ ಹಾಕುವಾಗ, ಕಳೆ ಕೀಳುವಾಗ ಇತ್ಯಾದಿಯಾಗಿ ದುಡಿಯುವ ಸಂದರ್ಭದಲ್ಲಿ ಹೆಂಗಸರು ನಾನಾ ಬಗೆಯ ಪದಗಳನ್ನು ಹಾಡುತ್ತಾರೆ. ಈ ಪದಗಳನ್ನು ಹಾಡುವವರಿಗಾಗಲಿ/ಕೇಳುವವರಿಗಾಗಲಿ ತಾವು ಮಾಡುತ್ತಿರುವ ಶ್ರಮದ ಕೆಲಸ ಅರಿವಾಗುವುದೇ ಇಲ್ಲ. ಹಾಡುಗಳು ಕೂಡ ಮುಗಿಯುವುದಿಲ್ಲ. ದೇವರು, ಭಕ್ತಿ, ಪ್ರಕೃತಿ, ತವರಿನವರು, ರಕ್ತ ಸಂಬಂಧ, ಗೆಳತನ, ನೋವು ನಲಿವುಗಳು, ಪ್ರೇಮ, ದುರಂತಮಯ, ಬದುಕು ಮೊದಲಾದ ಸಂಗತಿಗಳನ್ನು ಈ ಹಾಡುಗಳು ಒಳಗೊಂಡಿವೆ.

ಈ ಪದಗಳು ತಾಲೂಕಿನ ಪ್ರತಿ ಗ್ರಾಮೀಣದಲ್ಲೂ ರೂಢಿಯಾಗಿ ಬೆಳೆದಿದೆ. ಕುಟ್ಟುವಾಗ, ಬೀಸುವಾಗ ಹಾಡುವ ಸಂದರ್ಭ ಇತ್ತೀಚಿಗೆ ಕಣ್ಮರೆಯಾಗಿದೆ. ಆಧುನೀಕರಣದಿಂದ ಗ್ರಾಮೀಣದಲ್ಲಿಯು ಕುಟ್ಟುವ, ಬೀಸುವ ಸನ್ನಿವೇಶ ಇಂದು ಚಾಲ್ತಿಯಲ್ಲಿದೆ. ಈ ಬಗೆಯ ಸಾಹಿತ್ಯ ಸಂಗ್ರಹ ಸಾಧ್ಯವಾಗಬೇಕಾಗಿದೆ.

ದೇವರು : ಎಲ್ಲೆಲ್ಲಿ ಒಳ್ಳೆಯದು ಎಂದು ತಮಗೆ ಅನ್ನಿಸುತ್ತದೆಯೋ ಅಲ್ಲೆಲ್ಲಾ ದೇವರನ್ನು ಕಾಣುವ ಜಾನಪದ ಆ ದೇವರುಗಳನ್ನು ತನಗೆ ಗೊತ್ತಿರುವ ಹಿರಿಯ ಗುಣಗಳ ಸರಮಾಲೆಯಲ್ಲಿ ಅಲಂಕರಿಸುತ್ತದೆ. ಒಂದೇ ರೀತಿಯ ಪದಗಳು ಮತ್ತು ಸಾಲುಗಳು ಬೇರೆ ಬೇರೆ ದೇವರುಗಳನ್ನು ಹೊಗಳುವ ಹಾಡುಗಳಲ್ಲಿ ಕಂಡುಬರುತ್ತವೆ. ದ್ರಾವಿಡ ಸಂಸ್ಕೃತಿಯ ಮೂಲದ ಸಂಬಂಧದಲ್ಲಿ ತಾಯಿಗೆ ಹೆಚ್ಚಿನ ಮನ್ನಣೆ ಇದ್ದುದರಿಂದ ಅದರ ಗುರುತಾಗಿ ನಮ್ಮಲ್ಲಿ ಹೆಣ್ಣು ದೇವರುಗಳೇ ಹೆಚ್ಚು. ಅವುಗಳ ಬಣ್ಣನೆಯೂ ಕೂಡ ಬಗೆಬಗೆಯಾಗಿ ಕಾಣಿಸಿಕೊಂಡಿದೆ.

ಜಾನಪದ ಸಾಹಿತ್ಯದಲ್ಲಿ ಗುತ್ಯವ್ವ : ದೇವರುಗಳ ಹಿರಿಮೆಯನ್ನು ಕೊಂಡಾಡುವಿಕೆಯ ಜತೆಗೆ ಜನತೆಯು ದೇವತೆಯ ಬಗ್ಗೆ ಭಕ್ತಿ ಅಭಿಮಾನಗಳಿಂದ ನಡೆದುಕೊಳ್ಳುವ ರೀತಿಯೂ ಹಾಡುಗಳ ವರ್ಣನೆಯ ಮುಖ್ಯ ಭಾಗವಾಗಿ ಕಂಡುಬರುತ್ತದೆ. ದೇವತೆಯ ಅಲಂಕಾರ, ಪೂಜಾವಿಧಾನ, ಉರುಳು ಸೇವೆ, ಬೆತ್ತಲೆ ಸೇವೆ, ಬೇವಿನ ಉಡುಪು ಮುಂತಾದ ನಾನ ಬಗೆಯ ಹರಕೆಗಳನ್ನು ತೀರಿಸುವಿಕೆ ಇತ್ಯಾದಿಗಳ ಕ್ರಿಯೆಗಳನ್ನು ಕುರಿತು ಹಾಡುಗಳು ಮುಂದುವರಿಯುತ್ತವೆ.

ಜಾನಪದ ಗೀತೆಗಳಲ್ಲಿರುವ ವಿಶಿಷ್ಟ ಸಾಹಿತ್ಯವು ಜಾತ್ರೆಯ ವೈಭವ ಪೂರ್ಣತೆಯನ್ನು ಮನಸ್ಸಿಗೆ ಮುಟ್ಟುವಂತೆ ಸಾರುತ್ತದೆ. ಈ ಹಾಡುಗಳು ವೈಭವ, ಹರಕೆ, ಕೊಂಡಾಟ ಎಲ್ಲವುಗಳು ಸಾಮೂಹಿಕವಾಗಿ ನಡೆಯುತ್ತವೆ.

ಗುತ್ತಿಯ ಸೀಮೆಗೆ ಅಣ್ಣಯ ಹೋದಾರೆ
ಹೊನ್ನ ತಂದಾರೆ ಮಡಿಲಾಗೆ | ಈ ಮನೆಯ
ಚಿನ್ನದ ಗೌರಿ ಮಡಿಲೊಡ್ಡೆ

ಗುತ್ತಿಯ ಪ್ಯಾಟಿಗೆ ಚಿತ್ತಾರದ ಮಳಿಗ್ಯಾಗ
ಮುತ್ತಿನ ಮೂಗುತಿ ಮುಖದೊರೆ | ನಾಗೋಳಿ
ನಿಸ್ತ್ರಿ ಬಾ ಮಗನ ಮದುವೆಗೆ

ಎಲೆಯ ಕೊಯ್ವಾರ ಮೂಡಿಯ ಕಟ್ಟ್ಯಾರ
ಜಾಲೋರಿ ಬೆನ್ನಿಗೇರ್‍ಯಾರ | ಅಣ್ಣಯ್ಯ
ಗುತ್ತೀಯ ಸಂತೀಗೆ ಹೊಡೆದಾರ

ಈ ತ್ರಿಪದಿಗಳನ್ನು ಗಮನಿಸಿದರೆ ಗುತ್ತಿಯ ವೈಭವ ಹೇಗೆ ಜಾನಪದರಲ್ಲಿ ಮಿಳಿತಗೊಂಡಿತ್ತು ಹಾಗೂ ಪ್ರಚುರಗೊಂಡಿತ್ತು ಎಂಬುದನ್ನು ತಿಳಿಸುತ್ತದೆ. ದಾಸ ಪರಂಪರೆಯ ಕೀರ್ತನಕಾರರಾದ ಕನಕದಾಸರು ತಮ್ಮ 'ಕಣಿಯ ಹೇಳಲು ಬಂದೆ' ಎಂಬ ಕೀರ್ತನೆಯಲ್ಲಿ

ಸುತ್ತಣವರ ಮಾತು ಕೇಳಿಗುತ್ತಿ ಎಲ್ಲಮ್ಮನೊಲಿಸು
ಬೆತ್ತಲೆ ದೇವರ ಮುಂದೆ ಬಲಿಯ ನೋಡಿರೋ
ಮತ್ತೆ ಮುಕ್ತಿಕಾಂಬವೆಂಬ ಆಸಕ್ತಿ ಬೇಡಿರೊ

ಎಂದು ಗೇಲಿ ಮಾಡಿದ್ದಾರೆ.

ಜಾನಪದ ಸಾಹಿತ್ಯದಲ್ಲಿಯೂ ಕೂಡ ಇಂತಹ ಪ್ರಸ್ತಾಪ ಬರುತ್ತದೆ.

ನಿಸ್ತ್ರೆ ತಂಗ್ಯವಾಗೆ ಮಕ್ಕಳು ಕೊಟ್ಟುದಕೆ
ಒಕ್ಕಳ ಕಡಲಿ ಪನಿವಾರ/ಗುತ್ಯವ್ವಗ
ಹುಟ್ಟುಡುಗೆ ಸೇವೆ ಸಲ್ಲಿಸೇನು

ಮಕ್ಕಳು ಆಗಿದ್ದಕ್ಕೆ ಬೆತ್ತಲೆ ಸೇವೆ ಸಲ್ಲಿಸುತ್ತೇನೆ ಎಂದು ಗರತಿಯೊಬ್ಬಳು ಹಿಂದೆ ಹೇಳಿಕೊಳ್ಳುತ್ತಾಳೆ.

ಭಾಳ ಮಂದಿ ಬತ್ಲ ಮಾಡಿದಿ
ಬೇವ ಉಡಿಸಿ ಮೋಜ ನೋಡಿದಿ

ಎಂದು ಹಾಡುತ್ತಾರೆ.

ಸಾಮೂಹಿಕವಾಗಿ ಉಧೋ, ಉಧೋ ಹಾಕುವ ಬಗೆ

ಗುತ್ಯಮ್ಮ ನಿನ್ನಾಲ್ಕು ಉಧೋ ಉಧೋ
ಪರಶುರಾಮ ನಿನ್ನಾಲ್ಕು ಉಧೋ
ಜೇನ್ನಕಲ್ಲಮ್ಮ ನಿನ್ನಾಲ್ಕು ಉಧೋ
ಶೂಲದ ಭೀರಪ್ಪ ನಿನ್ನಾಲ್ಕು ಉಧೋ
ಕಾಲಭೈರಪ್ಪ ನಿನ್ನಾಲ್ಕು ಉಧೋ
ಬಂಡಿ ಭಂಡಾರದಮ್ಮ ನಿನ್ನಾಲ್ಕು ಉಧೋ
ಜೋಗಿ ಜರಿಯಮ್ಮ ನಿನ್ನಾಲ್ಕು ಉಧೋ
ಆದಿತ್ಯ ವಾರದ ಆಧಿಶಕ್ತಿ ನಿನ್ನಾಲ್ಕು ಉಧೋ
ಸೋಮಾರದ ಸುಕುಮಾರಿ ನಿನ್ನಾಲ್ಕು ಉಧೋ

ಮಂಗ್ಳಾರದ ಮಾಯಕಾತಿ ನಿನ್ನಾಲ್ಕು ಉಧೋ
ಬುದುವಾರದ ಬುದುವಂತೆ ನಿನ್ನಾಲ್ಕು ಉಧೋ
ಬೇಸ್ತಾರದ ಬೇಟೆಗಾರ್ತಿ ನಿನ್ನಾಲ್ಕು ಉಧೋ
ಶುಕ್ರವಾರ ಸುಗುಣಿ ನಿನ್ನಾಲ್ಕು ಉಧೋ
ಶನಿವಾರದ ಸಂಪನ್ನಿ ನಿನ್ನಾಲ್ಕು ಉಧೋ
ಬಲಗುಂಬಿ ಬಲಗುಂಬಿ ದೇವರನ
ಬಲಗೈಲಿ ವಾಲಿ ಶಿವಸಾಂಬ ಹಿಡಕೊಂಡು
ತಾಯಿ ಗುತ್ಯವ್ವನ ನೆನೆದೇವ[8]

ಜಾನಪದ ಗರತಿಯೊಬ್ಬಳು ತಾಯಿ ಗುತ್ಯವ್ವನನ್ನು ಬೆಳಿಗ್ಗೆ ಎದ್ದು ನೆನೆಯುವ ಮುಖಾಂತರ ಬದುಕನ್ನು ಆರಂಭಿಸುತ್ತಾಳೆ.

ಜಾನಪದ ಸಾಹಿತ್ಯದಲ್ಲಿ ಗಂಗಮ್ಮ : ಹಿರೇಚೌಟಿ ಆನವಟ್ಟಿ ಹೋಬಳಿಯಲ್ಲಿರುವ ಒಂದು ಚಿಕ್ಕ ಹಳ್ಳಿ. ಗಂಗಮ್ಮನ ಕಥೆಯ ಒಂದು ನಿದರ್ಶನ ಈ ಹಳ್ಳಿಯಲ್ಲಿ ಕಾಣಬಹುದು. ಚೌಟಿ ಗಂಗಮ್ಮನ ಬಗ್ಗೆ ಹಾಡು ಹೇಳುವ ಹೆಂಗಸರೊಬ್ಬರು ಕಿರುವಾಡಿಯಲ್ಲಿ ಇದ್ದರು. ಈ ಕಿರುವಾಡಿಯ ಹೊಳೆಯಮ್ಮ ಎಂಬ ತಾಯಿ ಮೂಲಕ ಗಂಗಮ್ಮನ ಮಹಿಮೆ ಹಾಡನ್ನು ಬಿ.ಎಣ್ಣೆಕೊಪ್ಪದ ಶಿವಪ್ಪ ಅವರು ಸಂಗ್ರಹಿಸಿದ್ದಾರೆ.

ಚೌಟಿಯ ಹೆಣ್ಣುಮಕ್ಕಳು ಗಂಗವ್ವನಿಗೆ ಸೀರೆ ಉಡಿಸಿ ಕುಪ್ಪಸ ತೊಡಿಸಿ ಅವರು ಅವರ ಮೈಲಿರುವ ವಡವೆ ತೆಗೆದು ತೊಡಿಸಿ ಅಂದ ಚಂದ ನೋಡಿ ಹಿಗ್ಗುತ್ತಾರೆ. ತಾಯಿಯ ಸಕಲ ಶೃಂಗಾರ ಮುಗಿದ ಮೇಲೆ ಸುತ್ತಲಿನಿಂದ ಬಂದ ಜನರ ಸಮಕ್ಷಮದಲ್ಲಿ ಮಹಾಮಂಗಳಾರತಿ ನಡೆಯುತ್ತದೆ. ಊರ ಜನರೆಲ್ಲ ತಮ್ಮ ಮನೆಯಲ್ಲಿ ತಾಯಿಗೆ ವಿವಿಧ ಭಕ್ಷ್ಯ ಭೋಜನ ಸಿದ್ಧಪಡಿಸಿ ಹೆಡಗೆ ತುಂಬಿಕೊಂಡು ತಾಯಿಯ ಸನ್ನಿಧಿಗೆ ಬಂದಿರುತ್ತಾರೆ. ಬರುವಾಗ ಭಜನೆ ವಾದ್ಯವೃಂದಗಳ ಸಮೇತ ಬರುತ್ತಾರೆ.

ತಂದ ಹೆಡಗೆ ಭೋಜನವನ್ನು ಜಾತಿ ಭೇದ ಮರೆತು ಎಲ್ಲರಿಗೂ ಉಣಬಡಿಸುತ್ತಾರೆ. ಜನ ತೃಪ್ತಿ ಪಡೆದು ಊರಿಗೆ ಮರಳುತ್ತಾರೆ. ಬಾರಿ ಮಳೆಯಿಂದಾಗಿ ಚೌಟಿಯ ಕೆರೆ ತುಂಬಿ ಕೋಡಿ ಬಿದ್ದ ಗಂಗೆ ಮುಂದೆ ಸಾಗುತ್ತಾಳೆ. ಹಾದಿಯಲ್ಲಿ ಸಿಗುವ ಕಲ್ಲಗುಡ್ಡಿಯಲ್ಲಿ ಒಂದು ದಿನ ಉಳಿಯುತ್ತಾಳೆ. ಅಂದರೆ ಆ ಕೆರೆ ತುಂಬಲು ಒಂದು ದಿನ ಬೇಕಾಗುತ್ತದೆ. ಮುಂದೆ ಸಾಗಿದ ಗಂಗೆ ಕಿರವಾಡಿ ಕೆರೆಗೆ ಬಂದು ಕೂಡಿಕೊಳ್ಳುತ್ತಾಳೆ.

ಗಂಗವ್ವ ತಾಯಿಯ ಮೇಲೆ ಈ ಭಾಗದ ಜನರಿಗೆ ಬಹಳ ಭಯಭಕ್ತಿ. ಅವರಿಗೆ ಏನೇ ತೊಂದರೆಯಾದರೂ ಖಾಯಿಲೆ ಕಸಾಲೆಯಾದರೂ ತಾಯಿಗೆ ಹರಕೆ ಹೊತ್ತು ಕೊಳ್ಳುತ್ತಾರೆ. ವಾಸಿಯಾದ ಮೇಲೆ ಹರಕೆಯಂತೆ ನಡೆದುಕೊಳ್ಳುತ್ತಾರೆ. ಈ ಪದ್ಧತಿ ಇಂದಿನವರೆಗೂ ಜಾರಿಯಲ್ಲಿದೆ.

ಒಬ್ಬ ಪ್ರತಿಷ್ಠೆ ಮಾಡಿ ನಿರಾಕರಿಸಿ ಸುಳ್ಳು ಹೇಳಿದ್ದಕ್ಕೆ ಅಶರೀರವಾಣಿ 'ಸುಳ್ಳು ಹೇಳಿದ ನಿನ್ನ ನಾಲಿಗೆ ಸೇದಲಿ' ಎಂದು ನುಡಿಯಿತು. ಅವನು ಮೂಗನಾದ, ತಾಯಿಯ ಮಹಿಮೆಗೆ ಜನ ದಂಗಾದರು. ಆ ಬಾವಿಯ ನೆಲೆಯನ್ನು ಕಂಡುಹಿಡಿಯಲು ಏಳು ಮಿಣಿಗಾಗುವಷ್ಟು ಸೆರವೆ ಹಗ್ಗಕ್ಕೆ ಕಟ್ಟಿಬಿಟ್ಟರೂ ಅದು ಇನ್ನೂ ಆಳಕ್ಕೆ ಇಳಿಯುತ್ತಿತ್ತಂತೆ ಆಗ ಯಾರೋ ಒಬ್ಬರು 'ತಾಯಿಯ ಮಹಿಮೆಯನ್ನು ಅಳೆಯಬೇಡಿರೋ ಅವಳು 'ಮಹಾಮಹಿಮಳು', 'ಪವಾಡ ಪುರುಷಳು' ಎಂದರಂತೆ ಅಲ್ಲಿಗೆ ಜನ ಆ ಹರಸಾಹಸ ಬಿಟ್ಟರು ಎಂಬ ಹಿನ್ನೆಲೆ ಕೇಳಿಬರುತ್ತದೆ. ಈ ಹಿಂದೆ ಜಲ ಬಾವಿಯ ಹತ್ತಿರ ಜಾತ್ರೆ ನಡೆಯುತ್ತಿದ್ದಾಗ ಪವಾಡ ಸದೃಶ್ಯ ರೀತಿಯಲ್ಲಿ ದೊಡ್ಡ ರಥವೇ ಆ ಬಾವಿಯಲ್ಲಿ ಮುಳುಗಿತ್ತೆಂದು ಜನ ಹೇಳುತ್ತಾರೆ. ಹೀಗಿರುವ ಗಂಗಮ್ಮನ ಕತೆಯ ನಿದರ್ಶನವನ್ನು ಹಾಡಿನ ಮೂಲಕ ಸಂಗ್ರಹಿಸಲಾಗಿದೆ.

ಪೇಳಲೊಂದಳವಲ್ಲವೋ ಗಂಗಮ್ಮನ ಮಹಿಮೆಯ
ಪೇಳಲೊಂದಳವಲ್ಲವೋ ಬೆಳಗುವೆ ನಾರತಿಯಾ

ಸುಜನರೆಲ್ಲಾ ಕೇಳಿ, ಚವುಟಿಯ ಕೆರೆಬಾವಿ
ಗಂಗವ್ವನ ದರುಶನವಾ ಪುಣ್ಯವಂತರು ಮಾಡ್ಯಾರು
ಭೋರನೆ ಮಳೆ ಬಂದು ನಾಡಿನ ಕೆರೆ ತುಂಬ
ಗಿರಿಯು ಗೊಮ್ಮಟಗಳು ಕಣ್ಣಿಂದ ಮರೆಯಾಗೆ

ಪರಿಪರಿ ಮರಿ ಪಕ್ಷಿ ಹಾರುತ ಚೀರುತ
ಮರದ ನೆರವಿಗೆ ಓಡಿ ರಕ್ಷಣೆಯ ಪಡೆದಾವು
ಏರಿ ಕೆಳಗಿನ ತೋಟ ಮರವಡಿಕೆ ಚಿಗುರೆಲೆ
ಕರಿಕಬ್ಬು ಮರಹಲಸು ಮೈದುಂಬಿ ನಕ್ಕಾವು

ಕಂಚಿ, ಸಕ್ಕರೆಗಂಜಿ, ದೊಡ್ಡಲಿ, ಗಜನಿಂಬಿ, ಸಿಹಿನಿಂಬಿ,
ಅರಿಸಿಣದೆಲೆ ಬಳ್ಳಿ ಹರುಷದಿಂದ ಮುರೆದಾವೂ
ಮರುಗ ಮಲ್ಲಿಗೆ ಜಾಜಿ ಸುರಗಿ ಸೇವತಿಗೆ
ಮಗ ಮುಗಿಸಿ ಹೂರಾಸಿ ಕಂಪ ಬೀರ್ಯಾವೋ

ಕಣಗಲ ಹೂ ಚಂದ ಕೇದಿಗೆ ಗರಿ ಅಂದ
ವಡಿದ ಹಿಂಗಾರ ಬಲು ಚಂದ, ಅಣ್ಣಯ್ಯ
ಕಳಸದ ಬಿಂದಿಗೆಗೆ ತಳಿರು ತೋರಣ ಕಟ್ಟಿದಾ
ಹೊಸ ಸೀರೆ ಕುಪ್ಪಸದ ಶೃಂಗಾರ ಮಾಡಿದಾ

ನೆಲೆಯೆ ಇಲ್ಲದ ಬಾವಿ ಮಡವಿನೊಳಗಿರುವಂಥ
ತಾಯಿ ಗಂಗವ್ವಗೆ ಜಲಜಾಕ್ಷಿಯಂಡುವಂಥ
ಸಕಲಾಭರಣಗಳನ್ನು ಗಂಗವ್ವ ತಾಯಿಗೆ ತೋಡಿಸ್ಯಾರು
ಅವಲಂದವ ಆದಿಶೇಷನೂ ಹೊಗಳಲಾರ

ಹತ್ತಾರು ಹಳ್ಳಿಯ ದೊರೆಗಳೆಲ್ಲಾ ಸೇರಿ
ತಾಯಿಯ ಪೂಜಿಸಿ ಮಂಗಳಾರತಿ ಮಾಡಿ
ಕೈಮುಗಿದು ವಂದಿಸಿ ತಾಯಿಯ ನೆನಪುತ

ವರಗಳ ಬೇಡುತ ಜಾತಿ ಭೇದವ ಮರೆತು ಊಟಕೆ ಕುಳಿತಾರು
ಉಕ್ಕಿ ಹರಿದಾಗ ಗಂಗೆ ದಾರಿಯ ಹುಡುಕುತ
ಅಗಳವ ತುಂಬುತ ಪ್ಯಾಟಿ ಬಸವನ ಪಾದ ತೊಳೆದಳು
ಹಾದಿಯಲ್ಲಿ ಸಿಗುವ ಕೆರೆಗಳ ತುಂಬುತ,
ಕಲಗುಡ್ಡಿ ಕೆಂಚವ್ವನಲ್ಲಿಗೆ ಬಂದಾಳು

ಮುಂದೆ ಸಾಗಿದ ಗಂಗೆ ಒಂದಿನ ಕಿರವಾಡಿಯ
ಗದ್ದಿಗೆ ಮಠದಲ್ಲಿ ಸಿದ್ಧರಾಮನ ವರಗಳ ಬೇಡುತ್ತಾ
ಲೋಣಿ ಹಿಡಿದು ಹೊರಟಾಳು ಮುಂದ್ಮಂದೆ ಸಾಗ್ಯಾಳು

ಮುಂದೆ ಸಾಗಿದ ಗಂಗೆ ಎಲ್ಲರ ಮನದಲ್ಲಿ ನೆಲೆಯೂರಿ ನಿಂತಾಳು
ಆಗಾಗ ಜನ ಬಂದು ತಮ್ಮ ಕಷ್ಟಗಳ ಕಳೆಯೆಂದು
ಮನಮುಟ್ಟಿ ತಾಯಿಯ ಕೇಳ್ಯಾರು ಬ್ಯಾನಿ
ಬ್ಯಾಸರಿಕೆ ಇರಲಿ, ಮದುವೆ ಮುಂಜಿಯೇ ಇರಲಿ,
ತಾಯಿಯ ದಯೆಯಿಂದ, ಎಲ್ಲವೂ ಪರಿಹಾರ.[೬]

ಹೀಗೆ ಕಷ್ಟ ಸುಖಗಳಲ್ಲಿ ಭಾಗವಹಿಸುವ ಬಂಧುವಿನ ರೀತಿಯಲ್ಲಿ ಈ ದೇವರುಗಳು ಕಾಣುತ್ತವೆ. ವ್ಯಕ್ತಿಗೆ ಭಯ-ಸಮಸ್ಯೆ ಎದುರಾದಾಗ ದೇವರ ದಯೆ ತನ್ನ ಮೇಲಿದ್ದರೆ ಸಾಕು ಎನ್ನುವ ಅಸಾಧಾರಣ ಧೈರ್ಯ, ಸ್ವಾಭಿಮಾನಗಳನ್ನು ನಾವು ನೋಡುತ್ತೇವೆ. ಹಾಗಾಗಿಯೇ ದೈವತ್ವದ ಕಲ್ಪನೆ ಚಾಲ್ತಿಯಲ್ಲಿದೆ.

ಸೋಬಾನ : ಮದುವೆಗೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಕ್ರಮಗಳಲ್ಲೂ ಗುಂಪು ಗುಂಪಾಗಿ ಸೇರಿದ ಹೆಂಗಸರು ಪದ ಹೇಳುತ್ತಾರೆ. ಶಿವ ಪಾರ್ವತಿಯ ಮದುವೆಗೆ ಸಂಬಂಧಿಸಿದ ಪದಗಳನ್ನು ಹೇಳುವ ಹೆಂಗಸರು ಇಲ್ಲಿನ ಹೆಣ್ಣು-ಗಂಡು ಕೂಡ ಅಷ್ಟೇ ಪ್ರಮಾಣದಲ್ಲಿ ಮುಖ್ಯರು ಎನ್ನುವ ಭಾವನೆಯನ್ನು ಉಂಟು ಮಾಡುತ್ತಿದ್ದರು. ಈ ಸೋಬಾನ ಪದಗಳು ತಾಲೂಕಿನ ಹವೀಕ, ದೀವರ, ಹಸಲ, ಭೋವಿಜನಾಂಗದವರು ಹವ್ಯಾಸವಾಗಿ ಬೆಳೆಸಿಕೊಂಡಿದ್ದಾರೆ. ತಾಲೂಕಿನ ಗ್ರಾಮೀಣ ಮದುವೆಗಳಲ್ಲಿ ಈ ಹಾಡುಗಳು ಇದ್ದರೂ ಪ್ರಸ್ತುತ ಕಡಿಮೆ ಇವೆ. ಈ ಮೊದಲು ಹಿರೇಕಬ್ಬೂರಿನ ದಿ.ಈರಮ್ಮ ಕಲಗುಡ್ಡೇರ್ ಇವರ ಬಾಯಲ್ಲಿ ನೂರಾರು ಹಾಡುಗಳು ಹೊರಬರುತ್ತಿದ್ದವು. ಇಂದು ಆಧುನಿಕರಣದಿಂದಾಗಿ ಹಾಡುಗರ್ತಿಯರು ಅಲ್ಪಸಂಖ್ಯೆಯಲ್ಲಿದ್ದಾರೆ.

ಗಂಡಸರ ಪದಗಳು

ಸೊರಬ ತಾಲೂಕಿನಲ್ಲಿ ಅಂಟಿಗೆ ಪಂಟಿಗೆ, ಮೊಹರಂ, ಡೊಳ್ಳಿನ ಪದಗಳು ಇತ್ಯಾದಿ ಪ್ರಕಾರದ ಗಂಡಸರ ಹಾಡುಗಳು ಇವೆ.

ಅಂಟಿಗೆ-ಪಂಟಿಗೆ : ಇದು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಾಡ್ಯದ ರಾತ್ರಿಯಿಂದ ತೊಡಗಿ ವರ್ಷತೊಡಕು ರಾತ್ರಿಯವರೆಗೂ 'ದೀಪದಾನ' ಮಾಡುವ ಸಲುವಾಗಿ, ನಿದ್ದೆಗೆಡಬೇಕಾದ ಜರೂರು ಇರುತ್ತದೆ. ೨-೩ ಊರುಗಳ ತರುಣರು ಸೇರಿ 'ಅಂಟಿಗೆ ಪಂಟಿಗೆ' ಎಂಬ ಗೀತ ಮೇಳಗಳನ್ನು ನಡೆಸುವುದು. ಈ ಮೂರು ರಾತ್ರಿಗಳಲ್ಲೇ ಈ ಮೇಳಗಳು ಮನೆಯಿಂದ ಮನೆಗೆ ದೀಪಾವಳಿಯ ಬೆಳಕಿನ ದಿವ್ಯ ಸಂದೇಶವನ್ನು ಒಯ್ಯುವ, ತಲುಪಿಸುವ ಜವಾಬ್ದಾರಿಯನ್ನು ಹೊತ್ತಿರುತ್ತವೆ.

ಮಣ್ಣಾಲಿ ಹುಟ್ಟೀದೆ ಮಣ್ಣಾಲಿ ಬೆಳೆದೆ
ಎಣ್ಣೇಲಿ ಕಣ್ಣಾ ಬಿಟ್ಟೀದೆ | ಜಗಜ್ಯೋತಿ
ಸತ್ಯಾದಿಂದುರಿಯೇ ಗಜಜ್ಯೋತಿ

ಎಂದು ಹಾಡು ಆರಂಭಿಸುತ್ತಾರೆ. "ದೀಪ್ ದೀಪ್ ದೀಪೋಳ್ಗೆ" ಎಂದು ಕಾಡು ಮರುದನಿಗೊಡುವಂತೆ ಒಕ್ಕೊರಲಿನಿಂದ ಕೂಗುತ್ತಾ ಇಬ್ಬಿಬ್ಬರು ಜೋಡಿ ಹೊಂದಿಸಿಕೊಂಡು ಗೀತೆಗಳನ್ನು ಹಾಡುತ್ತಾ ಮನೆಯ ಮುಂದೆ ಬಂದು ನಿಲ್ಲುತ್ತಾರೆ. ಮುಚ್ಚಿದ ಬಾಗಿಲನ್ನು ತೆರೆಸಲು ಬಾಗಿಲ ಪದ ಹಾಡಿ ಮಲಗಿದವರನ್ನು ಎಬ್ಬಿಸುತ್ತಾರೆ.

ಬಾಗಿಲ ತಗೀರಮ್ಮ ಭಾಗ್ಯದ ಲಕ್ಷ್ಮಮ್ಮ
ಜ್ಯೋತಮ್ಮಾನೊಳಗೆ ಕರಾಕೊಳ್ಳಿ

ಎಂದು ಅಂಟಿಗೆ ಪಂಟಿಗೆ ಮೇಳದವರು ಮನೆಯಿಂದ ಮನೆಗೆ ಜ್ಯೋತಿಯನ್ನು ಒಯ್ದು ಅಂಟಿಗೆ ಪಂಟಿಗೆ ಪದಗಳನ್ನು ಹಾಡಿ ದವಸ ಧಾನ್ಯ ಶೇಖರಿಸುತ್ತಾರೆ. ಇಂದಿನ ದಿನಗಳಲ್ಲಿ ಈ ಹಾಡುಗಾರಿಕೆ ತೀರಾ ಕಡಿಮೆಯಾಗಿದ್ದು ಕಂಡುಬರುತ್ತದೆ.

ಮೊಹರಂ : ಹಿಂದೂ ಮುಸ್ಲಿಮರು ಒಟ್ಟಿಗೆ ಸೇರಿ ಪರಸ್ಪರ ಪ್ರೀತಿ-ವಿಶ್ವಸಗಳೀಂದ ಆಚರಿಸುವ ಹಬ್ಬ ಮೊಹರಂ ಹುತಾತ್ಮ ಇಮಾಮ್ ಹುಸೇನ್ ರ ಆದರ್ಶದ ನೆನಪಿಗಾಗಿ 'ಮೊಹರಂ' ಹಬ್ಬ ಆಚರಿಸುತ್ತಾರೆ. ಹಳ್ಳಿಗಳ ಉತ್ಸಾಹಿ ಯುವಕರು 'ಕರ್ಬಲಾಮೇಳ' ಕಟ್ಟುವರು. ಶಿಸ್ತಿನಿಂದ ಕುಣಿಯುತ್ತಾ ಹಾಡುತ್ತಾ ಹೋಗುವರು. ತಾಲೂಕಿನ ಹೊಸ ತತ್ತೂರು, ನೆಗವಾಡಿ, ಕುಪ್ಪಗಡ್ಡೆ ಸೊರಬ ಮೊದಲಾದ ಊರುಗಳಲ್ಲಿ ಈ ಹಾಡುಗಾರಿಕೆ ಗುರುತಿಸಬಹುದು.

ಡೊಳ್ಳಿನ ಪದಗಳು : ತಾಲೂಕಿನಲ್ಲಿ ತತ್ತೂರು ವಡ್ಡಿಗೇರಿ, ಚಾಟಿಕೊಪ್ಪ, ಹುಲ್ತಿಕೊಪ್ಪ ಗುಡ್ಡೆಕೊಪ್ಪ ಮೊದಲಾದ ಊರುಗಳಲ್ಲಿ ಡೊಳ್ಳಿನ ಪದ ಹಾಡುವವರು ಇರುವುದನ್ನು ಕಾಣುತ್ತೇವೆ. ಹಳ್ಳಿಯ ಜಾತ್ರೆ,

ಉತ್ಸವಗಳಲ್ಲಿ ಡೊಳ್ಳಿನ ಶಬ್ದದ ಜೊತೆಗೆ ಹಾಡುಗಳನ್ನು ಕೇಳಬಹುದು. ಶ್ರೀ ಸಿದ್ಧರಾಮೇಶ್ವರ ಡೊಳ್ಳಿನ ಮೇಳ ಹಿರೇಮಾಗಡಿ, ಶ್ರೀ ವಾಲ್ಮೀಕಿ ಸಮಾಜದ ಡೊಳ್ಳಿನ ಮೇಳ ಈ ರೀತಿ ಮೇಳಗಳಿವೆ. ಗುಡ್ಡೆಕೊಪ್ಪ, ಸಾರೆಕೊಪ್ಪ, ತತ್ತೂರು ವಡ್ಡಿಗೇರಿ ಮೊದಲಾದ ಕಡೆ ತಾಲೂಕಿನಲ್ಲಿ ಡೊಳ್ಳಿನ ಮೇಳಗಳಿದ್ದು ಹಾಡುವವರನ್ನು ಕಾಣುತ್ತೇವೆ.

ಲಾವಣಿ : ಸೊರಬದಲ್ಲಿ ಲಾವಣಿ ಕಟ್ಟಿ ಹಾಡುವವರು ತುಂಬಾ ಕಡಿಮೆ. ರೂಢಿಗತವಾಗಿ ಬಂದಿರುವ ಕೆಲವು ಪದಗಳನ್ನು ಹಾಡುವವರಿದ್ದಾರೆ. ಆದರೆ ಮಣ್ಣತ್ತಿ ನಾರಾಯಣ ಭಟ್ಟರು ಲಾವಣಿ ಕಟ್ಟಿ ಹಾಡಿದ್ದಾರೆ.

ಅಂದ ಚಂದ ಚಂದ್ರಗುತ್ತಿ
ದೊಡ್ಡ-ಸಣ್ಣವರೆಲ್ಲ ಕೇಳಿ
ಬಾಳ ಮಜಕೂರ ||
    ದೇವಿ ಜಾತ್ರೆ ಆದ ಮೇಲೆ
    ಅಡಿಕೆ ಜಾತ್ರೆ ನಡೆಯೋ ಕಾಲ
    ಮೊಳಕಾಲೂರಿ ಮಂಡಿಯೂರಿ
    ಅಡ್ಕೆ ಕೊಳ್ತಾರೆ[೭]

ಇತರೆ

ಸೊರಬದಲ್ಲಿ ಜನಪದ ಕಥೆ, ಗಾದೆ, ಬಯ್ಗುಳ, ಒಗಟು, ಪುರಾಣ ಮೊದಲಾದ ಜಾನಪದ ಸಾಹಿತ್ಯ ಪ್ರಕಾರಗಳು ಜನರ ಬಾಯಲ್ಲಿ ಸಹಜವಾಗಿಯೇ ಕಂಡುಬರುತ್ತವೆ. ಗ್ರಾಮೀನ ಜನ ಸಾಮಾನ್ಯರಲ್ಲಿಯ ಅನುಭವಗಳು ಈ ಜಾನಪದ ಸಾಹಿತ್ಯ ಪ್ರಕಾರಗಳಲ್ಲಿ ಇರುವುದನ್ನು ಕಾಣಬಹುದು. ಇದರ ಸಂಗ್ರಹ ಕಾರ್ಯ ಬಹಳಷ್ಟು ನಡೆಯಬೇಕಿದೆ. ತಾಲೂಕಿನ ಕೆಲವು ಊರುಗಳಲ್ಲಿ ಶನಿಕಥೆಯನ್ನು ಪದ್ಯ ಗದ್ಯದ ಮೂಲಕ ಹೇಳುತ್ತಾರೆ. ದೇವಿ ಪುರಾಣ, ಸಿದ್ಧಾರೂಢ ಪುರಾಣ ಓದುವುದನ್ನು ಕಾಣುತ್ತೇವೆ. ಇದಕ್ಕೆ ಸಿರನಾಯಕನಕೊಪ್ಪ, ತತ್ತೂರು, ಹಿರೇಕಬ್ಬೂರು, ಬಾರಂಗಿ, ಹಿರೇಚೌಟಿ ಮೊದಲಾದ ಊರುಗಳನ್ನು ಹೆಸರಿಸಬಹುದು. ಹೀಗೆ ಜಾನಪದ ಸಾಹಿತ್ಯ ಕ್ಷೇತ್ರ ಸೊರಬದಲ್ಲಿಯ ನೈಜ ಪರಿಚಯವನ್ನು ಹಾಗೂ ಆಚರಣೆಯೊಂದಿಗೆ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ.

೬.೨ ಶಾಸನ ಸಾಹಿತ್ಯ

ಪ್ರಾಚೀನ ಶಿಲಾ ಶಾಸನಗಳಲ್ಲಿ ಕೆತ್ತಲಾದ ಲಿಪಿಯ ಮೂಲಕ ಶಾಸನ ಸಾಹಿತ್ಯವನ್ನು ಗುರುತಿಸಲಾಗಿದೆ. ಈ ಶಾಸನಗಳಲ್ಲಿ ಬಳಕೆಯಾದ ಭಾಷೆಯನ್ನು ಪರಿಗಣಿಸಿ ಅದರ ಸ್ವರೂಪವನ್ನು ಸ್ಥೂಲವಾಗಿ ಗುರುತಿಸಲು ವಿದ್ವಾಂಸರು ಪ್ರಯತ್ನಿಸುತ್ತಾರೆ. ಆ ಪ್ರಯತ್ನದಲ್ಲಿ ಸೊರಬದ ಕನ್ನಡ ನಾಡಿನ ಇತಿಹಾಸವನ್ನು ಗುರುತಿಸಿ

ಗ್ರಂಥಗಳ ರೂಪದಲ್ಲಿ ಹೊರಬಂದಿದ್ದು, ಈ ಗ್ರಂಥಗಳು ಕನ್ನಡ ಭಾಷೆಯಲ್ಲಿ ಶಾಸನ ಸಾಹಿತ್ಯವನ್ನು ಪರಿಚಯಿಸುವ ಕೆಲಸಕ್ಕೆ ಕೈಹಾಕಿವೆ. ಸೊರಬದಲ್ಲಿ ನಿಂತಿರುವ ಅನೇಕ ಶಾಸನಗಳನ್ನು ಬರೆದ ಕೆಲವು ಕವಿಗಳ ಹೆಸರು ಮಾತ್ರ ಕಂಡುಬಂದಿದೆ. ಇವರ ಕಾವ್ಯಶಕ್ತಿ ಮತ್ತು ಪ್ರತಿಭೆಯು ಅಸಾಧಾರಣವಾದುದು. ತಾವು ಕಾವ್ಯವನ್ನು ಬರೆದಿರುವುದಾಗಿ ಕೆಲವರು ಹೇಳಿದ್ದರೂ ಯಾವ ಕೃತಿಗಳು ಲಭ್ಯವಾಗಿಲ್ಲ. ಶಾಸನಗಳನ್ನು ಛಂದೋಬದ್ಧವಾಗಿ ಬರೆದಿರುವುದು ಶ್ಲಾಘನೀಯವಾದದ್ದು. ತಾಲೂಕಿನಲ್ಲಿ ದೊರಕಿರುವ ಸುಮಾರು ೮೦೦ ಶಾಸನಗಳು ಸೊರಬದ ಮೇಲೆ ಐತಿಹಾಸಿಕ ಬೆಳಕನ್ನು ಚೆಲ್ಲುತ್ತವೆ. ಕ್ರಿ.ಪೂ.೨ನೇ ಶತಮಾನದಲ್ಲೇ ತಾಲೂಕಿನ ಹರೀಶಿ ಊರಿನಲ್ಲಿ ಇಟ್ಟಿಗೆ ಕಟ್ಟಡಗಳ ಅವಶೇಷಗಳು ಇರುವುದನ್ನು ಗುರುತಿಸಲಾಗಿದೆ.

ಕ್ರಿ.ಶ.೮೦೦ರ ಸೊರಬ ಶಾಸನ ಒಂದರಲ್ಲಿ ತ್ರಿಪದಿ ಸಾಹಿತ್ಯ[೮] ಇರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ತ್ರಿಪದಿಗಳು ಇರಬಹುದೆಂದು ಊಹಿಸಲಾಗಿದೆ. ಕನ್ನಡ ಪದಪುಂಜಗಳು ಹೆಚ್ಚಾಗಿರುವ ತ್ರಿಪದಿ ಮಾತ್ರ ತುಂಬಾ ಮಧುರ, ಸಂಸ್ಕೃತ ಪದ ಹೆಚ್ಚಾಗಿದ್ದರೆ ಚೆಲುವನ್ನು ಕಾಪಾಡಿಕೊಳ್ಳಲಾಗಿಲ್ಲ. ಎಂಬ ಅಭಿಪ್ರಾಯ ಇದೆ.

ಶಾಸನೋಕ್ತ ಕವಿಗಳು

ಚವುಂಡಯ್ಯ : ಸೊರಬ ತಾಲೂಕಿನ ತೊರೆವಂದದ (ತವನಂದಿ) ಕ್ರಿ.ಶ.೧೦೭೪ರ ಶಾಸನವನ್ನು ಬರೆದ ಈತನು ಉಚ್ಚಂಗಿ ಕೋಟೆಯವನು. ಕ್ರಿ.ಶ.೧೦೬೭ ಮತ್ತು ಕ್ರಿ.ಶ.೧೦೭೭ರ ಬಳ್ಳಿಗಾವೆಯ ಎರಡು ಶಾಸನಗಳನ್ನು ಇವನೇ ರಚಿಸಿದ್ದಾನೆ. ಇವುಗಳ ಅಂತಿಮ ಪದ್ಯದಲ್ಲಿ ಸಾಮ್ಯತೆಯಿದೆ. ಇವನು ಪ್ರಾಯಶಃ ಜೈನ ಕವಿಯಾಗಿದ್ದು, ಬೆಳ್ಳಿಗಾವೆಯ ಗುಣಭದ್ರದೇವರ ಶಿಷ್ಯನಾಗಿದ್ದಂತೆ ತಿಳಿಯುತ್ತದೆ.

ಬಮ್ಮರ ಹಿರಿಯಣ್ಣ : ಇವನು ಕ್ರಿ.ಶ.೧೦೭೫ರ ಕುಪಟೂರು (ಕುಬಟೂರು) ಶಾಸನವನ್ನು ಬರೆದಿದ್ದಾನೆ. ಕದಂಬರ ಕೀರ್ತಿದೇವನ ರಾಣಿ ಮಾಳಲದೇವಿಯು ಕುಪಟೂರಿನಲ್ಲಿ ಪಾರ್ಶ್ವನಾಥ ಜಿನಾಲಯವನ್ನು ಕಟ್ಟಿಸಿ ಇದರ ಆರಂಭೋತ್ಸವಕ್ಕೆ ಎಲ್ಲ ಧರ್ಮೀಯರನ್ನು ಕರೆಸುತ್ತಾಳೆ. ಇದನ್ನು ತಿಳಿಸುವ ಈ ಶಾಸನದಲ್ಲಿ ಕವಿಯು ಶ್ಲೋಕ, ಉತ್ಪಲಮಾಲೆ, ಚಂಪಕಮಾಲೆ, ಶಾರ್ದೂಲ ವಿಕ್ರೀಡಿತ, ವೃತ್ತ, ಮಾಲಿನಿ ವೃತ್ತ ಹಾಗೂ ಇಂದ್ರ ವಜ್ರವನ್ನು ಬಳಸಿದ್ದಾನೆ. ಇವನನ್ನು ಕರ್ನಾಟಕ ಕವಿಚರಿತ್ರೆಯಲ್ಲಿ ವರ್ಣಿಸಿದೆ.

ಏಕ್ಕಲದೇವ : ಇವನು ಸುರಭಿಪುರ(ಸೊರಬ)ದಲ್ಲಿ ಚಾಲುಕ್ಯ ಜಗದೇವಮಲ್ಲನ (ಕ್ರಿ.ಶ.೧೧೩೮-೧೧೫೦) ಆಶ್ರಯದಲ್ಲಿದ್ದ ಕವಿ ಸುಕರಸು ಕವಿಯು ಸೊರಬದ ರಂಗನಾಥ ಸ್ವಾಮಿ ದೇವಾಲಯದ ಅವಭೃತ ಮಂಟಪದ ಶಾಸನವನ್ನು ರಚಿಸಿದ್ದಾನೆ.

ಶಂಕರ ವಿಭುದ : ಇವನು ಕ್ರಿ.ಶ.೧೧೫೦ರಲ್ಲಿ ಕೊಡಕಣಿ ಶಾಸನವನ್ನು ಬರೆದ ಕವಿ. ಈ ಶಾಸನದಲ್ಲಿ ಬೊಮ್ಮರಸ ಹಾಗೂ ಕೇತಗಾವುಂಡನಿಗೂ ನಡೆದ ಯುದ್ಧದ ವಿವರಣೆಯಿದೆ. ಬೊಮ್ಮರಸ ಹೊಸಗುಂದದ ಅರಸನಾಗಿದ್ದನು.

ವಾಸುದೇವರಾಜ ಪಂಡಿತ : ಇವನು ಕ್ರಿ.ಶ.೧೨೫೨ರಲ್ಲಿ ತೊರೆವಂದದ ಬಸವನಗುಡಿ ಹತ್ತಿರದ ಶಾಸನ ಬರೆದಿದ್ದಾನೆ. ೫೧ ಪಾದಗಳ ಈ ದೊಡ್ಡ ಶಾಸನದಲ್ಲಿ ಬಹುಪಾಲು ಸಾಲುಗಳು ಸವೆದಿವೆ. ಇದು ಚಂಪು ಶೈಲಿಯಲ್ಲಿದೆ. ದಾಸಿರಾಜನ ಮಗ ಕಾಮನು ಮಾಡಿದ ಜಿನೋಪಯೋಗಿ ಕಾರ್ಯದ ಬಗ್ಗೆ ಈ ಶಾಸನವು ಹೇಳುತ್ತದೆ. ಇದರೊಂದಿಗೆ ಸೇನಬೋವಮಲ್ಲಯ್ಯನನ್ನು ಹೊಗಳಿದೆ.

ವಜ್ರ : ಇವನು ೧೩೨೩ರಲ್ಲಿ ಕುಪಟೂರು ಅಗ್ರಹಾರದ ಜೈನ ಬಸದಿಯಲ್ಲಿರುವ ಶಾಸನವನ್ನು ಬರೆದವನು ಶಾಸನದ ಕೆಳಭಾಗದ ಒಂದು ತುಂಡು ಮಾತ್ರ ದೊರಕಿದೆ. ಕುಪಟೂರಿನಲ್ಲಿ ಆಳಿದ ಮಹಾಪ್ರಭು ಗೋಪಗೌಡನು ಕ್ರಿ.ಶ.೧೪೬೩ರಲ್ಲಿ ಮರಣಹೊಂದಿದ ಇವನ ಪರೋಕ್ಷ ವಿನಯವಾಗಿ ನಿಲ್ಲಿಸಿದ ಶಾಸನದಲ್ಲಿ ಇತನ ಗುಣಗಳನ್ನು ವಜ್ರನು ವಿಸ್ತಾರವಾಗಿ ಹೊಗಳಿದ್ದಾನೆ.

೬.೩. ಶಿಷ್ಟ ಸಾಹಿತ್ಯ

ಆಧುನಿಕ ಕಾಲ ಘಟ್ಟದಲ್ಲಿ ಬೆಳೆದು ಬಂದ ತಾಲೂಕಿನ ಶಿಷ್ಟ ಸಾಹಿತ್ಯ ದೇವರಿಗಿಂತ ಹೆಚ್ಚಾಗಿ ಮನುಷ್ಯ ಕೇಂದ್ರಿತವಾಗಿ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ನೈಜ ಚಿತ್ರಣ, ಪ್ರಣಯ ಪ್ರಸಂಗದ ಕಥೆಗಳು, ಕುಟುಂಬ, ಪ್ರೇಮ, ನಿಷ್ಠೆಯನ್ನು ವಸ್ತುವಾಗಿ ಸಾಹಿತ್ಯದ ವಸ್ತುವಿನ ಪರಿಧಿ ಹಿಗ್ಗಿತ್ತು. ಕಾಮ ಕೇಂದ್ರಿತವಾದ ಸಾಹಿತ್ಯ ರೂಪಗಳು ಬೆಳೆದಿವೆ. ಕಥಾ ಸಾಹಿತ್ಯ ಹಾಗೂ ವಿಮರ್ಶಾ ಸಾಹಿತ್ಯದಲ್ಲಿ ನಾಡಿನಲ್ಲಿ ಖ್ಯಾತಿಗಳಿಸಿದ ಕೆಲವರು ತಾಲೂಕಿನ ನೆಲೆಯವರಾಗಿದ್ದಾರೆ. ಸಂಶೋಧನೆ ಸಾಹಿತ್ಯ, ಕವನ ಸಾಹಿತ್ಯವು ಬೆಳೆದು ಕನ್ನಡ ನಾಡನ್ನು ಸಮೃದ್ಧಿಗೊಳಿಸಿದೆ.

ಆನಂದ

ನವೋದಯ ಸಾಹಿತ್ಯದಲ್ಲಿ ಬೆಳದು ಬಂದ ಇವರು ೧೯೦೨ರಲ್ಲಿ ಸೊರಬದ ಆನವಟ್ಟಿಯಲ್ಲಿ ಜನಿಸಿದರು. ಇವರ ನಿಜನಾಮ ಅಜ್ಜಂಪುರ ಸೀತಾರಾಂ ಎಂದು. ಆನಂದ ಎಂಬುದು ಇವರ ಕಾವ್ಯನಾಮ ವಾಗಿದೆ. ಇವರು ಕನ್ನಡದ ಪ್ರಸಿದ್ದ ಕಥೆಗಾರರು ಹಾಗೂ ಪ್ರಬಂಧಕಾರರು. ವಿಜ್ಞಾನ ವಿದ್ಯಾರ್ಥಿಯಾದ ಇವರು ವೆಂಕಣಯ್ಯನವರ ಪ್ರಭಾವದಿಂದ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡರು. ಇವರು ಒಳ್ಳೆಯ ಚಿತ್ರಕಾರರೂ ಹಾಗೂ ಕ್ರಿಕೆಟ್ ಆಟಗಾರರೂ ಹೌದು.

ಕಥೆಗಳು : "ನಾನು ಕೊಂದ ಹುಡುಗಿ" ಎಂಬ ಕಥೆಯಿಂದ ಆನಂದರು ತುಂಬಾ ಪ್ರಸಿದ್ಧರಾದರು. 'ಭವತಿ ಭಿಕ್ಷಾಂದೇಹಿ' ಇದು ಭಿಕ್ಷಾನ್ನದ ಹುಡುಗನೊಬ್ಬನ ದುಃಖ ಜೀವನದ ನೈಜ ಚಿತ್ರಣವನ್ನೊಳಗೊಂಡಿದೆ.

‘ಕೊನೆ ಎಂಟಾಣೆ’ ಮತ್ತು ‘ಬೇವು ಬೆಲ್ಲ’ ಇವು ಪ್ರಣಯ ಕಥೆಗಳು. ‘ಹೆಂಡತಿಯ ಕಾಗದ’, ‘ರಾಧೆಯ ಕ್ಷಮೆ’, ‘ನಾನು ಹೀಗೆಯೇ’, ‘ಪದ್ಮಪಾಕ’ ಕಥೆಗಳು ಜನಪ್ರಿಯಗಳಿಸಿವೆ. ‘ಕೆಲವು ಕಥೆಗಳು’ ಇವರ ಪ್ರಥಮ ಸಂಕಲನ. ನಂತರ ‘ಸಂಸಾರ ಶಿಲ್ಪಿ’, ‘ಸ್ವಪ್ನ ಜೀವಿ’ ಮತ್ತು ‘ಇತರ ಕಥೆಗಳು’, ‘ಮಾಟಗಾತಿ’ ಕಥಾಸಂಕಲನಗಳಾಗಿವೆ. ‘ಆನಂದ ಲಹರಿ’, ಹರಟೆ ಸಂಕಲವಾಗಿದೆ. ಈ ಸೋಪನ ಲೋಕನೀತಿ ಕಥೆಗಳು ಅನುವಾದ ಕೃತಿಯಾಗಿದೆ. ‘ವೀರಯೋಧ’ ಮತ್ತು ‘ದಹನ ಚಿತ್ರ’ ಅನುವಾದಿತ ನಾಟಕಗಳಾಗಿವೆ. ಆನಂದರು ೧೭.೧೧.೧೯೬೩ರಲ್ಲಿ ಕಾಲವಾದರು.

ಎಚ್.ಎಂ.ಚನ್ನಯ್ಯ

ನವ್ಯ ಸಾಹಿತಿಯಾದ ಇವರು ಒಬ್ಬ ಸೃಜನಶೀಲ ಲೇಖಕರು. ನಾಟಕಕಾರ, ವಿಮರ್ಶಕ, ಅನುವಾದಕರೂ ಆಗಿದ್ದು ಉತ್ತಮ ನಟರು ಹೌದು. ಹಲವಾರು ಚಲನ ಚಿತ್ರ ಮತ್ತು ‘ಇಲಿ ಬೋನು’(ಚದುರಂಗರ ಅಸಂಗತ ನಾಟಕ) ಮತ್ತಿತರ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಕವನ ಸಂಕಲನಗಳು : ‘ಆಮೆ ಮತ್ತು ಕಾಮಿ’

ನಾಟಕಗಳು : ‘ಎಲ್ಲರಂಥವನಲ್ಲ ನನಗಂಡ’, ‘ಹುಯ್ಯಲವೊ ಡಂಗುರವ’

ವಿಮರ್ಶಾ ಸಂಕಲನಗಳು : ‘ಜಿಜ್ಞಾಸೆ’ ಮತ್ತು ‘ಪ್ರಾಸಂಗಿಕ’

ಅನುವಾದಿತ ನಾಟಕಕೃತಿ : ಅಯಾಸ್

ಅಡಿಗರ ಸ್ಮರಣಗ್ರಂಥ : ಸಂವೇದನೆ (ಜಿ.ಎಚ್ .ನಾಯಕರೊಂದಿಗೆ ಈ ಕೃತಿಯನ್ನು ಸಂಪಾದಿಸಿದ್ದಾರೆ)

ಕಾಮವನ್ನು ಮುಖ್ಯ ಕಾಳಜಿಯನ್ನಾಗಿ ಬಳಸಿದರು.

ಮೈಸೂರಿನಲ್ಲಿ ಸಮತೆಯೋ ರಂಗಸಂಘವನ್ನು ಬೆಳೆಸಿದರು.

ಪ್ರಸಿದ್ಧ ಎಪಿಕ್ ಥಿಯೇಟರ್ ಕೃತಿ ‘ಎಲ್ಲರಂಥವನಲ್ಲ ನನಗಂಡ’ ಕೃತಿಯಿಂದ ಪ್ರಸಿದ್ಧರಾದರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಉತ್ತಮ ಪ್ರಾಧ್ಯಾಪಕರಾಗಿದ್ದರು.

ಇವರು ಅನವಟ್ಟಿಯವರಾಗಿದ್ದಾರೆ.

ಡಾ.ಡಿ.ವಿ.ರಾವ್

ಸೊರಬದಲ್ಲಿಯ ಬಿ.ದೊಡ್ಡೇರಿ ಗ್ರಾಮದ ಇವರು ವೈದ್ಯಕೀಯ ವೃತ್ತಿಯಲ್ಲಿದ್ದಾರೆ. ಕನ್ನಡದಲ್ಲಿ ಮೊದಲ ಬಾರಿಗೆ ‘ಕಾಲಶಾಸ್ತ್ರ’ ಪತ್ರಿಕೆ ತಂದ ಕೀರ್ತಿಗೆ ಪಾತ್ರರಾಗಿದ್ದಾರೆ. ನವ್ಯ ಘಟ್ಟದಲ್ಲಿ ಹಲವಾರು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಇವರ ‘ಅವಧಾನ’ ಕೃತಿ ಅಮೃತಗಳಿಗೆ ಎಂಬ ಚಲನ ಚಿತ್ರವಾಗಿಯೂ

ಹೆಸರು ಗಳಿಸಿದೆ. ಇವರು ಅಂತರಾಷ್ಟ್ರೀಯ ಖ್ಯಾತ ಛಾಯ ಚಿತ್ರಕಾರರು ಹೌದು. ಕನ್ನಡದಲ್ಲಿ ಛಾಯಾ ಚಿತ್ರಣ ಕುರಿತು ಅಮೂಲ್ಯ ಕೃತಿಯನ್ನು ನೀಡಿದ್ದಾರೆ. ಇವರ ಅವಧಾನ ಕಾದಂಬರಿಯನ್ನು ಸುಧಾಪತ್ರಿಕೆಯಲ್ಲಿ ಪುಟ್ಟಣ್ಣ ಕಣಗಲ್ ಅವರು ಅಮೃತಗಳಿಗೆ ಎಂದು ಹೆಸರಿಸಿದರು. ಅದೇ ಚಲನಚಿತ್ರದ ಹೆಸರಾಗಿ ಉಳಿಯಿತು.

ದಿ.ಡಾ.ಎಚ್.ಆರ್.ರಘುನಾಥ ಭಟ್ಟ

೧೯೪೬ ಆಕ್ಟೋಬರ್ ೨೧ ತಾಲೂಕಿನ ಚಂದ್ರಗುತ್ತಿ ಹೋಬಳಿಯ ಹರೀಶಿಯಲ್ಲಿ ಜನಿಸಿದರು. ಇತಿಹಾಸ ವಿದ್ವಾಂಸರಾದ ಇವರ ಪಿಎಚ್.ಡಿ.ನಿಬಂಧ; 'ಬೆಳ್ಳಿಗಾವೆ-ಇಟ್ಸ್ ಹಿಸ್ಟರಿ ಅಂಡ್ ಆಂಟಿಕ್ವಿಟಿಸ್ '(ಏ ರೀಜನಲ್ ಹಿಸ್ಟರಿ ಆಫ್ ಕರ್ನಾಟಕ); ೧೯೮೧, ಮೈಸೂರು ವಿಶ್ವವಿದ್ಯಾಲಯದಲ್ಲಿ ೨೦ ವರ್ಷ ಅಧ್ಯಾಪಕ, ರೀಡರ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ವೈಯಕ್ತಿಕ ಸಂಶೋಧನ ಯೋಜನೆಗಳು

'ಎಪಿಗ್ರಫಿಕಲ್ ಸರ್ವೇ ಉತ್ತರ ಕನ್ನಡ' (೧೯೮೮-೮೯)

'ಎಪಿಗ್ರಫಿಕಲ್ ಸರ್ವೇ ಆಫ್ ಸಿದ್ದಾಪುರ್ ತಾಲೂಕ್ ' (೧೯೯೫-೯೬)

ಶೋಧನೆ/ಒಂದು ನೂರಕ್ಕೂ ಹೆಚ್ಚು ಶಾಸನಗಳು

ಶಾತವಾಹನ ಮತ್ತು ಸೋಂದಾ ಅರಸರ ಕೆಲವು ನಾಣ್ಯಗಳು; ರೋಮನ್ ಅವಶೇಷಗಳು, ಶಿಲ್ಪಗಳು.

ಕೃತಿಗಳು ಮತ್ತು ಪ್ರಶಸ್ತಿ

೧. ಕರ್ನಾಟಕ ಶಾಸನ ಮತ್ತು ಕಲೆ (ದೇವರಾಜ ಬಹಾದ್ದೂರ ಪ್ರಶಸ್ತಿ; ೧೯೭೮ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ)

೨. ಮೈಸೂರು ಜಿಲ್ಲೆಯ ದರ್ಶನ

೩. ಹೊಯ್ಸಳ ವಾಸ್ತುಶಿಲ್ಪ ಪರಿಚಯ

೪. ಪುರಾತತ್ವ ಪರಿಚಯ

೫. ಎಂ.ಗೋವಿಂದ ಪೈ ಮೆಮೋರಿಯಲ್ ಮ್ಯೂಸಿಯಂ ಕ್ಯಾಟಲಾಗ್

೬. ಹೊರದೇಶಗಳಲ್ಲಿ ಗಣಪತಿ

೭. ವರುಣ-ಎ ಬ್ರೀಫ್ ಸ್ಟಡಿ

೮. ಆದಿ ಕದಂಬರ ಕನ್ನಡ ಕಲ್ಬರಹ

೯. ಬನವಾಸಿ - ಎ ಹ್ಯಾಂಡ್ ಬುಕ್

೧೦. ಸೋಂದಾ - ಎ ಹ್ಯಾಂಡ್ ಬುಕ್

೧೧. ಟೋಪೋಗ್ರಫಿಕಲ್ ಲಿಸ್ಟ್ ಆಫ್ ಇನ್ ಸ್ಕ್ರಿಪ್ಷನ್ ಆಫ್ ಉತ್ತರ ಕನ್ನಡ

೧೨. ಕ್ಯಾಟಲಾಗ್ ಆಫ್ ಹಿಸ್ಟಾರಿಕಲ್ ರೆಕಾರ್ಡ್ಸ್ ಆಫ್ ರಾಮಚಂದ್ರಪುರಮಠ

೧೩. ಸ್ಕಲ್ಪ್‌ಚರಲ್ ಆರ್ಟ್ ಆಫ್ ದಿ ಕಲ್ಯಾಣ ಚಾಲುಕ್ಯಾಸ್ ಇತ್ಯಾದಿ

ಪುರಸ್ಕಾರ/ಧಾರವಾಡದ ರೋಟರಿ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ೧೯೯೯ರಲ್ಲಿ "ಔಟ್ ಸ್ಟ್ಯಾಂಡಿಂಗ್ ರಿಸರ್ಚ್‌ಸ್ಕಾಲರ್ " ಪುರಸ್ಕಾರ.

ಪುಸ್ತಕ ವಿಮರ್ಶೆ/ಗ್ರಂಥಲೋಕ, ಜೆ.ಪಿ.ಎನ್.ಎಸ್.ಐ, ಎ.ಎಸ್., ಲಿಟರರಿ ಕ್ರೈಟೇರಿಯನ್, ಜೆ.ಎ.ಹೆಚ್.ಎಸ್. ಇತ್ಯಾದಿ

ಹೀಗೆ ಡಾ. ರಘುನಾಥ ಭಟ್ಟರು ತಮ್ಮ ಜೀವನದಲ್ಲಿ ಮಹತ್ತರ ಸಾಧನೆ ಮಾಡಿ ನಾಡಿನಲ್ಲಿ ಸೃಜನಶೀಲ ಸಂಶೋಧಕರಾಗಿ ಬಹುಜ್ಞಾನ ಬಹುಭಾಷೆಗಳ ಪಂಡಿತರಾಗಿ ಹೊರಹೊಮ್ಮಿದ್ದಾರೆ. ಪುರಾತತ್ವಶಾಸ್ತ್ರ, ಶಾಸನಶಾಸ್ತ್ರ, ನಾಣ್ಯಶಾಸ್ತ್ರ, ಕಲಾ ಇತಿಹಾಸ ಕ್ಷೇತ್ರಗಳಿಗೆ ನೀಡಿದ ಕೊಡುಗೆಯನ್ನು ಇತಿಹಾಸ ಮತ್ತು ಪುರಾತತ್ವಜ್ಞರು ಮರೆಯುವಂತಿಲ್ಲ. ರೈತ ಕುಟುಂಬದಲ್ಲಿ ಹುಟ್ಟಿ, ಅಧ್ಯಾಪಕ ವೃತ್ತಿ ಹಿಡಿದು ಬದುಕಿನ ಉದ್ದಕ್ಕೂ ಅವರು ಸವೆಸಿದ ದಾರಿ ಇತರರಿಗೆ ಆದರ್ಶಪ್ರಾಯವಾದುದು ಮಾತ್ರವಲ್ಲ, ಸದಾ ಸ್ಮರಣಾರ್ಹವಾದುದು.

ಸೊರಬದ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಬೇಕಾದ ಇನ್ನುಳಿದ ಮುಖ್ಯ ಸಾಹಿತಿಗಳೆಂದರೆ

* ಕಥೆಗಾರರಲ್ಲಿ ರಾಮಚಂದ್ರ ಭಾವೆ, ನಿರ್ಮಾಲಾ ಅನವಟ್ಟಿ ಹೆಚ್.ಕೆ.ಬಿ.ಸ್ವಾಮಿ, ತು.ಗು.ನಾಗರಾಜ, ಮೊದಲಾದವರನ್ನು ನೋಡಬಹುದು.

* ಕವನ ಸಾಹಿತ್ಯದಲ್ಲಿ ಸೈಯದ್ ಷಫಿಯುಲ್ಲಾ ನಾ.ವೆಂ.ಬೋಡ್ಕೆ, ಹೆಚ್.ಕೆ.ಬಿ.ಸ್ವಾಮಿ, ನೆಗವಾಡಿಯ ರಾಜಶೇಖರ ಪಾಟೀಲ್ ಮುಂತಾದವರು. ಪಾಟೀಲ್‌ರು ೪ ಕವನ ಸಂಕಲನ ಮಾಡಿದ್ದಾರೆ. 'ಆಶಾವಾದದ ಗಾಳ', 'ಬಾಳಾ ಸಂಜೆಗೆ' ಮತ್ತು 'ಏಳು ಬಿಳಿನ ಕಡಲಲಿ' ಪ್ರಮುಖವೆನಿಸಿವೆ. ಇವರು ವಚನಕಾರರ ಮತ್ತು ನವೋದಯದವರ ಸಂಸ್ಕಾರ ಪಡೆದವರಾಗಿದ್ದಾರೆ.

* ಸಂಶೋಧನೆಯಲ್ಲಿ ಸೇವೆ ನೀಡಿದವರೆಂದರೆ ಪ್ರಾಣಿ, ಪರಿಸರ, ಛಾಯಗ್ರಹಣದಲ್ಲಿ ಹೆಸರುಗಳಿಸಿರುವ ಮಂಜುನಾಥ ಹೆಗಡೆ ಹೊಸಬಾಳೆ, ಈಡಿಗ ಜನಾಂಗದ ಅಧ್ಯಯನ ನಡೆಸಿದ ಡಾ. ಮೋಹನ್ ಚಂದ್ರಗುತ್ತಿ. ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿರುವ ಡಾ. ಸರ್ಫರಾಜ್ ಚಂದ್ರಗುತಿ, ಹಸ್ತಪ್ರತಿ ಸಂಶೋಧನೆಯಲ್ಲಿ ತೊಡಗಿರುವ ಆರ್.ಕಾರಂತ, ಉಳವಿ, ಇತಿಹಾಸ ಸಂಶೋಧಕರಾಗಿರುವ ಯಲಸಿಯ ಶ್ರೀಪಾದ ಬಿಚ್ಚುಗತ್ತಿ.

* ವಿಚಾರ ಲೇಖಕರಾದ ಅರುಂಧತಿ ನಡಹಳ್ಳಿ, ಡಾ. ಸರ್ಫರಾಜ್, ವಿಶ್ವನಾಥ್ ಕುಪ್ಪಗಡ್ಡೆ, ಅರುಣಾ ಆರ್., ಕಾರಂತ ಉಳವಿ, ಮಂಜುನಾಥ ಹೆಗಡೆ,

* ಶಿಶು ಸಾಹಿತ್ಯದಲ್ಲಿ (ಚಿನ್ನರ ಚೈತನ್ಯ)

* ಬೋಧನಾ ಸಾಮರ್ಥ್ಯದಲ್ಲಿ ಹೆಸರುಗಳಿಸಿರುವ ಮುಕ್ತಾಬಾಯಿ ಭಟ್.

* ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಹೊಸಬಾಳೆ ಪುಟ್ಟಪ್ಪ, ಕೆರೆಕೊಪ್ಪದ ಜಾಣ ಮಂಜಪ್ಪ

* ವಿರಚಿತ ಸ್ಮರಣ ಸಂಚಿಕೆಯು ಎಂ.ನಾಗಪ್ಪ

* ನಾಟಕ ಸಾಹಿತಿ ಬಂಗಾರಪ್ಪ ೧೦೦ಕ್ಕಿಂತ ಹೆಚ್ಚು ಕವನ ಮತ್ತು ಸಾಮಾಜಿಕ ಮತ್ತು ಪೌರಾಣಿಕ ನಾಟಕಗಳನ್ನು ಬರೆದಿದ್ದಾರೆ.

* 'ಹೃದಯದ ಕಣ್ಣು' ಕೃತಿಯ ರೇವಣಪ್ಪ ಮೊದಲಾದವರನ್ನು ಗುರುತಿಸಬಹುದು.

ಪ್ರತಿಕಾರಂಗದಲ್ಲಿ ಸೇವೆ ಮಾಡಿದವರೆಂದರೆ

* ಒಂಟಿ ಧ್ವನಿ - ರಾಮಚಂದ್ರಪ್ಪ, ಮೃತ್ಯುಂಜಯರಾವ್ ಬಾಪಟ್

* ಎಕ್ಸ್ ಪ್ರೆಸ್ - ಜನಗ್ನಾಥ್

* ಪುರ ಸಮಾಚಾರ - ಅ.ವ.ವಿರೂಪಾಕ್ಷಪ್ಪ, ಅಗ್ನಿಪಥದ ಯು.ಎನ್.ಲಕ್ಷ್ಮೀಕಾಂತಪ್ಪ

* ಕೆಂಪುತಾವರೆ - ಶಿವಾಜಿ ಕೊಂಡೆರ್

* ಮಿಂಚಿನ ಸಂಚಾರದ ಪ್ರಶಾಂತ್ ಹುಣವಳ್ಳಿ ಮೊದಲಾದವರು ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಮಾಡಿದ್ದಾರೆ.

* ಈ ಸೇವೆಯಲ್ಲಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರವು ಮುಖ್ಯವಾಗಿದೆ. ಇದರ ಅಧ್ಯಕ್ಷರು ಬಿದರಗೇರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಸ್ಥರು ಆದ ಕೃಷ್ಣಾನಂದರ ಸೇವೆ ಮತ್ತು ಹೊಸಬಾಳೆ ಸೀತಾರಾಂರಾವ್, ಡಾ.ಎಂ.ಭಟ್, ಮಧುರಾಯ ಜಿ.ಸೇಟ್, ಆರ್.ಎಂ.ಫಯಾಜ್ ಮೊದಲಾದವರ ಸೇವೆ ಪಡೆದು ಸೊರಬದ ಸಾಹಿತ್ಯ ಪರಂಪರೆಯು ಬೆಳೆದಿರುವುದನ್ನು ಕಾಣುತ್ತೇವೆ. ಈ ಕನ್ನಡ ಸಾಹಿತ್ಯ

ಪರಿಷತ್ತು ತಾಲೂಕಿನಲ್ಲಿ ಜಡೆ, ನಿಸ್ರಾಣಿ, ಸಿಗ್ಗಾ, ಇಂಡ್ವಳ್ಳಿ, ಆನವಟ್ಟಿ ಮೊದಲಾದಡೆ ಉಪವಿಭಾಗ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದೆ. ಹಾಗಾಗಿ ಸಾಹಿತ್ಯ ಚಟುವಟಿಕೆ ಜೀವಂತವಾಗಿದ್ದು, ಹಸನ್ಮುಖಿಯಾಗಿದೆ.

ಅಡಿಟಿಪ್ಪಣಿಗಳು

೧. ಜೋಗದ ಸಿರಿ (ಸ್ಮರಣ ಸಂಚಿಕೆ), ಲೇಖನ : ಸೊರಬ ತಾಲ್ಲೂಕು ಪಕ್ಷಿನೋಟ, ಶ್ರೀ ಪಾದ ಬಿಚ್ಚುಗತ್ತಿ, ಪು.೨೧೭

೨. ಜೋಗದ ಸಿರಿ (ಸ್ಮರಣ ಸಂಚಿಕೆ), ಲೇಖನ : ಪವಾಡ ಮೆರೆದ ಗಂಗಮ್ಮ, ಸಂಗ್ರಹ : ಎಣ್ಣೆಕೊಪ್ಪದ ಶಿವಪ್ಪ, ಪು.೧೫೬

೩. ಜಾನಪದ ಸಮಾಚಾರ, ಸಂ: ಕೆರೆಮನೆ ಶಂಭು ಹೆಗಡೆ, ಪು.೧೫೫

೪. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ : ಕಾಳೇಗೌಡ ನಾಗವಾರ, ಪು.೬೮

೫. ಚಂದ್ರಗುತ್ತಿ ರೇಣುಕಾಂಬಾ ಜಾತ್ರೆ, ಡಾ.ಎಚ್ .ಎಸ್ .ಮೋಹನ್ ಚಂದ್ರಗುತ್ತಿ, ಪು.೪೨

೬. ಜೋಗದ ಸಿರಿ (ಸ್ಮರಣ ಸಂಚಿಕೆ), ಲೇ: ಪವಾಡ ಮೆರೆದ ಗಂಗಮ್ಮ, ಸಂ : ಎಣ್ಣೆಕೊಪ್ಪದ ಶಿವಪ್ಪ, ಚಿ.ಕೊಟ್ರಪ್ಪ ಕಮರದ ಹಳ್ಳಿ, ಪು.೧೫೬, ೧೫೯

೭. ಚಂದ್ರಗುತ್ತಿ ರೇಣುಕಾಂಬಾ ಜಾತ್ರೆ, ಡಾ.ಎಚ್.ಎಸ್.ಮೋಹನ ಚಂದ್ರಗುತ್ತಿ, ಪು.೪೮

೮. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ, ಕಾಳೇಗೌಡ ನಾಗವಾರ, ಪು.೩

ಅಧ್ಯಾಯ ೭

ಸಮಾಪನ

೭

ಸಮಾಪನ

ಸಂಸ್ಕೃತಿ ಎನ್ನುವುದು ಮನುಷ್ಯನ ಜೀವನ ಪದ್ಧತಿ. ಇದಕ್ಕೆ ಸಾರ್ವತ್ರಿಕ, ಸಾರ್ವಕಾಲಿಕ, ಮಹತ್ವ ಇರುತ್ತದೆ. ಕರ್ನಾಟಕದ ಸಂಸ್ಕೃತಿ ಪುರಾತನವಾದುದು. ಕರ್ನಾಟಕವು ಐತಿಹಾಸಿಕ ಮಹತ್ವ ಪಡೆದ ಪ್ರಾಚೀನ ನಾಡಾಗಿದೆ. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ವ್ಯವಸ್ಥೆಯಲ್ಲಿ ಧಾರ್ಮಿಕ ದರ್ಶನ, ದಿವ್ಯ ದೃಷ್ಟಿ, ಸಾಹಿತ್ಯ ದೃಷ್ಟಿ, ಶಿಲ್ಪಕಲೆಗಳ ಆದಿಯಾಗಿ ಎಲ್ಲ ರಂಗಗಳಲ್ಲಿಯೂ ಕರ್ನಾಟಕದ ಸಾಧನೆ ಸಾರ್ಥಕತೆಯನ್ನು ಪಡೆದಿದೆ. ಅತಿ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಉಜ್ವಲ ಪರಂಪರೆಯನ್ನಿತ್ತು, ಅದನ್ನು ಬೆಳೆಸಿಕೊಂಡು ಬಂದಿದೆ. ಸರ್ವಧರ್ಮ ಸಮನ್ವಯವನ್ನು ಸ್ಥಾಪಿಸಿದ ಭೂಮಿ ಇದಾಗಿದೆ. ಇಂತಹ ಹಿನ್ನಲೆಯನ್ನು ಪಡೆದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಸಮುದ್ರಮಟ್ಟದಿಂದ ೫೨೦ ಮೀಟರ್ ಎತ್ತರದಲ್ಲಿದೆ. ದಂಡಾವತಿ ನಾಡಾದ ಸೊರಬದ ಪರಿಸರದಲ್ಲಿ ಸಾಂಸ್ಕೃತಿಕ ಕುರುಹುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿಯ ಐತಿಹಾಸಿಕ ಹಿನ್ನಲೆಯಿಂದ ತಾಲೂಕಿನ ನೆಲೆಯನ್ನು ಕಂಡುಕೊಳ್ಳಲಾಗಿದೆ. ಆಗಿಹೋಗಿದ್ದ ಅರಸರ ವಂಶಪರಂಪರೆಯನ್ನು ವಿಶ್ಲೇಷಿಸಲಾಗಿದೆ. ಇದರಿಂದ ಈ ಪ್ರದೇಶ ಯಾವ ರಾಜರ ಆಳ್ವಿಕೆಗೆ ಒಳಪಟ್ಟಿದೆ ಎಂಬುದನ್ನು ಸುಲಭವಾಗಿ ಗಮನಿಸಬಹುದು. ಭೌಗೋಳಿಕ ಪರಿಸರದ ವಿವೇಚನೆಯಿಂದ ತಾಲೂಕಿನ ವಿಸ್ತೀರ್ಣ, ಮಳೆ, ಮಣ್ಣು, ಬೆಳೆ ಮೊದಲಾದ ಅಂಶಗಳು ತಿಳಿಯಲ್ಪಡುತ್ತವೆ.

ಅಂದು ಗ್ರಾಮಗಳು ಪಾರಂಪರಿಕ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ್ದವು. ಇಂದು ಪಾರಂಪರಿಕ ವ್ಯವಸ್ಥೆಯೊಂದಿಗೆ ಆಧುನಿಕತೆಯ ಜೀವನ ಕ್ರಮ ಕಂಡುಕೊಂಡಿರುವುದನ್ನು ಈ ಅಧ್ಯಯನ ತಿಳಿಸುತ್ತದೆ. ನಾಡಿನಲ್ಲಿ ಜನತೆಯ ಬದುಕು ಆಯಾ ಸಮುದಾಯದ ಕ್ರಮವನ್ನು ಹೊಂದಿದ ಕಾಲವೊಂದಿತ್ತು. ಇಂದು ಸಮುದಾಯದ ಆಚೆಗಿನ ಬದುಕು ನಿರ್ಮಾಣವಾಗಿದೆ. ಈ ಹಿನ್ನಲೆಯಂತೆ ಈ ಪ್ರದೇಶದ ಚರಿತ್ರೆ ಹೇಗೆದೆ ಎಂಬುದನ್ನು ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ.

ಈ ಕಿರುಪ್ರಬಂಧವು ಜನ-ಜೀವನ ಸಂಸ್ಕೃತಿ ತಿಳಿಯಪಡಿಸುವುದರಿಂದ ಹಲವು ಅಂಶಗಳನ್ನು ನಾವು ಕಂಡುಕೊಳ್ಳಬಹುದಾಗಿದೆ. ಗ್ರಾಮಗಳಲ್ಲಿ ಜನರು ತಮ್ಮ ಬದುಕನ್ನು ಸಂಸ್ಕೃತಿ ನೆಲೆಯಲ್ಲಿ ಸಾಗಿಸಿಕೊಂಡು

ಹೋಗುತ್ತಿರುವುದು. ಈ ಅಧ್ಯಯನವು ತಿಳಿಯಪಡಿಸುತ್ತದೆ. ಅಂದರೆ ಊರ ಪರಿಸರದ ಸಾಮಾಜಿಕ ವ್ಯವಸ್ಥೆ. ಊರಿಗೊಬ್ಬ ಮುಖ್ಯಸ್ಥನಿರುವ ವಾಡಿಕೆ/ಊರ ಮುಖಂಡರ ನಡುವೆ ಗ್ರಾಮಗಳು ಹೇಗೆ ಸಾಗಿ ಬರುತ್ತಿವೆ. ಮನೆ ಜೀವನ, ಗೃಹಾಲಂಕಾರ, ಹಬ್ಬಗಳು ಇವೆಲ್ಲ ದೈನಂದಿನ ಜನಜೀವನಕ್ಕೆ ಹೇಗೆ ಮೆರುಗನ್ನು ನೀಡಿವೆ ಎಂಬುದನ್ನು ಪ್ರಸ್ತುತ ಅಧ್ಯಯನವು ತಿಳಿಯಪಡಿಸುವುದು. ಗ್ರಾಮಗಳು ಅನೇಕ ರೀತಿಯ ವೈವಿಧ್ಯತೆ, ಅಸಮಾನತೆ ಸಮಸ್ಯೆಗಳ ನಡುವೆಯೂ ಅನೇಕ ವಿಷಯಗಳಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಕಾಯ್ದುಕೊಂಡಿವೆ ಎಂಬುದು ಸ್ಪಷ್ಟವಾಗುತ್ತದೆ. ತಾಲೂಕಿನಲ್ಲಿ ಪ್ರತಿಯೊಂದು ಸಾಮಾಜಿಕ ಕಾರ್ಯಗಳು ಜಾತಿ ಆಧಾರಿತವಾಗಿರುತ್ತವೆ. ಜಾತಿಗನುಗುಣವಾಗಿ ಗ್ರಾಮಸ್ಥರು ಕೈಗೊಳ್ಳುವ ಗ್ರಾಮಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ವಿಂಗಡಣೆಯಾಗುತ್ತವೆ. ಹೀಗೆ ಮೇಲ್ನೋಟಕ್ಕೆ ಸಮೂಹದಾಯಿಕ ಎನಿಸಬಹುದಾದರೂ ಜಾತಿಯಾಧಾರಿತವಾದ ಸಾಮಾಜಿಕ ವ್ಯವಸ್ಥೆಯು ರೂಢಿಯಲ್ಲಿದೆ. ಗ್ರಾಮವೆನ್ನುವ ಭೌಗೋಳಿಕ ಎಲ್ಲೆಯೊಂದು ಈ ವ್ಯವಸ್ಥೆಯನ್ನು ನಿಯಂತ್ರಿಸುವುದು ಕಂಡುಬರುತ್ತದೆ. ಇದರ ವಿಚಾರವನ್ನು ಮತ್ತು ತಾಲೂಕಿನಲ್ಲಿ ಆಯಾ ಜಾತಿಗಳು ಅವಲಂಬಿತ ಭಾಷೆಯನ್ನು ಈ ಕಿರುಪ್ರಬಂಧದ ಚರ್ಚೆಯಿಂದ ತಿಳಿದು ಬರುತ್ತದೆ.

ತಾಲೂಕಿನಲ್ಲಿ ಗುರುತಿಸಬೇಕಾದ ಪ್ರದರ್ಶನ ಕಲೆಗಳು ಬೆಳಕಿಗೆ ಕಂಡುಬಂದಿರುವುದು, ಜಾನಪದ ಕಲೆಯ ವೈಭವ ಚಿತ್ರಣ. ಚಿತ್ರರಂಗದ ಪ್ರವೇಶವನ್ನು ಪ್ರತಿ ಗ್ರಾಮದಲ್ಲಿ ಮುಖ್ಯರಾದ ಕಲಾವಿದರು ಇರುವುದನ್ನು ಗುರುತಿಸುವ ಪ್ರಯತ್ನ ನಡೆದಿದೆ. ಗ್ರಾಮಗಳು ಮತ್ತು ನಗರಗಳು ತಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದು ಹಬ್ಬ ಮತ್ತು ಜಾತ್ರೆಗಳ ಮೂಲಕ. ಹಾಗಾಗಿ ಈ ತಾಲೂಕಿನ ವಿಶೇಷ ಹಬ್ಬ ಜಾತ್ರೆಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಸ್ಥಿತಿ ನೋಡಿದಾಗ ಹಿಂದೆ ಇದ್ದ ಸಾಂಸ್ಕೃತಿಕ ವೈಭವ ಇಂದಿನ ಹಬ್ಬ ಜಾತ್ರೆಗಳಲ್ಲಿ ಇಲ್ಲದಾಗಿದೆ. ಆಚರಣೆಯಲ್ಲಿ ಪಾರಂಪರಿಕತೆ ದೂರವಾಗಿದೆ. ಈ ಆಚರಣೆಗಳು ಸಂಸ್ಕೃತಿಯ ಪ್ರತೀಕವಾಗಿರುವುದರಿಂದ ಜೊತೆಗೆ ಸಂಬಂಧವನ್ನು, ನಂಬಿಕೆ, ವಿಶ್ವಾಸಗಳನ್ನು ಏಕತೆಯನ್ನು ಕಾಯುವುದರಿಂದ ಅನಿವಾರ್ಯವಾಗಿ ಉಳಿಸಿಕೊಂಡು ಹೋಗಬೇಕಾಗಿದೆ.

ಮೂಲತಃ ಸೊರಬ ಕೃಷಿ ಪ್ರಧಾನ ಪ್ರದೇಶ. ಫಲವತ್ತಾದ ಮಣ್ಣಿಂದ ಕೂಡಿದೆ. ಇಂದಿಗೂ ಅನೇಕ ಗ್ರಾಮಗಳು ಮಳೆನೀರು, ಬಾವಿ, ಕೊಳವೆ ಬಾವಿಗಳ ನೀರನ್ನೇ ಅವಲಂಬಿಸಿವೆ. ಯಾವುದೇ ಅಣೆಕಟ್ಟು ಇಲ್ಲಿ ನಿರ್ಮಿತವಾಗಿಲ್ಲ. ತಾಲೂಕಿನ ಇತಿಹಾಸದ ಕೆರೆಗಳಲ್ಲಿ ಹಲವು ಕೆರೆಗಳು ಇಂದು ಹೂಳು ತುಂಬಿವೆ. ತಕ್ಕ ಪ್ರಮಾಣದ ನೀರು ಅವುಗಳಲ್ಲಿ ಶೇಖರಣೆಯಾಗುತ್ತಿಲ್ಲ. ತಾಲೂಕಿನಲ್ಲಿನ ಸಣ್ಣ ಹಿಡುವಳಿದಾರನ ಸ್ಥಿತಿಯೂ ಶೋಚನೀಯ. ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕ ಔಷಧಿಗಳನ್ನು ಯಥೇಚ್ಛವಾಗಿ ಬಳಸಲಾಗುತ್ತಿದೆ. ಈ ಕುರಿತು ಮುಖ್ಯವಾದ ಚರ್ಚೆ ಈ ಕಿರುಪ್ರಬಂಧದಲ್ಲಿ ಮಾಡಲಾಗಿದೆ. ತಾಲೂಕಿನಲ್ಲಿ ಕೆರೆಗಳ ಕಾಮಗಾರಿ ಕೆಲಸ ಆಗಬೇಕಿದೆ. ಅರಣ್ಯ ಸಂರಕ್ಷಣೆ ಆಗಬೇಕಿದೆ. ಅಂತರ್ಜಲ ಸಂರಕ್ಷಣೆ, ತಾಲೂಕಿನ ದಂಡಾವತಿ ಅಣೆಕಟ್ಟು ನಿರ್ಮಾಣ ಆಗಬೇಕಿದೆ. ಈ ನಿಟ್ಟಿನಲ್ಲಿ

ಕೆಲಸಗಳು ಅವಶ್ಯಕವಾಗಿವೆ. ತಾಲೂಕಿನ ಆರ್ಥಿಕತೆ ಸುಧಾರಿಸಬೇಕಾದರೆ ಕೃಷಿಯನ್ನು ಹೊಂದಿದವರು ಅಭಿವೃದ್ಧಿಯಾಗಬೇಕಾಗಿದೆ. ಆಗ ಸಾಮಾಜಿಕ ವ್ಯವಸ್ಥೆಯು ಸುಧಾರಿಸುವುದು. ತಾಲೂಕಿನಲ್ಲಿ ರಸ್ತೆ ಸಂಪರ್ಕ ಅಭಿವೃದ್ಧಿ ಕಂಡುಬಂದರೂ ಇನ್ನಷ್ಟು ಅಭಿವೃದ್ಧಿ ಹೊಂದಬೇಕಾದ ಅವಶ್ಯಕತೆ ಇದೆ. ತಾಲೂಕಿನಲ್ಲಿ ತರಬೇತಿ ಮತ್ತು ಉನ್ನತ ಶಿಕ್ಷಣ ಹೊಂದಬೇಕಾದ ಅವಶ್ಯಕತೆ ಇದೆ. ಶೈಕ್ಷಣಿಕವಾಗಿ ಇನ್ನಷ್ಟು ಬೆಳೆಯಬೇಕಿದೆ. ತಾಲೂಕಿನ ಆಡಳಿತ, ಧಾರ್ಮಿಕ ಸ್ಥಿತಿಗತಿ ಇತ್ಯಾದಿಗಳ ಬಗ್ಗೆ ಈ ಕಿರುಪ್ರಬಂಧ ಚರ್ಚಿಸುವ ಪ್ರಯತ್ನ ಮಾಡಿದೆ.

ಐತಿಹಾಸಿಕವಾಗಿ ಪ್ರಸಿದ್ಧವಾಗಿದ್ದ ಈ ಪ್ರದೇಶ ವರ್ತಮಾನದಲ್ಲೂ ಅನೇಕ ಕಾರಣಗಳಿಗಾಗಿ ಹೆಸರವಾಸಿಯಾಗಿದೆ. ಐತಿಹಾಸಿಕ ಸ್ಮಾರಕಗಳನ್ನು ಮತ್ತು ಧಾರ್ಮಿಕ ನೆಲೆಗಳನ್ನು ಹೊಂದಿರುವುದರಿಂದ ಸಂಶೋಧಕರನ್ನು ಹಾಗೂ ಪ್ರವಾಸಿಗರನ್ನು ತಮ್ಮೆಡೆಗೆ ಆಕರ್ಷಿಸುತ್ತಿದೆ. ತಾಲೂಕಿನಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಗುಡವಿಯಂತಹ ಪಕ್ಷಿಧಾಮವಿದೆ. ಪ್ರವಾಸೋದ್ಯಮ ಇಲಾಖೆ ಅಂಥ ತಾಣಗಳನ್ನು ಗುರುತಿಸಿದೆ ಆದರೂ ಇನ್ನು ಬಹಳಷ್ಟು ಅಭಿವೃದ್ಧಿಪಡಿಸಬೇಕಿದೆ. ಪುರಾತತ್ವ ಇಲಾಖೆಯ ವ್ಯಾಪ್ತಿಗೆ ತಾಲೂಕಿನ ಇನ್ನು ಹಲವು ಸ್ಮಾರಕಗಳು ಸೇರಬೇಕಾಗಿವೆ. ಈ ನಿಟ್ಟಿನಲ್ಲಿ ಕಾರ್ಯಗತಗೊಂಡರೆ ತಾಲ್ಲೂಕು ಪ್ರಸಿದ್ದ ಪ್ರವಾಸಿ ಕೇಂದ್ರವಾಗುವುದರಲ್ಲಿ ಸಂಶಯವಿಲ್ಲ.

ತಾಲೂಕಿನಲ್ಲಿ ಸಾಹಿತ್ಯ ಪರಂಪರೆಯನ್ನು ಶಾಸನಕಾಲದಿಂದ ಕಾಣುತ್ತೇವೆ. ಶಾಸನ ಸಾಹಿತ್ಯ ಗ್ರಂಥಸ್ಥ ಸಾಹಿತ್ಯಕ್ಕಿಂತ ಭಿನ್ನವಾದದ್ದು ಇಲ್ಲಿ ಅವೆರಡನ್ನು ಗಮನಿಸಲಾಗಿದೆ. ಜೊತೆಗೆ ಜಾನಪದ ಸಾಹಿತ್ಯವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ತಾಲೂಕಿನಲ್ಲಿ ಜಾನಪದ ಸಾಹಿತ್ಯದ ಸಂಗ್ರಹ ಕಾರ್ಯ ಸಾಕಷ್ಟು ಪ್ರಮಾಣದಲ್ಲಿ ಕಂಡುಬಂದಿಲ್ಲ. ಆ ನಿಟ್ಟಿನಲ್ಲಿ ಪ್ರಯತ್ನ ನಡೆಯಬೇಕಾಗಿದೆ. ಶಿಷ್ಟ ಸಾಹಿತ್ಯದ ಬೆಳವಣಿಗೆ, ಪತ್ರಿಕೋದ್ಯಮಗಳ ಬೆಳವಣಿಗೆ ಇನ್ನಷ್ಟು ಅಭಿವೃದ್ಧಿ ಸಾಧಿಸುವುದು ಅಗತ್ಯವಿದೆ.

ಹೀಗೆ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಮತ್ತು ಸಲಹೆಗಳನ್ನು ಪಟ್ಟಿಮಾಡುತ್ತಾ ಹೋಗಬಹುದು. ಸ್ವತಃ ಅಧ್ಯಯನದ ಈ ಕಿರುಪ್ರಬಂಧ ಚರ್ಚಿಸಿ ತಿಳಿಯಪಡಿಸುವುದರಿಂದ ಮತ್ತೊಮ್ಮೆ ಅವನ್ನೆಲ್ಲಾ ಪುನರಾವರ್ತಿಸುವ ಅವಶ್ಯಕತೆ ಇಲ್ಲವೆಂದು ತೋರುತ್ತದೆ. ಒಟ್ಟಿನಲ್ಲಿ ಸೊರಬ ತಾಲೂಕು ಪ್ರದೇಶದ ಒಂದು ರೀತಿಯ ಸಮಗ್ರ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಆದರೆ ನಿಜವಾದ ಅರ್ಥದಲ್ಲಿ ಯಾವುದೇ ಅಧ್ಯಯನವೂ ಸಮಗ್ರವೆನಿಸಲಾರದು. ಇದರಾಚೆಗೆಯ ವಿಜ್ಞಾನ, ಕಾನೂನು ಮೊದಲಾದವುಗಳ ಅಧ್ಯಯನದ ಚರ್ಚೆ ಆಗಬೇಕಿದೆ. ಹಾಗಾಗಿ ಮುಂದಿನ ಅಧ್ಯಯನಗಳ ಸಾಧ್ಯತೆಗಳನ್ನು ಪ್ರಸ್ತುತ ಕಿರು ಪ್ರಬಂಧವು ತೋರಿಸಿ ಕೊಡಬಹುದು. ಇಂತಹ ಇನ್ನೂ ಹೆಚ್ಚಿನ ಅಧ್ಯಯನಗಳಿಗೆ ಇದು ಮಾದರಿಯಾದರೆ, ಪ್ರೇರಣೆಯನ್ನೊದಗಿಸಿದರೆ "ಸೊರಬ ತಾಲೂಕು : ಒಂದು ಸಾಂಸ್ಕೃತಿಕ ಅಧ್ಯಯನ"ವು ಒಂದು ಸಾರ್ಥಕ ಸಂಶೋಧನಾ ಪ್ರಬಂಧವೆನಿಸುತ್ತದೆ.

ಅನುಬಂಧಗಳು

೧. ಸಂಕ್ಷೇಪಗಳು

೨. ಆಕರ ಗ್ರಂಥಗಳು

೩. ವಕ್ತೃ ಮಾಹಿತಿಗಳು

೪. ಸೊರಬ ತಾಲ್ಲೂಕು ನಕ್ಷೆ

೫. ಛಾಯಾಚಿತ್ರಗಳು

೧

ಸಂಕ್ಷೇಪಗಳು

ಸೌ.ಇಂ.ಇ : ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಸನ್

ಎ.ಕ : ಎಫಿಗ್ರಾಫಿಯಾ ಇಂಡಿಕಾ (ಬಿ.ಎಸ್.ರೈಸ್ ಸಂಪಾದಿತ)

ಆಕರ ಗ್ರಂಥಗಳು

ಅನಂತರಾಮರಾವ್ ಕೆ., **ಸುವರ್ಣ ಕರ್ನಾಟಕ ದರ್ಶನ**, ವಿದ್ಯಾ ಪಬ್ಲಿಷಿಂಗ್ ಹೌಸ್, ಶ್ರೀನಿಲಯ ಅಲ್ವಾರಿಸ್ ರಸ್ತೆ, ಕದ್ರಿ, ಮಂಗಳೂರು, ೨೦೦೬

ಕೃಷ್ಣ ಎಂ.ಎಚ್., **ಕನ್ನಡನಾಡಿನ ಚರಿತ್ರೆ (ಕರ್ನಾಟಕ ಕಲೆಗಳು ಭಾಗ ೩)** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

ಕೃಷ್ಣರಾವ್ ಕಪಟರಾಳ, **ಕರ್ನಾಟಕ ಸಂಸ್ಕೃತಿಯ ಸಂಶೋಧನೆ**, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦

ಕೃಷ್ಣಶರ್ಮ ಬೆಟಗೇರಿ, **ಕರ್ನಾಟಕ ಜನಜೀವನ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೪

ಕ್ಯಾತನಹಳ್ಳಿ ರಾಮಣ್ಣ, **ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

ಕೆರೆಮನೆ ಶಂಭು ಹೆಗಡೆ(ಸಂ), **ಜಾನಪದ ಸಮಾಚಾರ**, ಕರ್ನಾಟಕ ಜಾನಪದ ಮತ್ತು ಯಕ್ಷಗಾರ ಅಕಾಡೆಮಿ, ಬೆಂಗಳೂರು, ೨೦೦೬

ಗದ್ದಗೀಮಠ ಬಿ.ಎಸ್., **ಕುಮಾರರಾಮನ ದುಂದುಮೆ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೫

ಚನ್ನಬಸಪ್ಪ, **ದೇವದುರ್ಗ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ**, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೦

ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನಬುಕ್ ಹೌಸ್, ಬೆಂಗಳೂರು, ೨೦೦೨

ಚಿದಾನಂದಮೂರ್ತಿ ಎಂ., **ಹೊಸತು ಹೊಸತು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

ಡಿಸೋಜ ನಾ., **ಸೊರಬ ತಾಲೂಕು ದರ್ಶನ**, ಐ.ಬಿ.ಎಚ್.ಪ್ರಕಾಶನ, ಗಾಂಧೀನಗರ, ಬೆಂಗಳೂರು, ೧೯೮೫

ದಿನಕರ್ ಡಿ.ಎನ್., **ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು**, ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ, ಶಿವಮೊಗ್ಗ, ೧೯೯೭

ನಾಗೇಗೌಡ ಹೆಚ್.ಎಲ್., **ಪ್ರವಾಸಿ ಕಂಡ ಇಂಡಿಯಾ**, ಭಾಗ ೨, ನೆಲಮನೆ ಪ್ರಕಾಶನ, ಬೆಂಗಳೂರು, ೧೯೮೦

ನಾಗೇಶ ಹೆಚ್.ವಿ., **ಗ್ರಾಮವ್ಯಾಸಂಗ**, ಚಂದ್ರಕಾಂತ ಪ್ರಕಾಶನ, ಧಾರವಾಡ, ೧೯೮೦

ನಾಯಕ ಹಾ.ಮ., **ಕನ್ನಡ ವಿಷಯ ವಿಶ್ವಕೋಶ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯

ನಾಯ್ಕ ಕೆ., **ಕಾರವಾರ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ**, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೮

ಪಂಚಮುಖಿ ಆರ್.ಎಸ್., **ಕರ್ನಾಟಕ ಇತಿಹಾಸ**, ಸಾಧನ ಮುದ್ರಣಾಲಯ, ಧಾರವಾಡ, ೧೯೬೭

ಪರಮಶಿವಯ್ಯ ಜೀ.ಶಂ., **ಜಾನಪದ ಕೆಲವು ಮುಖಗಳು**, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು, ೧೯೭೫

ಪ್ರಶಾಂತ ಹೆಚ್.ಡಿ., **ಜನಸಮುದಾಯ ಸಂಪುಟ**, ಕರ್ನಾಟಕ ರಾಜ್ಯ ಕೋಶ ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಬರಗೂರು ರಾಮಚಂದ್ರಪ್ಪ(ಸಂ), **ಕರ್ನಾಟಕ ಸಂಗಾತಿ**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨

ಬೋರಲಿಂಗಯ್ಯ ಹಿ.ಚಿ.(ಸಂ), **ಕರ್ನಾಟಕ ಜನಪದ ಕಲೆಗಳ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

ಭಗವತಿ ಎಸ್.ಎಸ್. ಮತ್ತು ಮೇಲಿನಮನಿ ಎಚ್.ಎಸ್.(ಸಂ), **ಹೊಸಗನ್ನಡ ಸಾಹಿತ್ಯಾವಲೋಕನ**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೨

ಮಹದೇವ ಸಿ., **ಕರ್ನಾಟಕ ಪುರಾತತ್ವ ಶೋಧ**, ಶ್ರೀ ಲಕ್ಷ್ಮೀ ಪ್ರಕಾಶನ, ಶ್ರೀರಂಗಪಟ್ಟಣ, ೨೦೦೧

ಮಹದೇವ ಸಿ., ಸುಬ್ಬಣ್ಣರೈ, ಮಾಧವ ಪೆರಾಜೆ ಎ., **ಹೊಸಪೇಟೆ ತಾಲ್ಲೂಕು ದರ್ಶನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ಮೋಹನ ಚಂದ್ರಗುತ್ತಿ ಹೆಚ್.ಎಸ್., **ಚಂದ್ರಗುತ್ತಿ ರೇಣುಕಾಂಬಾ ಜಾತ್ರೆ,** ಭಡ್ತಿ ಪ್ರಕಾಶನ, ಯಡಜಿಗಳೇ ಮನೆ, ಸಾಗರ, ಶಿವಮೊಗ್ಗ ಜಿಲ್ಲೆ, ೨೦೦೪

ರಾಜಪ್ಪ ದಳವಾಯಿ(ಸಂ), **ಕನ್ನಡ ಸಾಹಿತ್ಯ ಕೋಶ,** ಕದಿರು ಪ್ರಕಾಶನ, ಟಿ.ಕೆ.ಬಡಾವಣೆ, ಮೈಸೂರು, ೧೯೯೬

ರಾಜಶೇಖರ ಸಿ.ಪಿ.(ಸಂ), **ಶಿವಸಂಪದ,** ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಮಪೇಟೆ, ಮೈಸೂರು, ೨೦೦೧

ರಾಜರಾಮ ಹೆಗಡೆ ಮತ್ತು ಅಶೋಕ ಶೆಟ್ಟರ(ಸಂ), **ಮಲೆ ಕರ್ನಾಟಕದ ಅರಸು ಮನೆತನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ರಾಮಭಟ್ಟ ಬಿ.ಎಸ್., **ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ,** ಬಾಲರಾಜ್ ಅರಸ ರಸ್ತೆ, ಶಿವಮೊಗ್ಗ, ೨೦೦೧

ರಾಮಭಟ್ಟ ಬಿ.ಎಸ್., **ಜಿಲ್ಲಾ ದರ್ಶನ ಮಾಲಿಕೆ,** ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು, ೧೯೭೦

ರುದ್ರಪ್ಪ ಹ.ತಳವಾರ, **ಹಾನಗಲ್ಲು ಒಂದು ಸಾಂಸ್ಕೃತಿಕ ಅಧ್ಯಯನ,** ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬

ರೈಸ್ ಬಿ.ಎಲ್.(ಸಂ), ಎಪಿಗ್ರಾಫಿಯಾ **ಕರ್ನಾಟಿಕಾ ಮಾಲಿಕೆ,** ೭,೮ನೇ ಸಂಪುಟ, ಪ್ರಾಚ್ಯವಸ್ತು ಇಲಾಖೆ ಮೈಸೂರು, ಕರ್ನಾಟಕ ಸರ್ಕಾರ, ೧೯೦೨-೧೯೦೪

ಲಿಂಗಣ್ಣ ಗುಂಡಳ್ಳಿ, **ಭೂಪಟಗಳ ಮೂಲಕ ಕರ್ನಾಟಕದ ಇತಿಹಾಸ,** ವಾಸವಿ ಪ್ರಕಾಶನ, ಕೆ.ಹೆಚ್.ಬಿ. ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು, ೨೦೦೩

ಶಂಬಾ ಜೋಶಿ, **ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ,** ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬

ಶಾರದಾ ಹೆಮ್ಮಿಗೆ, **ಹಳ್ಳಿಯ ಸುತ್ತಮುತ್ತ,** ಯಕ್ಷ ಪ್ರಕಾಶನ, ಶಿವಗಿರಿ, ಧಾರವಾಡ, ೧೯೯೯

ಶಿವತಾರಕ ಕೆ.ಬಿ., **ಕರ್ನಾಟಕ ಪುರಾತತ್ವ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ಶ್ರೀಧರ ಅಡಿಗ, **ಕರ್ನಾಟಕ ಪ್ರೇಕ್ಷಣೆಯ ಸ್ಥಳಗಳು,** ಕೃಷಿ ವಿಕಾಸ ಪಬ್ಲಿಕೇಷನ್, ಬೆಂಗಳೂರು, ೨೦೦೬

ಸೀತಾರಂ ಸಿ., **ಬೆಡಗಿನ ಲೋಕ,** ಲಿಖಿತ ಬುಕ್‌ಹೌಸ್, ಶಾಂತಿನಗರ, ಬೆಂಗಳೂರು, ೨೦೦೪

ಸೂರ್ಯನಾಥ ಯು.ಕಾಮತ್, **ಭಾರತದ ಗ್ಯಾಸಟೀಯರ್,** ಕರ್ನಾಟಕ ರಾಜ್ಯ ಗ್ಯಾಸಟೀಯರ್ ಇಲಾಖೆ, ಕರ್ನಾಟಕ ಸರ್ಕಾರ, ೧೯೮೪

ಹಿರಿಯಣ್ಣ ಅಂಬಳಿಕೆ, **ಶಿವಮೊಗ್ಗ ಜಿಲ್ಲೆಯ ಜಾನಪದ ಕಥೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೬

ಸ್ಮರಣ ಸಂಚಿಕೆ, **ಜೋಗದ ಸಿರಿ**, ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಶಿವಮೊಗ್ಗ, ೨೦೦೪

ನಿಯತಕಾಲಿಕೆಗಳು

ಪ್ರಜಾವಾಣಿ ಕೈಪಿಡಿ, ದೀಪಾವಳಿ, ವಿಶೇಷಾಂಕ, ಸುಂದರ ನಾಡಿನ ಚಂದದ ತಾಣ, ೨೦೦೦

ಪ್ರಜಾವಾಣಿ ದಿನಪತ್ರಿಕೆ

ವಿಜಯಕರ್ನಾಟಕ ವಿಶೇಷಾಂಕ ನನ್ನ ಕ್ಷೇತ್ರ ನನ್ನ ಸಾಧನೆ, ೨೦೦೭

ವಿಜಯ ಕರ್ನಾಟಕ ದಿನಪತ್ರಿಕೆ


೨

ವಕ್ತೃ ಮಾಹಿತಿ

ಹೆಸರು	ಊರು
ಶ್ರೀಪಾದವ ಬಿಚ್ಚುಗತ್ತಿ	ಯಲಸಿ
ಕೃಷ್ಣಾನಂದ ಎಸ್.	ಹೆಚ್. ಪಿ.ಎಸ್.ಬಿದರಗೇರಿ
ನಾ.ಡಿಸೋಜ	ಸಾಗರ
ಡಾ.ಎಂ.ಎಸ್.ಮೋಹನ್ ಚಂದ್ರಗುತ್ತಿ	ಸಾಗರ(ಚಂದ್ರಗುತ್ತಿ)
ಸೂರ್ಯಕಾಂತ್	ತವನಂದಿ
ಸಣ್ಣ ಹನುಮಂತಪ್ಪ ಗೊಡೇರ್	ಹಿರೇಕಬ್ಬೂರು
ಹುಚ್ಚರಾಯಪ್ಪ ಹೆಚ್	ಹಿರೇಕಬ್ಬೂರು
ಚೆನ್ನಪ್ಪ	ತತ್ತೂರು ವಡ್ಡಿಗೇರಿ
ರುದ್ರಪ್ಪ	ಗುಡಿಗಿನ ಕೊಪ್ಪ
ವೆಂಕಟೇಶಪ್ಪ	ತತ್ತೂರು ವಡ್ಡಿಗೇರಿ
ಮರಡೆಪ್ಪ ಶರಣ	ಹಿರೇಮಾಗಡಿ
ಸುಶೀಲಮ್ಮ ತತ್ತೂರು ಕ್ಷೇತ್ರದ ಶಾನುಭೋಗರು	ತತ್ತೂರು
ಶಿವಪ್ರಸಾದ್	ಹುರುಳಿ
ರಮೇಶ	ಎಣ್ಣೆಕೊಪ್ಪ
ಮಹೇಶ	ಚಿಕ್ಕ ಇಡಗೋಡು
ವಿನಯ	ಸವನಹಳ್ಳಿ
ಮಂಜುನಾಥ	ಹಿರೇಮಾಗಡಿ
ಅಶೋಕ	ಬಾರಂಗಿ
ಬಸವರಾಜ	ಆನವಟ್ಟಿ
ಕೇಶವ	ಅಗಸನಹಳ್ಳಿ
ನಿಂಗಪ್ಪ	ಕಾತ್ವಳ್ಳಿ

ಅನುಬಂಧ-೩

ಸೊರಬ ತಾಲೂಕು ನಕ್ಷೆ



ವಿಷಯ ಸೂಚಿ

- ಹೋಬಳಿ
- ನದಿ
- ತಾಲೂಕು ಕೇಂದ್ರ
- ತಾಲೂಕು ಮೇರೆ




ಸೊರಬದ ದಂಡಾವತಿ ಹೊಳೆ (ಸಿಗಿ ಹಳ್ಳಿ ಹತ್ತಿರ)



ಉದ್ರಿಯ ಜಿನ ಬಸದಿ



ಕುಬಟೂರು ರಾಮೇಶ್ವರ ದೇಗುಲ




ಸಾರೇಕೊಪ್ಪದ ಮಾರಿಯಮ್ಮ ದೇವಸ್ಥಾನ



ಸೊರಬದ ಸಂತೆ



ಸೊರಬದ ಬಸ್ಸು ನಿಲ್ದಾಣ



ಕುಪ್ಪಗಡ್ಡೆ ರಾಮೇಶ್ವರ ದೇವಾಲಯ



ಉದ್ರಿಯ ನಾರಾಯಣ ದೇವಾಲಯ



ಕೋಟಿಪುರದ ಕೈಟಬೇಶ್ವರ ದೇಗೂಲ




ಕುಪ್ಪಗಡ್ಡೆಯ ಬಸವೇಶ್ವರ ದೇಗುಲ



ಸೊರಬದ ಚರ್ಚ್




ಶ್ರೀ ವೀರಭದ್ರೇಶ್ವರ ರಥೋತ್ಸವ



ಡೋಳ್ಳು ಕುಣಿತ



ವೀರಗಾಸೆ



ಆನವಟ್ಟಿಯ ಮಸೀದಿ



ಸೊರಬದ ಗುಡಿಗಾರರ ಸಂಘ



ಜಾನಪದೀಯ ಹುಲಸು ಸಂಪ್ರದಾ



ಚಂದ್ರಗುತ್ತಿ ರೇಣುಕಾ ದೇವಿ



ಚಂದ್ರಗುತ್ತಿ ದೇವಸ್ಥಾನ